ಕಸ್ತೂರಿ

ಜುಲೈ 1988 ರೂ. 3-00





ಸುವಾಸಿತ ಹಾಗೂ ಸ್ವಾದಿಷ್ಟ
ಮುಖಶುದ್ಧಿಗಾಗಿ
CHAMAN
ಚಮನ್
ಚಮನ್ ಇದು ಅತ್ಯಂತ ಸ್ವಾದಿಷ್ಟ ಹಾಗೂ ರುಚಿಕರವಾದ ಚೂರ್ಣವಾಗಿದೆ. ಇದನ್ನು ಸೇವಿಸುವದರಿಂದ ಬಾಯಿಯು ಸುವಾಸಿತವಾಗುತ್ತದೆ.
ಚಮನದಲ್ಲಿ ಏನೆಲ್ಲ ಇದೆ?
ಈ ಚಮನದಲ್ಲಿ ಜೇಷ್ಟಮಧು, ಕೇಶರ, ಏಲಕ್ಕಿ. ಲವಂಗ, ಪತ್ರಿ, ಜಾಜಿಕಾಯಿ, ಬಡೆಸೋಪ್, ಮೆಂಥಾಲ್‌ಗಳಂಥ ಅನೇಕ ಬಗೆಯ ಸುಗಂಧಿತ ಹಾಗೂ ರುಚಿಕರ ವಸ್ತುಗಳು ಒಳಗೊಂಡಿರುವವು. ಅದಕ್ಕೆಂದೇ ಇದು ಚಿಕ್ಕಮಕ್ಕಳಿಂದ ವೃದ್ಧರವರೆಗೆ ಎಲ್ಲರಿಗೂ ಅಚ್ಚುಮೆಚ್ಚು.
ಸ್ಟಾರ್ ಕಂಪನಿ, ಬೆಳಗಾಂವ್

ಕಸ್ತೂರಿ

ಕನ್ನಡ ಡೈಜೆಸ್ಟ್

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಸಹಸಂಪಾದಕ:
ಮಾಧವ ನಾ. ಮಹಿಷಿ

ಸಹಾಯಕ ಸಂಪಾದಕ:
ಎಸ್.ಕೆ. ಶಾಮಸುಂದರ

ಮುಖಪುಟ:
ಕಣ್ಮಣಿ

ವರ್ಣ ಪಾರದರ್ಶಿಕೆ: ದೇವಬ್ರತ ಬ್ಯಾನರ್ಜಿ

ಬೆಳಕಿಂಡಿ

• ಸತ್ಯ ಕಟುವಾದುದು ನಿಜ. ಅದು ನೀರ ಗುಳ್ಳೆಯಂತೆ ಸ್ಪರ್ಶಿಸಿದಾಕ್ಷಣ ಒಡೆದು ಹೋಗುವಂಥದಲ್ಲವೇ ಅಲ್ಲ. ಅದನ್ನು ಒಡೆಯುತ್ತಿದ್ದೇನೆಂದು ಭಾವಿಸಿದರೆ ನೀವು ಗಾಳಿಯೊಡನೆ ಗುದ್ದಾಡಿದಂತೆಯೆ.

ಆಲಿವರ್ ವೆಂಡೆಲ್ ಹೋಮ್ಸ್

• ವಿಷಾದವನ್ನು ಚೆನ್ನಾಗಿ ಬಳಸಿಕೊಳ್ಳಿ. ತೀವ್ರವಾಗಿ ವಿಷಾದಿಸುವುದೆಂದರೆ ಲವಲವಿಕೆಯಿಂದ ಬದುಕುವುದು ಎಂದರ್ಥ.

ಥೋರೋ

• ಮೇಣದ ಬತ್ತಿಗೆ ಪರೋಪಕಾರಿಯನ್ನು ಹೋಲಿಸುವುದು ತಪ್ಪೆಂದು ಈಗೀಗ ನನಗರ್ಥವಾಗತೊಡಗಿದೆ. ಯಾಕಂದರೆ ಒಂದೇ ಮೇಣ ಬತ್ತಿಯನ್ನು ನಾವು ಹಲವು ಸಲ ಉರಿಸಬಹುದು.

ಎಬರೇಶಿ

• ಅಡೆತಡೆಗಳಿಲ್ಲದ ಹಾದಿಯನ್ನು ನಿಮಗೆ ಹುಡುಕುವುದು ಸಾಧ್ಯವಾದಲ್ಲಿ ಅದು ನಿಮ್ಮನ್ನು ಮತ್ತೆ ಮತ್ತೆ ಅದೇ ಜಾಗಕ್ಕೆ ತರುವಂಥ ಹಾದಿಯೇ ಆಗಿರುತ್ತದೆ.

ಶಭಾಸೊಮಂಬುಗುಶು

• ಭೂಕಂಪಗಳಿಂದ ಇಟ್ಟಂಗಿಗಳು ಅಗ್ಗವಾಗುತ್ತವೆಂಬ ಕಾರಣದಿಂದ ಭೂಕಂಪ ಒಳಿತೆಂದು ಗ್ರಹಿಸಲು ಬಂದೀತೇ?

ಜಾನ್ ರಸ್ಕಿನ್

ಹೊಸ ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

KASTURI, JULY 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ	....	• 3
ಶ್ರಮದ ಫಲ	...ಗೌರಿ ಅಭಿ	• 5
'ನನ್ನ' ರಾಜ ಕಪೂರ್	...ಖಜಾನೆ ಕೃಷ್ಣಮೂರ್ತಿ	• 6
ಶ್ರಾವಣದ ಮೊದಲು (ಕವನ)	...ಡಾ. ರಂ.ಶ್ರೀ. ಮುಗಳಿ	• 13
ಬೊಂಬಾಯಿ ಮಳೆ	...ಕೆ. ಚಂದ್ರಮೌಳಿ	• 14
ಸಿಯಾಚಿನ್: ಸಮಸ್ಯಾ ಪರ್ವತ	...ರವೀಂದ್ರಭಟ್ ಬಳಗುಳಿ	• 19
ಭಿನ್ನಮತ	...ಪಾಂಚಜನ್ಯ	• 23
ಮರಣೋತ್ತರ ಶವದಾನ ಏಕೆ? ಎಂತು?	...ಡಾ|| ವಸಂತ ಕುಲಕರ್ಣಿ	• 26
ನಿಮ್ಮ ಶಬ್ದ ಭಾಂಡಾರ ಬೆಳೆಯಲಿ	....	• 33
ಈ ಎಡಗೈ ಹೆಬ್ಬೆಟ್ಟಿನ ಗುರುತು!	...('ಕಸ್ತೂರಿ' ನಡೆದು ಬಂದ ದಾರಿ)	• 35
ಮಾಯೆ (ಕಥೆ)	...ಜೋಗಿಂದರ್ ಪಾಲ್	• 42
ಜೀವನ ದರ್ಶನ	...ಕೆ.ಟಿ. ಪಾಂಡುರಂಗಿ	• 51
ಒಂದು ಹೊಸ ಅನುಭವ	...ಗೋವಿಂದಮೂರ್ತಿ ದೇಸಾಯಿ	• 52
ಕಪಿಲ: ಇನ್ನಷ್ಟು ವಿಚಾರಗಳು	...ಡಾ. ಹು.ಲ. ಚಂದ್ರಶೇಖರ	• 57
ಇದುವೆ ಜೀವ ಇದು ಜೀವನ	....	• 58
ಅಲಿಸ್ ಎಂಬ ಆನೆಯ ಕಥೆ	...ಕೆ. ವೆಂಕಣ್ಣಾಚಾರ್	• 60
ಮಂಜು ಕರಗಿತು	...ಪ್ರೊ|| ಮಧು ವೆಂಕಾರೆಡ್ಡಿ	• 63
ಬೇಕು ಸ್ವಲ್ಪ ಕರುಣೆ	...ರಂಗನಾಥ ಜಿ. ಜೋಶಿ	• 65
ಮನುಷ್ಯ ಶರೀರಕ್ಕಿದು ಕನ್ನಡಿ	...ಡಾ|| ಆರ್.ಸಿ. ಅಗಡಿ	• 66
ಹಾಲು ಮಡ್ಡಿಯ ನಾಡು ಖರ್ಜೂರದ ಬೀಡು	...ವೃಷಭೇಂದ್ರಯ್ಯ	• 68
ಚಟ್ನಿಪುಡಿ ಮತ್ತು ಅಮೇರಿಕ ,	...ಡಾ|| ಬೆಳ್ಳಿ ದಿನಕರ ರೈ	• 75
ಕರೆನ್ಸಿ ನೋಟಿಗೆ 125 ವರ್ಷ	...ಎಸ್.ಕೆ. ಬೋಸ್	• 79
ಪದಾರ್ಥ ಚಿಂತಾಮಣಿ	...ಪಾ.ವೆಂ.	• 80
ಸ್ವಧರ್ಮೇ ನಿಧನಂ ಶ್ರೇಯಃ	...ಕ್ಲರ್ಕ್ ಕುಂಜಾಂಬು ನಾಯರ್	• 82
ಜಿನ್ನಾರ ಪಾರ್ಸಿ ಹೆಂಡತಿ	...ದಾದಾ ಮೆಹರ್ ಹೋಮಜಿ	• 90
ಜಿದ್ದು (ಕಥೆ)	...ಶೇಷಗಿರಿ ಸರಾಫ	• 92
ಕಿತ್ತಳೆ ಮನುಷ್ಯ	...ಮುನಿಯಾಲ್ ಗಣೇಶ್ ಶೆಣೈ	• 97
ಜೀವ ತಂತ್ರಜ್ಞಾನ	...ಜಿ. ಕೃಷ್ಣಪ್ರಸಾದ್	•100

• ಪುಸ್ತಕ ವಿಭಾಗ •

ವಿಜ್ಞಾನಿಯ ವಿಕಟ ಸೃಷ್ಟಿ

ಮೂಲ: ಮೇರಿ ಶೆಲ್ಲಿ ಅನುವಾದ: ಗೀತಾ ಮುರಲಿ • 105

ಜನ ಚಿಂತನ

ಸಮಗ್ರ ಚಿತ್ರಣ

'ನಡೆದಾಡುವ ವಿಶ್ವಕೋಶ-ಶಿವರಾಮ ಕಾರಂತ' (ಟಿ.ಪಿ. ಅಶೋಕ) ಪರಿಪೂರ್ಣವಾಗಿ ಮೂಡಿ ಬಂದಿದೆ. ಕಾರಂತರ ನಡೆ-ನುಡಿ, ಆಚಾರ-ವಿಚಾರ ಮತ್ತು ಅವರ ಗ್ರಂಥಗಳ ಅವಲೋಕನ ಉತ್ತಮ ವಾಗಿ ನಿರೂಪಿಸಲ್ಪಟ್ಟಿದೆ. ಅವರ ಸಾಹಿತ್ಯ ಪ್ರಪಂಚದ ಸಮಗ್ರ ಚಿತ್ರಣ ನೀಡಿರುವುದಕ್ಕಾಗಿ ಧನ್ಯ ವಾದಗಳು.

ಶಿರೂರು — ಎಸ್. ಗಣಪತಿ

ವಿಭಜನೆ

ಜೂನ್ ಸಂಚಿಕೆಯಲ್ಲಿ ಮೂಡಿಬಂದ ಲಕ್ಷ್ಮಣ ಅಳ ವಂಡಿಯವರ 'ವಿಭಜನೆ' ಪ್ರೀತಿಯ ಆತ್ಮಮೌಲ್ಯ ವಾದ ನೂತನ ಸಂಗತಿಗಳನ್ನು ತಿಳಿಸಿಕೊಡುವುದರ ಜತೆಗೆ ಹೃದಯವನ್ನು ಕಲಕಿತು.

ಹೆಬ್ಬಾಳುಕೊಪ್ಪಲು — ಎಚ್.ಆರ್. ಸಿದ್ದೇಗೌಡ.

ಬೂಟಾಸಿಂಗನ ಮಾನಸಿಕ ಬಳಲಿಕೆಗಳು ಕಣ್ಣೀರು ತರಿಸಿದುವು.

ಪುಣೆ — ವಿಜಯಕುಮಾರ ವಿಶ್ವಕರ್ಮ

ಇಂದಿನ ಪರಿಸ್ಥಿತಿಯಲ್ಲಿ 'ವಿಭಜನೆ'ಯಂಥವು ಗಳಿಂದ ನಮ್ಮ ಕಣ್ಣು ತೆರೆಸಿರುವ ನಿಮಗೂ ಲೇಖಕ ರಿಗೂ ಧನ್ಯವಾದಗಳು.

ಕುಂದಾಪುರ — ಶೇಖರ

ಸ್ಮರಿಸಿದ್ದರೆ...

'ಶಬ್ದಂ ಶರಣಂ ಗಚ್ಛಾಮಿ' (ಮೇ ಸಂಚಿಕೆ) ಡಾ|| ವಿಲ್ಫ್ರೆಡ್ ಫಂಕ್ ಮತ್ತು ನಾರ್ಮನ್ ಲೂಯಿಸ್‌ರ '30 Days To a More Powerful Vocabulary' ಪುಸ್ತಕದ ಸಂಗ್ರಹಾನುವಾದ ಲೇಖನ. ಶ್ರೀ ಸಿದ್ದೇಶ್ವರ ಕಟಕೋಳ್ ಅವರು ತಮ್ಮ (?) ಲೇಖನದಲ್ಲೊಮ್ಮೆ ಯಾದರೂ ಈ ಲೇಖಕದ್ವಯರನ್ನು ಸ್ಮರಿಸಿದ್ದರೆ ಲೇಖನಕ್ಕಿನ್ನೂ ಮೆರುಗು ಬರುತ್ತಿತ್ತು.

ಬೆಂಗಳೂರು — ಎಂ.ಟಿ. ಪುಟ್ಟರಾಜು

ಸೂತಕ

ಪಾ.ವೆಂ. ಅವರು 'ಸೂತಕ'ದ ಬಗ್ಗೆ (ಪದಾರ್ಥ ಚಿಂತಾಮಣಿ, ಜೂನ್ 88) ಬರೆದಿರುವುದನ್ನು ಓದಿದೆ.

ಇಂದಿಗೂ ನನ್ನ ಹುಟ್ಟೂರು ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕಿನ ಹಳ್ಳಿಗಳಲ್ಲಿ 'ಸೂತಕ' ಎಂಬ ಪದವನ್ನು ಹುಟ್ಟು ಮತ್ತು ಸಾವಿನ ಮೈಲಿಗೆಗಳೆರಡಕ್ಕೂ ಬಳಸು ತ್ತಾರೆ. ಸೂತಕದ ಹಿಂದೆ 'ಶುಭ' ಮತ್ತು 'ಅಶುಭ' ವನ್ನು ಸೇರಿಸಿ ಹುಟ್ಟು ಮತ್ತು ಸಾವನ್ನು ಸೂಚಿಸು ತ್ತಾರೆ. ನಾನು ಹುಟ್ಟೂರಿಂದ ಕನ್ನಡದ ರಾಜಧಾನಿಗೆ ಬಂದಾಗ ಅಲ್ಲಿ ಹುಟ್ಟಿನ ಮೈಲಿಗೆಗೆ 'ಸೂತಕ'ವೆಂದು ಹೇಳಿ ಬೈಸಿಕೊಂಡ ನಂತರ 'ವೃದ್ಧಿ' ಎನ್ನುವ ಪದ ವನ್ನು ಕಲಿತು ಪೂರ್ಣ ಕನ್ನಡದವನಾದೆ.

ಜಬ್ಬಲ್‌ಪುರ್ (ಮ.ಪ್ರ.) — ಎ.ವಿ. ಮಾಧವರಾವ್

ಶಾರಿಯಕ್ಕ

ಬಾಳಿನಲ್ಲಿ ಕೇವಲ ಒಡವೆ, ಮದುವೆ, ಗಂಡ ಇವೇ ಸರ್ವಸ್ವವೆಂದು ತಿಳಿದು ಸಂಕುಚಿತ ದೃಷ್ಟಿಯಿಂದ, ಮದುವೆಗಾಗಿ ಏನೇನೋ ಕಸರತ್ತುಗಳನ್ನು ನಡೆಸುವ ಹೆಣ್ಣುಗಳ ಕಣ್ಣು ತೆರೆಸುವಂತಿದೆ ಬಿ.ಎಂ. ರೋಹಿಣಿ ಯವರ ಕಥೆ– 'ಶಾರಿಯಕ್ಕ.'

ಮಂಕಿ (ಉ.ಕ.) — ವಾಸುದೇವ ಎಸ್.

ಹೂವು ಹಾಸು

ಮದುವೆಯ ಹೊಸತಿನಲ್ಲಿ ಸೊಸೆ ಯಾ ಹೆಂಡತಿ ಎದುರಿಸಬೇಕಾದ ಸಮಸ್ಯೆಗಳನ್ನು ಚಿತ್ರಿಸುತ್ತ ರಾತ್ರಿ ಯೊಂದರಲ್ಲೇ ತಾನು ಹೇಗೆ 'ಅಡ್ಜಸ್ಟ್' ಆಗಬೇಕು ಎಂಬುದನ್ನು ಅರಿತ ಪ್ಯಾಸಿಟಾಳ ಮನೋಧರ್ಮ ಮೆಚ್ಚುವಂಥದ್ದು. (ಫಿಲಿಪಿನ್ ಕಥೆ-ಜೂನ್ 88) ಅನುವಾದ ಸೊಗಸಾಗಿದೆ.

ಕಲಬುರ್ಗಿ — ಶಾಲಿನಿ ಬಿರಾದಾರ

ಕೆ. ವೆಂಕಟಪ್ಪ...

ನನ್ನ 'ಕಲಾ ತಪಸ್ವಿ' ಲೇಖನಕ್ಕೆ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಪತ್ರಕ್ಕೆ ನನ್ನ ಪ್ರತಿಕ್ರಿಯೆ.

1. ಮೈಸೂರಿನಲ್ಲಿ ಆಗ ಇದ್ದದ್ದೇ ಒಂದು ಕಲಾಶಾಲೆ. ಅದೇ ಶ್ರೀಜಯಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್. ಕರ್ನಾಟಕ ಲಲಿತ ಕಲಾ ಅಕಾಡೆಮಿ 1987ರಲ್ಲಿ ಪ್ರಕಟಿಸಿದ ವೆಂಕಟಪ್ಪ ಜನ್ಮ ಶತಮಾನೋತ್ಸವ ಗ್ರಂಥದಲ್ಲಿ, ಚಾಮರಾಜೇಂದ್ರ ಕಲಾಶಾಲೆಯಲ್ಲಿ ಕಲಿತು, ಅಲ್ಲಿ ಶಿಕ್ಷಕರೂ ಆಗಿದ್ದ ಖ್ಯಾತ ಕಲಾವಿದ ವೈ. ಸುಬ್ರಹ್ಮಣ್ಯರಾಜುರವರು ಶ್ರೀ ಜಯಚಾಮರಾಜೇಂದ್ರ ಚಿತ್ರ, ಕರಕುಶಲ ಶಾಲೆ (ಪುಟ 19) ಎಂದೇ ಬರೆದಿದ್ದಾರೆ. ವೆಂಕಟಪ್ಪನವರ ಶಿಷ್ಯ ಎಂ.ವಿ. ಸೀತಾರಾಮಯ್ಯನವರು ಎರಡೂ ರೀತಿಯಲ್ಲಿ ಕರೆದಿದ್ದಾರೆ (ಪುಟ 7, 8). ಇನ್ನು ತಿಪ್ಪೇಸ್ವಾಮಿಯವರೇ ತಮ್ಮ 'ಕಲೋಪಾಸಕರು' ಗ್ರಂಥದಲ್ಲಿ ಕೆ. ವೆಂಕಟಪ್ಪ ಎಂಬ ಲೇಖನದಲ್ಲಿ ಇಪ್ಪತ್ತಕ್ಕೂ ಹೆಚ್ಚು ಸಲ ಶ್ರೀ ಜಯಚಾಮರಾಜೇಂದ್ರ ಕಲಾಶಾಲೆ ಎಂಬ ಪದವನ್ನು ಬಳಸಿದ್ದಾರೆ.

2. ಪ್ಲಾಸ್ಟರ್ ಉಬ್ಬು ಚಿತ್ರ ಮಾಧ್ಯಮದಲ್ಲಿ ವೆಂಕಟಪ್ಪ ಸಮಾನ ಯಶಸ್ಸು ಗಳಿಸಲಾಗಲಿಲ್ಲ ಎಂಬುದನ್ನು ಒಪ್ಪದ ತಿಪ್ಪೇಸ್ವಾಮಿಯವರು 'ವೆಂಕಟಪ್ಪ ಎರಡರಲ್ಲೂ ಸಮಾನ ಪ್ರವೀಣರಾಗಿದ್ದರು' ಎಂದಿದ್ದಾರೆ. ಹಿಂದಿನಿಂದಲೂ ನಡೆದು ಬಂದಿರುವ ಇಂಥ ವಿಮರ್ಶೆ ಇನ್ನು ಸಾಕು; ವಸ್ತುನಿಷ್ಠ ವಿಮರ್ಶೆಗೆ ಕಲಾರಂಗ ತನ್ನನ್ನು ಬಿಚ್ಚಿಕೊಳ್ಳಬೇಕಿದೆ. ಉತ್ತಮ ವಿಮರ್ಶೆಯೇ (ಕನ್ನಡದಲ್ಲಿ) ಇಲ್ಲದಿದ್ದ ಅಂದಿನ ದಿನಗಳಲ್ಲೂ ಬಿ.ಜಿ.ಎಲ್. ಸ್ವಾಮಿಯಂಥ ಕೆಲವರು ವೆಂಕಟಪ್ಪನವರ ಕೃತಿಗಳ ಉತ್ತಮ ಅಂಶಗಳ ಜೊತೆಗೆ ಹಲವಾರು ಕೊರತೆಗಳನ್ನು ಸಮರ್ಥವಾಗಿ ಎತ್ತಿ ತೋರಿಸಿದ್ದಾರೆ.

ಕಲಾಕೃತಿಯೊಂದರ ಶ್ರೇಷ್ಠತೆಯನ್ನು ಗುರುತಿಸುವುದರಲ್ಲಿ ಭಿನ್ನಾಭಿಪ್ರಾಯಗಳಿರುವುದು ಸಹಜ ಮತ್ತು ಆಗತ್ಯ. ಅದು ತಪ್ಪಲ್ಲ.

ಬೆಂಗಳೂರು **ಕೆ.ವಿ. ಸುಬ್ರಹ್ಮಣ್ಯ**

ಯಾವುದು ಸರಿ?

ಡಾ|| ಆರ್.ಸಿ. ಅಗಡಿಯವರ 'ಕಣ್ಣಿನಲ್ಲೊಂದು ಕನ್ನಡಕ!' (ಜೂನ್ 88) ತೀರ ಇತ್ತೀಚಿನ ವೈಜ್ಞಾನಿಕೀಯ ಶೋಧದ ಪರಿಚಯ ಮಾಡಿಕೊಟ್ಟಿತು.

ಅಂದಹಾಗೆ 'ಕನ್ನಡಕ' ಸರಿಯೋ 'ಕಣ್ಣಡಕ' ಸರಿಯೋ? ಕಣ್ಣಿಗೆ ಅಡಕ ಮಾಡುವುದು ಕಣ್ಣಡಕ ವಲ್ಲವೆ? ಶ್ರೀ ಪಾವೆಂ ಅವರು ಇದಕ್ಕೆ ಸಮಾಧಾನ ಹೇಳಿಯಾರೆಂದು ಆಶಿಸುವೆ.

ಹೊಸಪೇಟೆ **ಕೃಷ್ಣಾಚಾರ ಜೋಶಿ**

ಸರಿಯಲ್ಲ

ಆರ್.ಆರ್. ದಿವಾಕರರು 'ವಿಜ್ಞಾನಗಳ ವಿಜ್ಞಾನ ಯೋಗ' (ಮೇ 88)ದಲ್ಲಿ ಯೋಗ ಸೂತ್ರದ "ಯೋಗಃ ಚಿತ್ತವೃತ್ತಿ ನಿರೋಧಃ" ಎಂಬಲ್ಲಿ ಚಿತ್ತ ಶಬ್ದಕ್ಕೆ ಚಿತ್‌ಶಕ್ತಿ, ಚಿದಾಕಾಶ ಇತ್ಯಾದಿ ಉದಾಹರಣೆಗಳಿಂದ ಆತ್ಮವೆಂದು ಅರ್ಥ ಬರುವಂತೆ ಹೇಳಿದ್ದಾರೆ. ಆದರೆ ಇಲ್ಲಿ ಚಿತ್ ಅಂದರೆ ಮನಸ್ಸೇ ಆಗಬೇಕಾಗುತ್ತದೆ–ಆತ್ಮನಿಗೆ ವೃತ್ತಿ (ವ್ಯಾಪಾರ) ಇಲ್ಲವಾದ್ದರಿಂದ. ವಿಜ್ಞಾನ-ಜಡ ಮಿದುಳಿಗೂ ಚಿತ್ ಶಕ್ತಿಗೂ ಸಂಬಂಧ ಹೇಳುವಲ್ಲಿ ಅಸಮರ್ಥ. ಅಲ್ಲದೆ ವಿಜ್ಞಾನದ ಶಕ್ತಿಗೂ ದಾರ್ಶನಿಕ ಶಕ್ತಿ (ಚೈತನ್ಯ)ಗೂ ಸಂಬಂಧವಿಲ್ಲ. ದರ್ಶನ ಹೇಳುವಂತೆ ಜ್ಞಾನಾನಂದ ಮಯ ಆತ್ಮ ಎಂಬುದು ಈವರೆಗೆ ವೈಜ್ಞಾನಿಕವಾಗಿ ಸಿದ್ಧಾಂತವಾಗಿಲ್ಲ. ಅಂದ ಮೇಲೆ ವಿಜ್ಞಾನವನ್ನು ಯೋಗಕ್ಕೋ ಇನ್ನಾವುದೇ ದರ್ಶನಕ್ಕೋ ಸಂಪಾದಿಯನ್ನಾಗಿಸುವುದು ಖಂಡಿತ ಸರಿಯಲ್ಲ.

ಚುಂಚನಹಳ್ಳಿ **ಬಿ.ಎಸ್. ಶ್ರೀನಿವಾಸಾಚಾರ್ಯ**

ಬಂದ್?!

ಸಾ.ಅ. ಮಂಜುನಾಥರು ತಮ್ಮ ಕವನದಿಂದ (ಜೂನ್ 88) ಒಂದರೆಕ್ಷಣ ನನ್ನ ಬಾಯಿ ಬಂದ್ ಮಾಡಿಸಿದ ಭೂಪರಾದರು. ನಂತರ 'ವಾಹ್' ಎಂಬ ಪದ ನನ್ನ ಬಾಯಿಂದ ಹೊರಬಿತ್ತೆನ್ನಿ.

ಕುಬಸೂರು **ಶಿವನಗೌಡ ಪಾಟೀಲ**

ಮತ್ತೆ ಓದಿದೆ

'ರಬ್ಬರಿನ ಆ ಏಳು ಬೀಜಗಳು' ಮತ್ತೆ ಓದಿದೆ. ಹಳೆಯ ಒಳ್ಳೆಯ ಲೇಖನಗಳನ್ನು ಪುನರ್ಪ್ರಕಟಿಸುವ ನಿಮ್ಮ ಕ್ರಮ ಶ್ಲಾಘನೀಯ.

ಬೆಳಗಾಂವಿ **ರಾಜಾರಾವ್ ದೇಸಾಯಿ**

ನಿಲುವುಗನ್ನಡಿ

ಸಿನಿಮೀಯವಾದ 'ನಿಲುವುಗನ್ನಡಿ'ಯಂಥದನ್ನು 'ಪುಸ್ತಕ ವಿಭಾಗ'ದಂಥ ಪ್ರಮುಖ ಪುಟಗಳಲ್ಲಿ ಕೊಟ್ಟು ಸುಮ್ಮನೇ ಆ ಜಾಗವನ್ನು ವೇಸ್ಟ್ ಮಾಡಿರುವುದಕ್ಕೆ 'ಕಸ್ತೂರಿ'ಯ ಬಗ್ಗೆ ತುಂಬ ಬೇಸರವಾಯಿತು.

ಹೊಳೆನರಸೀಪುರ **ಕೆ. ಪವಿತ್ರಾ**

ಜೂನ್ ಸಂಚಿಕೆಯ 52ನೆಯ ಪುಟದ 'ಸುವಾಸನೆ ಹೂಗಳ ಸಸ್ಯ: ನಾಗಕೇಶರ' ಕಿರು ಲೇಖನವನ್ನು ಬರೆದವರು ಎಂ.ಆರ್. ಶಾನಭಾಗ. ಕಣ್ತಪ್ಪಿ ಅವರ ಹೆಸರು ಪ್ರಕಟವಾಗಿರದಿದ್ದುದಕ್ಕೆ ವಿಷಾದಿಸುತ್ತೇವೆ.

— ಸಂಪಾದಕರು

ಕಸ್ತೂರಿ

ವರ್ಷ ೩೨	ಜುಲೈ ೧೯೮೮	ಸಂಚಿಕೆ ೧೧

ಶ್ರಮದ ಫಲ

ದೊಡ್ಡ ಶ್ರೀಮಂತನೊಬ್ಬ ಸಾಧುವೊಬ್ಬನನ್ನು ಮನೆಗೆ ಕರೆಸಿ "ಸ್ವಾಮಿ, ನಾನು ಸಾವಿರಾರು ರೂಪಾಯಿ ಖರ್ಚು ಮಾಡಿ ಒಂದು ದೇವಾಲಯ ಕಟ್ಟಿಸಿರುವೆ. ಆದರೆ ದೇವರ ಪೂಜೆ ಮಾಡಲು ನನಗೆ ಸಮಯ ಸಿಗುವುದಿಲ್ಲ. ಆದ್ದರಿಂದ ಒಬ್ಬ ಪೂಜಾರಿಯನ್ನೇಕೆ ನೇಮಿಸಬಾರದು ಎಂದು ಯೋಚಿಸುತ್ತಿರುವೆ" ಎಂದು ಹೇಳಿದ.

"ಇದರಿಂದ ನಿಮಗೇನು ಸಿಕ್ಕಂತಾಗುತ್ತದೆ?" ಎಂದು ಸಾಧು ಕೇಳಿದ.

"ಇಷ್ಟು ದೊಡ್ಡ ದೇವಾಲಯವನ್ನು ಕಟ್ಟಿಸಿದ್ದೇನೆ. ಒಬ್ಬ ಪೂಜಾರಿಯನ್ನು ನೇಮಿಸಿ ಪೂಜೆ ಮಾಡಿಸಿದರೆ ಅದರ ಫಲ ನನ್ನದಲ್ಲವೆ?" ಎಂದ ಶ್ರೀಮಂತ.

ಆಗ ಸಾಧು, "ಪೂಜೆ ಮಾಡಿದವನಿಗೆ ಅದರ ಫಲ ದೊರೆಯುತ್ತೆ. ನಿಮಗೆ ದೊರೆಯಲು ಹೇಗೆ ಸಾಧ್ಯ?" ಎಂದು ಬುದ್ಧಿವಾದ ಹೇಳಿದ.

ಆ ಮಾತು ಕೇಳಿ ಶ್ರೀಮಂತ ಗಹಗಹಿಸಿ ನಗುತ್ತ, "ಚೆನ್ನಾಗಿ ಹೇಳಿದಿರಿ ಸ್ವಾಮಿ, ದೇವಾಲಯವನ್ನು ಕಟ್ಟಿಸಿದವನು ನಾನು. ಸಂಬಳ ಕೊಟ್ಟು ಪೂಜಾರಿಯನ್ನು ನೇಮಿಸಿ ಪೂಜೆ ಮಾಡಿಸಿದರೆ ಅದರ ಫಲ ನನಗಲ್ಲದೆ ಆತನಿಗೆ ಹೇಗೆ ದೊರೆಯಲು ಸಾಧ್ಯ?" ಎಂದು ಕೇಳಿದ.

"ಪೂಜೆಯನ್ನು ಮಾಡುವವನು ಪೂಜಾರಿ. ಯಾರು ಶ್ರಮಪಡುತ್ತಾರೋ ಅವರಿಗೇ ಅದರ ಫಲ ದೊರೆಯುತ್ತದೆ" ಎಂದು ಸಾಧು ಅನೇಕ ವಿಧದಲ್ಲಿ ತಿಳಿಯಹೇಳಿದರೂ ವ್ಯಾಪಾರಿ ಒಪ್ಪದೆ ವಾದ ಮಾಡತೊಡಗಿದ. ಆಗ ಸಾಧು ಮಾತು ಬೆಳೆಸದೆ ಸುಮ್ಮನಾದ.


ಅಷ್ಟರಲ್ಲಿ ಶ್ರೀಮಂತ ನೌಕರನನ್ನು ಕರೆದು ತನ್ನ ಮಗನನ್ನು ಶಾಲೆಗೆ ಬಿಟ್ಟು ಬರಲು ಹೇಳಿದ. ಸಾಧು ಕೂಡಲೆ, "ಮಗುವನ್ನೇಕೆ ಶಾಲೆಗೆ ಕಳುಹಿಸುತ್ತಿದ್ದೀರಿ?" ಎಂದು ಕೇಳಿದ. "ವಿದ್ಯಾವಂತನಾಗಲೆಂದು" ಎಂದ ಶ್ರೀಮಂತ. ನಿಮ್ಮ ಮಗನ ಬದಲು ನೌಕರನನ್ನೇ ಏಕೆ ಶಾಲೆಗೆ ಕಳುಹಿಸಬಾರದು?" ಎಂದು ಸಾಧು ಕೇಳಿದ.

ಸನ್ಯಾಸಿಯ ಮಾತಿನಿಂದ ಚಕಿತಗೊಂಡ ಶ್ರೀಮಂತ, "ಪರವಾಯಿಲ್ಲ ಚೆನ್ನಾಗಿ ಹೇಳಿದಿರಿ. ಮಹಾ ಬುದ್ಧಿವಂತರು ನೀವು. ಅಲ್ಲಾ ಸ್ವಾಮಿ, ನನ್ನ ಮಗನ ಬದಲು ನೌಕರನನ್ನು ಶಾಲೆಗೆ ಕಳುಹಿಸಿದರೆ ಅವನು ವಿದ್ಯಾವಂತನಾಗುತ್ತಾನೆ. ಇದರಿಂದ ನನ್ನ ಮಗನಿಗಾಗುವ ಪ್ರಯೋಜನವೇನು?" ಎಂದು ಕೇಳಿದ.

"ಯಾಕೆ ಪ್ರಯೋಜನವಿಲ್ಲ? ನಿಮ್ಮ ಮಗನ ಬದಲು ನೌಕರ ಓದಿದರೆ ಅದರ ಪ್ರಯೋಜನ ನಿಮ್ಮ ಮಗನಿಗೆ ದೊರೆಯುವುದು" ಸಾಧುವೆಂದ. "ಅದು ಹೇಗೆ ಸಾಧ್ಯ ಸ್ವಾಮಿ? ನೌಕರ ಓದಿದ್ದು ಆತನಿಗೆ ಸಹಾಯಕವಾಗುವುದು. ನನ್ನ ಮಗ ವಿದ್ಯಾವಂತನಾಗಬೇಕಾದರೆ ಸ್ವತಃ ಆತನೆ ಓದಬೇಕಲ್ಲವೆ?" ಎಂದು ಶ್ರೀಮಂತನೆಂದಾಗ ಸಾಧು ನಗುತ್ತ, "ಹಾಗಾದರೆ ದೇವಾಲಯದಲ್ಲಿ ಪೂಜಾರಿ ಪೂಜೆ ಮಾಡಿದರೆ ಅದರ ಫಲ ಅವನಿಗಲ್ಲದೆ ನಿಮಗೆ ಹೇಗೆ ದೊರೆಯಲು ಸಾಧ್ಯ?" ಎಂದ.

ಆಗ ಸಾಧುವಿನ ಮಾತಿನಲ್ಲಿರುವ ಸತ್ಯವನ್ನು ಮನಗಂಡ ಶ್ರೀಮಂತ ಆತನ ಕ್ಷಮೆ ಕೇಳಿದ.

● ಗೌರಿ ಅಭಿ ●



"ನನ್ನ" ರಾಜ ಕಪೂರ್

● ಖಜಾನೆ ಕೃಷ್ಣಮೂರ್ತಿ ●

ನಾನಾಗ ಶಿವಮೊಗ್ಗೆಯಿಂದ ಬೆಂಗಳೂರಿಗೆ ಬಂದು ಬಿ.ಎಸ್‌ಸಿ.ಗೆಂದು ಸೆಂಟ್ರಲ್ ಕಾಲೇಜು ಸೇರಿದ್ದೆ. ನಮ್ಮ ತರಗತಿಗೆ ಇಂಗ್ಲೀಷ್ ಪಠ್ಯವಾಗಿದ್ದ ಏಕಾಂಕ ನಾಟಕಗಳ ಒಂದು ಗುಚ್ಛದಲ್ಲಿ ಬರುವ ಒಂದು ಆಖ್ಯಾಯಿಕೆಯಲ್ಲಿ ನನ್ನ ಇಂಗ್ಲೀಷ್ ಅಧ್ಯಾಪಕರು (ಶ್ರೀ ಕೆ. ನರಸಿಂಹಮೂರ್ತಿ) Is it heridity or the environment that shapes the destiny of man? ಎಂಬ ಚರ್ಚೆಯ ಕಾಲದಲ್ಲಿ "ಪರಿಸರವೇ ಇದರಲ್ಲಿ ಬಹು ಮಹತ್ತರ ಪಾತ್ರ ವಹಿಸುತ್ತದೆ. ಬೇಕಾದರೆ ಈಗ ಮೆಜೆಸ್ಟಿಕ್ ಚಿತ್ರಮಂದಿರದಲ್ಲಿ ನಡೀತಿರೋ ರಾಜ ಕಪೂರನ ಫಿಲ್ಮ 'ಆವಾರಾ' ನೋಡಿಬನ್ನಿ" ಎಂದುಬಿಡಬೇಕೆ! ಶಾಲಾ ಕಾಲೇಜುಗಳಲ್ಲಿ ಸಿನಿಮಾ ಕುರಿತು ಮಾತನ್ನೇ ಎತ್ತಬಾರದಂತಹ ಕಾಲವದು. ನಮಗೆ ಆಶ್ಚರ್ಯವೋ ಆಶ್ಚರ್ಯ!

ಆಗ ಅದಿನ್ನೂ 4-5ನೆಯ ವಾರ ನಡೆಯುತ್ತಿತ್ತು. ತುಂಬ ರಷ್. ಟಿಕೆಟ್ಟನ್ನು ಬ್ಲ್ಯಾಕ್‌ನಲ್ಲಿ ಮಾರಾಟ ಮಾಡುವುದಿನ್ನೂ ಆಗ ಗೊತ್ತಿರಲಿಲ್ಲ. ಕೊನೆಗೆ ಎಂಟನೆಯ ವಾರವೋ ಹತ್ತನೆಯ ವಾರವೋ ನಡೆಯುತ್ತಿದ್ದಾಗ ನಾನೂ ಹೋಗಿ ಬಂದೆ. ಆ ಚಿತ್ರ, ಮತ್ತವನ ಅಭಿನಯ ಎರಡೂ ಆ ಕಾಲದ ಯಾವುದೇ ಯುವಕರಿಗೆ ಹುಚ್ಚು ಹಿಡಿಸುವಂಥದು.

ಬೆಳಗಾಗುವುದರೊಳಗಾಗಿ ರಾಜ ಖ್ಯಾತನಾಗಿ ಹೋದ, ಅತ್ಯುನ್ನತಿಯನ್ನೇರಿದ. ಚಲನಚಿತ್ರ ವಾರಪತ್ರಿಕೆ, ಪಾಕ್ಷಿಕ ಮತ್ತು ಮಾಸಪತ್ರಿಕೆಗಳಲ್ಲಿ ಅವನ ಸುದ್ದಿ, ಅವನ ಚಿತ್ರಗಳ ಸುದ್ದಿ, ಅವನು ನಿರ್ದೇಶಿಸುತ್ತಿದ್ದ ಚಿತ್ರಗಳ-ನಟನೆಗಳ ಪ್ರಶಂಸೆಯೇ ಪ್ರಶಂಸೆ! ಯುವ ಪೀಳಿಗೆಯವರಿಗೆ, ಅದರಲ್ಲೂ ಪ್ರತಿಭೆ ಇದ್ದೂ ಹತಭಾಗ್ಯರಾಗಿ ನಿರಾಶೆಗೊಂಡ ಯುವಕರಿಗೆ, ತಂದೆ ತಾಯಿಗಳ ಅನಾದರಕ್ಕೆ ಪಾತ್ರರಾಗಿ ನೆಲ ಕಚ್ಚಿದ ನಿರ್ಭಾಗ್ಯರಿಗೆ ರಾಜ ಕಪೂರ್ ಚಾಂಪಿಯನ್ ಆದ.. ಅವನು ನಟಿಸಿದ್ದ ಚಿತ್ರಗಳ ನಾಯಕರಿಗೆ-ಚಿತ್ರದಲ್ಲಿ ಬಂದ ಘಟನೆಗಳಿಗೆ ನನ್ನ ಬಾಳಿನ ಘಟನೆಗಳು ತೀರ ಹೋಲಿಕೆಯಾಗುತ್ತಿದ್ದುದರಿಂದ ಹದಿನೆಂಟಿಪ್ಪತ್ತರ ಆ ವಯಸ್ಸಿನಲ್ಲಿ ಅವನು ನನಗೂ ಆರಾಧ್ಯ ವ್ಯಕ್ತಿಯಾಗಿ ಬಿಟ್ಟಿದ್ದ. ಅವನಂತೆ ತಳ ಮಡಿಚಿದ ಪ್ಯಾಂಟ್, ಕೆದರಿದ ತಲೆಗೂದಲು ಯುವಕರ ಫ್ಯಾಶನ್ ಆಯಿತು.

ಚಿತ್ರರಂಗದ ಎಲ್ಲ ಮಗ್ಗುಲುಗಳನ್ನೂ ಮೈಗೂಡಿಸಿಕೊಂಡು ಅದರೊಡನೆಯೇ ತಾನೂ ಸ್ಪಂದಿಸುತ್ತಲೇ ಬೆಳೆದ ಕಲಾವಿದ ರಾಜ್‌ಕಪೂರ್. ನಾಡಿನ ಯುವ ಜನಾಂಗದ ಅಂತಃಕರಣವನ್ನು, ಒಂದು ಕಾಲಕ್ಕೆ, ಇಷ್ಟೊಂದು ಆಳವಾಗಿ ತಟ್ಟಿದ ಸಿನಿ ಕಲಾವಿದ ಇನ್ನೊಬ್ಬ ನಿಲ್ಲ. ಜವರಾಯನೊಂದಿಗೆ ನಾಲ್ಕು ವಾರ ಸೆಣಸಿದ ನಂತರ ಜೂನ್ ಎರಡರ ರಾತ್ರಿ ಅವನು ಇಹ ಜಗತ್ತಿಗೆ ವಿದಾಯ ಹೇಳಿದ.

ಪ್ರಸ್ತುತ ಲೇಖಕರ ಜೀವನದಲ್ಲೂ ಹಣಿಕಿಕ್ಕಿ ಹೋದರು ರಾಜ್‌ಕಪೂರ್. ಆ ಕ್ಷಣಗಳನ್ನು ನೆನೆವ ಈ ಲೇಖನ ಇಂದು ಪ್ರಕಟವಾಗುತ್ತಿರುವುದು ಶ್ರದ್ಧಾಂಜಲಿಯ ರೂಪದಲ್ಲಿ.

ಚಾಮುಂಡೇಶ್ವರಿ ನಾಟಕ ಕಂಪನಿಯ ದಿ. ಕೊಟ್ಟೂರಪ್ಪನವರು ನನ್ನ ಗುರುಗಳು. ಅವರ ಕಂಪನಿ ಶಿವಮೊಗ್ಗೆಗೆ ಬಂದಾಗ ಅತ್ತೂ ಕರೆದೂ, ಅನ್ನ ನೀರು ಬಿಟ್ಟು, ಅಪ್ಪ-ಅಣ್ಣಂದಿರ -ಅನುಬಂಧಿಗಳ ವಿರೋಧ ಕಟ್ಟಿಕೊಂಡು, ಎಂಟು, ಒಂಭತ್ತನೆ ವಯಸ್ಸಿನಲ್ಲಿ ನಾನು ನಾಟಕದ ಕಂಪನಿಯ ಬಾಲನಟನಾಗಿ ಸೇರಿದೆ. ರಾಜ ಕಪೂರ್ ಕಿದಾರಶರ್ಮರ ಬಳಿ-ರಣ ಜಿತ್ ಸ್ಟುಡಿಯೋನಲ್ಲಿ ಏನೇನು ಕಷ್ಟಪಟ್ಟನೋ ಅದೆಲ್ಲ ಇಲ್ಲಿ ನನಗಾಯಿತು. ಆದರೆ ನಾಟಕದ ಗೀಳು, ಬಣ್ಣದ ಅಂಟು, ತಡಸಲು ದೀಪಗಳ ಕಾವು ನನ್ನನ್ನಾವರಿಸಿಕೊಂಡದ್ದರಿಂದ ಅವೆಲ್ಲವನ್ನೂ, ಸಹಿಸಿ ಮೂರು ನಾಲ್ಕು ತಿಂಗಳು ಯಾವ ಪ್ರತಿಫಲವೂ ಇಲ್ಲದೆ ದುಡಿದು ಅಲ್ಲಿನದೆಲ್ಲವನ್ನೂ ಹಸಿ ಜೇಡಿ ಮಣ್ಣಿನಂಥ ಮನಃಪಟಲದ ಮೇಲೆ ಅಚ್ಚು ಮಾಡಿಕೊಂಡು ಹೊರಬಿದ್ದೆ.

ಗುಬ್ಬಿ ವೀರಣ್ಣನವರ ಕಂಪನಿ, ಎಂ.ಎನ್. ಗಂಗಾಧರರಾಯರ ಕಂಪನಿ, ಹಲಗೇರಿಯ ಚಿಕ್ಕ ಜಟ್ಟೆಪ್ಪನವರ ಕಂಪನಿ, ಯಾವುದೇ ಬಂದರೂ ಅವು ಇರುವಷ್ಟು ಕಾಲ ನನ್ನ ಮೊಕ್ಕಾಂ ಕಂಪನಿಯ ಮನೆಯಲ್ಲೇ! ಕೆ. ಹಿರಣ್ಣಯ್ಯರ ಮಿತ್ರಮಂಡಲಿ ಬಂದ ಮೇಲೆ ನನ್ನ ದೃಷ್ಟಿ ನಟನೆಯೊಂದಿಗೆ ನಿರ್ಮಾಣ ನಿರ್ದೇಶನಗಳ ಕಡೆ ಒಲಿಯಿತು. ಹಾಸ್ಯ ಪಾತ್ರ, ದುರಂತ ನಾಯಕನ ಪಾತ್ರಗಳೆಡೆ ಮನ ತಿರುಗಿತು. ಆದರೂ ಇದು ಬಹಳ ದಿನ ನಡೆಯದೇ ಹೋಯಿತು. ಮತ್ತೆ ವಿದ್ಯಾಭ್ಯಾಸ-ಹತ್ತು ವರ್ಷಗಳ ಕಾಲ ಬಹುಮಟ್ಟಿಗೆ ಅಜ್ಞಾತವಾಸ. ಸ್ಕೂಲು ಕಾಲೇಜುಗಳಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಏಕಪಾತ್ರ, ಸೈಗಲ್-ಪಂಕಜ್-ರಫಿ -ಮುಕೇಶರ ಹಾಡುಗಳು-ಇಷ್ಟಕ್ಕೇ ನನ್ನ ಪಠ್ಯೇತರ ಚಟುವಟಿಕೆ ಸೀಮಿತಗೊಂಡಿದ್ದವು. 1952ರಲ್ಲಿ ನಾನು ಪದವಿ ಪಡೆದು ಶಿವಮೊಗ್ಗೆಗೆ ಬಂದೆ. ಬಯಾಲಜಿ ಮೇಷ್ಟ್ರಾದೆ.

ಆ ಶಾಲೆಯೇ ನನ್ನ 'ಲ್ಯಾಬೊರೇಟರಿ', ಕರ್ನಾಟಕ ಸಂಘವೇ ನನ್ನ 'ಆರ್.ಕೆ. ಸ್ಟುಡಿಯೋ'. ಮಿತ್ರರ ಉತ್ತೇಜನದಿಂದಾಗಿ ಮುಂದೆ 'ವಾಣಿ ಕಲಾವಿದರು' ಸ್ಥಾಪಿಸಿದೆ(ವು). ಮುಂದದು ಅಗಾಧವಾಗಿ ಬೆಳೆಯಿತು. ಸ್ಥಳೀಯ ಎಲ್ಲ ಶಾಲೆಗಳ ಪದವೀಧರ ಅಧ್ಯಾಪಕರು ಅದರ ಸದಸ್ಯರಾದರೆ ನಗರದ ಗಣ್ಯ ವಕೀಲರು-ಡಾಕ್ಟರುಗಳು, ದಾನಿಗಳು, ಆಡಳಿತ ಮಂಡಲಿ ಸೇರಿದರು. ರಾಜ ಕಪೂರನ ಒಂದೊಂದು ಹೊಸ ಚಿತ್ರ ಹೊರಬಂದಂತೆಲ್ಲ ಇಲ್ಲಿ ನಮ್ಮದೂ ಒಂದು ಹೊಸ ನಾಟಕ ಪ್ರದರ್ಶನಕ್ಕೆ ಬರುತ್ತಿತ್ತು. (ಮಾಸ್ಟರ್ ಕೆ. ಹಿರಣ್ಣಯ್ಯ ಕೂಡ ನಮ್ಮ ಒಂದು ನಾಟಕಕ್ಕೆ ತಮ್ಮ ನಾಟಕ ಮಂದಿರವನ್ನು ಒಂದು ಸಲ ಬಿಟ್ಟುಕೊಟ್ಟಿದ್ದರು.)

1956ರಲ್ಲಿ ರಾಜ ಕಪೂರನ 'ಜಾಗತೆರಹೋ' ಚಿತ್ರ ಹೊರಬಂತು. ನಮ್ಮ ಸಂಸ್ಥೆ ಶಿವಮೊಗ್ಗೆಯಲ್ಲಿ ಆಗ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ದಿನಗಳವು. ಆ ದಿನಗಳಲ್ಲಿ ಇದ್ದಕ್ಕಿದ್ದಂತೆ ನಾಡಿನ ಒಂದು ಹಿರಿಯ ದಿನಪತ್ರಿಕೆಯಲ್ಲಿ 'ಬೇಕಾಗಿದ್ದಾರೆ' ಎಂಬ ಶೀರ್ಷಿಕೆಯಡಿಯೊಂದರಲ್ಲಿ "ಮುಂಬಯಿಯ ಪ್ರಖ್ಯಾತ ನಟ-ನಿರ್ದೇಶಕ ರಾಜ ಕಪೂರರ ಬಳಿ ಸಹ ನಿರ್ದೇಶಕರಾಗಿ ದುಡಿದು ನುರಿತ ನಿರ್ದೇಶಕ ಕೀರ್ತಿ ರಾಜ್‌ರವರು ತಯಾರಿಸಲಿರುವ ಶ್ರೀ ಗೋಪಾಲಕೃಷ್ಣ ಅಡಿಗರ "ಅನಾಥೆ" ಕನ್ನಡ ಚಿತ್ರದಲ್ಲಿ ಪಾತ್ರವಹಿಸಲು ನಟ -ನಟಿಯರು ಬೇಕಾಗಿದ್ದಾರೆ. ಭಾವಚಿತ್ರದೊಂದಿಗೆ ಅನುಭವ-ಆಸ್ಥೆ ಕುರಿತು ಬರೆದುಕೊಳ್ಳಿ" ಎಂಬ ಪ್ರಕಟಣೆ ಬಂತು.

ನಮ್ಮ ಕೃಷ್ಣಸ್ವಾಮಿಗೆ ನಾನು ಎಂದರೆ ತುಂಬ ಪ್ರೀತಿ. ತಾವೇ ಅರ್ಜಿ ತಯಾರಿಸಿ ರುಜು ಹಾಕಿಸಿಕೊಂಡರು. ರಮೇಶರಾಯರ 'ಬಾಂಬೆ ಸ್ಟುಡಿಯೋ' (ಉದಯ ಜಾದೂಗಾರರ ತಂದೆಯವರದು)ಕ್ಕೆ ಕರೆದೊಯ್ದು ತಮಗಿಷ್ಟ ಬಂದ ಅಲಂಕಾರ, ಅಂಗಾರ-ಶೃಂಗಾರ ಮಾಡಿ ಫೋಟೋ ತೆಗೆಯಿಸಿ, ಅರ್ಜಿಯೊಂದಿಗೆ ಕೀರ್ತಿ ರಾಜನಿಗೆ ರವಾನಿಸಿದರು.

ಕೆಲವೇ ದಿನಗಳಲ್ಲಿ ಸಂದರ್ಶನಕ್ಕೆ ಕರೆಬಂತು. ಬೆಂಗಳೂರಿನ ಮಾಡೆಲ್ ಹೌಸ್ ಬ್ಲಾಕ್‌ನ ಒಬ್ಬರು ಪ್ರತಿಷ್ಠಿತರ ಮನೆಯಲ್ಲಿ ಸಂದರ್ಶನ ನಡೆಯಿತು. ಕೀರ್ತಿರಾಜ್ ಅಲ್ಲದೆ ಮತ್ತಿತರರೂ ಇದ್ದರು. "ಮಾಸ್ಟರ್ ಹಿರಣ್ಣಯ್ಯ ಮತ್ತು ನಿಮ್ಮನ್ನು ಆಯ್ಕೆ ಮಾಡಿದ್ದೀವಿ. ನಿಮ್ಮ ಪಾತ್ರದ ಭಾಗಗಳನ್ನು ಎಂಟ್ಹತ್ತು ದಿನಗಳಲ್ಲಿ ಶೂಟ್ ಮಾಡಿ ಮುಗಿಸುತ್ತೇವೆ. ಸಿದ್ಧರಾಗಿರಿ"

ಎಂದು ಹೇಳಿದರು. ಇದು ಶಿವಮೊಗ್ಗೆಯಲ್ಲೆಲ್ಲ ಸುದ್ದಿಯಾಯಿತು.

ಮುಂದೆ ಕೆಲವೇ ದಿನಗಳಲ್ಲಿ ಮೈಸೂರಿನ ಪ್ರೀಮಿಯರ್ ಸ್ಟುಡಿಯೋನಲ್ಲಿ 'ಅನಾಥೆ'ಯ ಮುಹೂರ್ತ! ನನಗೆ ಲಿಖಿತ ಕರೆ-ಆಹ್ವಾನ ಪತ್ರಿಕೆ ಬಂತು. ಶಿವಮೊಗ್ಗೆಯಿಂದ ಮಿತ್ರರೆಲ್ಲ, 'ವಾಣಿ'ಯ ಬಳಗವೆಲ್ಲ ನನ್ನನ್ನು ಅಭಿಮಾನ ದಿಂದ ಬೀಳ್ಕೊಟ್ಟರು.

ಮುಹೂರ್ತದ ಪ್ರಥಮ ಕ್ಲಾಪ್ ಶಾಟ್‌ಗೆ ಆ ಸೆಲೆಬ್ರೇಟೆಡ್ ಕ್ಲಾಪರ್ ಬಾಯ್ ರಾಜ ಕಪೂರ್ ಬರಲಿದ್ದ! ಅಂತೆಯೇ ಸ್ಟುಡಿಯೋ ದಲ್ಲಿ ಅಪಾರ ಜನಸಂದಣಿ. ಮದ್ರಾಸಿನ ಪ್ರಸಾದ್ ಸ್ಟುಡಿಯೋದಲ್ಲಿ ರಾಜ ಕಪೂರ್ ಮೀನಾಕುಮಾರಿಯೊಂದಿಗೆ. ನಟಿಸಿದ 'ಶಾರದಾ' ಚಿತ್ರದ ಶೂಟಿಂಗಿಗೆ ಹೊರಟಿದ್ದ. ಅಲ್ಲಿಗೆ ಹೋಗುವ ಮಾರ್ಗದಲ್ಲಿ ಮೈಸೂರಿ ನಲ್ಲಿ ಆತ ಈ ಕಾರ್ಯಕ್ರಮದಲ್ಲಿ ಭಾಗವಹಿಸ ಲಿದ್ದ. ಹೋಟೆಲ್ ಮೆಟ್ರೊಪೋಲಲ್ಲಿ ಅವನ ವಾಸ್ತವ್ಯ! ಜತೆಗೆ ಅವನ 'ಬೂಟ್‌ಪಾಲಿಶ್' ಚಿತ್ರದ ಛಾಯಾಗ್ರಾಹಕ ತಾರು ದತ್ ಕೂಡ ಬಂದಿದ್ದ.

ಈ ವೇಳೆಗಾಗಲೆ ರಾಜ ಕಪೂರ್ ದೇಶ ವಿದೇಶಗಳಲ್ಲಿ ಖ್ಯಾತನಾಗಿಬಿಟ್ಟಿದ್ದ. 'ಜಾಗತೆ ರಹೋ' ಚಿತ್ರಕ್ಕೆ ವೆನಿಸ್‌ನ ಕಾರ್ಲ್‌ವಿ ವ್ಯಾರಿ ಯಲ್ಲಿ 'ಗ್ರಾಂಡ್ ಪ್ರಿ' ಬಹುಮಾನ ಬಂದು ಬಿಟ್ಟಿತ್ತು.ಅರವತ್ತಾರು ವರ್ಷದವರು ತಿಣುಕಿ ಮಾಡಿದ ಸಾಧನೆಯನ್ನು ರಾಜ ಕಪೂರ್ 33ಕ್ಕೆ ಮಾಡಿದ್ದ. ಯುರೋಪಿನ ವಿವಿಧ ರಾಷ್ಟ್ರಗಳಿಗೆ ಹೋಗಿ ಬಂದಿದ್ದ. ರಶಿಯದಲ್ಲಿಂತೂ ನೆಹರೂ ನಂತರ ಗೊತ್ತಿದ್ದ ಭಾರತೀಯನೆಂದರೆ ಅವನೇ ಆಗಿಬಿಟ್ಟಿದ್ದ. ಇಂಥ ವ್ಯಕ್ತಿ ಮೈಸೂರಿಗೆ ಬಂದರೆ ಜನ ನೋಡದೆ ಬಿಟ್ಟಾರೆಯೆ?

ನನ್ನ ಮನಸ್ಸು ಪರಮಪದ ಸೋಪಾನ ಪಟದ ಮುಂದೆ ಆಡುತ್ತಿತ್ತು. ನಾನು ಎಸೆದ ಕವಡೆ ಸಣ್ಣ-ಪುಟ್ಟಗರ ಬೀಳಿಸುತ್ತ ಸಣ್ಣ ಸಣ್ಣ ಏಣಿ ಗಳನ್ನು ಹತ್ತಿಸಿ ಅಷ್ಟೇ ಉದ್ದದ ಹಾವುಗಳ ತಲೆ ಗಳನ್ನು ದಾಟಿಸಿ ಮೇಲಕ್ಕೆ ಕರೆದುಕೊಂಡು ಹೋಗುತ್ತಿತ್ತು. ಈಗ ಮೇಲಣ ಸಾಲೊಂದು- ಅಲ್ಲೊಂದು ದೆವ್ವ-ದೊಡ್ಡ ಹಾವಿದೆ-ಅದನ್ನ ದಾಟಿದರೆ ಪರಮಪದ! ಹೊರಗೆ ರಣಗುಡುವ ಬಿಸಿಲು.

ಐದು ಗಂಟೆಯ ಸುಮಾರಿಗೆ ರಾಜ ಕಪೂರ್ ಬಂದಿಳಿದ. ಜನಸ್ತೋಮ ಮಾಡಿದ ಘೋಷ, ನೀಡಿದ ಸ್ವಾಗತ, ಮಾಡಿದ ಓವೇಶನ್... ಬರೆಯಲಾರೆ! ಆದರೆ ಮರೆಯಲಾರೆ!

ಅಂದಿನ ಮೈಸೂರಿನಲ್ಲಿ ಹೆಸರಾಗಿದ್ದ ಶಾಂತಾ ಎಂಬ ಯುವತಿ ಮೊದಲ ಶಾಟ್ ಎದುರಿಸಲು ಸರಳ ಉಡುಪಿನಲ್ಲಿ ಸಿದ್ಧಳಾಗಿ ಕುಳಿತಿದ್ದಳು. ಕೀರ್ತಿರಾಜ್ ಎರಡು ಮೂರಾವರ್ತಿ ಆಕೆಯ ಬಳಿ ಬಂದು ರಿಹರ್ಸಲ್ ಮಾಡಿಯಾಗಿತ್ತು. ಕ್ಯಾಮರಾ ಹೊತ್ತ ಟ್ರಾಲಿ ಕಂಬಿ ಮೇಲೆ ಮೂರು ನಾಲ್ಕು ಬಾರಿ ಹಿಂದಕ್ಕೂ ಮುಂದಕ್ಕೂ ಸರಿದು ಆ್ಯಂಗಲ್ ನೋಡಿ ಕೊಂಡಿತ್ತು.

ಪೂಜಾ ವಿಧಿಗಳೆಲ್ಲ ಮುಗಿದ ನಂತರ ಅವನಿಂದಲೇ ಕ್ಯಾಮರಾ, ಟ್ರಾಲಿ, ಸೌಂಡ್ ಟ್ರ್ಯಾಕ್-ಬೂಂಗಳಿಗೆಲ್ಲ ಪೂಜೆ ಮಾಡಿಸಿದರು. ಬಿಸ್ಕತ್ ಕಲರ್ ಸೂಟ್, ಕೆಂಪು ಸಿಲ್ಕ್ ಶರ್ಟು ಧರಿಸಿ ಬಂದಿದ್ದ ಅವನ ಬಣ್ಣ, ನೀಲಿಗಣ್ಣು ನೋಡಿ ನಾನೇ ಮೋಹಗೊಂಡೆ.

ಮುಂದಿನ ಘಟ್ಟ ಮುಹೂರ್ತದ ಶಾಟ್. ಸಿಕ್ಕಾಪಟ್ಟೆ ಜನ. ನೂಕುನುಗ್ಗಲು. ಪ್ರತಿಯೊಬ್ಬ ನಿಗೂ ಇನ್ನೊಬ್ಬನನ್ನು ಹಿಂದೆ ತಳ್ಳಿ ಮುಂದೆ ಸರಿದು ನಿಲ್ಲುವ ಹಟ. ಜನ ಈ ರೀತಿ ನನ್ನನ್ನು ಹಿಂದೆ ತಳ್ಳಿದಾಗಲೆಲ್ಲ ನನ್ನ ಭಾವ (ಜತೆಗೆ ಬಂದಿದ್ದರು) ನನ್ನನ್ನು ಅಷ್ಟೇ ರಭಸದಿಂದ ಮುಂದೆ ತಳ್ಳುತ್ತಿದ್ದರು. ಹೀಗಾಗಿ ನಾನು ರಾಜ್‌ಗೆ -ಟ್ರಾಲಿಗೆ- ಕ್ಯಾಮರಾಕ್ಕೆ ಸಮೀಪದ ಮುಂದಣ ಸಾಲಿನಲ್ಲೇ ನಿಲ್ಲುವಂತಾಯಿತು.

ಎರಡು ಮೂರು ರಿಹರ್ಸಲ್‌ಗಳಾದ ನಂತರ ಕೀರ್ತಿರಾಜ್ ರಿಯಲ್ ಟೇಕ್‌ಗೆಂದು "ರೆಡಿ.. ಸೈಲೆನ್ಸ್..ಒನ್...ಟೂ..ಗೋ" ಎಂದಾಗ ಶಾಂತಳ ಮುಖಕ್ಕೆ ರಾಜ ಕಪೂರ್ ಕ್ಲಾಪ್ ಬೋರ್ಡ್ ಹಿಡಿದು ಕ್ಷಣ ಮಾತ್ರದಲ್ಲಿ 'ಪಟಕ್' ಎನ್ನಿಸಿ ಮಗ್ಗುಲಿಗೆ ಸರಿದೂ ಆಯಿತು. ಲೆಕ್ಕ ವಿಲ್ಲದಷ್ಟು ಕ್ಯಾಮರಾಗಳು ಬೆಳಕು ಎರಚಿ ಫ್ಲ್ಯಾಷ್ ಚಿತ್ರ ತೆಗೆದುಕೊಂಡವು.

ಟ್ರಾಲಿ ನಿಧಾನವಾಗಿ ಮುಂದೆ ಸರಿಯುತ್ತ ಲಾಂಗ್‌ಶಾಟ್‌ನಿಂದ ಮಿಡ್‌ಶಾಟ್ ಅಂತರ ದಾಟಿ ಕ್ಲೋಸ್ ಅಪ್‌ಗೆ ಬಂದಾಗ "ಡೈಲಾಗ್,

ಆ್ಯಕ್ಷನ್" ಎಂದು ಕೀರ್ತಿರಾಜ್ ಕೂಗು ಕೊಟ್ಟರು. ಶಾಂತಾ ಅವರ ಅಪ್ಪಣೆ ಪಾಲಿಸಿದಳು. ಮುಗಿಯಿತು.

ಶಿಷ್ಯ ಕೀರ್ತಿ ಗುರು ರಾಜ ಕಪೂರ್‌ನ ಪಾದ ಸ್ಪರ್ಶ ಮಾಡಿದ. ಪ್ರಾಸ್ತಾವಿಕ ಭಾಷಣ ಮಾಡಿದ. ಉತ್ತರವಾಗಿ ರಾಜ ಕಪೂರ್‌ನೂ ಮಾತಾಡಿದ. ಆರಂಭದಲ್ಲೇ ಅವನು ಒಂದು ಪ್ಯಾಂಟೋಮೈಮ್ ಮಾಡಿ ಜನಸ್ತೋಮವನ್ನು ನಗಿಸಿಬಿಟ್ಟ. ಒಂದು ಗಂಟೆಗೂ ಮಿಕ್ಕಿ ಮಾತನಾಡಿದ. "Keerthi is an R.K. Product. ಅವನ ಕೀರ್ತಿ-ಅಕೀರ್ತಿ ನನ್ನದು. ಅವನ ಈ ಪ್ರಯತ್ನ ಅಯಶಸ್ವಿಯಾದರೆ ಅಪಖ್ಯಾತಿ ನಮಗೆ. ಅದಾಗಲು ಬಿಡೆ. ಇಡೀ ಆರ್‌ಕೆ ತಂಡವೇ ಅವನ ಬೆಂಬಲಕ್ಕಿದೆ" ಎಂದು ಇಂಗ್ಲೀಷಿನಲ್ಲಿ ಮಾತಾಡಿದ.

ಸ್ಟುಡಿಯೋದಲ್ಲಿದ್ದವರಿಗೆಲ್ಲ ಸಿಹಿ ಹಂಚಲಾಯಿತು. ರಾಜ ಕಪೂರ್‌ನನ್ನು 'ಅನಾಥೆ'ಯ ಲೇಖಕ ಅಡಿಗರಿಗೆ, ಸಂಗೀತ ಸಂಯೋಜಕ ಕಾಳಿಂಗರಾಯರಿಗೆ, ಶಂಕರ್‌ಸಿಂಗ್- ಪ್ರತಿಮಾದೇವಿ ದಂಪತಿಗಳಿಗೆ ಪರಿಚಯಿಸಲಾಯಿತು.

ಈ ಚಿತ್ರದಲ್ಲಿ ಸಣ್ಣ ಪಾತ್ರವಾದರೂ ಪರವಾಗಿಲ್ಲ, ಮಿಂಚಿದೆನಾದರೆ ನನ್ನ ದಾರಿ ನನ್ನದು ಎಂದು ಮನದಲ್ಲೇ ನಾನು ಮಂಡಿಗೆ ಮುರಿದೆ. ಇನ್ನು ರಾಜ ಕಪೂರ್‌ನನ್ನು ಏಕಾಂತದಲ್ಲಿ ಹಿಡಿಯಬೇಕು.

ಅದೆಷ್ಟು ಜನ! ಆಹ್ವಾನಿತರಿಗೆ ಮಾತ್ರ ಪ್ರವೇಶ ಎಂದು ಸ್ಟ್ರಿಕ್ಟ್ ಆಗಿ ಪ್ರವೇಶವನ್ನು ಮಿತಗೊಳಿಸಿದ್ದರೂ ಅಸಾಧ್ಯ ಜನ! ಮುಚ್ಚಿದ ಸ್ಟುಡಿಯೋ ಮೇನ್ ಗೇಟ್ ಮುಂದೆ ಪ್ರವೇಶ ಸಿಕ್ಕದ ಲಕ್ಷಾಂತರ ಜನ "We want Raj kapoor" ಎಂದು ಗೊಂದಲ ಹಾಕುತ್ತಿದ್ದರು. ಅವರ ಬೊಬ್ಬೆ, ಒತ್ತಡ ತಾಳಲಾರದೆ ಮುಖ್ಯದ್ವಾರ ತೆರೆಯಿತು. ಸಿಕ್ಕಾಪಟ್ಟೆ ಜನ ಒಳನುಗ್ಗಿದರು. ಆ ಗುಂಪಿನಲ್ಲಿ ನುಗ್ಗಿನುಗ್ಗಿ ಮುಂದೆ ಹೋಗುತ್ತಿದ್ದ ನಾನು ಯಾವುದೊ ಮಾಯದಲ್ಲಿ ರಾಜ ಕಪೂರ್‌ನ ಎಡತೋಳಿಗೆ ನನ್ನ ಕೈ ತೆಕ್ಕೆ ಹಾಕಿಬಿಟ್ಟೆ; ಬಿಟ್ಟರೆ ಜಾರಿ ಹೋದಾನು ಎಂದಷ್ಟೇ ನನ್ನ ಭಯ!

ಒಳಕ್ಕೆ ನುಗ್ಗಿ ಬಂದವರಲ್ಲಿ ಹಲವರು ಅವನ ಮುಂದೆ ನೆಲದ ಮೇಲೆ ಉದ್ದಕ್ಕೆ ಮಲಗಿಬಿಟ್ಟರು. "ಒಮ್ಮೆ ಹಾಗೆಯೇ ನಿಂತುಕೋ ರಾಜ್, ನಿನ್ನನ್ನು ಕಣ್ಣತುಂಬ ನೋಡಿಬಿಡುತ್ತೇವೆ," ಎಂದು ಹಲವರು ಇಂಗ್ಲೀಷಲ್ಲಿ ಊಳಿಟ್ಟರು. ಕೆಲವರು ಅವನ ಕೈಲಿದ್ದ ಬೆಂಕಿಪೊಟ್ಟಣ ಹಾರಿಸಿದರೆ ಇನ್ನೊಬ್ಬ ಸಿಗರೇಟನ್ನೇ ಹಾರಿಸಿದ. ಮತ್ತೆ ಕೆಲವರು ಅವನನ್ನೆತ್ತಿ ಹೆಗಲ ಮೇಲೆ ಕುಳ್ಳಿರಿಸಿಕೊಳ್ಳುವ ಸಾಹಸ ಮಾಡಹೋದಾಗ ಸ್ವಲ್ಪ ಗಾಬರಿಯಾದ ಆತ ಕೊಡವಿಕೊಂಡು ಸ್ಟುಡಿಯೋದ ಕಛೇರಿಯೆಡೆ ಓಡಿದ. ನನ್ನ ಕೈ ಬಿಟ್ಟುಹೋಯಿತು. ಇನ್ನೊಬ್ಬ ಅವನ ಹಿಂದೆಯೇ ಒಳಹೊಕ್ಕು ಬಾಗಿಲ ಅಗಳಿ ಹಾಕಿಕೊಂಡ. ನನ್ನ ಆಸೆ ಮುರಿಯಿತು.

ಹಿಂದೆ ಇದ್ದ ಭಾವ ಅಷ್ಟಕ್ಕೇ ಬಿಟ್ಟಾರೇ? ಆ ಕಛೇರಿಯನ್ನು ಒಂದು ಸುತ್ತು ಹಾಕಿ ಬಂದ ಅವರಿಗೆ ಅಲ್ಲೆಲ್ಲೋ ಒಂದ ಕಿಟಕಿ, ನಾನು ತೂರುವಷ್ಟು ತೆರೆದುಕೊಂಡಿದ್ದು ಕಂಡಿತ್ತು. ನನ್ನ ನ್ನೊಡಿಸಿಕೊಂಡುಹೋದ ಅವರು ಅನಾಮತ್ತಾಗಿ ನನ್ನನ್ನೆತ್ತಿ ಆ ಕಿಟಕಿಯಲ್ಲಿಳಿಸಿ ಒಳಕ್ಕೆ ಬಿಟ್ಟರು.

ಅಲ್ಲಿ ಹೋಗಿ ನೋಡ್ತೀನಿ. ಆ ಇನ್ನೊಬ್ಬನಿದ್ದನಲ್ಲ; ರಾಜ ಕಪೂರ್‌ನಿಗಾಗಿ ಮದರಾಸಿನ ಪ್ರಸಾದ ಸ್ಟುಡಿಯೋಕ್ಕೋ ಏನೋ ಒಂದು ಕಾಲ್ ಬುಕ್ ಮಾಡ್ತಾ ಇದ್ದಾನೆ! ನಾನು ರಾಜ ಕಪೂರ್ ಬಳಿ ಸರಿದು ನಮ್ಮ 'ವಾಕಿ' ಆಲ್ಬಂ ಮುಂದಿರಿಸಿ ಕನ್ನಡದಲ್ಲಿ ಮಾತಾಡಹೋದೆ. ಅವನು ಮಿಕಿ ಮಿಕಿ ನೋಡಿದ. ಅತ್ತ ಕಾಲ್ ಬುಕ್ ಆಗಿ ಕಾಂಟಾಕ್ಟ್ ಬಂತು. ರಾಜ ಮಾತಾಡಹೋದ. ಅಷ್ಟರಲ್ಲಿ ಹಿಂಬಾಗಿಲಿನಿಂದ ಒಬ್ಬ ಫೋಟೋಗ್ರಾಫರ್ ಮತ್ತೊಬ್ಬ ಮಧ್ಯವಯಸ್ಸಿನ ಸೂಟ್‌ಧಾರಿ ಪ್ರವೇಶ ಮಾಡಿದರು. ಫೋನಿನಲ್ಲಿ ಮಾತಾಡುತ್ತಿದ್ದ ರಾಜ ಅವರನ್ನು ನೋಡಿ, ಕಣ್ಣಲ್ಲೇ 'ಹಲೋ' ಎಂದ. ಸೂಟ್‌ಧಾರಿ ನನ್ನ ನೋಡಿ "ಯಾರು ನೀವು? ಏನು ಬೇಕು?" ಎಂದು ಇಂಗ್ಲೀಷಲ್ಲಿ ಕೇಳಿದರು. ನನ್ನ ಆಲ್ಬಂ ಕಿತ್ತುಕೊಂಡು ಎ ಟು ಝಡ್ ನೋಡಿ ಹಸನ್ಮುಖರಾದರು. "You want him to see this? His autograph?" ಎಂದು ಕೇಳಿದರು. ನಾನು ಹೌದೆಂದು ತಲೆಯಾಡಿಸಿದೆ.

ರಾಜ ಕಪೂರ್‌ನ ಸಂಭಾಷಣೆ ಮುಗಿದ



ನಂತರ, "Raj, look at the achievements of this young man. You must see this" ಎಂದವನ ಗಮನವನ್ನು ಸೆಳೆದರು ಸೂಟ್‌ಧಾರಿ. ರಾಜ ನನ್ನ ಆಲ್ಬಂ ಕೈಗೆತ್ತಿಕೊಂಡು ನಿಧಾನವಾಗಿ ಎಲ್ಲವನ್ನು ನೋಡಿದ. ನನ್ನತ್ತ ತಿರುಗಿ ಮುಗುಳ್ನಗೆಯಿಂದ "Yes?" ಎಂದ. ಆಗ ನಾನು ಇಂಗ್ಲೀಷಿನಲ್ಲಿ ನಾನು ಶಿವಮೊಗ್ಗದವನು. ಪದವೀಧರ. ನಿಮ್ಮ ಲೈನ್‌ನವನು. ನಿಮ್ಮ ದಾರಿನೇ ಹಿಡೀಬೇಕೂಂತ ಸಾಧನೆ ಮಾಡ್ತಿದ್ದೀನಿ, ಎಂದು ಚುಟುಕಾಗಿ ವೇಗವಾಗಿ ಉತ್ತರಿಸಿದೆ. ಅಷ್ಟರಲ್ಲಿ ಆತ ಆಲ್ಬಂನಲ್ಲಿದ್ದ ತನ್ನ ಚಿತ್ರದ ಮೇಲೆ ಸಹಿ ಹಾಕಿಯಾಗಿತ್ತು. "Could you come to Bombay and call at my studio?" ಎಂದ. ಅಷ್ಟರಲ್ಲಿ ಆ ಸೂಟುಧಾರಿ ಮಧ್ಯೆ ಬಾಯಿ ಹಾಕಿ "ಅದನ್ನ ನನಗೆ ಬಿಡು" ಎಂದು ಮಾತು ಮುಗಿಸಿ ಜೇಬಿಂದ ಒಂದು ಅಚ್ಚಾದ ವಿಸಿಟಿಂಗ್ ಕಾರ್ಡ್ ಕೊಟ್ಟರು. "ಕೀರ್ತಿರಾಜ್ ಈ ಫಿಲ್ಮಿನಲ್ಲಿ ನನ್ನ ಆರಿಸಿಕೊಂಡಿದಾರೆ. ನಾನೂ ಪಾತ್ರ ಮಾಡುತ್ತಿದ್ದೇನೆ." ಎನ್ನುತ್ತ ಆ ಕಾರ್ಡನ್ನ ಜೇಬಿಗೆ ಹಾಕಿಕೊಂಡೆ. ಆ ದಿನ ಕಳೆಯಿತು. ಊರಿಗೆ ಹಿಂದಿರುಗಿದೆ.

ಅವರು ರಾಜ ಕಪೂರ್‌ನ ಫೈನಾನ್ಸರ್. ಬೆಂಗಳೂರು ಮತ್ತು ದಕ್ಷಿಣ ರಾಜ್ಯಗಳಿಗೆ ಅವನ ಚಿತ್ರ ವಿತರಕರಾಗಿದ್ದವರು. ಆನಂದರಾವ್ ಸರ್ಕಲ್ಲಿನಲ್ಲಿದ್ದ ಎವರ್‌ಶೈನ್ ಚಿತ್ರ ಹಂಚಿಕಾ ಸಂಸ್ಥೆಯ ಮಾಲೀಕರಾದ ಎಂ. ಸದಾನಂದ ರಾಯರು.

ಮುಂದಿನ ಎರಡು ಮೂರು ದಿನಗಳಲ್ಲಿ ಒಂದು ಪತ್ರಿಕೆಯಲ್ಲಿ ಬಂದ ಭಾನುವಾರದ ವಿಶೇಷ ಪುರವಣಿಯಲ್ಲಿ 'ಪ್ರೀಮಿಯರ್'ನಲ್ಲಿ ನಡೆದ ಈ ಉತ್ಸವ ಉಗ್ಗಡಿಗೆಗಳ ಕತೆ-ಚಿತ್ರಗಳು ಪ್ರಕಟವಾಗಿದ್ದವು. ಮುಹೂರ್ತ ಶಾಟ್‌ನ ಚಿತ್ರ ಮತ್ತು ಸ್ಟುಡಿಯೋ ಕಛೇರಿಯ ಒಳಗೆ ತೆಗೆದ ಎರಡು ಶಾಟ್ಸ್‌ಗಳಲ್ಲಿ ರಾಜನೊಂದಿಗಿದ್ದ ನನ್ನ ಚಿತ್ರ ಕೂಡ ಪ್ರಕಟವಾಗಿಬಿಟ್ಟಿತ್ತು. ಈಗಿನಷ್ಟು ದೊಡ್ಡದಲ್ಲದ ನನ್ನೂರಲ್ಲಿ ಆ ದಿನ ತುಂಬ ಸಂಭ್ರಮ. ಇನ್ನು ಖಜಾನೆ ಮುಂಬಯಿಗೆ ಹೋಗೇಬಿಡುತ್ತಾನೆಂಬ ಕತೆ ಹೇಳಿದವರು ಅದೆಷ್ಟೋ ಮಂದಿ!

ನಂತರ ಎಲ್ಲ ಕ್ರಮೇಣ ನಿಶ್ಶಬ್ದ...'ಅನಾಥೆ' ಕುರಿತಾದ ಎಲ್ಲ ಸುದ್ದಿ ಸೂರುಗಳು ತಣ್ಣಗಾದವು. ತಿಂಗಳುಗಟ್ಟಲೆ ಕಾದರೂ 'ಅನಾಥೆ'

ಯ ಗತಿ ಏನಾಯಿತು ಎಂದು ಹೇಳುವವರಿಲ್ಲ. ಕಾಗದಗಳಿಗೆ ಉತ್ತರವೇ ಇಲ್ಲ.

ಮೇಲಣ ಸಾಲಿನ ದೆವ್ವ-ದೊಡ್ಡ ಹಾವಿನ ತಲೆಯ ಮೇಲೆ ಬರುವಂತೆ ನನ್ನ ಕವಡೆ ಒಂದು ಬೆಸದ ಗರ ಹಾಕಿದ್ದರಿಂದ ನನ್ನ ಕಾಯಿ ಆ ಹಾವಿನ ದೇಹದ ಗುಂಟ ಉದ್ದಕ್ಕೂ ಕೆಳಗಿಳಿದು ಕೆಳಗಿನ ಸಾಲಿನ ಏಳನೆಯ ಮನೆಗೆ ಬಂದಿತ್ತು. ಕೀರ್ತಿರಾಜ್ 'ಅನಾಥೆ'ಯ ಕೈ ಬಿಟ್ಟಿದ್ದರು. ರಾಜ ಕಪೂರ್ ಆರ್.ಕೆ. ತಲಪಿದರೆ ನಾನು ಅದೇ ಸ್ಕೂಲಿನ ಅದೇ ವಿದ್ಯಾರ್ಥಿಗಳಿಗೆ "ಹುರುಳಿ ಬೀಜ ಮೊಳೆಯಲು ಬೇಕಾಗುವ" ಸನ್ನಿವೇಶಗಳ ಪಾಠ ಮಾಡುವ ಬಯಾಲಜಿಯ ಮೇಷ್ಟ್ರಾಗಿಯೇ ಉಳಿದೆ.

ಒಮ್ಮೆ ಸದಾನಂದರಾಯರೇನೋ "ಇಲ್ಲಿಗೆ ಬಾ. ಒಮ್ಮೆ ನಿನ್ನನ್ನ ಮುಂಬೈಗೆ ಕರೆದೊಯ್ದು ಅಲ್ಲಿ ಸೇರಿಸಿ ಬರುತ್ತೇನೆ." ಎಂದು ಬರೆದಿದ್ದರು. ನನ್ನ ಮನಸ್ಸು ಆಗ ಡಿ.ಎಚ್. ಲಾರೆನ್ಸ್‌ನ 'ರೋಡ್ ನಾಟ್ ಟೇಕನ್' ಸ್ಥಿತಿಯಲ್ಲಿತ್ತು. ಕನಸು-ವಾಸ್ತವತೆಗಳ ನಡುವಣ ವ್ಯತ್ಯಾಸ ತಿಳಿಯದ ಆ ವಯಸ್ಸಲ್ಲಿ ನನ್ನ ಸ್ಥಿತಿ ಕೈಕಾಲು ಆಡಿಸಲೂ ಬಾರದಂತಿತ್ತು. ಬಾಲ್ಯದಲ್ಲಿ ಬಿದ್ದ ಏಟುಗಳು, ಹೆಗಲೇರಿದ ಹೊಣೆಗಾರಿಕೆ-ನಾನಾಗಿಯೇ ಸೃಷ್ಟಿಸಿ ಕೊರಳಿಗೆ ಸುತ್ತಿಕೊಂಡಿದ್ದ ಹಲವು ಔದಾರ್ಯದ ಉರುಳುಗಳು. ಇವೆಲ್ಲ ನನ್ನ ಬಿಗಿದವು. ದ್ವೇಷಾಸೂಯೆಗಳಿಗೆ ಪಕ್ಕಾದ 'ವಾಣಿ' ಸಂಸ್ಥೆ ಮುಚ್ಚಿತು. ನನ್ನಲ್ಲಿದ್ದ ಕಲಾವಿದನ ಅಂಶ 1963 ರ ವೇಳೆಗೆ ನಾಶವಾಗಿಹೋಯಿತು.


ಇದು ಈ ದಾರಿಯಲ್ಲಿ ನನಗೆ ಬಿದ್ದ ಎರಡನೆಯ ಪೆಟ್ಟು. 1940-41ರಲ್ಲಿ ಇಂಥದೇ ಒಂದು ಅನ್ಯಾಯವಾಗಿತ್ತು. ಆಗ ಚಾಮುಂಡೇಶ್ವರಿಯಲ್ಲಿ ಸಂಬಳವಿಲ್ಲದ ಬಾಲನಟನಾಗಿದ್ದಾಗ ಅಲ್ಲಿಯ ಪ್ರಮುಖ ಪಾತ್ರಧಾರಿಗಳಲ್ಲೊಬ್ಬರಾಗಿದ್ದ ದಿ॥ಜಿ.ವಿ. ಕೃಷ್ಣಮೂರ್ತಿಯವರು ನನ್ನ ಕೀರ್ತಿಯನ್ನು ಶ್ರೀ ಸುಬ್ಬಯ್ಯ ನಾಯ್ಡು-ಶ್ರೀನಾಗೇಂದ್ರರಾಯರ ಕಿವಿ ಮುಟ್ಟಿಸಿ ಅವರ 'ಪ್ರಹ್ಲಾದ' ಚಿತ್ರಕ್ಕೆ ನನ್ನನ್ನು ಆಯ್ಕೆ ಮಾಡುವ ಕೆಲಸ ಮಾಡಿದ್ದರು. ಆದರೆ ನನ್ನ ವಿಧಿ (ಆಗ ಎರಡನೆಯ ಮಹಾ ಯುದ್ಧದ ಕಾಲ) ಜಪಾನೀಯರನ್ನು ನನ್ನ ವಿರುದ್ಧ ಎತ್ತಿಕಟ್ಟಿ ಅವರು ಕಾಕಿನಾಡದ ಮೇಲೆ ಬಾಂಬು ಹಾಕುವಂತೆ ಮಾಡಿದ. ಪ್ರಾಣಭಯದಿಂದ ಕೆಲವೇ ದಿನಗಳಲ್ಲಿ ಸಮೀಪದ ಮದ್ರಾಸು ಪಟ್ಟಣ ಖಾಲಿ! ನಾಗೇಂದ್ರರಾಯರ 'ಪ್ರಹ್ಲಾದ' ನರಸಿಂಹನ ಜೊತೆಗೆ ಕಂಬದಲ್ಲೇ ಸೇರಿಹೋದ.

ಯುದ್ಧವೆಲ್ಲ ಮುಗಿದ ಮೇಲೆ ಮತ್ತೊಮ್ಮೆ ಅವರು ಅದೇ ಚಿತ್ರ ತಯಾರಿಸಿದರು. ಆದರೆ ನನ್ನ ಭಾಗದ ಅದೃಷ್ಟ ಗಂಗಾಧರರಾಯರ ಕಂಪನಿಯಲ್ಲಿ 'ಬಾಲ ಕೃಷ್ಣ'ನ ಪಾತ್ರ ಮಾಡುತ್ತಿದ್ದ ತಾತಯ್ಯ (ನರಸಿಂಹ)ನಿಗೆ ಹೋಯಿತು. ನನ್ನ ಭಾಗ್ಯಕ್ಕೆ ಮಣ್ಣು ಬಿತ್ತು.

ರಾಜ ಕಪೂರ್‌ನನ್ನು ಅದೃಷ್ಟಲಕ್ಷ್ಮಿ ಒಲಿದಿದ್ದಳು. ಅವನು ಅವಳ ಕೈಹಿಡಿದು ಮೆಟ್ಟಲು ಮೆಟ್ಟಲಾಗಿ ಏರುತ್ತ ಶಿಖರವನ್ನು ತಲಪಿದ್ದ. ನನ್ನ 'ವಿಧಿ ನನ್ನನ್ನು ವರ್ಷವರ್ಷಕ್ಕೆ ಕುಂಭೀಪಾಕಕ್ಕೆ ಇಳಿಸುತ್ತ, ಅಟ್ಟಹಾಸ ಮಾಡುತ್ತ ನಡೆಯಿತು. ●

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಕೃತಿಗಳನ್ನು ಭಾಷಾಂತರಿಸುವುದು ಸಾಮಾನ್ಯ. ಹೀಗೆ ಅತಿಹೆಚ್ಚು ಸಲ ಭಾಷಾಂತರಗೊಂಡಿರುವ ಖ್ಯಾತಿ ಲೆನಿನ್ ಕೃತಿಗಳದ್ದು. ಮುನ್ನೂರ ಎಪ್ಪತ್ತು ಭಾಷಾಂತರಗಳನ್ನು ಕಂಡಿರುವ ಲೆನಿನ್ ಕೃತಿಗಳು ಅಗ್ರಸ್ಥಾನದಲ್ಲಿವೆ. ಎರಡನೆಯ ಸ್ಥಾನ ಅಗಾಥಾ ಕ್ರಿಸ್ಟಿಯ ಪತ್ತೇದಾರಿ ಕಾದಂಬರಿಗಳಿಗೆ. ಇನ್ನೂರು ಹದಿನಾರು ಭಾಷಾಂತರಗಳು ಈ ದಾಖಲೆಗೆ ಕಾರಣ. ಮೂರನೆಯ ಸ್ಥಾನ ಇನ್ನೂರ ಮೂರು ಭಾಷಾಂತರ ಕಂಡಿರುವ ವಾಲ್ಟ್ ಡಿಸ್ನೆ ಕೃತಿಗಳದ್ದು. ಇನ್ನೂರ ಎರಡು ಭಾಷಾಂತರ ಕಂಡಿರುವ ಬೈಬಲ್‌ಗೆ ನಂತರದ ಸ್ಥಾನ.

ಶೇಕ್ಸ್‌ಪಿಯರ್ ಮತ್ತು ಟಾಲ್‌ಸ್ಟಾಯ್ ಕೃತಿಗಳು ಎಪ್ಪತ್ತೆಂಟು ಭಾಷಾಂತರಗಳನ್ನು ಕಂಡಿವೆ. ದಾಸ್ತೋವೆಸ್ಕಿಯ ಕೃತಿಗಳು ಅರವತ್ತೊಂದು, ಡಿಕನ್ಸ್ ಕೃತಿಗಳು ಅರವತ್ತು ಹಾಗೂ ಗಾರ್ಕಿಯ ಕೃತಿಗಳು ಐವತ್ತು ಭಾಷಾಂತರಗಳನ್ನು ಕಂಡಿವೆ.



ಶ್ರಾವಣದ ಮೊದಲು

ಶ್ರಾವಣದ ಮೊದಮೊದಲು
ತುಂಬಿ ಬಂದಿದೆ ಮುಗಿಲು
ಹೊತ್ತ ಹೊರೆಯನು ಎತ್ತ ಇಳಿಯಿಸಲಿ ಎಂಬವೊಲು.
ಸಿಳ್ಳೆಂಬ ಛಳಿಗಾಳಿ
ಸೀರ್ಪನಿಯ ವೈಹಾಳಿ-
ಯೇರಿ ನಡೆದಿದೆ, ಸಾರಿ ಬರುವ ಸೋನೆಯ ಸಿರಿಯ.
ಹೋದ ಇರುಳಿನ ನೆರಪಿ
ನೆಲಕೆ ಬರುವುದು ಮರಳಿ
ಹಗಲಣರೆಸುವಗಲ ಕರಿಮೊಗದ ನಗೆ ನಗುತ
ಅನಿತರಲಿ ತೆರೆಸರಿಸಿ
ಕಿರಣಮುಖ ಥಳಥಳಿಸಿ
ಹಸುರ ಹೊಸ ಮುಗುಪಸರ ಋಷಿತಾಯ ಬೆಳಗುವುದು.
ಬೆಳಕು ಬರವಿಗೆ ನಲಿದು
ಜೀವಪಿರ ಬೆರೆಬೆರೆದು
ಮತ್ತೆ ಕವಿಯುವುದೆತ್ತ ಕಾರ್ಮೋಡ ಕತ್ತಲೆಯು.
ಅರಳಿರುವ ಬಗೆ ಮುದುರಿ
ತನ್ನ ನೆರಳಿಗೆ ಬೆದರಿ
ಏನು ಆಯಿತು ಜೇನು ಎಲ್ಲಿ ಹೋಯಿತು ಎನಲು
ಶ್ರಾವಣದ ತಾವಣದಿ
ಕಂಡಿತಾ ಆಗಸದಿ
ನೀಲ ಮೇಘಶ್ಯಾಮ ಕೆರಳಿರುವ ಸುಳಿಗುರುಳು.
ತೋರುಗತ್ತಲೆಯಲ್ಲಿ
ತೋರೆ ಬೆಳಕಿನ ಬಳ್ಳಿ
ಸಾರಿತ ಭಯವು ಜಾರಿ ಭಯಭೀತಿ ಭೂತಗಣವು.

ರಂ. ಶ್ರೀ. ಮುಗಳಿ

('ನಿತ್ಯನಿರಂತರ' ಕವನ ಸಂಗ್ರಹದಿಂದ)

● ಕೆ. ಚಂದ್ರಮೌಳಿ ●

ಬೊಂಬಾಯಿ ಮಳೆ

ಮಳೆಗೂ ಕವಿತೆಗೂ ಅದೇನು ನೆಂಟಸ್ತನವ್ವೋ ಗೊತ್ತಿಲ್ಲ. ಕವಿಗಳ ರಸಮಯ ಭಾವನಾ ಶಕ್ತಿ ಗರಿಗೆದರಿ ಬಣ್ಣ ಬಣ್ಣವಾಗಿ ಆಕಾಶಕ್ಕೇರುವುದು ಮಳೆಗಾಲದಲ್ಲೆ. ಈ ಮಳೆ "ಉಸಿರಾಡಿದರೆ ಹಸಿರು, ಮಾತಾಡಿದರೆ ಜುಳುಜುಳು, ಹೆಜ್ಜೆ ಇಟ್ಟರೆ ಹೂವು, ತುರಬಿನ ತುಂಬ ಮಲ್ಲಿಗೆ ಮೋಡ!" (ಜಿ.ಎಸ್. ಶಿವರುದ್ರಪ್ಪ) ಕವಿಯಲ್ಲದಿದ್ದರೂ ನಾನು ಕವನಗಳನ್ನೋದುವುದು ಮಳೆಗಾಲದಲ್ಲೇ. ಬೆಳಗಾವಿಯಿಂದ ಬೊಂಬಾಯಿಗೆ ಬಂದ ಹೊಸತರಲ್ಲಿ ನಾನೂ "ಮಳೆಗಾಲದ ಮೊದಲ ಹನಿಯು! ಎನ್ನ ಅಧರಕಮೃತ ಝುರಿಯು" (ಪೇಜಾವರ ಸದಾಶಿವರಾಯರು) ಎಂದೇ ಹಾಡುತ್ತಿದ್ದೆ. "ಮೊದಲ ಹನಿಯ ಸಿಂಚನಕೆ ಉದ್ಭವಿಸಿದ ನೆಲದ ಗಂಧ! ಮಲರಿನಲ್ಲಿ ಮಲೆತುಕೊಂಡು ಮಳೆಗಾಲವು ಇಳೆಗಿಳಿದಿಹ ಮೊದಲ ಸುದ್ದಿ ಸಾರಿತು" ಎಂದು ಬೊಂಬಾಯಿನ ಮಳೆ ಎದುರುನೋಡಿದ್ದೆ. "ಸಂಜೆ ಉದುರಿದ ಮಳೆಗೆ ಮಣ್ಣಿನ ವಾಸನೆ ಬೇರೆ" (ಕಣವಿ) ಎಂದು ಬೊಂಬಾಯಿನಲ್ಲಿ ಮಣ್ಣಿನ ವಾಸನೆಗಾಗಿ ಮೂಗು ಅರಳಿಸಿದ್ದೇ ಅರಳಿಸಿದ್ದು... ಕೊನೆಗೆ ಅದೆಲ್ಲಿಂದ ಬಂತೋ, ಹೇಗೆ ಬಂತೋ, ಜುಳುಜುಳೂಂತ ಒಂದಿನ ಬೊಂಬಾಯಿಯಲ್ಲಿ ಮಳೆ ಶುರುವಾಗೇ ಹೋಯ್ತು. ಡಾಂಬರು, ಕಾಂಕ್ರೀಟ್, ಸಿಮೆಂಟ್ ಮೇಲೆ ಬಿದ್ದರೆ ಮಣ್ಣಿನ ವಾಸನೆ ಎಲ್ಲಿಂದ ಬರಬೇಕು? ಬೆಂಡೇಕಾಯಿ ಹುರಿಯುವಾಗಿನ ಶಬ್ದದಿಂದ ಶುರುವಾದ ಮಳೆ ಸ್ವಲ್ಪ ಹೊತ್ತಿನಲ್ಲೇ ಧೋ ಎಂದು ಜೋರಾಯಿತು. ಮೊದಲ ಮಳೆ ಗಾಳಿಯೊಡನೆ ಸುಯ್ ಎಂದು ಸುರಿದಾಗ, ಮನೆ ಹೆಂಚಿನ ಮೇಲೆ, ಹಿತ್ತಲ ಬಾಳೆ ಗಿಡಗಳ ಮೇಲೆ ಟಪಟಪ ಕುಟ್ಟಿದಾಗ, ಹಕ್ಕಿಗಳು ಹಾರುತ್ತಾ ರೆಕ್ಕೆ ಬಡಿದಾಗ, ಕೇಳಿ ಬರುವ ಒಟ್ಟು ಸಂಗೀತಕ್ಕೆ ಉನ್ಮಾದಿತರಾಗಿ ಅಂಗಳಕ್ಕೋಡಿ ಮೈಯೆಲ್ಲಾ ತೊಯ್ಸಿಕೊಳ್ಳುತ್ತಿದ್ದ ಚಿಕ್ಕಂದಿನ ನೆನಪು ಹಾರಿಬಂತು. ಆದರೆ ಬೊಂಬಾಯಿಯ ಗಗನ ಚುಂಬಿ ಕಟ್ಟಡಗಳಲ್ಲಿ ಕೂತವರಿಗೆ ಸಂಗೀತ, ಆ ಉನ್ಮಾದ ಎಲ್ಲಿಂದ ಬರಬೇಕು! ಹತ್ತನೆ ಮಹಡಿಯಿಂದ ಕೆಳಗೋಡಿ ಮಳೆಗೆ ಮೈಯೊಡ್ಡುವ ಸಾಹಸ, ಹುಮ್ಮಸ್ಸಾದರೂ ಎಲ್ಲಿಂದ ಬರಬೇಕು! ಆದರೆ ಮಳೆಗಾಲದಲ್ಲಿ ಬೊಂಬಾಯಿನ ರಸ್ತೆಯ ನೋಟವೇ ಬೇರೆ. ಆಕಾಶದಲ್ಲಿ "ಹೆಪ್ಪುಗಟ್ಟಿದ ಕಪ್ಪುಕರಗಿ ಮಳೆ ಹನಿಯಾಗಿ ರಪರಪನೆ..." (ಜಿ.ಎಸ್. ಶಿವ

ರುದ್ರಪ್ಪ) ಬಡಿದಾಗ ಎಲ್ಲೆಲ್ಲೂ ನಿಮಿಷಾರ್ಧ ದಲ್ಲಿ ಛತ್ರಿಗಳು ಟಪಟಪನೆ ಬಿಚ್ಚಿಕೊಂಡಾಗ ಆಕಾಶದ ಕರೀಮೋಡವೇ ಧರೆಗಿಳಿಯಿತೇನೋ ಅನಿಸುತ್ತದೆ. ಮಳೆ ಬಂದ ಮೇಲೆ ನಾಯಿಕೊಡೆ ಹುಟ್ಟಿಕೊಳ್ಳೋದು ಸಾಮಾನ್ಯವಾದರೆ ಇಲ್ಲಿ ಮಣ್ಣೇ ಇಲ್ಲವಾಗಿ ಬರೀ ಕರೀ ಕೊಡೆಗಳೇ ಬಿಚ್ಚಿಕೊಳ್ಳುತ್ತವೆ. ಮಳೆಯ ನಂತರದ ಧಾರ ವಾಡದ ನೆಲ "ಹಸಿರುಟ್ಟ ಬಸುರಿಯ ಹಾಂಗ, ನೆಲಹೊಲ ಹ್ಯಾಂಗ, ಅರಿಸಿಣ ಒಡೆಧಾಂಗ." (ದ.ರಾ.ಬೇಂದ್ರೆ) ಆದರೆ, ಇಲ್ಲಿ ಬೊಂಬಾಯಿ ನಲ್ಲಿ ಮಳೆ ಬಂದ ಮೇಲಿನ ದೃಶ್ಯ ಕೊಡ ತುಂಬಿ ಚೆಲ್ಲಿದ್ಹಾಂಗ, ನೆಲಮನೆ ಹ್ಯಾಂಗ, ಬೆವರಿಸಿದ ಧಣಿಯ ಹಾಂಗ! ಅನ್ನಿಸುತ್ತದೆ.

ಧಾರವಾಡ ಪೇಡಾ, ಪೂನಾ ಪೇಡಾ, ಮಥುರಾ ಪೇಡಾ...ಅಂಥ ಎಲ್ಲಾ ಕಡೆಯ ಪೇಡಾಗಳಿಗೂ ಒಂದೊಂದು ವಿಶಿಷ್ಟತೆ ಇದೆ. ಪೇಡದ ರೀತಿ ಬೇರೆ ಬೇರೆ ಕಡೆಯ ಮಳೆಗೂ ಬೇರೆ ಬೇರೆ ವಿಶಿಷ್ಟತೆ, ವಿಭಿನ್ನತೆ ಇದೆ. ಮಂಜು ಮಳೆಯಿಂದ ಹಿಡಿದು ಸೀರುಮಳೆ, ಸೂಜಿ ಮಳೆ, ಹನಿಮಳೆ, ಸೋನೆಮಳೆ, ಕೋಲ್ಮಳೆ, ಅಡ್ಡಮಳೆ, ಬಿಸಿಲುಮಳೆ, ದಪ್ಪಮಳೆ, ಜಡೀ ಮಳೆ, ಕಾರ್ಮಳೆ ಅಂತ ಹಲವಾರು ವಿಧಗಳಲ್ಲಿ ಎಲ್ಲವನ್ನೂ ಎಲ್ಲಾ ಕಡೆಯೂ ನೋಡುಕ್ಕೆ ಆಗುಲ್ಲ. ಮಲೆನಾಡ ಬೆಟ್ಟಗಳಲ್ಲಿ ಮಂಜು ಮಳೆ, ಚಿಕ್ಕಮಗಳೂರಿನಲ್ಲಿ ಸೋನೆಮಳೆ, ಬೆಳ ಗಾವಿಯಲ್ಲಿ ಕೋಲ್ಮಳೆ, ಬೆಂಗಳೂರಲ್ಲಿ ದಪ್ಪ ಮಳೆ, ಎಲ್ಲಾ ನೋಡಿದ ಮೇಲೆ ಬೊಂಬಾ ಯಿನ ಜಡೀಮಳೆ ಹಿಡಿಸಿರಲಿಲ್ಲ. ಇದೆಂಥಾ ಮಳೆ, ಮಣ್ಣಿನ ವಾಸನೆಯಿಲ್ಲ, ನಾಯಿಕೊಡೆ ಗಳಿಲ್ಲ, ಹಸಿರಿನ ಸೊಬಗಿಲ್ಲ, ಪುಡಿಹನಿ ಪುಷ್ಪ ವಾಗಿಲ್ಲ, "ಬೈಗಲ್ಲಿ ನವಿಲುಗಿಳಿ ಮೈನಾ ಹೆಸರಿ ಡದ ಕಾಡು ಹಕ್ಕಿಗಳು" (ನಿಸಾರ್ ಅಹಮದ್) ಇಲ್ಲ, ಕೆಲಸಕಾರ್ಯ ಮಾತ್ರ ಹಾಳು ಎಂದು ಬೈದುಕೊಂಡೇ ನಿಂತಿದ್ದೆ. ಆಗ ಮಳೆಯಲ್ಲಿ ಪೂರ್ತಿ ತೊಯ್ದು ಗಂಡ-ಹೆಂಡತಿ ಅಲ್ಲೇ ಬಂದು ನಿಂತರು. ಗಂಡನ ತಲೆ ಪೂರಾ ಬಕ್ಕ, ಹೆಂಡ ತಿಯ ಮುಖ ಬಣ್ಣ ಚಿಣ್ಣವಾಗಿ ಮಾಡರ್ನ್ ಆರ್ಟ್ ತರಹ ವಿಚಿತ್ರವಾಗಿತ್ತು. ಅವರಿಬ್ಬರೂ ಆಡಿಕೊಳ್ಳುತ್ತಿದ್ದ ಮಾತು ಕೇಳಿ ಕಿವಿ ನಿಮಿರಿತು. ಹೆಂಡತಿ ಅಂದಳು- "ಏನು ಹಾಳುಮಳೇನೋ ಏನೋ! ನೋಡಿ ನನ್ನ ಕೆಂಪು ರವಿಕೆಯ ಬಣ್ಣ ಪೂರ್ತಿ ಸೀರೆಗೆ ಬಂದು ಬಿಟ್ಟಿದೆ!" ಗಂಡ- "ಲೇ! ಬರೀ ನಿನ್ನ ರವಿಕೆಯ ಬಣ್ಣ ಒಂದೇ ಹೋಗಿಲ್ಲ. ನಿನ್ನ ಮುಖ, ಕೆನ್ನೆ, ತುಟಿ ಬಣ್ಣ ಎಲ್ಲಾ ನೀರಾಗಿದೆ. ಹಷ್ಟು ಕನ್ನಡಿ ನೋಡ್ಕೊಂಡರೆ ನೀನೇ ಹೆದರ್‌ಕೊಳ್ತೀಯಾ!" ಹೆಂಡತಿ– "ಸಾಕು ಬಿಡ್ರಿ ನಿಮ್ಮ ಹಾಸ್ಯ! ಈ ಮಳೆಯಿಂದ ನಿಮ್ಗೇನೂ ಆಗೋಲ್ಲ. ಗೋರ್ಕಲ್ಲ ಮೇಲೆ ಮಳೆ ಸುರಿದ ಹಾಗೆ ನಿಮ್ಮ ಬಕ್ಕತಲೇ ಮೇಲೆ ಒಂದು ಹನಿಯೂ ನಿಲ್ಲದೆ ಜಾರಿ ಹೋಗುತ್ತೆ!" ಗಂಡ– "ಸುಮ್ನಿರು. ಮಳೆಗಾಲದಲ್ಲಿ ನಿಂಗಿಂತ ನಂಗೇ ತೊಂದರೆ. ಬಣ್ಣಾ ಹೋದ್ರೆ ಮತ್ತೆ ಬಳ್ಕೋಬೌದು. ಆದ್ರೆ ಒಂದು ಸಲ ನನ್ನ ತಲೆ ಒದ್ದೆ ಆದ್ರೆ ತಂಡಿ ಆಗೋಗುತ್ತೆ. ಆಮೇಲೆ ಎಷ್ಟು ದಿನವಾದ್ರೂ ನೆಗಡಿ ...ಅಚ್, ಅಚ್...."ಎಂದು ಸೀನಿದ.

ಗಂಡ ಹೆಂಡಿರ ಸಂವಾದ ಕೇಳಿದ ಮೇಲೆ ಮೊದಲ ಸಲ ಬೊಂಬಾಯಿ ಮಳೇಲೂ ನಗು ಬಂತು. ಆಕೆ ಹೇಳಿದ ಒಂದು ಮಾತಂತೂ ನಿಜ- ಬೊಂಬಾಯಿನ ಮಳೆ ಬಕ್ಕನ ತಲೆ ಮೇಲೆ ಅಥವಾ ಗೋರ್ಕಲ್ಲ ಮೇಲೆ ಸುರಿದಂತೆ- ಮಣ್ಣಿನ ವಾಸನೆಯಿಲ್ಲ, ಹೊಸ ಚಿಗುರಿಲ್ಲ, ಹಸಿರು ಪೈರಿಲ್ಲ, ಹಕ್ಕಿಗಳುಲಿತವಿಲ್ಲ. ಆದರೂ ಇದು ನಡೆಸುವ ಅವಾಂತರ ಮಾತ್ರ ಅಸಾಧ್ಯ. ಥಳಪಳ ಮುಖ, ಬಣ್ಣದ ಬಟ್ಟೆ, ಗರಗರಿಯ ಸೂಟು, ಪಳಪಳ ಶೂಸು, ಎಲ್ಲಕ್ಕೂ ಮಳೆ ಗಾಲದಲ್ಲಿ ಇರುಚಲು ಪೆಟ್ಟು. ಶೂಸ್ ಒಳ ಗೆಲ್ಲಾ ನೀರು, ಕಾಲು ಚೀಲವೆಲ್ಲಾ ಮುಲು ಮುಲು. ಚಪ್ಪಲಿ ಹಾಕಿದರೆ ಚಪಚಪ ಬಡಿದು ಹಿಂದೆ ಬೆನ್ನಿನವರೆಗೂ ಚುಕ್ಕೆಚುಕ್ಕೆಯ ಚಿತ್ತಾರ. ನೀರಿನಿಂದ ಭಾರವಾದ ಚಪ್ಪಲಿ ಅರ್ಧದಾರಿಯಲ್ಲೇ ಕಿತ್ತರೆ ಅದನ್ನು ಹೊತ್ತು ತಿರುಗುವುದು ಇನ್ನೊಂದು ಕೈನೋವು. ಮಳೆಯ ಇರುಚಲು, ರಸ್ತೆಯ ನೀರು ಇಷ್ಟೇ ಸಾಲದೂಂತ ದಾರೀಲಿ ಓಡಾಡ್ತಾ ಇರೋ ಕಾರುಗಳು ಬೇರೆ ಜೋರ್‍ರೆಂದು ಆಪಾದಮಸ್ತಕ ಕ್ಕೆಲ್ಲಾ ಕೊಚ್ಚೆ ನೀರು ಹಾರಿಸುತ್ತವೆ. ಕಣವಿ ಯವರು ಹೇಳಿದಂತೆ "ಕಾರು ಹಾಯ್ದರೆ ಬಾಯ್ಗೆ ಸಿಡಿವುದು ಕಪ್ಪು ರಾಗಿಯ ಕಿಚಡಿಯು."



"ನಾನು ನಿನ್ನ ಸ್ನೇಹ ಕಳೆದುಕೊಳ್ಳ ಬೇಕಾಗುತ್ತೇನೋಂತ".

ಮೊನ್ನೆ ಒಂದು ದೃಶ್ಯ ಕಾಣಿಸಿತು. ಒಬ್ಬ ಕಿತ್ತ ಚಪ್ಪಲೀನ ಛತ್ರಿಯ ಕೈಹಿಡಿಗೆ ಸಿಗಿಸಿ ಮಳೀಲಿ ಓಡುತ್ತಿದ್ದಾಗ ಎದುರಿಗೊಂದು ಕಾರು ಬಂತು. ಅದರ ನೀರಿನ ಸ್ಪ್ರೇನಿಂದ ತಪ್ಪಿಸಿಕೊಳ್ಳಲು ರಸ್ತೆ ಬದಿಗೆ ಹಾರಿದರೆ, ಅಲ್ಲಿ ಮೊಳಕಾಲುದ್ದ ನೀರು. ಆ ನೀರಿನಲ್ಲಿ ಕಾಣದ ಯಾವುದೋ ಗುಂಡಿಯಲ್ಲಿ ಕಾಲು ಸಿಕ್ಕಿಕೊಂಡು ಆಸಾಮಿ ಅಲ್ಲೇ ಬಿದ್ದ. ಅವನನ್ನು ಆ ರಾಡಿಯಿಂದ ಹೊರತರಬೇಕಾದ್ರೆ ಸಾಕಾಯಿತು. ತಲೆಗೊಂದ ರಂತೆ ಎಲ್ಲರು ಮಾತಾಡುತ್ತಿದ್ದಾಗ ಒಬ್ಬ ಬಾಯಿ ಹಾಕಿ "ಏನೂ ಆಗಿಲ್ಲ. ಬರೀ ಕಾಲು ಸಿಕ್ಕಿಕೊಂಡಿತ್ತು ಅಷ್ಟೇ. ಕಲ್ಕತ್ತಾದಲ್ಲಾಗಿದ್ರೆ ಇಡೀ ಅಸಾಮಿಯೇ ಆ ಮ್ಯಾನ್‌ಹೋಲ್ ಒಳಗೆ ಬಿದ್ದು ನಾಪತ್ತೆಯಾಗಿಬಿಡುತ್ತಿದ್ದ" ಎಂದು ಸಮಾಧಾನ ಮಾಡಿ, ತನ್ನ ದಾರಿ ಹಿಡಿದ.

ಇನ್ನೊಂದು ದೃಶ್ಯ. ದಪ್ಪ ಮೈಯಿನ, ಸುಂದರ ಮುಖದ ಹೆಣ್ಣೊಂದು ತೆಳು ಸೀರೆ ಕುಪ್ಪಸ ತೊಟ್ಟು, ಪ್ಲೆಯಾರದಿಂದ ಹೊರಟಾಗಲೇ, ಮಳೆಗೆ ಸಿಕ್ಕು ನೆಂದರೆ ಆಗುವ ಅವಾಂತರ ನೆನೆಸಿಕೊಳ್ಳಿ. ಬಟ್ಟೆಯೆಲ್ಲಾ ತೊಯ್ದು, ಮೈಗೆ ಪತ್ತಿಕೊಂಡು, ಅಂಗಾಂಗ ಸೌಷ್ಠವವೆಲ್ಲಾ ಬಿರಿ ಹೊಯ್ದು, ಎದ್ದು ಕಾಣುತ್ತಿರುವಾಗ, ಎದುರು ಗಡೆಯ ಕಾರು ಹಾರಿಸುವ ಕಿಚಡಿಯಿಂದ ತಪ್ಪಿಸಿಕೊಳ್ಳಲು ಸೀರೆಯನ್ನೂ ಮಂಡಿಯ ಮೇಲೆತ್ತಿ ಹೆದರಿ ನಿಂತಿದ್ದಾಳೆ ಹೆಣ್ಣು. ಅವ ಳನ್ನೇ ದುರುಗುಟ್ಟಿ ನೋಡುತ್ತಿರುವವನ ಕಣ್ಣಿಗೇ ಕಾರಿನ ರಾಡಿ ನೀರು ಹಾರಿದರೆ ಏನಾ ದೀತು, ನೀವೇ ಊಹಿಸಿಕೊಳ್ಳಿ. ಇಂಥ ದೃಶ್ಯ ಗಳು ಇಲ್ಲಿ ಸಾಮಾನ್ಯ. ಶಿಲ್ಪಕಲೆಯ ಸೂತ್ರದ ಪ್ರಕಾರ ತಲೆ ಮೇಲೆ ಬಿದ್ದ ನೀರ ಹನಿ ಮೂಗಿನ ತುದಿಗೆ ತಟ್ಟಿ, ಗಲ್ಲಕ್ಕೆ ಮುತ್ತಿಟ್ಟು, ಎದೆಯ ತೊಟ್ಟಿಗೆ ತಗುಲಿ, ಹೊಕ್ಕಳ ಸವರಿ, ಮಂಡಿಗೆ ಜಾರಿ, ಕಾಲ ಹೆಬ್ಬೆಟ್ಟ ಮೇಲೆ ಬೀಳಬೇಕಂತೆ. ಬೊಂಬಾಯಿಯ ಹೆಣ್ಣಳಿಗೆ ಛತ್ರಿ ಇಲ್ಲದಿದ್ದರೆ, ಮತ್ತು ಇಷ್ಟು ಬಿರುಸಾಗಿ ಓಡದಿದ್ದರೆ ಆಗ ಅವರುಗಳ ಮೈಕಟ್ಟು ಶಿಲ್ಪಕಲೆಯ ಮಾಟಕ್ಕೆ ಸರಿಯಾಗಿದೆಯೋ ಇಲ್ಲವೋ ಎಂದು ನೋಡಬಹುದಿತ್ತು.

ಛತ್ರಿ ಇಲ್ಲದೆ ಮಳೆ ನಿಲ್ಲಲೀಂತ ಕಾಯ್ತ ನಿಂತಿರ್ತೀರಿ. ಆಗ ನಿಮ್ಮ ಆಫೀಸಿನ ಬ್ಯೂಟಿ ಕ್ವೀನ್, ನಿಮ್ಮ ಹೃದಯದ ದಡಬಡಿ, ನಿಮ್ಮನ್ನೇ ಓರೆನೋಟದಲ್ಲಿ ನೋಡುತ್ತಾ ಛತ್ರಿ ಬಿಚ್ಚಿ ಮುಖಮುಚ್ಚಿಕೊಂಡು ಮಳೆಯಲ್ಲಿ ಕಾಲಿಡಲು ತಯಾರಾಗುತ್ತಾಳೆ. ಅರೆ, ಅವಳು ಛತ್ರಿಯ ಒಳಗೆ ನಿಮ್ಮನ್ನು ನೋಡಿ ನಕ್ಕಳೇ, ಕಣ್ಸನ್ನೆ ಯಲ್ಲಿ ಕರೆದಳೇ, ಮುಖ ಸಿಂಡರಿಸಿದಳೇ ಏನೂ ಗೊತ್ತಾಗದೆ ಅವಳನ್ನು ನಿಲ್ಲಿಸುವ ಧೈರ್ಯ ಬರದೆ ಒಂದು ಕ್ಷಣ ನಿಲ್ತೀರಿ. ಅವಳು ಬಳು ಕುತ್ತಾ ಮುಂದೆ ನಡೆಯುತ್ತಾಳೆ. ಎರಡನೇ ಕ್ಷಣ ದಲ್ಲಿ ಎಲ್ಲಿಲ್ಲದ ಧೈರ್ಯ ತಂದುಕೊಂಡು, ನೀವೂ ಓಡಿಹೋಗಿ ಅವಳ ಛತ್ರಿ ಕೆಳಗೆ ಬಂದು ಅವಳ ನಡುವಿಗೊಂದು ಕೈಹಾಕಿ ನಡೆಯು ತ್ತೀರೀ... ನಡೀತೀನಿ ಅಂತ ಕನಸು ಕಾಣ್ತೀರಿ ಅಷ್ಟೇ! ಇದು ಮಳೆಗಾಲದ ಸುಂದರ ಕನಸು!! ಈ ಸುಂದರ ಕನಸು ನನಸಾಗದಿದ್ದರೆ ಕಂಡ ದೇವರಲ್ಲಿ ಮೊರೆಯಿಟ್ಟುಕೊಳ್ಳುತ್ತೀರಿ- "ಜಡಿಯು ಮಳೆ ಬರುವಾಗ! ಕೈಲಿ ಕೊಡೆ ಇರುವಾಗ! ಬಹಳ ಬೇಡ, ಒಂದೇ ಗೋಪಿ! ಓಡೀ ಕೋಲೋನ್ ಕಂಪಿನಾಕಿ! ನನ್ನ ಕೊಡೆಯ ಆಶ್ರಯಕ್ಕೆ ಬರುವ ಹಾಗೆ ಪ್ರೇರಣೆ! ಕೊಡು ಅಂತರ್ಯಾಮಿ! ನಿನಗೆ ನಮಾಮಿ" (ಪಾವೆಂ-ಬಿನ್ನಹ) ಒಂದಲ್ಲ ಒಂದಿನ ನಿಮ್ಮ ಮೊರೆಯನ್ನು ಆ ಅಂತರ್ಯಾಮಿ ಕೇಳಲೇ

ವರ್ಷಾಮಂಗಲ

ಶಾಂತಿನಿಕೇತನದಲ್ಲಿ ನಾನು ಕಳೆದ ಕೆಲವು ತಿಂಗಳುಗಳ ಅನುಭವ ನನ್ನ ಜೀವನದಲ್ಲಿ ಗಾಢವಾಗಿ ಅಚ್ಚೊತ್ತಿವೆ. ಆಗ ನನಗಿನ್ನೂ 18 ವರ್ಷ. ಧೂಳು ತುಂಬಿದ ಪಂಜಾಬಿನ ಬಯಲಿನಾಚೆಗಿನ ಜಗತ್ತಿನ ಬಗ್ಗೆ ನನಗೆ ಹೆಚ್ಚೇನೂ ತಿಳಿದಿರಲಿಲ್ಲ. ನನ್ನ ಬಂಗಾಳೀ ಅಧ್ಯಾಪಕಿಯರಿಂದಾಗಿ, ರವೀಂದ್ರರು ಜಗತ್ತಿನ ಸರ್ವ ಶ್ರೇಷ್ಠ ಕವಿ; ದೇಶದಲ್ಲೇ ಅತ್ಯುತ್ಕೃಷ್ಟ ಮಿದುಳುಗಳುಳ್ಳ ಜನ ಪಂಜಾಬಿಗಳು; ಅವರು ಸಂಗೀತ, ಸಾಹಿತ್ಯ, ಚಿತ್ರಕಲೆ ಮೊದಲಾದ ಸಾಂಸ್ಕೃತಿಕ ರಂಗಗಳಲ್ಲಿ ದೇಶಕ್ಕೆ ಕೀರ್ತಿ ತಂದುಕೊಟ್ಟವರು ಎಂಬ ಅಂಶಗಳನ್ನು ಆಗಲೇ ತಲೆಯಲ್ಲಿ ತುಂಬಿಕೊಂಡವನು ನಾನು.

ಶಾಂತಿನಿಕೇತನಕ್ಕೆ ನಾನು ಪ್ರಯಾಣ ಬೆಳೆಸುತ್ತಿದ್ದಂತೇ ದಾರಿಯಲ್ಲಿ ಮುಂಗಾರು ಆರಂಭವಾಯಿತು. ಭೋಲ್‌ಪುರ್‌ನಲ್ಲೇ ರೈಲಿನಿಂದ ಇಳಿದು, ಒಂದು ಜಟಕಾ ಗಾಡಿಯಲ್ಲಿ ಶಾಂತಿನಿಕೇತನ ತಲುಪಿದೆ. ಒಬ್ಬ ಬೌದ್ಧ ಬಿಕ್ಷು ನೆಲಸಿದ್ದ ಕೋಣೆಯಲ್ಲೇ ನನ್ನ ವಾಸ್ತವ್ಯಕ್ಕೂ ವ್ಯವಸ್ಥೆ ಮಾಡಲಾಯಿತು. ಸ್ತ್ರೀಯರೊಂದಿಗೆ ಮಾತನಾಡುವುದಿಲ್ಲ ಎಂದಾತ ಪಣ ತೊಟ್ಟಿದ್ದನಂತೆ.ರಾತ್ರಿಯಿಡೀ ಮಳೆ ಸುರಿಯುತ್ತಿತ್ತು. ಬರೀ ನೆಲವೇ ನನ್ನ ಹಾಸಿಗೆ. ಆದರೂ ತಗಡಿನ ಛಾವಣಿಯ ಮೇಲೆ ಬೀಳುತ್ತಿದ್ದ ಮಳೆಹನಿಗಳ ಲಯಬದ್ಧ ಸದ್ದಿಗೆ ಕಿವಿಗೊಡುತ್ತಾ ನಿದ್ರಿಸಿದೆ. ಆಗ ದೂರದಿಂದ ಯಾರೋ ಹಾಡುವ ಧ್ವನಿ ನನ್ನನ್ನೇ ಸಮೀಪಿಸುತ್ತಿರುವಂತೆ ಭಾಸವಾಯಿತು. ಬಹಶಃ ಇದು ಕನಸಿರಬೇಕು ಎಂದುಕೊಂಡೆ. ಆದರೆ ಹಾಡು ಹತ್ತಿರವಾಯಿತು. ಎದ್ದು ಬಾಗಿಲು ತೆರೆದೆ. ಮಸುಕಾಗುತ್ತಿರುವ ಚಂದಿರನ ಮಂದ ಬೆಳದಿಂಗಳಲ್ಲಿ ಮಳೆಹನಿಗಳು ಮುತ್ತಿನ ರಾಶಿ ಸುರಿದಂತೆ ಕಾಣುತ್ತಿದ್ದವು. ಅನತಿ ದೂರದಿಂದ ಲಾಂದ್ರವನ್ನು ಕೈಯಲ್ಲಿ ಹಿಡಿದ ಹುಡುಗ-ಹುಡಗಿಯರ ಗುಂಪೊಂದು ಮುಂಗಾರಿಗೆ ಸ್ವಾಗತ ಕೋರುವ ಹಾಡೊಂದನ್ನು ಹಾಡುತ್ತಾ ಬರುತ್ತಿದ್ದರು.

ಅವರು ನನ್ನನ್ನು ಹಾದು ಮುಂದೆ ಹೋಗುತ್ತಿದ್ದಂತೆ 'ಬ್ಯೂಟಿಫುಲ್' ಎಂದು ಉದ್ಗರಿಸಿದೆ. "ಯಾವುದು? ಹುಡಗಿಯರೋ ಅಥವಾ ಸಂಗೀತವೊ?"- ನನ್ನ ಬೌದ್ಧ ಬಿಕ್ಷು ಗೆಳೆಯ ಪ್ರಶ್ನಿಸಿದ. "ಎರಡೂ" ನಾನು ಅತ್ಯುತ್ಸಾಹದಿಂದ ಹೇಳಿದೆ. ಅಂದಿನ ಆ 'ವರ್ಷಾ ಮಂಗಲ ಪ್ರಭಾತ್‌ಫೇರಿ'ಯ ಅಪೂರ್ವ ಅನುಭವ ಇಂದಿಗೂ ನನ್ನನ್ನು ಕಾಡುತ್ತಿದೆ.

● ಖುಷ್‌ವಂತ್ ಸಿಂಗ್ ●
'ಸಂಡೆ'ಯಲ್ಲಿ

ಬೇಕಲ್ಲವೆ? ಜಡೀ ಮಳೆ ಸುರೀತಿರುವಾಗಲೇ ನಿಮ್ಮ ಮೊರೆ ಕೇಳಿದರೆ, ಆಗ ಒಂದು ವೇಳೆ ಛತ್ರಿ ನಿಮ್ಮ ಕೈಲಿದ್ದು, ಅವಳು ದೂರದಲ್ಲಿ ಚಡಪಡಿಸುತ್ತಾ ನಿಂತಿದ್ದರೆ, ಇಂಥ ಅವಕಾಶ ತಪ್ಪಿಸಿಕೊಳ್ಳಬಾರ್ದೂಂತ ರಟ್ಟೆಹೊಟ್ಟೆಯ ಧೈರ್ಯವನ್ನೆಲ್ಲಾ ಬಾಯಿಗೆ ತಂದುಕೊಂಡು ಅವಳನ್ನು ಕರೀತೀರಿ. ನಾಚುತ್ತಾ, ಬಳುಕುತ್ತಾ ಅವಳೂ ನಿಮ್ಮೊಡನೆ ನಡೆಯುವಾಗ ಮೈಗೆ ಮೈಸೋಂಕಿ, ನೀರಿನ ಹೊಂಡ ದಾಟುವಾಗ ಆಯ ತಪ್ಪಿದ ಅವಳನ್ನು ಹಿಡಿದು, ಇದೇನು ನಾವು ನಡೀತಿದೀವೋ ಅಥ್ವಾ ಆಕಾಶದಲ್ಲಿ ಹಾರ್‍ತಾ ಇದ್ದೀವೋ ಅನ್ನುವಷ್ಟು ಖುಷಿಯಾಗಿದ್ದಾಗ ಇದ್ದಕ್ಕಿದ್ದ ಹಾಗೇ ಛತ್ರಿಯೇ ಕೈಯಿಂದ ಹಾರಿದರೆ ಅಥವಾ ತಿರುಗುಮುರುಗು ಆಗಿ ಮಗುಚಿಕೊಂಡರೆ ಆಗ ನಿಮ್ಮ ನೆರೆನಂಬಿ ನಿಮ್ಮಾಸರೆಗೆ ಬಂದ ಆಕೆಯ ಗತಿಯೇನು! ನಿಮ್ಮ ಸ್ನೇಹಿತರ ಛತ್ರೀಲಿ ಸೇರಿಕೊಂಡರೆ ಇದ್ಯಾವ ಸಂತೋಷ-ಸಂಕಟಗಳೂ ಇಲ್ಲದೆ ನಿಶ್ಚಿಂತೆಯಾಗಿ ಹೋಗಬಹುದೆಂದುಕೊಂಡಿದ್ದರೆ ಅದೂ ತಪ್ಪು. ಆತನೋ ಹಾಗೂ ಹೀಗೂ ಓಲಾಡುತ್ತಾ, ನಿಮ್ಮ ಬಕ್ಕ ತಲೆಗೇ ಕಡ್ಡಿಯಿಂದ ಚುಚ್ಚಿ ಅದರ ತುದಿಯ ನೀರನ್ನೆಲ್ಲಾ ನಿಮ್ಮ ಭುಜ ಬೆನ್ನಮೇಲೆ ಬೀಳಿಸಿ, ತಲೆನೋವಿನ ಜೊತೆಗೆ ಮೈಕೈ ನೋವನ್ನೂ ಕೊಟ್ಟಿರುತ್ತಾನೆ.

ಬೊಂಬಾಯಿನ ಮಳೇಲಿ ದಿನನಿತ್ಯದ ಚಟುವಟಿಕೆಗಳು ಹೇಗೆ ನಡೀತವೆ ಅನ್ನೋದೇ ಆಶ್ಚರ್ಯ. ಶಾಲೆಯ ಮಕ್ಕಳು ಪುಸ್ತಕಗಳ ಚೀಲವನ್ನು ಬೆನ್ನಿಗೆ ಇಳಿಬಿಟ್ಟು, ಅದರ ಮೇಲೆ ರೇನ್‌ಕೋಟ್ ಹಾಕ್ಕೊಂಡು ಹೊರಟಾಗ ಚಂದ್ರಲೋಕಕ್ಕೆ ಹೊರಟ ಸ್ಪುಟ್ನಿಕ್ ಪ್ರವಾಸಿಗಳಂತೆ ಕಾಣುತ್ತಾರೆ. ಧಾರವಾಡ-ಬೆಳಗಾವಿಯಲ್ಲಿ ಮಳೆ ಬಂತೆಂದರೆ ಕೋಟು ಸ್ವೆಟರಿನ ಮೇಲೆ ಸ್ಕಾರ್ಫು ಸುತ್ತಿ ದೋಸೆ ಕಾಫಿಗೆ ಹೊರಡಬೇಕು. ಇಲ್ಲಿ ರೈಲು ಬಸ್ಸಿನಲ್ಲಿ ಹೊರಟರೆ ಹೊರಗೆ ಧೋ ಎಂದು ಚಚ್ಚುವ ಮಳೆ, ರೈಲಿನೊಳಗೆ ಬೆವರಿಳಿತ. ಇದರ ಜೊತೆಗೆ

ಛತ್ರಿಯ ಕೊನೆಯ ತಿವಿತ, ಒದ್ದೆ ಬಟ್ಟೆಯ ಮೆತ್ತೆ, ಒದ್ದೆ ಕಾಲಿನ ತುಳಿತ, ಗಿಜಿ ಗಿಜಿ. ಮನೆ ಪಾಕೆ ತರಕಾರಿಗೆ ಹೋದರೆ ಗಿಜಿಗಿಜಿ, ಕಚ ಪಚ..! ಆಫೀಸಿನಲ್ಲಿ ಕೂತು ಕಿಟಕಿಯಿಂದ ಮಳೆ ನೋಡಿದಾಗ ಮನಸ್ಸು ಕುಣಿಯುತ್ತದೆ. ಇದ್ದಕ್ಕಿದ್ದ ಹಾಗೇ ಎಲ್ಲಿಯದೋ ಹಳೆಯ ನೆನಪು ಉಕ್ಕಿ ಬರುತ್ತದೆ, "ಜೀವ ಬೇಡುತಿದೆ ಕಾಫಿ ದೋಸೆಯ, ಕರಿದ ಹಪ್ಪಳ ಸಂಡಿಗೆಯ... ಬಿಸೀ ಚುರುಮುರಿ ಕಡಲೆ, ಮಕ್ಕಳೊಂದಿಗೆ ಕುಳಿತು ಕುರುಕುರು ತಿಂದು ಹೊರ ಜಗ ಮರೆಯೋಣ' (ಕಣವಿ) ಎಂದು ಗಂಡಿನ ಬಯಕೆ ಮರುಕಳಿಸಿ ಹಗಲುಗನಸು ಕಾಣುತ್ತಲೇ ಮನೆಗೆ ಮುಂಚೆಯೇ ಓಡಿಬಂದರೆ ಮನೆ ಬಾಗಿಲಿಗೆ ಬೀಗ! ನಾಲ್ಕಾರು ಕಡೆ ಹುಡುಕಿ ಸುಸ್ತಾಗಿ ಮನೆಯ ಮಹಡಿ ಮೆಟ್ಟಿಲ ಮೇಲೆ ಹಾಗೇ ಗಂಟೆಗಟ್ಟಲೆ ಬೆವರುತ್ತಾ ಕುಳಿತಿದ್ದಾಗ, ಮನೆಯಾಕೆ ವಿಡಿಯೋ ಚಿತ್ರ ನೋಡಿಕೊಂಡು ನೆರೆಮನೆಯಿಂದಲೇ ಹೊರ ಬರುತ್ತಾಳೆ! ಅಷ್ಟರೊಳಗೆ ಮಳೆ ನಿಂತು, ಕನಸೊಡೆದು, ಬೆವರಿಳಿದ ಜೀವಕ್ಕೆ ಬಿಸಿ ಬಿಸಿ ಬಾಜಿ, ದೋಸೆ ಕಾಫಿಯ ಆತುರ ಹಾಗಿರುತ್ತದೆ!! ನಾವೇ ಹೀಗೆ ಒದ್ದಾಡುತ್ತಿದ್ದರೆ ಇನ್ನು ಜೋಪಡಪಟ್ಟಿಯವರು ಹೇಗಾದರೂ ಮಳೆಗಾಲ ಕಳೆಯುತ್ತಾರೋ ಯೋಚಿಸಲೂ ಆಗುಲ್ಲ.

ಹಾಗಾದ್ರೆ ಬೊಂಬಾಯಿನಲ್ಲಿ ಮಳೆಗಾಲ ಯಾರಿಗೂ ಬೇಡವೇ ಅನ್ನಬೇಡಿ. ರಿಕ್ಷಾ, ಟ್ಯಾಕ್ಸಿ, ಚಪ್ಪಲಿ, ಛತ್ರೀ ರಿಪೇರಿಯವರು, ಕಾರೆತ್ತುವವರು ಇವರುಗಳ ಬಿಸಿನೆಸ್‌ಗೆ ಮಳೆಗಾಲ ಪರ್ವಕಾಲ. ಮಳೆಗಾಲದಲ್ಲಿ ಪೆದ್ದರ ರಸ್ತೆ, ವಾರ್ಡನ್ ರಸ್ತೆ, ಇಂಥ ಕಡೇಲಿ ಒಳಚರಂಡಿಯ ಕಿಂಡಿ ಮುಚ್ಚಳಗಳನ್ನು ಚೆನ್ನಾಗಿ ಮುಚ್ಚಿ ನೀರು ಒಳಹೋಗದಂತೆ ಮಾಡುವ ಗ್ಯಾಂಗ್‌ಗಳು ಇವೆಯಂತೆ. ಹಾಗೆ ಮುಚ್ಚಿದಾಗ, ರಾತ್ರೋರಾತ್ರಿ ರಸ್ತೆಯಲ್ಲಿ ಮಳೆ ನೀರಿನ ಪ್ರವಾಹ ಬಂದು ಅಲ್ಲಿ ನಿಲ್ಲಿಸಿದ್ದ ಕಾರುಗಳೆಲ್ಲಾ ನಿಂತಲ್ಲೇ ಸ್ಥಗಿತ! ಬೆಳಿಗ್ಗೆ ಕಾರುಗಳನ್ನು ತಳ್ಳಲು ಅದೇ ಗ್ಯಾಂಗ್‌ನ ಜನ ಹಾಜರು. ಒಂದೊಂದು ಕಾರನ್ನು ತಳ್ಳಿ ಹೊರ ತರಲೂ ಐವತ್ತು-ನೂರು ರೂಪಾಯಿಗಳ ದಂಡ! ಇದೇ ರೀತಿ, ಬೆಳಿಗ್ಗೆ ಆಫೀಸಿಗೆ ಹೋದವರು ಸಂಜೆಯ ಮಳೆಗೆ ಸಿಕ್ಕಿಕೊಂಡ್ರೆ, ಲೋಕಲ್ ಟ್ರೇನ್‌ಗಳು ನಿಂತರೆ, ಮತ್ತೆ ಮನೆಗೆ ಬರಲು ನೂರಾರು ರೂಪಾಯಿ ಟ್ಯಾಕ್ಸಿಗೆ ಸುರಿಯಲೇಬೇಕು.

ಇಷ್ಟೊಂದು ಫಜೀತಿ ಇದ್ದರೂ, ಎಷ್ಟೇ ಒದ್ದಾಡಿದರೂ, ಮಳೆಬೇಡ ಅನ್ನೋದು ಪ್ರಸೂತಿ ವೈರಾಗ್ಯ ಇದ್ದ ಹಾಗೆ. ಬೊಂಬಾಯಿನಲ್ಲಿ ಎಲ್ಲರಿಗೂ ಮಳೆ ಬೇಕೇ ಬೇಕು. ಯಾರನ್ನಾದರೂ "ಏನಪ್ಪಾ, ಬೊಂಬಾಯಲ್ಲಿ ಮಳೆ ಹೇಗೆ?" ಎಂದು ಕೇಳಿದರೆ, "ತಥ್, ಏನೂ ಇಲ್ಲ. ಈ ಸಲ ಸರಿಯಾಗಿ ಮಳೆಯೇ ಇಲ್ಲ ಇದುವರೆಗೂ ಒಂದೆ ಒಂದು ದಿನವೂ ಲೋಕಲ್ ಟ್ರೇನು ನಿಂತೇ ಇಲ್ಲ. ಕಳೆದ ವರ್ಷ ಇಷ್ಟುಹೊತ್ತಿಗೆ ಎರಡು ಸಲ ರೈಲು ನಿಂತು ಆಫೀಸಿಗೆ ರಜ ಸಿಕ್ಕಿತ್ತು" ಅಂತಾನೆ.

ಮೀನು ವಾಸನೆಯೋ, ಕೊಡೆಯ ಸಮುದ್ರವೊ, ಬೆವರಿಳಿತವೋ, ಕಚಪಿಚವೋ, ಕೊಳಚೆಯ ಸಿಂಚನವೋ, ಹೂವು-ಹಸಿರು ಚಿಗುರದ ಗೋರ್ಕಲ್ಲ ಮೇಲಿನ ಮಳೆಯೋ... ಏನೇ ಆಗಲಿ, ಎಷ್ಟೇ ಫಜೀತಿಯೇ ಆಗಲಿ ಬೊಂಬಾಯಿನಲ್ಲಿ ಎಲ್ಲರಿಗೂ ಮಳೆ ಬೇಕು. ಒಂದೆರಡು ದಿನ ಲೋಕಲ್ ಟ್ರೇನ್ ನಿಲ್ಲುವಷ್ಟಾದರೂ ಮಳೆ ಬೇಕೇಬೇಕು! ●

ಸಂತಸವೊಂದೇ ಒಳಿತು. ತರ್ಕವೊಂದೇ ದಾರಿದೀಪ. ನ್ಯಾಯವೊಂದೇ ಪೂಜ್ಯ. ಮಾನವತ್ವವೊಂದೇ ಧರ್ಮ. ಪ್ರೀತಿಯೊಂದೇ ಎಲ್ಲರಿಗೂ ದೇವದೂತ.ಆರ್.ಜಿ. ಇಂಗರ್‌ಸಾಲ್

ಸಿಯಾಚಿನ್

ಸಮಸ್ಯಾ ಪರ್ವತ

● ರವೀಂದ್ರ ಭಟ್, ಬಳಗುಳಿ ●

ಭಾರತದ ಎತ್ತರದ ಹಿಮಾಚ್ಛಾದಿತ ಪರ್ವತಗಳ ಗಡಿಯಾದ ಸಿಯಾಚಿನ್ ಈಗೀಗ ಸುದ್ದಿಯಲ್ಲಿರತೊಡಗಿದೆ. ಕಾರಾಕೋರಂನ ಪರಿಮಿತಿಯಲ್ಲಿರುವ 'ಲಡಾಕಿನ' ಉತ್ತರಕ್ಕೆ ಈ ಸಿಯಾಚಿನ್ ಪ್ರದೇಶವಿದೆ. ಇದರ ಪಶ್ಚಿಮಕ್ಕೆ ಅಕ್ಸಾಯಿಚಿನ್ ಇದ್ದರೆ ಪೂರ್ವಕ್ಕೆ ಪಾಕ್ ಆಕ್ರಮಿತ ಕಾಶ್ಮೀರವಿದೆ. ಇದರ ಉತ್ತರದ ತುದಿ. ಪಾಕಿಸ್ತಾನವು ಚೀನಾಕ್ಕೆ ವಹಿಸಿಕೊಟ್ಟ ಪ್ರದೇಶಕ್ಕೆ ಸೇರುತ್ತದೆ. ಈ ಸ್ಥಳವು 74 ಕಿಲೋಮೀಟರು ಉದ್ದವಾಗಿಯೂ 2 ರಿಂದ 8 ಕಿಲೋಮೀಟರು ಅಗಲವಾಗಿಯೂ ಇದೆ. ಒಂದು ತುದಿಗೆ ನುಬ್ರಾ ನದಿಯೂ ಇನ್ನೊಂದು ತುದಿಗೆ ಸಮುದ್ರ ಮಟ್ಟದಿಂದ 22,000 ದಿಂದ 24,000 ಅಡಿ ಎತ್ತರದ ಹಿಮಾಚ್ಛಾದಿತ ಶಿಖರಗಳಿವೆ.

ಜಗತ್ತಿನ ಅತಿ ಎತ್ತರದ ಯುದ್ಧ ಭೂಮಿ ಎಂದು ಹೆಸರಾಗಿರುವ ಈ ಪ್ರದೇಶದಲ್ಲಿನ ಬದುಕು ಅತ್ಯಂತ ಕಷ್ಟಕರ. ಸೈನಿಕರು ವೈರಿಯೊಡನೆ ಹೋರಾಡುವದಲ್ಲದೆ ಪ್ರಕೃತಿಯೊಂದಿಗೂ ಕಾದಾಡಬೇಕಾಗುತ್ತದೆ. ಉಷ್ಣಾಂಶ 15°C ದಾಟದ ಈ ಪ್ರದೇಶದಲ್ಲಿ ಟೆಂಟ್ ಹಾಕಲು ಮೊಳೆ ಹೊಡೆಯುತೊಡಗಿದರೆ ಮಾಂಸವೆ ಘನೀಭೂತಗೊಂಡು ಮೊಳೆಗೆ ಅಂಟಿಕೊಂಡ ಅನುಭವ ಸಾಮಾನ್ಯ. ಭಾರತದ ಸುಪ್ರಸಿದ್ಧ ಪರ್ವತಾರೋಹಿ ಎನ್. ಕುಮಾರ್ ಹೇಳುವಂತೆ ಸಾಮಾನ್ಯ ಪ್ರದೇಶಕ್ಕಿಂತ ಇಪ್ಪತ್ತು ಪಟ್ಟು ಜಾಸ್ತಿ ಶ್ರಮ ಇಲ್ಲಿ ಅವಶ್ಯಕ. ತಟಕ್ಕನೆ ನಿರ್ಮಾಣಗೊಳ್ಳುವ ಹಿಮಕಂದರಗಳಿಂದ ರಕ್ಷಿಸಿಕೊಂಡು ಯುದ್ಧ ಮಾಡಬೇಕಾದ ಈ ಜಾಗದಲ್ಲಿ ಅತಿ ಹೆಚ್ಚು ಸೈನಿಕರನ್ನು ಕಳುಹಿಸುವಂತಿಲ್ಲ. ಆದ್ದರಿಂದ ಪ್ರತಿಯೊಬ್ಬ ಸೈನಿಕನ ದೈಹಿಕ ಮತ್ತು ಮಾನಸಿಕ ತಯಾರಿ ಮತ್ತು ಸಾಮರ್ಥ್ಯ ಅತಿ ಮಹತ್ವದ್ದಾಗಿದೆ. ಈ ಪ್ರದೇಶದ ಮೂರು ತಿಂಗಳ ಸಾಹಸ ಯಾತ್ರೆಯಲ್ಲಿ ತಾನು ಸುಮಾರು ಮೂವತ್ತು ಕೆ.ಜಿ.ಯಷ್ಟು ತೂಕವನ್ನು ಕಳೆದುಕೊಂಡೆ ಎಂದು ಎನ್. ಕುಮಾರ್ ಹೇಳುತ್ತಾರೆ.

ಸಮಸ್ಯೆಯ ಆರಂಭ: ಈ ಚಕಮಕಿಯ ಮೂಲವನ್ನು ಗಮನಿಸತೊಡಗಿದರೆ, ಅದು 1947ಕ್ಕೆ ಹೋಗಿ ನಿಲ್ಲುತ್ತದೆ. ಆಗ ಹಾಕಿದ ಅಂತಾರಾಷ್ಟ್ರೀಯ ಗಡಿಯೆ ಇಂದಿಗೂ ಗಣನೆಗೆ ತೆಗೆದುಕೊಳ್ಳಲ್ಪಡುತ್ತದೆ. 1971ರ ಸಿಮ್ಲಾ ಒಪ್ಪಂದದ ಪ್ರಕಾರ ಭಾರತ ತನ್ನಿಂದ ಆಕ್ರಮಿಸಲ್ಪಟ್ಟ ಪಾಕ್ ಪ್ರದೇಶವನ್ನು ಬಿಟ್ಟುಕೊಟ್ಟಿತು. ಈ ಕಾಶ್ಮೀರದ ವಿಷಯದಲ್ಲಿ, "ಯುದ್ಧ ವಿರಾಮ ರೇಖೆ"ಯನ್ನೇ ಅಂತಾರಾಷ್ಟ್ರೀಯ ಗಡಿಯೆಂದು ತಿಳಿಯಲಾಯಿತಾದರೂ ಅದನ್ನು ಅಧಿಕೃತವಾಗಿಸುವುದು ಸಾಧ್ಯವಾಗಲಿಲ್ಲ ಎಂಬುದು ಬಲ್ಲ ಮೂಲಗಳ ಹೇಳಿಕೆ. ಇದನ್ನು ಅಧಿಕೃತಗೊಳಿಸುವಲ್ಲಿ ಅಂದಿನ ಪಾಕಿಸ್ತಾನದ ಪ್ರಧಾನಿ ಜುಲ್ಫಿಕರ್ ಅಲಿ ಭುಟ್ಟೊ ಅವರು ಶ್ರೀಮತಿ ಇಂದಿರಾ


ಗಾಂಧಿ ಅವರ ಮನವೊಲಿಸಿ ಸ್ವಲ್ಪ ಸಮಯಾವ ಕಾಶವನ್ನು ಕೇಳಿದ್ದರೆಂದೂ ನಂತರ ಅದು ಹಾಗೆಯೆ ಉಳಿದು ಬಿಟ್ಟಿದ್ದು ಭಾರತದ ಮಟ್ಟಿಗೆ ದುರುದೃಷ್ಟಕರವೆಂದು ಹೇಳಲಾಗುತ್ತದೆ. ಈಗ ಪಾಕಿಸ್ತಾನ ಅದನ್ನು ಸಮಸ್ಯೆಯಾಗಿಸಲು. ಆ ಮೂಲಕ ಅಂತಾರಾಷ್ಟ್ರೀಯ ಗಮನ ಸೆಳೆಯಲು ಪ್ರಯತ್ನಿಸುತ್ತಿದೆ.

ಈ ಮಧ್ಯೆ ಪಾಕಿಸ್ತಾನವು ಸಿಯಾಚಿನ್ ಪ್ರದೇಶವು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಬರುವ ರೀತಿಯಲ್ಲಿ ನಕಾಶೆಯಲ್ಲಿ ತೋರಿಸಿತು. ಇದಕ್ಕೆ ಪಾಕಿಸ್ತಾನವು ಅಮೇರಿಕದ ವೈಮಾನಿಕ ನಕಾಶೆಯನ್ನು ಆಧಾರವಾಗಿರಿಸಿತು. ಅಮೇರಿಕದ ವೈಮಾನಿಕ ನಕಾಶೆಯ NJ 9842 ಬಿಂದುವಿನಿಂದ ನೇರವಾಗಿ ಕಾರಾಕೊರಂಗೆ ಸೇರುವ ಹಾಗೆ ತೋರಿಸಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸುತ್ತ ಏರ್ ಕಮಾಂಡರ್ ಜಸಜಿತ್‌ಸಿಂಗ್ ಅವರು "ವೈಮಾನಿಕ ರೇಖೆಗಳನ್ನು ನೇರವಾಗಿ ಎಳೆಯಬಹುದು. ಆದರೆ ಹಿಮಾಚ್ಛಾದಿತ ಗುಡ್ಡಗಳ ಪ್ರದೇಶದಲ್ಲಿ ಗಡಿ ರೇಖೆಯನ್ನು ಅಲಕ್ಷಿಸಿ ನೇರವಾಗಿ ಗುರುತಿಸುವುದು ಸಾಧ್ಯವಿಲ್ಲ. ಅಮೇರಿಕ ವೈಮಾನಿಕ ರೇಖೆಯೆಂದು ಇದನ್ನು ತೋರಿಸಿದರೆ ಪಾಕಿಸ್ತಾನ ಇದನ್ನೇ ಯುದ್ಧ ವಿರಾಮ ರೇಖೆ ಎಂದು ತೋರಿಸಲು ಪ್ರಾರಂಭಿಸಿತು. ಆದರೆ ಗಡಿ ರೇಖೆಗೂ ವೈಮಾನಿಕ ರೇಖೆಗೂ ಸಂಬಂಧವಿಲ್ಲ" ಎಂದು ಹೇಳುತ್ತಾರೆ.

ಇದನ್ನೇ ನಿಜವಾದ ಗಡಿ ರೇಖೆಯೆಂದು ಭಾವಿಸಿ ಪಾಕಿಸ್ತಾನವು 1963ರಲ್ಲಿ ಕಾಶ್ಮೀರದ ಕಾರಾಕೋರಂನ ಭಾಗವನ್ನು ರಾಜತಾಂತ್ರಿಕ ಒಪ್ಪಂದದ ಮೂಲಕ ಚೀನಾಕ್ಕೆ ಬಿಟ್ಟುಕೊಟ್ಟಿತು. ಈ ಮೂಲಕ 'ಆಜಾದ್ ಕಾಶ್ಮೀರ'ದ ಒಡೆತನವನ್ನು ಭದ್ರಪಡಿಸುವುದು ಅದರ ಹಿಂದಿನ ಉದ್ದೇಶವಾಗಿತ್ತು. ಇದರ ಪರಿಣಾಮವಾಗಿ ಭಾರತ-ಪಾಕಿಸ್ತಾನಗಳ ನಡುವೆ ಕಾಶ್ಮೀರದ ಬಗ್ಗೆ ಸಿಯಾಚಿನ್ ಬಗ್ಗೆ ಹೊಸ ಒಪ್ಪಂದ ಏರ್ಪಟ್ಟರೆ ಚೀನಾ ಅಲ್ಲಿ ತಲೆ ಹಾಕಿದರೆ ಆಶ್ಚರ್ಯವಿಲ್ಲ.

ಚಕಮಕಿಯ ಹೊಸರೂಪ: ಹೀಗೆ ಗೊಂದಲದ ಮೂಲವಾಗಿದ್ದ ಸಿಯಾಚಿನ್‌ನ ಪ್ರದೇಶದ ಹಿಮಾಚ್ಛಾದಿತ ಬೆಟ್ಟಗಳನ್ನು 1971ರಲ್ಲಿ ಪಾಕಿಸ್ತಾನ ಹೊಸತಂತ್ರದ ಮೂಲಕ ಗಮನಿಸತೊಡಗಿತು. ಬಾಂಗ್ಲಾ ಯುದ್ಧದ ಸೋಲಿನ ಕಹಿ ತುಂಬಿದ ವೇಳೆಯಲ್ಲೆ ಸಿಯಾಚಿನ್‌ನ ಹಿಮಶಿಖರಗಳನ್ನು ಪಾಕಿಸ್ತಾನದ ಪರ್ವತಾರೋಹಣದ ಸಾಹಸಿಗಳು ಏರತೊಡಗಿದರು. 1971 ರಿಂದ 1984ರವರೆಗೆ ಜಪಾನ್ ಮತ್ತು ಪಶ್ಚಿಮ ಯುರೋಪದ ದೇಶಗಳಿಗೆ ಪರ್ವತಾರೋಹಣಕ್ಕೆ ಎಲ್ಲ ಸೌಲಭ್ಯವನ್ನು ಪಾಕಿಸ್ತಾನ ಕಲ್ಪಿಸಿತು. ಮೇಲ್ನೋಟಕ್ಕೆ ಸರಳವಾಗಿ ಕಂಡರೂ ಆಂತರ್ಯದಲ್ಲಿ ರಾಜಕೀಯ ಉದ್ದೇಶ ಇದ್ದೇ ಇತ್ತು. ಭಾರತ ಮೊದಲು ಇದರ ಬಗ್ಗೆ ಹೆಚ್ಚು ಲಕ್ಷ್ಯವಹಿಸಲಿಲ್ಲ. ಸ್ವಲ್ಪ ಕಾಲದ ನಂತರ ಪಾಕಿಸ್ತಾನದ ಈ ವಿಶೇಷ ಯೋಜನೆ ಅದರ ಗಮನ ಸೆಳೆಯಿತು. ಪಾಕಿಸ್ತಾನಕ್ಕೆ ಈ ಪರ್ವತಾರೋಹಣ ಕಾರ್ಯಕ್ರಮದ ಮೂಲಕ ಸಿಯಾಚಿನ್‌ನ ಮೇಲೆ ತನ್ನ ಒಡೆತನ ಇದೆ ಎಂದು ಜಗತ್ತಿಗೆ ತೋರಿಸುವ ಉದ್ದೇಶ ಇತ್ತು. ಇದರೊಂದಿಗೆ ಹಿಮಾಚ್ಛಾದಿತ ಶಿಖರಗಳನ್ನು ಸರ್ವೆ ಮಾಡುವ ಅವಕಾಶವನ್ನು ಪಾಕಿಸ್ತಾನ ಉಪಯೋಗಿಸಿಕೊಳ್ಳತೊಡಗಿತು. ಈಗ ಜಾಗ್ರತಗೊಂಡ ಭಾರತ 1978ರಲ್ಲಿ ಎನ್. ಕುಮಾರ್ ಅವರ ನೇತೃತ್ವದಲ್ಲಿ ಪರ್ವತಾರೋಹಣ ಸಾಹಸವನ್ನು ಕೈಗೊಂಡಿತು. ಹೀಗೆ ಪರ್ವತಾರೋಹಣದ ರೂಪದಲ್ಲಿ ಸಿಯಾಚಿನ್ ಹಿಮದಿಂದ ಹೊಳೆಯುವ ನೆಲದಲ್ಲಿ ಚಕಮಕಿ ನಡೆಯತೊಡಗಿತು.

ಮಿಲಿಟರಿ ಮುಖಾಮುಖಿ: ಪಾಕಿಸ್ತಾನವು ಸಿಯಾಚಿನ್‌ನ್ನು ಆಕ್ರಮಿಸಿಕೊಳ್ಳಲು ಎಲ್ಲ ಪ್ರಯತ್ನವನ್ನು ಮಾಡುತ್ತಿದೆ ಎಂಬ ಅಧಿಕೃತ ವರದಿಯ ಪ್ರಕಾರ ಭಾರತವು ಅಲ್ಲಿ ನಮ್ಮ ಸೈನ್ಯದ ಹತ್ತೆ ಆದೀತು ಎಂಬ ಪರಿಜ್ಞಾನ ಇದ್ದರೂ ಅಲ್ಲಿಗೆ ಸೈನ್ಯವನ್ನು ಕಳುಹಿಸಲು ನಿಶ್ಚಯಿಸಿತು. ಅದೇ ರೀತಿ 1984 ಏಪ್ರಿಲ್‌ನಲ್ಲಿ ಮೇಘದೂತ್ ಹೆಸರಿನ ಕಾರ್ಯಾಚರಣೆಯ ಅಂಗವಾಗಿ ಸಾಕಷ್ಟು ಸೈನಿಕ ತುಕಡಿಗಳನ್ನು ಸಿಯಾಲಾ ಮತ್ತು ಬಿಲಾಪೊಂಡ್‌ಗಳನ್ನು ಸೇರಲು ವಿಮಾನಗಳ ಮೂಲಕ ಇಳಿಸಲಾಯಿತು. ಅತ್ಯಂತ ಕಷ್ಟಕರವಾದ ಈ ಪ್ರದೇಶದಲ್ಲಿ ಮೊದಲು ಹೋಗಿ ತಳವೂರಿದ್ದಕ್ಕೆ ಪ್ರತಿಫಲವೂ ಎಂಬಂತೆ ಜೂನ್ 23 ರಂದು



ಬಂದ ಪಾಕಿಸ್ತಾನಿ ಪಡೆಗಳಿಗೆ ಗುಂಡಿನ ಸ್ವಾಗತ ನೀಡಲಾಯಿತು. ತತ್ಫಲವಾಗಿ ಪಾಕಿಸ್ತಾನಿಯರ ಪ್ರಯತ್ನ ವ್ಯರ್ಥವಾಯಿತು. ಈ ಸಂದರ್ಭದಲ್ಲಿ ಭಾರತದ ಸೈನ್ಯ ಅಪಾರವಾದ ಸಂಕಲ್ಪ ಶಕ್ತಿಯನ್ನು ಮತ್ತು ಪೂರ್ವ ತಯಾರಿಯ ಬೆಂಬಲದಿಂದುಂಟಾದ ಧೈರ್ಯವನ್ನು ಪ್ರದರ್ಶಿಸಿ ದೇಶದ ಗಡಿಯನ್ನು ರಕ್ಷಿಸಿತು. ಅದೂ ಅಲ್ಲದೆ ಭಾರತದ ಪಡೆಗಳಿಗೆ ಪೂರ್ವ ನಿಯೋಜಿತ ಉಪಾಯಗಳಿದ್ದವು. ಪಾಕಿಸ್ತಾನ ಪಡೆಗಳ ಚಟುವಟಿಕೆಯನ್ನೆಲ್ಲವನ್ನು ಗಮನಿಸುವ ಸಾಧ್ಯತೆ ನಮ್ಮವರಿಗಿತ್ತು. ಇದೇ ಕಾರಣ ಎಂದಲೂ ಎಂಬಂತೆ 1987ರಲ್ಲಿ ಭಾರತ ಮತ್ತೆ ಸಿಯಾಚಿನ್‌ನ ನೆಲದಲ್ಲಿ ಪಾಕಿಸ್ತಾನ ಪಡೆಗಳನ್ನು ಹಿಮ್ಮೆಟ್ಟಿಸಿತು.

ಏಕೀ ಮಹತ್ವ: ಪಾಕಿಸ್ತಾನ ಸಿಯಾಚಿನ್ ಮೇಲೆ ಏಕೆ ಕಣ್ಣಿಟ್ಟಿದೆ? ರಾಷ್ಟ್ರೀಯ ರಕ್ಷಣಾ ಅಕಾಡಮಿಯ ಪ್ರೊ॥ ಗಾಸ್ವಾಮಿ ಅವರ ಅಭಿಪ್ರಾಯದಂತೆ ಸಿಯಾಚಿನ್‌ನ ಚಕಮಕಿ ಭಾರತ ಪಾಕಿಸ್ತಾನಗಳೆರಡಕ್ಕಲ್ಲದೆ ರಶಿಯ ಚೀನಾಗಳಿಗೂ ಮಹತ್ವದ್ದು.

ಒಮ್ಮೆ ಪಾಕಿಸ್ತಾನ ಸಿಯಾಚಿನ್‌ನ್ನು ವಶಪಡಿಸಿಕೊಂಡರೆ ಲಡಾಕ್ ಮತ್ತು ಕಾಶ್ಮೀರ ಕಣಿವೆಯ ನಡುವೆ ಸಂಪರ್ಕ ಕಲ್ಪಿಸಲು ಸಾಧ್ಯವಾಗುತ್ತದೆ. ನಂತರ ಚೀನಾದೊಡನೆ ಗೆಳೆತನ ಮಾಡಿ

ಭಾರತದ ಮೇಲೆ ಒಟ್ಟಾಗಿ ಆಕ್ರಮಣ ನಡೆಸುವ ಸಾಧ್ಯತೆಗೆ ಇಂಬು ದೊರೆತಂದಾಗುತ್ತದೆ. ಪಾಕಿಸ್ತಾನದ ಹಿಡಿತಕ್ಕೆ ಸಿಯಾಚಿನ್ ಬಂದರೆ ಚೀನವು ಅರಬ್ ದೇಶಗಳೊಡನೆ ಸಂಬಂಧ ಬೆಳೆಸುವುದು ಸಾಧ್ಯವಾಗುತ್ತದೆ. ನುಬ್ರಾ ಕಣಿವೆಯ ಮೂಲಕ ಭಾರತದ ಮೇಲೆ ದಾಳಿ ಮಾಡಲು ಚೀನಾಕ್ಕೆ ಅನುಕೂಲವಾಗುತ್ತದೆ. ಟಿಬೇಟ್-ಸಿಂಕಿಯಾಂಗ್ ಹೆದ್ದಾರಿ ಮತ್ತು 'ಬಾಗಬರ್ನ್' ಮೂಲಕ ಸಾಗುವ ಹೆದ್ದಾರಿ ಲಡಾಕ್ ಮತ್ತು ಕಾಶ್ಮೀರ ಸುತ್ತಮುತ್ತ ಕುಣಿಕೆಯನ್ನು ನಿರ್ಮಿಸುವುದು ಚೀನಕ್ಕೆ ಸಹಾಯಕವಾದದು.

ಮುಂದೇನು? ಈ ಸಮಸ್ಯೆಯ ಪರಿಹಾರಕ್ಕಾಗಿ ಭಾರತದ ರಕ್ಷಣಾ ಕಾರ್ಯದರ್ಶಿ ಎಸ್.ಕೆ. ಭಟ್ನಾಗರ್ ಮತ್ತು ಪಾಕಿಸ್ತಾನದ ರಕ್ಷಣಾ ಕಾರ್ಯದರ್ಶಿ ಇಜಾಲ ಹೈದರ್ ಜೈದಿ ಮಾತುಕತೆ ನಡೆಸಿದ್ದರೂ ನಿರೀಕ್ಷಿತ ಪ್ರಗತಿ ಕಂಡು ಬಂದಿಲ್ಲ. ಪಾಕಿಸ್ತಾನ ಭಾರತದ ಸೈನ್ಯದ ವಾಪಸಾತಿಯ ಬೇಡಿಕೆಯನ್ನು ಮುಂದಿಟ್ಟಿದ್ದೇ ಇದಕ್ಕೆ ಕಾರಣ. ಅಫಘಾನದ ವಿರುದ್ಧ ಯುದ್ಧಕ್ಕಾಗಿ ಪಾಕಿಸ್ತಾನ ಹೆಚ್ಚು ಹೆಚ್ಚು ಶಸ್ತ್ರಾಸ್ತ್ರ ಪಡೆಯುತ್ತಿದ್ದುದು, ಸಿಯಾಚಿನ್ ಮೂಲಕ ಭಾರತದ ಮೇಲಿನ ದಾಳಿಗೆ ಎಂಬ ಗುಮಾನಿ ಹೆಚ್ಚಾಗುತ್ತಿದೆ.

ಭಾರತೀಯ ಪಡೆಗಳಿಗೆ ಸಿಯಾಚಿನ್‌ನಲ್ಲಿ ಅತ್ಯಂತ ಶ್ರೇಷ್ಠ ದರ್ಜೆಯ ಸೈನಿಕ ಸಾಮಗ್ರಿಗಳನ್ನು ಕೊಡಲಾಗುವುದು ಎಂದು ಪ್ರಧಾನಿ ರಾಜೀವ್ ಗಾಂಧಿ ಭರವಸೆ ಕೊಟ್ಟಿದ್ದರಿಂದ ಭಾರತ ಅಲ್ಲಿಂದ ಹೆಜ್ಜೆಯನ್ನು ಹಿಂತೆಗೆಯುವ ಯೋಚನೆ ಇದ್ದಂತಿಲ್ಲ. ಅಂತೂ ಹಿಮಶಿಖರದ ಅಸಮಾಧಾನ ಮುಂದುವರಿದಿದೆ. ●

ಭಿನ್ನಮತ

● ಪಾಂಚಜನ್ಯ ●

ಮನೆಯೊಳಗೆ ಶಾಂತಿ ಭಗ್ನವಾಗಿತ್ತು. ತಿಳಿಯಾಗಿದ್ದ ವಾತಾವರಣ ಕದಡಿ ಬಗ್ಗಡವಾಗಿತ್ತು. ಬೆಳಗ್ಗೆ ನಿರ್ಮಲವಾಗಿದ್ದ ವಾತಾವರಣ ಸಂಜೆ ವೇಳೆಗೆ ಆಸ್ಫೋಟಿಸುವ ಸ್ಥಿತಿಯನ್ನು ಮುಟ್ಟಿತ್ತು. ಕಾರಣವಿಷ್ಟೆ:

ಮಗಳ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿತ್ತು. ದದಲಾಷ್ಟಕ, ಕಕವ, ಪೆದ್ದಿ ಎಂದೆಲ್ಲಾ ನಾವು ಪರಿಗಣಿಸುತ್ತಿದ್ದ ಹುಡುಗಿ ಮೊದಲನೇ ತರಗತಿಯಲ್ಲಿ ಉತ್ತೀರ್ಣಳಾಗಿದ್ದಳು. ಇದೇ ಕಾರಣ. ಸಂತೋಷದ ಸಮಾಚಾರ, ಶಾಂತಿಯನ್ನು ಏಕೆ ಕದಡಿತು ಎನ್ನುತ್ತೀರಾ? ಕಾರಣವಿದೆ, ಕೇಳಿ.

ಅವಳು ಹೇಗೂ ಪಾಸಾಗುವುದಿಲ್ಲವೆಂಬ ಧೈರ್ಯದ ಮೇಲೆ, ಪಾಸಾದರೆ ಎರಡು ಜೊತೆ ಸಲ್ವಾರ್ ಕಮೀಜ್ ಕೊಡಿಸುತ್ತೇನೆ ಎಂದು ಹೇಳಿದ್ದೆ. "ಫಸ್ಟ್‌ಕ್ಲಾಸ್ ಬಂದರೆ?" ಎಂದು ಕೇಳಿದ್ದಳು. "ಪಾಸು ಮಾಡುವುದೇ ಅನುಮಾನ, ಇನ್ನು ಫಸ್ಟ್‌ಕ್ಲಾಸ್ ಬರುವುದು ಅಷ್ಟರಲ್ಲೇ ಇದೆ" ಎಂಬ ಮೊಂಡು ಧೈರ್ಯಮಾಡಿ "ಹೀರೋ ಸೈಕಲ್ ಕೊಡಿಸುತ್ತೇನೆ" ಎಂದು ಆಶ್ವಾಸನೆ ನೀಡಿದ್ದೆ. ಸೈಕಲ್ ಮೇಲಿನ ಆಸೆಗೋ ಏನೋ ಫಸ್ಟ್‌ಕ್ಲಾಸ್ ಬಂದೇಬಿಟ್ಟಳು. ಮುಂದೆ ನನ್ನ ಗತಿ? ನನ್ನದು ಯಾವಾಗಲೂ ಖೋತಾ ಬಜೆಟ್. ಅದೂ ತಿಂಗಳ ಕೊನೆ. ಕೈ ಬರಿದೋ ಬರಿದು. ಬಸ್ ಛಾರ್ಜಿಗೇ ಕಾಸಿಲ್ಲ. ಇನ್ನು ಇವಳ ಬೇಡಿಕೆಯನ್ನು ಹೇಗೆ ಪೂರೈಸಲಿ? ಸಮಸ್ಯೆ ಅಷ್ಟೇ ಅಲ್ಲ.

ಕಾಲೇಜಿನಲ್ಲಿ ಓದುತ್ತಿರುವ ನನ್ನ ದೊಡ್ಡ ಮಗಳು "ಅಪ್ಪ ಅವಳು ಫಸ್ಟ್‌ಕ್ಲಾಸಿನಲ್ಲಿ ಪಾಸಾಗಿದ್ದಾಳಲ್ಲ. ನನಗೂ ಒಂದು ಜೊತೆ ಬಟ್ಟೆ ಕೊಡಿಸಪ್ಪ" ಎಂದು ದುಂಬಾಲು ಬಿದ್ದಳು. ತಂಗಿ ಫಸ್ಟ್‌ಕ್ಲಾಸಿನಲ್ಲಿ ಪಾಸಾಗುವುದಕ್ಕೂ ಅಕ್ಕನಿಗೆ ಒಂದು ಜತೆ ಬಟ್ಟೆ ಕೊಡಿಸುವುದಕ್ಕೂ ಅದೇನು ಸಂಬಂಧವಿದೆಯೋ ನಾ ಬೇರೆ ಕಾಣೆ. ಅವಳಿಗೆ ಕೊಡಿಸಿದರೆ ಇವಳಿಗೂ ಕೊಡಿಸಬೇಕು. ಇದೊಂದು ಅಲಿಖಿತ ನಿಯಮ. ಬಹುಶಃ ಎಲ್ಲರ ಮನೆಯಲ್ಲೂ ಇರಬಹುದು. ನಮ್ಮನೆಯಲ್ಲಂತೂ ಇದ್ದೇ ಇದೆ.

ರಾತ್ರಿ ಊಟದ ಮೇಜಿನ ಮೇಲೆ ಊಟದ ಜೊತೆಗೆ ನನ್ನ ಹೆಂಡತಿ ಮಕ್ಕಳ ಬೇಡಿಕೆಗಳನ್ನು ಬಿಚ್ಚಿದಳು.


ತಿಳಿಸಾರಿಗೆ ಚಟ್ನಿಪುಡಿ ನಂಜಿಕೊಳ್ಳುತ್ತಾ ಕುಟುಂಬವು ಎಂತಹ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದೆ ಎಂಬುದನ್ನು ಆಮೂಲಾಗ್ರವಾಗಿ ವಿವರಿಸಿದೆ. ಕೇಂದ್ರ ಸರ್ಕಾರ ಏರಿಸಿದ ಪೆಟ್ರೋಲ್ ಬೆಲೆ, ರೈಲು ಚಾರ್ಜು ಇವುಗಳಿಂದ ನಮ್ಮ ಕುಟುಂಬದ ಆಯವ್ಯಯ ಪಟ್ಟಿಯ ಮೇಲೆ ಉಂಟಾದ ಘೋರ ಪರಿಣಾಮವನ್ನು ಕನಿಕರ ಹುಟ್ಟುವಂತೆ ಬಣ್ಣಿಸಿದೆ. "ಈಗ ತಿಂಗಳ ಕೊನೆ. ಬ್ಯಾಂಕಿನಲ್ಲಿ ನಾನೂರೂ, ಐನೂರು ಇರಬಹುದು. ಖರ್ಚಿಗೆ ಸ್ವಲ್ಪ ಉಳಿಸಿ ಮಿಕ್ಕದ್ದರಲ್ಲಿ ಇಬ್ಬರೂ ಒಂದೊಂದು ಜೊತೆ ಕಾಟನ್ ಡ್ರೆಸ್ ಹೊಲಿಸಿಕೊಳ್ಳಿ" ಎಂದು ಹೇಳಿದೆ. ಮಜ್ಜಿಗೆ ಅನ್ನ ಕಲಸಿಕೊಳ್ಳುತ್ತಿದ್ದ ನನ್ನ ಮಗಳು ಅಷ್ಟಕ್ಕೆ ನಿಲ್ಲಿಸಿ ಕೈ ತೊಳೆದುಕೊಂಡಳು. "ಕೊಡಿಸುತ್ತೀಯೋ ಇಲ್ಲವೋ ಹೇಳಪ್ಪ" ಎಂದಳು. "ನಾನು ಹೇಳಿದೆನಲ್ಲಮ್ಮ, ಇರುವುದೇ ಅಷ್ಟು" ಎಂದೆ. ಊಟ ಬಿಟ್ಟು ತನ್ನ ಕೊಠಡಿಗೆ ಹೊರಟೇ ಹೋದಳು. ಸಹಾನುಭೂತಿ ತೋರಿಸುವವಳಂತೆ ನನ್ನ ದೊಡ್ಡ ಮಗಳೂ ಅವಳನ್ನು ಹಿಂಬಾಲಿಸಿದಳು.

ತಟ್ಟೆ ಲೋಟಗಳನ್ನು ತೆಗೆಯುತ್ತಾ ನನ್ನ ಹೆಂಡತಿ "ನಿಮ್ಮ ಬುದ್ಧಿಯೇ ಇಷ್ಟೂರೀ. ಮೊದಲೇ ನಿಮಗೆ ಗೊತ್ತಿತ್ತೋ ಇಲ್ಲವೋ. ಸ್ವಲ್ಪ ಹಣ ತೆಗೆದಿರಿಸಬೇಕಿತ್ತು. ಈಗ ಇಲ್ಲ ಎಂದರೆ ಹೇಗೆ?" ಎಂದು ದಬಾಯಿಸಿದಳು.

ನನಗೆ ರೇಗಿಹೋಯಿತು. "ಖರ್ಚು ವೆಚ್ಚಗಳನ್ನು ಸರಿತೂಗಿಸಲು ಸರಕಾರವೇ ಒದ್ದಾಡುತ್ತಿರುವಾಗ ನನ್ನದು ಯಾವ ಲೆಕ್ಕ? ನನಗೆ ಇನ್ನು ಮುಂದೆ ಈ ಯಜಮಾನಿಕೆಯೇ ಬೇಡ. ನೀವೇ ಯಾರಾದರೂ ಮಾಡಿಕೊಳ್ಳಿ." ಎಂದು ರಾಮಬಾಣ ಪ್ರಯೋಗಿಸಿದೆ.

ನನ್ನ ಹೆಂಡತಿ ಕೂಲಾಗಿ "ನೀವು ಗಂಡಸರೇ ಇಷ್ಟೂರೀ. ಕತ್ತಿಗೆ ಬಂದಾಗ ನುಣುಚಿಕೊಂಡು ಬಿಡುತ್ತೀರಿ. ಏನಾದರೂ ಮಾಡಿಕೊಳ್ಳಿ. ನನಗೇನು?" ಎಂದು ಮೇಜನ್ನು ಒರೆಸಿದಳು.

ಮುಂದಿನ ಎರಡು ದಿನ ಮನೆಯಲ್ಲಿ ವಾತಾವರಣ ಪ್ರಕ್ಷುಬ್ಧವಾಯಿತು. ಒಬ್ಬರದೂ ಮಾತಿಲ್ಲ, ಕಥೆಯಿಲ್ಲ. ಮಕ್ಕಳಿಬ್ಬರೂ ಅಮ್ಮನ ಕೈಯಲ್ಲಿ ನನ್ನ ವಿರುದ್ಧ ಪ್ರಬಲ ದೋಷಾರೋಪಗಳನ್ನು ಮಂಡಿಸಿದರು. ನಾನೂ ಶಕ್ತಿ



ಮೀರಿ ಪ್ರತಿರೋಧಿಸಿದೆ. ವಾದ-ಪ್ರತಿವಾದಗಳ ಸುರಿಮಳೆಯಾಯಿತೇ ವಿನಾ ಸಂಧಾನ ಮೂಡಿ ಬರಲಿಲ್ಲ. ಅವರ ಬೇಡಿಕೆಗಳಿಗೆ ನಾನೂ ಮಣಿಯಲಿಲ್ಲ.

ಮಧ್ಯಾನ್ನ ಊಟಕ್ಕೆ ಕುಳಿತಾಗ ನಾನು "ಭಿನ್ನ ಮತೀಯರು ಹೀಗೆ ನನ್ನ ಮೇಲೆ ದೋಷಾರೋಪಣೆ ಮಾಡುತ್ತಾ ಕಾಲಹರಣ ಮಾಡುವುದು ಸರಿಯಲ್ಲ. ಮುಂದಿನ ತಿಂಗಳು ಮೂರನೇ ತಾರೀಖು ಕುಟುಂಬದ ಸರ್ವಸದಸ್ಯರ ಸಭೆ ಕರೆಯೋಣ. ವಿಶ್ವಾಸದ ಮತ ಕೇಳೋಣ. ಯಾರು ಬೇಕಾದರೂ ಮುಂದಾಳತ್ವ ವಹಿಸಿಕೊಳ್ಳಿ. ನನಗೆ ಯಜಮಾನಿಕೆ ಬೇಡವೆ ಬೇಡ" ಎಂದು ನನ್ನ ನಿಲುವನ್ನು ಪುನರುಚ್ಚರಿಸಿದ್ದೆ.

ಮೂರನೇ ತಾರೀಖು ಸಂಬಳ ಕೈಗೆ ಬರುವ ದಿನ. ಅದೇ ಪ್ರಶಸ್ತ ಸಮಯ ಎನ್ನಿಸಿತು. ರಾತ್ರಿ ನನ್ನ ಪಕ್ಕ ಮಲಗಿದ್ದ ನನ್ನ ಕೊನೆಯ ಮಗಳು "ಅಪ್ಪ, ನೀನು ತುಂಬಾ ಕುಕೆಡ್ಡು ಕಣಪ್ಪ" ಎಂದು ಛೇಡಿಸಿದಳು. ಅವಳು ಐದನೇ ತರಗತಿಯಲ್ಲಿದ್ದಾಳೆ. ಓದಿನಲ್ಲಿ ಸ್ವಲ್ಪ ಹಿಂದೆ ಬಿದ್ದಿದ್ದರೂ ಉಳಿದ ವಿಷಯಗಳಲ್ಲಿ ತುಂಬಾ ಜಾಣೆ.

"ಯಾಕಮ್ಮ?" ಎಂದೆ.

"ಅಲ್ಲಪ್ಪ, ನಮ್ಮ ಮನೆಯಲ್ಲಿರುವುದೇ ಐದು ಜನ. ಅಮ್ಮ ಯಾವಾಗಲೂ ನಿನ್ನ ಪಕ್ಷ. ಅಕ್ಕಂದಿರಿಬ್ಬರೂ ಈಗ ಭಿನ್ನಮತೀಯರು. ನನ್ನ ಓಟಿನ ಮೇಲೆ ನೀನು ಗೆಲ್ಲಬೇಕು ಅಪ್ಪ" ಎಂದಳು.

"ಸರಿ, ನೀನು ಅವರಿಗೇ ಓಟು ಹಾಕು ಪರವಾಗಿಲ್ಲ" ಎಂದೆ. "ಇಲ್ಲಪ್ಪ, ನನಗೆ ನಿನ್ನ ಮೇಲೆ ವಿಶ್ವಾಸ. ಅಕ್ಕಂದಿರ ಮೇಲೆ ಪ್ರೀತಿ. ನಿನಗೇ ಬೇಕಾದರೂ ಓಟು ಹಾಕುತ್ತೇನೆ, ನಾನು ಕೇಳಿದ್ದನ್ನು ಕೊಡಿಸಿದರೆ" ಎಂದಳು.

ಅದನ್ನೂ ನೋಡೇಬಿಡೋಣವೆಂದು "ಏನು ಬೇಕಮ್ಮ?" ಎಂದೆ.

"ಸೈಕಲ್ಲು" ಎಂದಳು.

ಚಿಕ್ಕ ಸೈಕಲ್ಲು ತಾನೆ. ಇನ್ನೂರು, ಮೂನ್ನುರಕ್ಕೆ ಬರಬಹುದು. "ಆಗಲಮ್ಮ" ಎಂದೆ.

ಬೆಳಿಗ್ಗೆ ನಾನು ಆಫೀಸಿಗೆ ಹೋಗುವಾಗ ಅವಳು ಕಾಣಿಸಲಿಲ್ಲ. ಸಂಜೆ ಬಂದಾಗ ಐಸ್ ಕ್ರೀಮ್ ತಿನ್ನುತ್ತಿದ್ದಳು. "ಯಾರು ಕೊಡಿಸಿದರೆ?" ಎಂದು ಕೇಳಿದೆ. "ಅಕ್ಕಂದಿರು ಕಣಪ್ಪ" ಎಂದಳು. ನನಗೆ ಅರ್ಥವಾಯಿತು. ಇವಳನ್ನು ನಂಬುವಂತಿಲ್ಲ. ಯಾವಾಗ ಪಕ್ಷಾಂತರ ಮಾಡಿದರೂ ಮಾಡಿದಳೇ.

ನನ್ನ ಹೆಂಡತಿ ಕಾಫಿ ಕೊಡುತ್ತಾ "ರಾತ್ರಿ ಹನುಮಂತರಾಯ ಬರ್ತ್ತಾನೆ ರೀ" ಎಂದಳು.

ಹನುಮಂತರಾಯ ಇವಳ ತಮ್ಮ. ನನ್ನ ಭಾವಮೈದ. ಬಂದರೆ ಬರಿಕೈಲಿ ಹಿಂದಕ್ಕೆ ಹೋಗುವವನಲ್ಲ.

"ಈಗೇಕೆ ಬರ್ತ್ತಾನಂತೆ?"

"ನಾನೇ ಕರೆಸಿದೆ ರೀ. ಅವನೇ ತೀರ್ಮಾನ ಮಾಡಲಿ. ಇದೇನು ಒಂದೇ ಮನೆಯಲ್ಲಿ ಹೀಗೆ ಜಗಳ, ಅಶಾಂತಿ" ಎಂದಳು.

ಹನುಮಂತರಾಯ ಬಂದ.

ಊಟದ ಟೇಬಲ್ಲಿನ ಮೇಲೆ ಭಯಂಕರ ವಾದ-ಪ್ರತಿವಾದಗಳಾದುವು. ವರ್ಷಗಳಿಂದ ಹೇಗೆ ನಾನು ಖೋತಾ ಬಜೆಟ್‌ನಲ್ಲಿಯೇ ಕಷ್ಟಪಟ್ಟು ಸಂಸಾರ ಸಾಗಿಸುತ್ತಿದ್ದೇನೆ ಎಂದು ವಿವರಿಸಿದೆ. ಭಿನ್ನಮತೀಯರು ಸಹ ಪ್ರಬಲವಾಗಿಯೇ ತಮ್ಮ ನಿಲುವನ್ನು ಪುಷ್ಟೀಕರಿಸಿದರು. ಸಮಸ್ಯೆ ಇನ್ನೂ ಬಿಗಡಾಯಿಸಿತು.

ಕೊನೆಗೆ ಹನುಮಂತರಾಯ ಒಂದು ಸಲಹೆಯನ್ನು ಮುಂದಿಟ್ಟ. ಜವಳಿ ಅಂಗಡಿಯಲ್ಲಿ ಡ್ರೆಸ್ ಮೆಟಿರಿಯಲ್ಸನ್ನು ಸಾಲ ತರುವುದು. ಸೈಕಲ್ ಅಂಗಡಿಯಲ್ಲಿ ಚೀಟಿ ಹಾಕಿ ಬಂದಾಗ ಸೈಕಲ್ ತೆಗೆದುಕೊಳ್ಳುವುದು. ಭಿನ್ನಮತೀಯರು ಒಪ್ಪಿದರು.

ಶೆಟ್ಟಿ ಅಂಗಡಿಗೆ ಬಟ್ಟೆ ತರಲು ಹೋಗಿದ್ದ ಮಕ್ಕಳು ಬರಿಗೈಯಲ್ಲಿ ಬಂದವು. ಶೆಟ್ಟಿ ಸಾಲ ಕೊಡುವುದಿಲ್ಲ ಎಂದನಂತೆ. ಮಕ್ಕಳು ಶೆಟ್ಟಿಯನ್ನು ಬಯ್ಯುತ್ತಾ ಸುಮ್ಮನಾದುವು. ನಾನೂ ದನಿಗೂಡಿಸಿದೆ. ನನ್ನ ಯಜಮಾನತ್ವ ಉಳಿಯಿತು. ನನ್ನ ಯೋಗ್ಯತೆಗೆ ಶೆಟ್ಟಿ ಸಾಲ ಕೊಡುವುದಿಲ್ಲವೆಂದು ನನಗೆ ಮೊದಲೇ ಗೊತ್ತಿತ್ತು. ಹನುಮಂತರಾಯನಿಗೂ ಗೊತ್ತಿತ್ತಂತೆ. ●

ಮರಣೋತ್ತರ ಶವದಾನ

ಏಕೆ? ಎಂತು?

ಡಾ॥ ವಸಂತ ಕುಲಕರ್ಣಿ

ಅಂದು ಹಿಂದೂ ಪಂಚಾಂಗದ ಪ್ರಕಾರ ಶ್ರೀಮತಿ ಆಶಾ ಸೊಹೊನಿಯವರ ವರ್ಷ ಶ್ರಾದ್ಧ (ಸೆಪ್ಟೆಂಬರ್ 7, 1987). ಆದರೆ ಆ ಮನೆಯಲ್ಲಿ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಸದ್ದುಗದ್ದಲ ಕಂಡುಬರುತ್ತಿಲ್ಲ. ಬದಲಾಗಿ ಒಂದು ಚಿಕ್ಕ, ಭಾವಪೂರ್ಣ ಸಮಾರಂಭದಲ್ಲಿ ವೈದ್ಯಲೋಕದ ಎಳೆಯರೂ ಸೇರಿದಂತೆ ಹಲವರು ಮೌನಗೌರವಾಂಜಲಿಯನ್ನು ಆ ಮೃತ ವ್ಯಕ್ತಿಗೆ ಅರ್ಪಿಸಿದರು.

ಮಧ್ಯಮವರ್ಗೀಯ ಕುಟುಂಬಕ್ಕೆ ಸೇರಿದ್ದ ಆಶಾ ಮರಣೋತ್ತರದಲ್ಲಿ ತಮ್ಮ ಶರೀರವನ್ನು ಅಭ್ಯಾಸಾರ್ಥವಾಗಿ ಪುಣೆಯ ಬಿ.ಜೆ. ವೈದ್ಯಕೀಯ ಮಹಾವಿದ್ಯಾಲಯಕ್ಕೆ ದಾನವಾಗಿತ್ತಿದ್ದರು. ಈ ರೀತಿ ಶರೀರದಾನ ಮಾಡಿದ ಪುಣೆಯ ಪ್ರಥಮ ಸುಶಿಕ್ಷಿತ ಮಹಿಳೆ ಎಂಬ ಗೌರವಕ್ಕೆ ಅವರು ಪಾತ್ರರಾಗಿದ್ದರು. ಇದು ಇಷ್ಟಕ್ಕೆ ಸೀಮಿತವಾಗಿದ್ದರೆ ಅನೇಕ ಅಪರೂಪದ ಘಟನೆಗಳಲ್ಲಿ ಇದೂ ಒಂದು ಎಂದು ಮರೆತುಹೋಗಿಬಿಡಬಹುದಿತ್ತು. ಆದರೆ ಈ ಘಟನೆ ಮಹಾರಾಷ್ಟ್ರದಲ್ಲಿ ಒಂದು ಬಗೆಯ ಸಾಂಸ್ಕೃತಿಕ ಕ್ರಾಂತಿಯ ಬೀಜ ಬಿತ್ತುವುದಕ್ಕೆ ಕಾರಣೀಭೂತವಾಯಿತು.

ಮನುಷ್ಯ ಶರೀರ ರಚನೆಯ ವಿವರಗಳನ್ನು ತಿಳಿಸುಲೋಸುಗ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳು ಮೃತಶರೀರವನ್ನು ಛೇದಿಸಿ ಅಭ್ಯಾಸ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ವಾರಸುದಾರರಿಲ್ಲದ ಶವಗಳೆಂದು ಖಚಿತಪಡಿಸಿಕೊಂಡ ನಂತರ ಅಂಥವುಗಳನ್ನು ವೈದ್ಯಕೀಯ ವಿದ್ಯಾಲಯಗಳಿಗೆ ಕೊಡಲಾಗುತ್ತದೆ. ಆದರೆ ವೈದ್ಯಕೀಯ ವಿದ್ಯಾಲಯಗಳ ಸಂಖ್ಯೆ ಹೆಚ್ಚುತ್ತ ನಡೆದಂತೆ ಶವಗಳ ಲಭ್ಯತೆಯೂ ಕಡಿಮೆಯಾಗುತ್ತ ನಡೆದಿದೆ. ಎಷ್ಟೋ ಸಲ ಶವಗಳು ದೊರೆಯದಿದ್ದಾಗ ತೊಂದರೆಗಿಟ್ಟುಕೊಂಡ ವಿದ್ಯಾಲಯಗಳು, ವಿದ್ಯಾರ್ಥಿಗಳ ಸಂಖ್ಯೆ ಬಹಳ. ಮುಂಬಯಿಯಂಥ ಮಹಾನಗರದಲ್ಲಿ ಬೇವಾರ್ಸಿ ಶವಗಳು ತುಸು ಹೆಚ್ಚಿರಬಹುದು. ಈ ಕಾರಣದಿಂದಾಗಿ ಅಲ್ಲಿಯ ವೈದ್ಯ ಮಹಾವಿದ್ಯಾಲಯಗಳಿಗೆ ಶವಗಳ ಪೂರಯಿಕೆ ಅಂಥ ಗಂಭೀರ ಸಮಸ್ಯೆಯಾಗಿರಲಿಕ್ಕಿಲ್ಲ. ಆದರೆ ಉಳಿದೆಡೆ ಮಾತ್ರ ಇದು ಖಂಡಿತ ತೀವ್ರ ಸಮಸ್ಯೆ.

ದಹನ ಇಲ್ಲವೇ ದಫನದ ಮೂಲಕ ಶವಸಂಸ್ಕಾರ ಮಾಡುವುದಕ್ಕಿಂತ ಮೃತ ಶರೀರವನ್ನು ವೈದ್ಯ ವಿದ್ಯಾಲಯಕ್ಕೆ ದಾನವಾಗಿತ್ತರೆ... ಈ ವಿಚಾರ ಅನೇಕರಲ್ಲಿ ಸುಳಿದುಹೋಗಿರಬಹುದು. ಆದರೆ ಸಮಾಜದಲ್ಲಿ ಅನೇಕ ಪ್ರಗತಿಪರ ವಿಚಾರಗಳು ವ್ಯಕ್ತಪಡತೊಡಗಿದಾಗಲೂ ಅವುಗಳಿಗೆ ಕಾನೂನಿನ ಒಪ್ಪಿಗೆಯ ಮುದ್ರೆ ಬೀಳುವುದು ದುಸ್ಸಾಧ್ಯ ಕೆಲಸವಾಗಿಬಿಡುತ್ತದೆ. 1948ಕ್ಕಿಂತ ಮುನ್ನ ಮುಂಬಯಿಯಲ್ಲಿ ಜಾರಿಯಲ್ಲಿದ್ದ ಕಾನೂನಿನ ಪ್ರಕಾರ ಶವ ಯಾವ ಸಂದರ್ಭದಲ್ಲಿ ಬೇವಾರ್ಸಿ ಎಂದು ಪರಿಗಣಿಸ

ಲ್ಪಡುತ್ತದೆ ಹಾಗೂ ಅಂಥ ಶವವನ್ನು ವೈದ್ಯ ವಿದ್ಯಾಲಯಕ್ಕೆ ಕೊಡಲು ಏನು ಮಾಡಬೇಕು ಎಂಬುದರ ಕುರಿತಾಗಿ ಮಾತ್ರ ನಿಯಮಗಳಿದ್ದುವು. ಶವವನ್ನು ಯಾರಾದರೂ ದಾನವಾಗಿ ಕೊಡಲು ಬಯಸಿದರೆ ಅದಕ್ಕೆ ಅವಕಾಶವಿರಲಿಲ್ಲ. 1975ರಲ್ಲಿ ಈ ಬಗ್ಗೆ ಕಣ್ಣು ತೆರೆದ ಮಹಾರಾಷ್ಟ್ರ ಸರಕಾರ ಮೊದಲು ಮುಂಬಯಿ ಮಹಾನಗರಕ್ಕೆ ಮಾತ್ರ ಅನ್ವಯಿಸುವಂತೆ ಹೊಸ ಕಾನೂನನ್ನು ಜಾರಿಗೆ ತಂದು, ಯಾರಾದರೂ ಸ್ವಂತ ಇಚ್ಛೆಯಿಂದ ಮರಣೋತ್ತರದಲ್ಲಿ ತಮ್ಮ ಶವವನ್ನು ವೈದ್ಯ ವಿದ್ಯಾಲಯಕ್ಕೆ ದಾನವಾಗಿ ಕೊಡಲಿಚ್ಛಿಸಿದರೆ ನಿಯಮಗಳು ವಿಧಿಸುವ ಒಂದು ಫಾರ್ಮನ್ನು ಜೀವಿಸಿರುವಾಗಲೇ ತುಂಬಿ ಇಬ್ಬರು ಸಾಕ್ಷಿಗಳೆದುರು ಅಂಕಿತ ಹಾಕುವ ಮೂಲಕ, ಇಲ್ಲವೇ ಮೃತ್ಯುಪತ್ರದಲ್ಲಿ ಬರೆಯುವ ಮೂಲಕ ಹಾಗೆ ಮಾಡಬಹುದು. ಒಂದು ವೇಳೆ ಇವೆರಡನ್ನೂ ಮಾಡದೆಯೇ ವಾರಸುದಾರರೆದುರು ಮೌಖಿಕವಾಗಿ ಈ ಕುರಿತು ಇಚ್ಛೆಯನ್ನು ವ್ಯಕ್ತಪಡಿಸಿದ್ದರೆ ಅವರು ಸಹ ಇಂಥ ಮೃತಶರೀರವನ್ನು ದಾನವಾಗಿ ಕೊಡಬಹುದು. ಆದರೆ ಇದೆಲ್ಲಕ್ಕಾಗಿಯೂ ಮೃತವ್ಯಕ್ತಿ ನೈಸರ್ಗಿಕ ಸಾವನ್ನು ಅಪ್ಪಿದರೆಂಬ ಬಗ್ಗೆ ರಜಿಸ್ಟರ್ಡ್ ವೈದ್ಯರಿಂದ ಒಂದು ಸರ್ಟಿಫಿಕೆಟ್ಟನ್ನು, ನಗರಸಭೆಯಿಂದ ಡೆತ್‌ಪಾಸನ್ನು ಪಡೆದಿದ್ದರೆ ಸಾಕು; ನ್ಯಾಯಾಲಯ ಅಥವಾ ಪೊಲೀಸರಿಂದ ಪ್ರತ್ಯೇಕ-ಅನುಮತಿ ಪಡೆಯಬೇಕಾದ ಅಗತ್ಯವಿಲ್ಲವೆಂದು 1975ರ ಈ ಕಾನೂನು ಹೇಳುತ್ತದೆ. ಆದರೆ ಕಾನೂನುಗಳು, ನಿಯಮಗಳು ಇರುವುದು ಪುಸ್ತಕಗಳಲ್ಲಿ. ಅವುಗಳು ತಲಪಬೇಕಾದವರನ್ನು ತಲಪುವುದೇ ಇಲ್ಲವೆಂಬುದಕ್ಕೆ ಮಹಾರಾಷ್ಟ್ರವೇ ಒಂದು ಉದಾಹರಣೆ. 1975ರ ಈ ಕಾನೂನು ಈ ವಿಚಾರದಲ್ಲಿ ಅತ್ಯಂತ ಪ್ರಗತಿಪರವೆಂದು ಭಾವಿಸಲಾಗಿದ್ದರೂ ಸಾಮಾನ್ಯವಾಗಿ ಇದನ್ನು ಜಾರಿಯಲ್ಲಿ ತರಬೇಕಿದ್ದ ವೈದ್ಯಕೀಯ ವಿದ್ಯಾಲಯಗಳಾಗಲಿ ಕೊರೋನರ್ * ಕೋರ್ಟಿನಂತಹ ನ್ಯಾಯಾಲಯವಾಗಲಿ ಮುಂದಿನ 11 ವರ್ಷ ಕಾಲ ಇದರೆಡೆಗೆ ಗಮನವನ್ನೇ ಹರಿಸಲಿಲ್ಲ. ಮಹಾರಾಷ್ಟ್ರದಲ್ಲಿರುವ ವಿವಿಧ ವೈದ್ಯವಿದ್ಯಾಲಯಗಳು ಶವದಾನ ಸ್ವೀಕರಿಸುವ ಬಗ್ಗೆ ಸುತ್ತೋಲೆಗಳನ್ನು ಹೊರಡಿಸಿದಾಗ 1975ರ



ಸೌ. ಆಶಾತಾಯಿ ಸೊಹೊನಿ

ಕಾನೂನನ್ನು ಗಮನಿಸಲೇ ಇಲ್ಲ. ಇದರಿಂದಾಗಿ ಮರಣೋತ್ತರ ದೇಹದಾನ ಮಾಡಬೇಕೆಂಬುದು ತೀರ ಕಷ್ಟಸಾಧ್ಯ ಕಾರ್ಯವಾಗಿಬಿಡುತ್ತಿತ್ತು. ಶ್ರೀಮತಿ ಆಶಾ ಸೊಹೊನಿಯವರ ಪತಿ ಜಿ.ಎಂ. ಸೊಹೊನಿ ಈ ಕುರಿತು ಮಹಾರಾಷ್ಟ್ರದಲ್ಲಿ ಒಂದು ಆಂದೋಲನವನ್ನೇ ಪ್ರಾರಂಭಿಸಿ ಬಹಳ ಮಟ್ಟಿಗೆ ಸಫಲರೂ ಆಗಿದ್ದಾರೆ-ಕಾನೂನಿನಿಂದ ನಿರೀಕ್ಷಿಸಬಹುದಾದ ಅಡೆತಡೆಗಳನ್ನು ನಿವಾರಿಸುವಲ್ಲಿ.


1986 ಸೆಪ್ಟಂಬರ್ 3ರಂದು ಮುಂಬಯಿಯ ಕೆ.ಇ.ಎಂ. ಆಸ್ಪತ್ರೆಯಲ್ಲಿ ವೀಣಾ ಮೆಹತಾ ಎಂಬ ಗುಜರಾತಿ ಗೃಹಿಣಿ ಕೊನೆ ಯುಸಿರೆಳೆದರು.. ತಮ್ಮ ಕಣ್ಣುಗಳನ್ನು, ನಂತರ ಇಡಿ ಮೃತಶರೀರವನ್ನು ದಾನವಾಗಿ ಕೊಡಬೇಕೆಂಬುದು ಆ ಗೃಹಿಣಿಯ ಇಚ್ಛೆಯಾಗಿತ್ತು. ಅವರ ಪತಿ ಕಿಶನ್‌ಭಾಯಿ ಮೆಹತಾ ಆಸ್ಪತ್ರೆಯ ವರಿಷ್ಠರಿಗೆ ಈ ವಿಷಯ ತಿಳಿಸಿದೊಡನೆಯೆ ಕಣ್ಣುಗಳನ್ನು ತಟ್ಟನೆ ಸ್ವೀಕರಿಸಲಾಯಿತಾದರೂ ಶವವನ್ನು ಸ್ವೀಕರಿಸಲು ಮುಂದಾಗಲಿಲ್ಲ. ಈ ಆಸ್ಪತ್ರೆಗೆ ಹೊಂದಿಕೊಂಡಿರುವ ಜಿ.ಎಸ್. ಮೆಡಿಕಲ್ ಕಾಲೇಜಿಗೆ ತಮ್ಮ ಶವವನ್ನು ಒಪ್ಪಿಸಬೇಕೆಂಬುದು ವೀಣಾರವರ ಇಚ್ಛೆಯಾಗಿತ್ತು.

ಹಾಗೆಯೇ ಅವರ ಪತಿಯೆ ಹೇಳುತ್ತಿರುವಾಗಲೂ ಕಾಲೇಜು, ಇದನ್ನು ಹಾಗೆ ಸ್ವೀಕರಿಸಲು ಕೊರೊನರ್ ಕೋರ್ಟಿನಿಂದ ಅನುಮತಿ ತರಬೇಕೆಂದು ಹೇಳಿದಾಗ ಕಿಶನ್‌ಭಾಯಿಗೆ ಕ್ಷಣ ಕಾಲ ಏನೂ ತೋಚದಂತಾಗಿರಬೇಕು. ಮುಂದೆ ಕೊರೊನರ್ ನ್ಯಾಯಾಲಯಕ್ಕೆ ಹೋಗಿ ಅನುಮತಿ ತರಲು ಇಪ್ಪತ್ತು ತಾಸುಗಳೇ ಹಿಡಿದುವು. ಅದುವರೆಗೆ ಶವವನ್ನು ಆಸ್ಪತ್ರೆಯ ಶವಾಗಾರದಲ್ಲಿಡಲಾಗಿತ್ತು. ಇಲ್ಲಿ ಕಿಶನ್‌ಭಾಯಿ ಅನುಭವಿಸಿದ ಮಾನಸಿಕ ಉದ್ವಿಗ್ನತೆ ಅಪಾರ. ಗಂಡ ಹೆಂಡಿರಿಬ್ಬರೂ ಅನೇಕ ವರ್ಷಗಳ ಹಿಂದೆಯೇ ತಂತಮ್ಮ ಶರೀರವನ್ನು ಮರಣೋತ್ತರದಲ್ಲಿ ವೈದ್ಯವಿದ್ಯಾಲಯಕ್ಕೆ ಕೊಡುವ ಬಗ್ಗೆ ತಮ್ಮಲ್ಲೇ ನಿರ್ಧಾರಕೈಕೊಂಡು ಯಾರು ಮೊದಲು ಸತ್ತರೂ ಇನ್ನೊಬ್ಬರು ಈ ದಾನಕಾರ್ಯವನ್ನು ಮಾಡಬೇಕೆಂದು ಒಪ್ಪಂದ ಮಾಡಿಕೊಂಡಿದ್ದರು. ಈ ವಿಷಯ ಅವರ ಮಕ್ಕಳಿಗೂ ತಿಳಿದಿರಲಿಲ್ಲ. ತಂದೆಯಿಂದ ತಿಳಿದಾಗ ಮೊದಲು ಆಘಾತವಾದರೂ ನಂತರ ತಾಯಿಯ ನಿರ್ಧಾರವನ್ನು ಅವರೆಲ್ಲ ಮೆಚ್ಚಿಕೊಂಡರು.

ಅದೇ ತಿಂಗಳ 18 ರಂದು ಪುಣೆಯ ಡಾ॥ ಪ್ರಯಾಗರವರ ಆಸ್ಪತ್ರೆಯಲ್ಲಿ ಆಗಲೇ ಮರಿಮಕ್ಕಳನ್ನು ಕಂಡ ವೃದ್ಧೆ ಆಶಾ ಸೊಹೊನಿ ಹೃದಯಾಘಾತದಿಂದ ಅಸು ನೀಗಿದರು. ಶವವನ್ನು ಆದಷ್ಟು ಬೇಗ ಅಲ್ಲಿಂದ ಒಯ್ಯಬೇಕೆಂದು ಡಾಕ್ಟರರು ಅವಸರಪಡಿಸತೊಡಗಿದಾಗ ಅವರ ಪತಿ ಶ್ರೀ ಜಿ.ಎಂ. ಸೊಹೊನಿಯವರು ಗಂಭೀರಭಾವದಿಂದ ತಮ್ಮ ಹೆಂಡತಿಯ ಮೃತ್ಯುಪತ್ರವನ್ನು ತಂದು ಡಾಕ್ಟರಿಗೆ ತೋರಿಸಿದರು. "ನನ್ನ ನಿಧನಾನಂತರ ಅಂತ್ಯಸಂಸ್ಕಾರದ ಯಾವುದೇ ಧಾರ್ಮಿಕ ಕ್ರಿಯೆಗಳನ್ನು ಜರುಗಿಸದೇ ನನ್ನ ಶರೀರವನ್ನು ವೈದ್ಯಕೀಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ವೈದ್ಯವಿದ್ಯಾಲಯಕ್ಕೆ ದಾನವಾಗಿ ಕೊಡಬೇಕು. ಇದುವೇ ನನ್ನ ಆತ್ಮಕ್ಕೆ ಶಾಂತಿ ನೀಡುವ ಮಾರ್ಗ". ಮೃತ್ಯುಪತ್ರದಲ್ಲಿಯ ಈ ಮಾತುಗಳು ಡಾಕ್ಟರರನ್ನು ಕ್ಷಣಕಾಲ ಚಕಿತಗೊಳಿಸಿದವು. ಮರುನಿಮಿಷ ಅವರು ತಾವಾಗಿಯೇ ಮುಂದಾಗಿ ಶ್ರೀಮತಿ ಆಶಾರ ಮೃತಶರೀರವನ್ನು ಪುಣೆಯ ಬಿ.ಜೆ. ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಒಯ್ದು ನೀಡುವುದಕ್ಕೆ ಸಕ್ರಿಯ ಸಹಾಯ ಸಹಕಾರ ನೀಡಿದರು.

ಶ್ರೀಮತಿ ಆಶಾರವರನ್ನು ಅವರ ಜೀವಿತ ಕಾಲದಲ್ಲಿ ನೋಡಿದ್ದವರಿಗೆ ಅವರು ತಾವಾಗಿಯೇ ಇಂಥ ಮಹತ್ತರ ನಿರ್ಣಯ ಕೈಗೊಳ್ಳಬಲ್ಲಷ್ಟು ಕ್ರಾಂತಿಕಾರಿ ವಿಚಾರಗಳುಳ್ಳ ವ್ಯಕ್ತಿಯೆಂದು ಅನಿಸುವಂತಿರಲಿಲ್ಲ. ಬಡೋದೆಯ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಜನಿಸಿದ ಅವರ ವಿವಾಹ 1920 ರಲ್ಲಿ ಶಿಕ್ಷಣ ಇಲಾಖೆಯಲ್ಲಿ ದುಡಿಯುತ್ತಿದ್ದ ಶ್ರೀ ಜಿ.ಎಂ. ಸೊಹೊನಿಯವರೊಂದಿಗೆ ಆಯಿತು. ಒಂಬತ್ತು ಗಜದ ಸೀರೆಯನ್ನು ಕಚ್ಚೆಹಾಕಿ ಉಟ್ಟು ತುರುಬು ಕಟ್ಟಿಕೊಂಡು ಹಣೆಗೆ ದೊಡ್ಡ ಕುಂಕುಮಬಟ್ಟು ಇಟ್ಟುಕೊಳ್ಳುತ್ತಿದ್ದ ಇವರನ್ನು ಯಾರೂ ತೀರ ಸಂಪ್ರದಾಯಸ್ಥ ಬ್ರಾಹ್ಮಣ ಮುತ್ತೈದೆ ಎಂದು ಹೇಳಬಹುದಿತ್ತು. ಮುಂದೆ ಶಿಕ್ಷಣ ಇಲಾಖೆಯಲ್ಲಿ ಅವರ ಪತಿ ಇನ್ಸ್‌ಪೆಕ್ಟರ್ ಆದಾಗಿನಿಂದ ಮಹಾರಾಷ್ಟ್ರದ ಅನೇಕ ಜಿಲ್ಲೆಗಳಿಗೆ ವರ್ಗವಾಗಿ ಹೋಗಬೇಕಾಗಿ ಬಂತು. ಗಂಡನೊಡನೆ ಅವರು ಸುಮಾರು 300 ಹಳ್ಳಿಗಳನ್ನಾದರೂ ಸುತ್ತಾಡಿರಬೇಕು. ಈ ಸಂಚಾರ ಕ್ರಮೇಣ ಅವರ ಒಳಗಣ್ಣನ್ನು ತೆರೆಸಿತು. ದಿನಗಳೆದಂತೆ ಜಾತಿ ಭೇದದಲ್ಲಿ ಅಸ್ಪೃಶ್ಯತೆಯಲ್ಲಿ ಅವರ ನಂಬಿಗೆ ಅಳಿದುಹೋಯಿತು. ತಲೆತಲಾಂತರದಿಂದ ನಡೆದುಕೊಂಡು ಬಂದಿದ್ದ ಅನೇಕ ಆಚರಣೆಗಳ ಹಿಂದೆ ಅಂಧ ವಿಶ್ವಾಸ ಮಾತ್ರ ಇದೆಯೆಂದು ತಮಗೆ ಮನದಟ್ಟಾದಾಗ ಅವರು ನಿತ್ಯ ಜೀವನದಲ್ಲಿ ಇನ್ನಷ್ಟು ಉದಾರರಾದರು. ತಮಗೆ ದೊರೆಯುತ್ತಿದ್ದ ಪರಿಮಿತ ಅವಕಾಶದಲ್ಲೇ ತಮ್ಮ ಜೀವನ ದೃಷ್ಟಿಯ ಹಾಗೂ ಆಚರಣೆಯ ಹರಹನ್ನು ಅವರು ಹಿಗ್ಗಿಸುತ್ತಲೇ ನಡೆದರು.

ಶ್ರೀ ಜಿ.ಎಂ. ಸೊಹೊನಿ ಸೇವಾನಿವೃತ್ತರಾದ ನಂತರ ಗಂಡ ಹೆಂಡಿರಿಬ್ಬರೂ ದಕ್ಷಿಣ ಭಾರತದ ಯಾತ್ರೆಗೆ ಹೋಗಿಬಂದರು. ಆ ಸಮಯದಲ್ಲಿ ರಾಮೇಶ್ವರದಲ್ಲಿ ಅವರಿಗೊಂದು ಆಶ್ಚರ್ಯಕಾದಿತ್ತು. ರಾಮೇಶ್ವರ ದೇವಾಲಯದ ಮಹಾದ್ವಾರದ ಮೇಲ್ಗಡೆ ಸ್ವಾಮಿ ವಿವೇಕಾನಂದರ ಒಂದು ನುಡಿಮುತ್ತನ್ನು ಶಿಲೆಯಲ್ಲಿ ಕೆತ್ತಲಾಗಿದೆ. "ದೇವರಿರುವುದು ದೇವಾಲಯದಲ್ಲಿ ಮಾತ್ರವಲ್ಲ,



ಶ್ರೀಮತಿ ವೀಣಾ ಮೆಹತಾ

ಅವನು ಸರ್ವವ್ಯಾಪಿ. ಮಾನವಸೇವೆಯೆ ದೇವರ ಸೇವೆ" (God is not only in the temple but he is everywhere. Service of man is service of GOD) * ಈ ಮಾತು ಅವರಿಬ್ಬರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿಯಿತು. ಅದುವರೆಗೆ ಅಸ್ಪಷ್ಟ ಆದರ್ಶಗಳ ಕನಸು ಕಾಣುತ್ತಿದ್ದ ಅವರಿಬ್ಬರೂ ತಂತಮ್ಮಲ್ಲೇ ಮಾತಾಡಿಕೊಂಡು ಮುಂದಿನ ದಾರಿಯನ್ನು ನಿರ್ಧರಿಸಿಕೊಂಡರು. ತಮ್ಮ ಶೇಷಾಯುಷ್ಯವನ್ನು ಸಮಾಜಕ್ಕೆ ಉಪಯುಕ್ತ ರೀತಿಯಲ್ಲಿ ಕಳೆಯಬೇಕೆಂದು ನಿಶ್ಚಯಿಸಿದ ಅವರು ತಾವಿಬ್ಬರೂ ತಮ್ಮ ನಿಧನಾನಂತರ ತಮ್ಮ ದೇಹಗಳನ್ನು ವೈದ್ಯ ವಿದ್ಯಾಲಯಕ್ಕೆ ಅಭ್ಯಾಸಾರ್ಥ ದಾನವಾಗಿ ಕೊಟ್ಟುಬಿಡಬೇಕೆಂದು ಮಾತಾಡಿಕೊಂಡರು. ಆದರೆ ಈ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳುವ ಮುನ್ನ ಸಾಕಷ್ಟು ಆಲೋಚನೆ ಮಾಡಿ, ಚಿಂತಿಸಿ ತಮ್ಮ ಗುರಿಯ ಬಗ್ಗೆ ಸ್ಪಷ್ಟ ಕಲ್ಪನೆಯನ್ನು ತಂದುಕೊಂಡ ನಂತರವೇ ಗಂಡ ಹೆಂಡಿರಿಬ್ಬರೂ ಆ ಕುರಿತು ಮೃತ್ಯುಪತ್ರ ತಯಾರಿಸಿ ಅಂಕಿತ ಹಾಕಿದರು.

ಸಾಮಾನ್ಯ ರೀತಿಯಲ್ಲಿಯೇ ಪ್ರಾರಂಭವಾಗಿ ಸಾಮಾನ್ಯ ರೀತಿಯಲ್ಲೇ ಮುಕ್ತಾಯಗೊಳ್ಳಬಹುದಾಗಿದ್ದ 'ಒಂದು ಜೀವ ವಯಸ್ಸಿನೊಂದಿಗೆ ಮನಸ್ಸು ಹೃದಯಗಳೆರಡರಲ್ಲೂ ಹೇಗೆ ಪಕ್ವವಾಗಿ ಘಹತ್ತಿಗೇರಿತು ಎಂಬುದಕ್ಕೆ ಆಶಾ ಸೊಹೊನಿಯವರನ್ನೇ ನೋಡಬೇಕು. ಅವರು ತಮ್ಮ ಜೀವಮಾನವಿಡಿ ಉಳಿತಾಯ ಮಾಡಿ ಸ್ವಲ್ಪ ಹಣವನ್ನು ಫಿಕ್ಸ್ಡ್ ಡಿಪಾಜಿಟ್ಟಾಗಿ ಇಟ್ಟಿದ್ದರು. ಅದರಲ್ಲಿಯ ಬಹು ಭಾಗವನ್ನು- ರೂ. 34,000—ಪುಣೆಯಲ್ಲಿ ಅನಾಥಾಶ್ರಮ ನಡೆಸುತ್ತಿರುವ ಮಹಿಳಾ ಮಂಡಳ ಸೇವಾಶ್ರಮಕ್ಕೆ ನೀಡಿ ಬಿಟ್ಟರು. ಇನ್ನುಳಿದ ಸ್ವಲ್ಪ ಹಣ ತಾಯಿಯಿಂದ ಬಳುವಳಿಯಾಗಿ ಅವರ ಮೂವರು ಹೆಣ್ಣು ಮಕ್ಕಳಿಗೆ ಹೋಗಬೇಕಿತ್ತು. ಆದರೆ ತಮ್ಮ ಮೃತ ಶರೀರವನ್ನು ವೈದ್ಯವಿದ್ಯಾಲಯಕ್ಕೆ ಕೊಡುವ ತಮ್ಮ ನಿರ್ಧಾರವನ್ನು ಹೆಣ್ಣುಮಕ್ಕಳಲ್ಲಿ ಯಾರಾದರೂ ವಿರೋಧಿಸಿದರೆ ತಾಯಿಯ ಆಸ್ತಿಯಲ್ಲಿ ಅವರಿಗೆ ಪಾಲು ದೊರೆಯುವು ದಿಲ್ಲವೆಂದು ಶ್ರೀಮತಿ ಆಶಾ ಮೃತ್ಯುಪತ್ರದಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ!

ಮುಂಬಯಿಯಲ್ಲಿ ಕಿಶನ್‌ಭಾಯಿ ಮೆಹತಾರವರು ಎದುರಿಸಬೇಕಾಗಿ ಬಂದ (ತಮ್ಮ ಪತ್ನಿ ಶ್ರೀಮತಿ ವೀಣಾರವರ ಮೃತಶರೀರವನ್ನು ವೈದ್ಯವಿದ್ಯಾಲಯಕ್ಕೆ ಕೊಡುವ ಮುನ್ನ) ತೊಂದರೆ, ಅಡೆತಡೆಗಳ ಬಗ್ಗೆ ಶ್ರೀ ಸೊಹೊನಿ ಪತ್ರಿಕೆಗಳಲ್ಲಿ ಓದಿದ್ದರು. ಅನಂತರ ಅವರು ಸ್ವತಃ ಮುಂಬಯಿಗೆ ಮೆಹತಾರವರನ್ನು ಹುಡುಕಿಕೊಂಡು ಹೋಗಿ, ಚರ್ಚಿಸಿ ಆ ಕುರಿತ ಕಾನೂನಿನ ಬಗ್ಗೆ ತಮಗೆ ಗೊತ್ತಿರುವುದನ್ನೆಲ್ಲ ಹೇಳಿದರಲ್ಲದೆ 1975ನೆಯ ವರ್ಷದಲ್ಲಾದ ಕಾನೂನನ್ನು ಹುಡುಕಿ ಅದರ ಅಭ್ಯಾಸವನ್ನೂ ಮಾಡಿದರು. ಆ ಕಾನೂನು ಆಗ ಮುಂಬಯಿ ಮಹಾನಗರಕ್ಕೆ ಮಾತ್ರ ಅನ್ವಯವಾಗುತ್ತಿತ್ತು. ಮೊದಲು ಮುಂಬಯಿಯ ಕೊರೊನರರ ಬಳಿ ಹೋಗಿ ಅವರಿಗೆ ಕಾನೂನು ತೋರಿಸಿ ಅದರ ಅನುಷ್ಠಾನದ ಬಗ್ಗೆ ಅವರಿಂದ ಮಹಾನಗರಪಾಲಿಕೆಯ ಕ್ಷೇತ್ರದಲ್ಲಿ ಬರುವ ಎಲ್ಲ ವೈದ್ಯವಿದ್ಯಾಲಯಗಳಿಗೂ ಸ್ಪಷ್ಟ ಸೂಚನೆಗಳುಳ್ಳ ಸುತ್ತೋಲೆ ಹೋಗುವಂತೆ ನೋಡಿಕೊಂಡರು. ಅದರಿಂದಾಗಿ ಆ ಮಹಾನಗರದ ಮಟ್ಟಿಗೆ ಶವದಾನ ಮತ್ತು ಸ್ವೀಕಾರಗಳೆರಡೂ ತುಂಬ ಸುಲಭವಾದವು. ಆದರೆ ಈ ಕಾನೂನು ಇಡೀ ಮಹಾರಾಷ್ಟ್ರಕ್ಕೆ ಅನ್ವಯವಾಗುವಂತೆ ರಾಜ್ಯ ಸರಕಾರದ ಮನವೊಲಿಸಿ ಅದನ್ನು ಪೂರಯಿಸು



ಸೇಂಟ್ ಜಾರ್ಜ್ ಆಸ್ಪತ್ರೆಯ ಸಹೋದ್ಯೋಗಿಗಳೊಂದಿಗೆ ಅಧ್ಯಯನನಿರತ ಹೆನ್ರಿ ಗ್ರೇ
(ಎಡಭಾಗದಿಂದ ಮೊದಲನೆಯವ)

ಹೆನ್ರಿ ಗ್ರೇ

ಯಾವುದೇ ವೈದ್ಯ ಪದ್ಧತಿಯ ಅಧ್ಯಯನ ಪ್ರಾರಂಭವಾಗಬೇಕಾದದ್ದು ಅಂಗರಚನಾ ಶಾಸ್ತ್ರದಿಂದಲೇ. ಶರೀರವನ್ನು ಛೇದಿಸಿ ಶರೀರದ ಆಂತರಿಕ ರಚನೆಯನ್ನು ನೋಡಿದರೆ ಪುಸ್ತಕದಲ್ಲಿ ಹೇಳಿದ್ದನ್ನು ವಿದ್ಯಾರ್ಥಿಗಳು ಕಣ್ಣಾರೆ ಕಂಡು ಮನದಟ್ಟು ಮಾಡಿಕೊಳ್ಳಬಲ್ಲರು. ಅಂಗರಚನಾಶಾಸ್ತ್ರವನ್ನು ಇಂದಿನ ಪರಿಪೂರ್ಣ ಸ್ಥಿತಿಗೆ ತಂದು ನಿಲ್ಲಿಸಲು ಕಾರಣರಾದವರು ಅನೇಕ. ಆದರೆ ಈ ಶಾಸ್ತ್ರದ ಮೂಲ ಪುರುಷನೆಂಬ ಗೌರವ ಸಲ್ಲುವುದು ಹೆನ್ರಿ ಗ್ರೇ ಎಂಬಾತನಿಗೆ. 1858ರಲ್ಲಿ ಮೊಟ್ಟಮೊದಲ ಬಾರಿಗೆ ಅವನು ಬರೆದು ಪ್ರಕಟಿಸಿದ 'ಅನಾಟಮಿ' ಗ್ರಂಥ ಇಂದಿಗೂ ವೈದ್ಯ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಕೃತಿ. ಈಗ 36ನೆಯ ಆವೃತ್ತಿಯನ್ನು ಕಂಡ ಅದನ್ನು ಕಾಲಕಾಲಕ್ಕೆ ಬೇರೆ ಬೇರೆ ವಿಜ್ಞಾನಿಗಳು ಪರಿಷ್ಕರಿಸಿ ಸಂಪಾದಿಸಿರುವರಾದರೂ ಅದು 'ಗ್ರೇಜ್ ಅನಾಟಮಿ' ಎಂದೇ ಇಂದಿಗೂ ಪ್ರಸಿದ್ಧಿ.

ಸಾಮಾನ್ಯವಾಗಿ ಸುಪ್ರಸಿದ್ಧರ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಿರುವ ಇಂಗ್ಲೆಂಡಿನಂಥಲ್ಲೂ ಗ್ರೇಯ ಬಗ್ಗೆ ಸಿಗುವುದು ತುಣುಕು ಮಾಹಿತಿ ಮಾತ್ರ. ಅವನ ತಂದೆ ನಾಲ್ಕನೇಯ ವಿಲಿಯಂ ಮತ್ತು ನಾಲ್ಕನೆಯ ಜಾರ್ಜರ ಬಳಿ ಖಾಸಗಿ ಸಂದೇಶವಾಹಕನಾಗಿದ್ದನಂತೆ. ಆದರೆ ಹೆನ್ರಿಯ ಬಾಲ್ಯ ಹಾಗೂ ಪ್ರಾರಂಭಿಕ ಶಿಕ್ಷಣದ ಬಗ್ಗೆ ಏನೂ ತಿಳಿಯದು. 1845 ಮೇ 6ರಂದು ಲಂಡನ್ನಿನ ಸೇಂಟ್ ಜಾರ್ಜ್ ಆಸ್ಪತ್ರೆಯಲ್ಲಿ ವಿದ್ಯಾರ್ಥಿಯೆಂದು ಅವನಿಗೆ ಪ್ರವೇಶ ದೊರೆತ ವಿಷಯ ಗೊತ್ತಾಗುತ್ತದೆ. ತನ್ನ ವಿದ್ಯಾರ್ಥಿ ದೆಸೆಯಲ್ಲಿಯೇ ಹೆನ್ರಿ ಗ್ರೇ ಶವಗಳ ಅಂಗಾಂಗಗಳನ್ನು ಕತ್ತರಿಸಿ ಅಂಗರಚನೆಯ ವಿನ್ಯಾಸಗಳನ್ನು, ತುಂಬ ಶ್ರಮವಹಿಸಿ, ಬಹು ಸೂಕ್ಷ್ಮ ಅಧ್ಯಯನ ಮಾಡುತ್ತಿದ್ದನೆಂದು ಅವನ ಸಮಕಾಲೀನರು ಹೇಳಿದ್ದಾರೆ.

1848ರಲ್ಲಿ ಅವನಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ, 'ಕಣ್ಣಿನ ನರ ಜೋಡಣೆಯ ರೀತಿ ಮತ್ತು ಉಪಾಂಗಗಳ ವರ್ಣನೆ' ಎಂಬ ಅವನ ಪ್ರಬಂಧವನ್ನು ಮನ್ನಿಸಿ ರಾಯಲ್ ಕಾಲೇಜ್ ಆಫ್ ಸರ್ಜನ್ಸ್, ಅವನಿಗೆ ತನ್ನ ತ್ರೈವಾರ್ಷಿಕ ಪಾರಿತೋಷಕ ನೀಡಿ ಗೌರವಿಸಿತು. ಮುಂದೆ ಅವನ ಪ್ರತಿಭೆಯನ್ನು ಆಸ್ಪತ್ರೆ ಗಮನಿಸಿದಂತೆ ಉಪನ್ಯಾಸಕ, ಪ್ರಾಧ್ಯಾಪಕ ಮುಂತಾದ ಹುದ್ದೆಗಳಿಗೆ ಬಡ್ತಿ ದೊರೆತು 1861ರಲ್ಲಿ ಹೆನ್ರಿ ಗ್ರೇ ಅಸಿಸ್ಟೆಂಟ್ ಸರ್ಜನ್ ಆದನು.

ಆದರೆ ತನ್ನ ಅಣ್ಣನ ಮಗನಿಗೆ ಮೈಲಿ ಬೇನೆ ಅಂಟಿದಾಗ ಹಗಲಿರುಳೆನ್ನದೆ ಅವನ ಶುಶ್ರೂಷೆ ಮಾಡಿದ ಹೆನ್ರಿ. ಅದಕ್ಕೆ ದೊರೆತ ಪ್ರತಿಫಲವೆಂದರೆ ಅವನಿಗೂ ಆ ಬೇನೆ ಅಂಟಿ ಅದರಿಂದಲೇ ಅಸುನೀಗಿದ-38ನೆಯ ವಯಸ್ಸಿನಲ್ಲಿ. ಅಂಗರಚನಾಶಾಸ್ತ್ರಕ್ಕೆ ಸುಭದ್ರ ಬುನಾದಿಯೊದಗಿಸಿದ ಹೆನ್ರಿ ಗ್ರೇ ಇಂತು ವಿಧಿವಶನಾದರೂ ಅವನು ಮೂಲತಃ 'ಅನಾಟಮಿ'ಯನ್ನು ಬರೆದಾಗ ಬರಿ 750 ಪುಟಗಳ ಗ್ರಂಥವಾಗಿದ್ದರೆ ಈಗದು 1578 ಪುಟಗಳ ಬೃಹದ್ಗ್ರಂಥ. ಅವನ ಹೆಸರನ್ನು ಅಮರವಾಗಿಸಿದ ಕೃತಿಯಿದು. ●

ವಲ್ಲಿಯೂ ಅವರು ಸಫಲರಾದರು. ಆದರೆ ಎಪ್ಪತ್ತು ಮಿಕ್ಕಿದ ಶಿಕ್ಷಣಾಧಿಕಾರಿ ಶ್ರೀ ಸೊಹೊನಿ ಯವರಿಗೆ ಅಷ್ಟರಿಂದ ತೃಪ್ತಿಯಾಗಲಿಲ್ಲ. ದೇಹ ದಾನವೇ ಏಕೆ ಎಂಬ ಬಗ್ಗೆ ನಾಡಿನ ಜನತೆ ಯಲ್ಲಿ ಸರಿಯಾದ ಅರಿವು ಮೂಡಬೇಕೆಂದು ಅವರು ಒಂದು ಆಂದೋಲನವನ್ನೇ ಪ್ರಾರಂಭಿಸಿದ್ದಾರೆ.

ಪುಣೆಯಲ್ಲಿ ಟಿಳಕ ಆಯುರ್ವೇದ ಮಹಾ ವಿದ್ಯಾಲಯವೆಂಬ ಇನ್ನೊಂದು ವೈದ್ಯವಿದ್ಯಾಲಯವೂ ಇದೆ. ಆ ವಿದ್ಯಾಲಯ ಸೊಹೊನಿ ಯವರೊಂದಿಗೆ ಅರ್ಥಪೂರ್ಣ ರೀತಿಯಲ್ಲಿ ಸಹಕರಿಸುತ್ತಿದೆ. ಈ ಸಂಯುಕ್ತ ಪ್ರಯತ್ನದ ಫಲವಾಗಿ 'ಮರಣೋತ್ತರ ದೇಹದಾನ-ಯಾಕೆ ಮತ್ತು ಹೇಗೆ?' ಎಂಬ ಚಿಕ್ಕ ಪುಸ್ತಿಕೆಯೇ ಮರಾಠಿಯಲ್ಲಿ ಹೊರಬಂದಿದೆ. ಅಲ್ಲದೆ ಬೇರೆ ಬೇರೆ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವ ಮೂಲಕ ಹಾಗೂ ಕರೆದಲ್ಲಿ ಹೋಗಿ ಭಾಷಣ ಮಾಡುವುದರ ಮೂಲಕ ಈ ಬಗ್ಗೆ ಜನರಲ್ಲಿ ಜಾಗೃತಿಯುಂಟು ಮಾಡಲು ಶ್ರೀ ಸೊಹೊನಿ ಕಳೆದ ಎರಡು ವರ್ಷಗಳಲ್ಲಿ ತುಂಬ ಶ್ರಮಿಸಿದ್ದಾರೆ.

ಈ ಭೌತಿಕ ಶರೀರದ ಮೇಲೆ ಮನುಷ್ಯನಿಗೆ ಸ್ವಾಭಾವಿಕವಾಗಿಯೆ ಅಪಾರ ಮೋಹ. ಅದರೊಳಗಿನ ಪ್ರಾಣ ಹಾರಿಹೋದರೂ ಮೃತನ ಸಂಬಂಧಿಕರಿಗೆ ಅದನ್ನು ಗೌರವ ಪೂರ್ವಕ ಸಂಸ್ಕರಿಸುವ ಹಂಬಲ. ಕೆಲವರು ವಿಧ್ಯುಕ್ತವಾಗಿ ದಹನ ಮಾಡುತ್ತಾರೆ, ಹಲವರು ದಫನ ಮಾಡುತ್ತಾರೆ. ಆದರೆ ಋಗ್ವೇದದ 95ನೆಯ ಅಂತ್ಯೇಷ್ಟಿ ಸೂಕ್ತವನ್ನು ನೋಡಿ. ಅದು ಹೇಳುವುದು ಇಷ್ಟು: "ಮೃತ್ಯುವಿನ ನಂತರ ಮಾನವ ದೇಹದೊಳಗಿನಿಂದ ಆತ್ಮ ಹಾರಿಹೋಗಿಬಿಡುತ್ತದೆ. ಶೇಷವತ್ ಶರೀರ ಕಟ್ಟಿಗೆಯಂತಾಗಿಬಿಡುತ್ತದೆ. ಅನಂತರ ಅದರ ಬಗ್ಗೆ ಮೋಹ ಬೇಡ. ಅದರಲ್ಲಿ ಮಾನವೀಯ ಭಾವನೆಗಳಾವವೂ ಉಳಿದಿರುವುದೇ ಇಲ್ಲ. ಅದನ್ನು ನೀವು ನಿಮಗೆ ತೋಚಿದಂತೆ ಮುಗಿಸಿಬಿಡಬಹುದು", ಎನ್ನುವ ಈ ಸೂಕ್ತ ಇಂಥದೇ ರೀತಿಯಲ್ಲಿ ಸಂಸ್ಕಾರ ಮಾಡಬೇಕೆಂದು ವಿಧಿಸುವುದಿಲ್ಲ. ವೈದಿಕ ಧರ್ಮದ ಪ್ರಕಾರ ಜಡದೇಹಕ್ಕೆ ಅಗ್ನಿ ಸಂಸ್ಕಾರ ನೀಡ



"ಇವರು ಜೀವನದಲ್ಲಿ ಮಾಡಿದ ಒಂದೇ ಒಂದು ದೇಶ ಸೇವೆ ಅಂದ್ರೆ ರಾಜಕೀಯ ದಿಂದ ನಿವೃತ್ತಿ ಆಗಿದ್ದು."

ದಿದ್ದರೆ ಮೃತಾತ್ಮನು ಆ ಜಡ ದೇಹದ ಸುತ್ತಲೂ ತಿರುಗುತ್ತ ಉಳಿಯುತ್ತಾನಲ್ಲದೆ ಅವನಿಗೆ ಶಾಂತಿಯೂ ದೊರೆಯುವುದಿಲ್ಲ ಎಂಬ ಪ್ರಚಲಿತ ವಿಶ್ವಾಸದ ಬಗ್ಗೆ ಶ್ರೀ ಸೊಹೊನಿ ಪುಣೆಯಲ್ಲಿ ಗೀತಾಭಾಷ್ಯ ಮಾಡುತ್ತಿದ್ದ ವೇದಪಂಡಿತ ಶ್ರೀ ಮನೋಹರ ಹರಕರೆ ಯವರನ್ನು ಒಮ್ಮೆ ಕೇಳಿದರು. ಅಂಥ ನಂಬುಗೆಗೆ ಗೀತೆಯಲ್ಲಾಗಲಿ ನಾಲ್ಕು ವೇದಗಳಲ್ಲಾಗಲಿ ಯಾವುದೇ ಆಧಾರವಿಲ್ಲವೆಂದು ಉತ್ತರ ಬಂತು. ಶವವಿಚ್ಛೇದನ ಅಧರ್ಮೀಯವೇ ಎಂದು ಕೇಳಿದಾಗ ಅದು ರೂಢಿಗೆ ವಿರುದ್ಧವಾಗಿರಬಹುದು, ಅಧರ್ಮ ಮಾತ್ರ ಖಂಡಿತ ಅಲ್ಲವೆಂದು ಶ್ರೀ ಹರಕರೆ ಹೇಳಿದರು.

ಮೃತ ಶರೀರಗಳ ಬಗೆಗಿನ ಮೂಢ ಸಾಂಪ್ರದಾಯಿಕ ನಂಬಿಕೆಗಳು ಸಮಾಜದಿಂದ ಮಾಯವಾದರೆ ಮಾತ್ರ ಅವುಗಳ ಸದುಪಯೋಗ ಸಮಾಜಕ್ಕೆ ಆಗಬಹುದಾಗಿದೆ. ವೈದ್ಯ ವಿದ್ಯಾಲಯಗಳಿಗೆ ದೊರಕುವ ಬೇವಾರ್ಸಿ ಶವಗಳಲ್ಲಿ ಹೆಚ್ಚಿನವು ವಿಕೃತ ಅಂಗಾಂಗಗಳುಳ್ಳವೇ ಆಗಿರುವುದರಿಂದ ವೈದ್ಯ ವಿದ್ಯಾರ್ಥಿಗಳಿಗೆ ಅವುಗಳ ವಿಚ್ಛೇದನದಿಂದ ದೊರೆಯಬೇಕಾದ ಯಥಾರ್ಥಜ್ಞಾನವೂ ದೊರೆಯಲಿಕ್ಕಿಲ್ಲ. ಅವರಿಗೆ ಸಾಮಾನ್ಯವಾಗಿ, ಮರಣ ಆವರಿಸಿದ್ದೊಂದನ್ನು ಬಿಟ್ಟರೆ ಸದೃಢವೇ ಆಗಿ

ರುವ ಶರೀರಗಳು ದೊರೆತರೆ ಅವರ ಜ್ಞಾನವರ್ಧನೆಗೆ ಮಹತ್ವದ ಕೊಡುಗೆ ನೀಡಿ ದಂತಾಗುತ್ತದೆ.

ದಿll ವೀಣಾ ಮೆಹತಾರವರ ಮಾತಿನಲ್ಲೇ ಹೇಳುವುದಾದರೆ, "ನಾನು ಬದುಕಿದ್ದಾಗ ಲಂತೂ ನನ್ನಿಂದ ಸಮಾಜಕ್ಕೆ ಯಾವುದೇ ಉಪ ಯುಕ್ತ ಕಾರ್ಯ ಮಾಡಲು ಆಗಿಲ್ಲ, ಸತ್ತ ಮೇಲಾದರೂ ಯತ್ಕಿಂಚಿತ್ ಸೇವೆ ನನ್ನಿಂದ ಸಲ್ಲಲಿ." ಈ ಮಾತನ್ನು ಅವರು ತಮ್ಮ ಪತಿಗೆ ಮೇಲಿಂದ ಮೇಲೆ ಹೇಳುತ್ತಿದ್ದ ರಂತೆ.

ಶ್ರೀ ಜಿ.ಎಂ. ಸೊಹೊನಿ ಇಂದು ಮಹಾ ರಾಷ್ಟ್ರದಲ್ಲಿ ಆರಂಭಿಸಿರುವ ಆಂದೋಲನದ ಸಂದೇಶ ಇತರತ್ರ ಕೂಡ ವಿಸ್ತರಿಸಬೇಕು; ಜನ ಸತ್ತ ಮೇಲೂ ಬದುಕುವ ಮಾರ್ಗವಿದೆ ಯೆಂಬುದು ಜನಸಾಮಾನ್ಯರ ಮನದ ಮೇಲೆ ಅಚ್ಚೊತ್ತಿದ್ದಂತೆ ಮೂಡಬೇಕು. ●

(ಶ್ರೀ ಜಿ. ಎಂ. ಸೊಹೊನಿಯವರೊಂದಿಗೆ ಸಂಪರ್ಕ ಬೆಳೆಸಿ ಹೆಚ್ಚಿನ ವಿವರ ತಿಳಿಯಬಯಸುವವರು ಈ ಕೆಳಗಿನ ವಿಳಾಸಕ್ಕೆ ಮರಾಠಿ ಇಲ್ಲವೆ ಇಂಗ್ಲೀಷಿನಲ್ಲಿ ಬರೆಯಬಹುದು: ಶ್ರೀ ಜಿ.ಎಂ. ಸೊಹೊನಿ, 'ಪ್ರಫುಲ್ಲ', 759/33, ಡೆಕ್ಕನ್ ಜಿಮ್‌ಖಾನಾ, ಪುಣೆ-411 004.)

---

*ಮರ್ಮರಣಗಳ ಬಗ್ಗೆ ವಿಚಾರಣೆ ನಡೆಸುವ ನ್ಯಾಯಾಧಿಕಾರಿ. ಮುಂಬಯಿ ಕಲಕತ್ತೆಗಳಂಥ ಮಹಾನಗರಗಳಲ್ಲಿ ಈ ಹುದ್ದೆ ಚಾಲ್ತಿಯಲ್ಲಿದೆ.

*ತಮ್ಮ ಅಮೇರಿಕದ ಯಶಸ್ವಿ ಯಾತ್ರೆಯನ್ನು ಮುಗಿಸಿ ಕೊಂಡು ಸ್ವಾಮಿ ವಿವೇಕಾನಂದರು ತಾಯ್ನಾಡಿಗೆ ಮರಳಿದ ನಂತರ ರಾಮೇಶ್ವರದ ಸಂಸ್ಥಾನಿಕರ ಆಮಂತ್ರಣದ ಮೇರೆಗೆ ಅಲ್ಲಿಗೆ ಬಂದಾಗ ಅವರ ಮುಖದಿಂದ ಬಂದ ಉದ್ಗಾರವಿದು.

ಕರ್ನಾಟಕದಲ್ಲಿ...

ಮರಣೋತ್ತರ ದೇಹದಾನವನ್ನು ಕರ್ನಾಟಕದಲ್ಲೂ ಮಾಡಲು ಶಕ್ಯವೆ? ಶಕ್ಯವೆಂದು ಹೇಳ ಬೇಕು. ಆದರೆ ಕರ್ನಾಟಕದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಇದಕ್ಕಾಗಿ ಅವಕಾಶ ಕಲ್ಪಿಸಿಕೊಡ ಲಾಗಿದೆಯೇ ಎಂಬುದನ್ನು ಅರಿಯಲು 'ಕಸ್ತೂರಿ' ಮಾಡಿದ ಪ್ರಯತ್ನಕ್ಕೆ ದೊರೆತ ಫಲವಿಷ್ಟು: ನೇತ್ರ ದಾನ, ಮೂತ್ರಪಿಂಡ ದಾನಗಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಲಾಗಿದೆ. ಆದರೆ ಇಡೀ ಶರೀರ ದಾನದ ಕಲ್ಪನೆ ನಮ್ಮವರಿಗೆ ಬಂದಂತಿಲ್ಲ. ಮೂತ್ರ ಪಿಂಡದಂತಹ ಅಂಗಗಳನ್ನು ದಾನ ಮಾಡಬಯಸುವವರು ಒಂದು ಫಾರ್ಮು ತುಂಬಿ ಇಬ್ಬರು ಸಾಕ್ಷಿಗಳೆದುರು ರುಜು ಹಾಕಬೇಕಾಗು ವಂತೆ ಇಡೀ ಶರೀರದಾನ ಮಾಡಬಯಸುವವರು ಕೂಡ ಅದೇ ಫಾರ್ಮು ತುಂಬುವ ಮೂಲಕ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಬಹುದು. ಅದೇ ರೀತಿ ಮೃತ್ಯುಪತ್ರದ ಮೂಲಕವೂ ಇದನ್ನು ಸಾಧಿಸ ಬಹುದಾಗಿದೆ. ಆದರೆ ಮಹಾರಾಷ್ಟ್ರದಲ್ಲಿರುವ ಕಾನೂನಿನ ಮಾದರಿಯಲ್ಲೇ ಇಲ್ಲೂ ಒಂದು ಕಾನೂನಿರಬೇಕಾದ ಅಗತ್ಯವಿದೆ. ಅದಕ್ಕಾಗಿ ಕರ್ನಾಟಕದಲ್ಲಿ ಜನಾಭಿಪ್ರಾಯ ರೂಪುಗೊಳ್ಳಬೇಕು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಅಧ್ಯಕ್ಷರಾಗಿದ್ದ ಪಿ. ಕೋದಂಡ ರಾಯರು ಮರಣಾ ನಂತರ ತಮ್ಮ ಶರೀರವನ್ನು ವೈದ್ಯ ವಿದ್ಯಾಲಯಕ್ಕೆ ದಾನವಾಗಿ ಕೊಡಬಯಸಿ ತಮ್ಮ ಇಚ್ಛೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು ಕೂಡ. ಆದರೆ ಅವರ ನಿಧನಾ ನಂತರ ಅವರ ಮೃತದೇಹಕ್ಕೆ ಸಾಂಪ್ರ ದಾಯಕ ರೀತಿಯಲ್ಲಿ ಅಗ್ನಿಸಂಸ್ಕಾರ ನೀಡಲಾಯಿತು. ಅನಂತರ ಪ್ರಾಯಶಃ ಕರ್ನಾಟಕದಲ್ಲಿ ಈ ಕುರಿತು ಪ್ರಸ್ತಾಪವೇ ಬಂದಿಲ್ಲ. ನಾವು 'ಹಿಂದುಳಿದವರು' ಅಲ್ಲವೆ? ●

ನಿಮ್ಮ ಶಬ್ದ ಭಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ರುಗ್ಣ
   ಅ) ಮುರಿದದ್ದು
   ಆ) ಮುಳುಗಿದ್ದು
   ಇ) ವಿರುವವ
   ಈ) ರೋಗ ಪೀಡಿತ

2. ವಿಚಲಿತ
   ಅ) ಅಡಗಿದ
   ಆ) ಹಬ್ಬಿದ
   ಇ) ಚಿಂತಿತ
   ಈ) ಅಲುಗಿದ

3. ಗವಾಕ್ಷ
   ಅ) ಹೋರಿ
   ಆ) ಕಿಟಕಿ
   ಇ) ಉಬ್ಬಿದ ಕಣ್ಣುಳ್ಳವ
   ಈ) ವಿಷ್ಣು

4. ಚತುಷ್ಕ
   ಅ) ಗಣಪತಿ
   ಆ) ನಾಲ್ವರ ಗುಂಪು
   ಇ) ಕುಶಲತನ
   ಈ) ಮುಸಲ್ಮಾನ

5. ಅಳವಳಿ
   ಅ) ಬಲಗುಂದು
   ಆ) ಬಲಗೊಳ್ಳು
   ಇ) ಗೋಳಾಡುವ ಸ್ವಭಾವದವ
   ಈ) ಸಮುದ್ರ ದಂಡೆ

6. ಆಯತಿಕೆ
   ಅ) ಮರ್ಜಿ
   ಆ) ಕಟ್ಟಡದ ನಕ್ಷೆ
   ಇ) ಪ್ರಭಾವ
   ಈ) ಕೂಡಿರುವಿಕೆ

7. ಎಗ್ಗ
   ಅ) ಹಾವು
   ಆ) ಸಾಮರ್ಥ್ಯವುಳ್ಳವ
   ಇ) ದಡ್ಡ
   ಈ) ಯಕ್ಷ

8. ಗೀರ್ವಾಣ
   ಅ) ದೇವತೆ
   ಆ) ಕುದುರೆಯ ಜೀನು
   ಇ) ಹಾಳು ಮಾಡುವಿಕೆ
   ಈ) ವ್ಯಾಕರಣ

9. ಗರ್ನಾಲು
   ಅ) ಸಿಡಿಮದ್ದಿನ ಚಿಕ್ಕ ಗೋಳ
   ಆ) ಕಾಲುವೆ
   ಇ) ಕಣಿವೆ
   ಈ) ಕೀಳು ನಡತೆ

10. ಕ್ಲಿಷ್ಟ
   ಅ) ಕೋಪಿಷ್ಠ
   ಆ) ಕಷ್ಟಕರ
   ಇ) ಮೋಸ ಹೋದವ
   ಈ) ಶ್ರೇಷ್ಠ

11. ಎತ್ತುಗಡೆ
   ಅ) ನೀರು ಎತ್ತುವ ಯಂತ್ರ
   ಆ) ಜೋಡೆತ್ತಿನ ಗಾಡಿ
   ಇ) ಏರ್ಪಾಡು
   ಈ) ಯಶಸ್ಸು

12. ಕಿಳಿರು
   ಅ) ಕುಣಿ
   ಆ) ಸಾಯು
   ಇ) ಬಂಜರುನೆಲ
   ಈ) ಕೆರಳು

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ರುಗ್ಣ

ಈ) ರೋಗ ಪೀಡಿತ, ಅಸ್ವಾಸ್ಥ್ಯ ಹೊಂದಿದ. ಉದಾ: ರುಗ್ಣಾವಸ್ಥೆಯಲ್ಲಿಯೂ ಕೆಲಸ ಮಾಡುತ್ತಿದ್ದ (ಸಂ)

2. ವಿಚಲಿತ

ಈ) ಅಲುಗಿದ, ಅಸ್ಥಿರಗೊಂಡ. ಉದಾ: ಯಾವ ವಿಪತ್ತಿನಿಂದಲೂ ವಿಚಲಿತನಾಗಲಿಲ್ಲ. (ಸಂ. ವಿ=ವಿಶೇಷವಾಗಿ+ಚಲಿತ= ಸ್ಥಳ ತಪ್ಪಿದ)

3. ಗವಾಕ್ಷ

ಅ) ಗಾಳಿ ಬೆಳಕಿಗಾಗಿ ಇರುವ ಕಿಡಿಕಿ, ಕಿಂಡಿ, ಬೆಳಕಿಂಡಿ. ಉದಾ: ಗವಾಕ್ಷದಿಂದ ಹೆಂಗಸರು ನೋಡುತ್ತಿದ್ದರು. (ಸಂ)

4. ಚತುಷ್ಕ

ಅ) ನಾಲ್ಕರ ಗುಂಪು ಚತುಷ್ಟಯ. ಉದಾ: ಬಾಹು ಚತುಷ್ಕ=ನಾಲ್ಕು ಕೈಯ (ಸಂ.ಚತು: =ನಾಲ್ಕು+ಕ)

5. ಅಳವಳಿ

ಅ) ಬಲಗುಂದು, ಶಕ್ತಿ ಕಳೆದುಕೋ. ಉದಾ: ಅಳವಳಿದು ಉರುಳಿದನು. (ದೇಶ್ಯ.ಅಳವು= ಶಕ್ತಿ+ಅಳಿ=ನಾಶವಾಗು)

6. ಆಯತಿಕೆ

ಇ) ಪ್ರಭಾವ, ಘನತೆ, ಅತಿಶಯ, ಸಾಮರ್ಥ್ಯ. ಉದಾ: ನಿನ್ನಾಯತಿಕೆಯನ್ನು ಬಲ್ಲೆ (ಸಂ. ಆಯತಿ=ಸಾಮರ್ಥ್ಯ, ವಿಶಾಲತೆ+ಕನ್ನಡ-ಕೆ)

7. ಎಗ್ಗ

ಇ) ದಡ್ಡ, ಹೆಡ್ಡ, ಗಾಂಪ. ಉದಾ: ಎಗ್ಗನ ಹಾಗೆ ವರ್ತಿಸುತ್ತಾನೆ (ದೇಶ್ಯ-ತೆಲುಗು- ಎಗ್ಗು)

8. ಗೀರ್ವಾಣ

ಅ) ದೇವತೆ, ಅಮರ, ಸುರ. ಉದಾ: ಗೀರ್ವಾಣರೂ ಸೋಜಿಗಪಟ್ಟರು (ಸಂ)

9. ಗರ್ನಾಲು

ಅ) ಉತ್ಸವ ಮೊದಲಾದ ಪ್ರಸಂಗದಲ್ಲಿ ಹಾರಿಸುವ ಸಿಡಿಮದ್ದಿನ ಉಂಡೆ. ಉದಾ: ಮೆರವಣಿಗೆ ಹೊರಡುವಾಗ ಗರ್ನಾಲು ಹಾರಿಸಿದರು. (ಹಿಂದೀ ಗರನಾಲ್-ಚಿಕ್ಕ ತೋಫಿನ ಗುಂಡು)

10. ಕ್ಲಿಷ್ಟ

ಅ) ಕಷ್ಟಕರ, ತೊಡಕಾದ, ಕಠಿನ. ಉದಾ: ಕ್ಲಿಷ್ಟವಾದ ಸಮಸ್ಯೆ (ಸಂ)

11. ಎತ್ತುಗಡೆ

ಇ) ಏರ್ಪಾಡು, ವ್ಯವಸ್ಥೆ, ಪ್ರಯತ್ನ. ಉದಾ: ಸಮಾರಂಭದ ಎತ್ತುಗಡೆ ಪ್ರಾರಂಭವಾಗಿದೆ (ದೇಶ್ಯ. ಎತ್ತು=ಆರಂಭಿಸು+ಕಡೆ)

12. ಕಿಳಿರು

ಈ) ಕೆರಳು, ಸಿಟ್ಟಾಗು, ನಿಮಿರಿ ನಿಲ್ಲು. ನಿಗುರು. ಉದಾ: ಕಿಳಿರಿದ ಹೆಂಡತಿ (ದೇಶ್ಯ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯಿದ್ದರೆ	...	ಸಾಧಾರಣ
9-10 "	...	ಉತ್ತಮ
11-12 "	...	ಅತ್ಯುತ್ತಮ

ಕಸ್ತೂರಿ ನಡೆದುಬಂದದಾರಿ

• ಶ್ರೀನಿವಾಸ ಹಾವನೂರ •

ಅಪರಾಧ ವಿಜ್ಞಾನಕ್ಕೆ ದೇವರಿತ್ತ ಕಾಣಿಕೆ

ಈ ಎಡಗೈ ಹೆಬ್ಬೆಟ್ಟಿನ ಗುರುತು!

ದಯವಿಟ್ಟು ನಿಮ್ಮ ಅಂಗೈಯನ್ನು ತೆರೆದು ಸ್ವಲ್ಪ ನೋಡಿಕೊಳ್ಳುವಿರಾ? ಅದೆಷ್ಟೊಂದು ರೇಖೆಗಳು, ಗೀರುಗಳಿಂದ ತುಂಬಿಹೋಗಿದೆಯಲ್ಲವೆ? ಅಂಗೈಯಲ್ಲಿಯ ರೇಖೆಗಳಿಂದ ನಮ್ಮ ಭವಿಷ್ಯವನ್ನು, ಹಸ್ತಸಾಮುದ್ರಿಕ ಬಲ್ಲವರು ಬಹು ಚೆನ್ನಾಗಿ ಹೇಳಬಲ್ಲರು. ನಮ್ಮ ಪೂರ್ವಜರು ಆ ರೀತಿಯಾಗಿ ಅಂಗೈಯ ಗೆರೆಗಳ ಉಪಯೋಗವನ್ನು ಮಾಡಿಕೊಂಡಿದ್ದಾರೆ.

ಹಾಗೆಯೇ ಬೆರಳಿನ ತುದಿಗಳನ್ನೂ ತುಸು ನೋಡಿಕೊಳ್ಳಿರಿ. ಅಲ್ಲಿಯೂ ಸಣ್ಣ ಗೆರೆಗಳಿವೆ. ಆದರೆ ಚೆನ್ನಾಗಿ ಎದ್ದು ಕಾಣಲಿಕ್ಕಿಲ್ಲ. ಚಿಂತೆಯಿಲ್ಲ. ಸುಣ್ಣದ ಗೋಡೆಗೆ ಬೆರಳಿನ ತುದಿಗಳನ್ನು ಸ್ವಲ್ಪ ತಿಕ್ಕಿ ನೋಡಿರಿ. ಈಗ ಚೆನ್ನಾಗಿ ಎದ್ದು ಕಾಣಬಲ್ಲವು. ಈ ವಿಶಿಷ್ಟ ಗೆರೆಗಳನ್ನು ದೇವರು ಅದೇಕೆ ಕೊಟ್ಟಿರಬಹುದು? ಮನುಷ್ಯನ ದೇಹದ ಪ್ರತಿಯೊಂದು ಅಂಗಾಂಗದ ಪ್ರಯೋಜನವನ್ನು ಹೇಳಬಹುದು. ಆದರೆ ಸೃಷ್ಟಿ ನಿಯಾಮಕನು ಈ ಅಸಂಖ್ಯ ಜಿನುಗು ಗೆರೆಗಳನ್ನು ಕೈಬೆರಳಿನ ತುದಿಗಳಲ್ಲಿ ಅದೇಕೆ ಕೊಟ್ಟಿದ್ದಾನೆ ಎಂಬುದು ಮಾತ್ರ ತಿಳಿದಿಲ್ಲ. ನಮ್ಮ ಪೂರ್ವಜರು ಹಸ್ತಸಾಮುದ್ರಿಕ ಶಾಸ್ತ್ರದಲ್ಲಿ ಇವುಗಳನ್ನು ತಿಳಿಯುವ ಪ್ರಯತ್ನ ಮಾಡಿದರು. ಈ ಗೆರೆಗಳ ಲಕ್ಷಣಗಳ ಮೇಲಿಂದ ಶಂಖ, ಚಕ್ರ ಎಂಬೆರಡು ಬಗೆಯಾಗಿರುತ್ತವೆಂದು ಹೇಳಿದರು. ಮತ್ತು ಯಾವ ಅಂತಃಪ್ರೇರಣೆಯಿಂದಲೋ-

"ಏಕಚಕ್ರೀ ಮಹಾಯೋಗಿ....
ಚತುಶ್ಚಕ್ರೀ ದರಿದ್ರಃ"

-ಇತ್ಯಾದಿ ನಿಶ್ಚಿತಾರ್ಥವನ್ನು ಹೇಳಿದರು. ಇದರ ಮುಂದೆ ಅವರ ದಾರ್ಶನಿಕ ಬುದ್ಧಿ ಓಡಲಿಲ್ಲ.

ವ್ಯಾವಹಾರಿಕ ಜಗತ್ತಿನಲ್ಲಿ ಮಾತ್ರ ಈ ಕೈಬೆರಳಿನ ಗೆರೆಗಳ ಉಪಯೋಗವನ್ನು ಅತ್ಯದ್ಭುತ

1958ರ ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾದದ್ದು

ರೀತಿಯಲ್ಲಿ ಮಾಡಿಕೊಂಡದ್ದಾಗಿದೆ. ಸಹಿ ಮಾಡಲಿಕ್ಕೆ ಬಾರದವರಿಂದ ಪುರಾವೆಯೆಂಬುದಾಗಿ ನಾವು ಎಡಗೈ ಹೆಬ್ಬೆರಳಿನ ಗುರುತನ್ನು ಕಾಗದದ ಮೇಲೆ ಪಡೆಯುತ್ತೇವೆ. ಆದರೆ ಸಹಿಗಿಂತಲೂ ಹೆಚ್ಚು ವಿಶ್ವಾಸಾರ್ಹವಾದದ್ದೆಂದರೆ ಈ ಬೆರಳ ಗೆರೆಗಳ ಗುರುತು ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಒಬ್ಬರು ಸಹಿ ಮಾಡಿದ ಹಾಗೆ ಇನ್ನೊಬ್ಬರು ಅನುಕರಿಸುವ ಚತುರರು ಅಸಂಖ್ಯರಿದ್ದಾರೆ. ಆದರೆ ಒಬ್ಬರ ಕೈ ಬೆರಳಿನ ಗುರುತುಗಳಂತೆಯೇ ಇನ್ನೊಬ್ಬರದು ಇರುವುದಿಲ್ಲ. ಇಡೀ ಜಗತ್ತಿನಲ್ಲಿ ಇದುವರೆಗೆ ತೆಗೆದುಕೊಂಡ ಇಂಥ ಮುದ್ರೆಗಳನ್ನು ಹೋಲಿಸಿ ನೋಡಿದರೂ ಕಂಡುಬಂದಿಲ್ಲ! ಕೋಟ್ಯನುಕೋಟಿ ಜನಸಮುದಾಯದಲ್ಲಿ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬರಿಂದ ಬೇರ್ಪಡಿಸುವ ಹಾಗೂ ಗುರುತಿಸುವ ಏಕಮೇವ ನಿಶ್ಚಿತ ಸಾಧನವೆಂದರೆ ಇದೇ ಆಗಿದೆ.

ಇಂದಿನ ನಾಗರಿಕ ಯುಗದಲ್ಲಿ ಒಬ್ಬ ವ್ಯಕ್ತಿ ಇವನೇ ಎಂದು ಖಚಿತವಾಗಿ ಹೇಳಿ ಗುರುತಿಸಬೇಕಾದ ಪ್ರಸಂಗಗಳು ಅನೇಕವಾಗಿರುತ್ತವೆ. ಹಿಂದೆಯೂ ಅಂಥ ಪ್ರಸಂಗ ಬರುತ್ತಿತ್ತು.

ಉದಾಹರಣೆಗಳನ್ನು ತೆಗೆದುಕೊಳ್ಳೋಣ. 100 ವರ್ಷಗಳ ಹಿಂದಿನ ಮಾತು. ಒಬ್ಬ ಮನುಷ್ಯನಿಗೆ 55 ವರ್ಷ ನೌಕರಿ ಮಾಡಿದ ಮೇಲೆ ಪೆನ್‌ಷನ್ ಆಯಿತು. ಆತ 56ನೆಯ ವರುಷಕ್ಕೇ ತೀರಿಕೊಂಡನು. ಅವನ ಸಂಬಂಧಿಕರಿಗೆ ಅನಿಸಿತು- ವ್ಯರ್ಥವಾಗಿ ತಿಂಗಳೂ ಬರುತ್ತಿದ್ದ ಹಣ ಕೈಬಿಟ್ಟಿತಲ್ಲಾ ಎಂದು! ಪರಕೀಯ (?) ಸರಕಾರಕ್ಕೇಕೆ ಹಣ ಬಿಟ್ಟು ಕೊಡಬೇಕು ಎಂಬುದಾಗಿ ಯೋಚಿಸಿ, ಮತ್ತೊಬ್ಬ ಮುದುಕನನ್ನು ಟ್ರೆಜರಿಗೆ ಕಳುಹಿಸತೊಡಗಿದರು. ಈ ಮುದುಕ, ಪಿಂಚಣಿದಾರ ಮುದುಕನಲ್ಲ ಎಂದು ಹೇಳುವುದು ಹೇಗೆ?

ನೂರು ವರ್ಷ ಬೇಡ, ಮೂವತ್ತು ವರ್ಷದ ಹಿಂದಿನಷ್ಟು ದಿನಗಳಿಗೆ ಬರೋಣ. ಸ್ಥಳ: ಅಮೇರಿಕೆಯಲ್ಲಿಯ ಒಂದು ದೊಡ್ಡ ಹೆರಿಗೆಯ ಆಸ್ಪತ್ರೆ. ದಿನಕ್ಕೆ ಏನಿಲ್ಲೆಂದರೂ ದಿನಕ್ಕೆ ನೂರು ನೂರಿಪ್ಪತ್ತು ಜನನಗಳಾಗುತ್ತಿದ್ದವು. ಅದನ್ನು ನೋಡಿಕೊಳ್ಳುವ ದಾದಿಯರಿಗೆ ಸಾಮೂಹಿಕವಾಗಿ ಅವುಗಳ ಉಪಚಾರ ಮಾಡುವಾಗ, ಈ ಒಂದು ಮಗು ಇಂಥ ಹೆಣ್ಣು ಮಗಳದೇ ಎಂದು ಖಚಿತವಾಗಿ ಹೇಳುವ ಬಗೆ ಹೇಗೆ? ಯಾರದೋ ಮಗುವನ್ನು ಯಾರಿಗೋ ಬಿಟ್ಟು ಕೊಟ್ಟರೆ ಗತಿಯೇನು? ತಾಯಂದಿರೇ ತಕರಾರು ಮಾಡುತ್ತಲೂ, ಈ ಅದಲು ಬದಲನ್ನು ತಪ್ಪಿಸುವುದಕ್ಕಾಗಿ, ಹುಟ್ಟಿದ ಕೂಡಲೇ ಎಲ್ಲಾ ಶಿಶುಗಳ ಕೈಬೆರಳಿನ ಗುರುತುಗಳನ್ನು ತೆಗೆದಿಟ್ಟುಕೊಳ್ಳುವುದು ಅಗತ್ಯವಾಗಿ ಕಂಡಿತು.

ಇನ್ನು ಪೊಲೀಸು ಖಾತೆಯವರು ಕೈಬೆರಳಿನ ಗುರುತಿನ ಸಹಾಯದಿಂದ ಕಳ್ಳತನ, ಖೂನಿ ಕೇಸುಗಳ ಪತ್ತೆ ಹಚ್ಚುವರೆಂಬುದು ಎಲ್ಲರಿಗೂ ತಿಳಿದ ಮಾತಾಗಿದೆ. ನಮ್ಮಲ್ಲಿ ಇದು ಅಷ್ಟಾಗಿ ಬೆಳೆದು ಬರದಿದ್ದರೂ, ಇತರ ಮುಂದುವರೆದ ದೇಶಗಳಲ್ಲಿ ಇದೇ ಪ್ರಮುಖ ಸಾಧನವಾಗಿದೆ. ಇಷ್ಟೇ, ಪೊಲೀಸಿನವರಿಗಷ್ಟೇ ಅಲ್ಲ, ಇತರ ವ್ಯವಹಾರಗಳಿಗೂ ಕೈಬೆರಳಿನ ಮುದ್ರೆಯ ಅಗತ್ಯವಿದೆಯೆಂಬುದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕಾಗಿದೆ.

ಔದ್ಯೋಗಿಕ ಕ್ರಾಂತಿಯಾಗಿ, ನಮ್ಮ ನಾಗರಿಕತೆಯು ಮುಂದುವರಿದಂತೆ, ವ್ಯಕ್ತಿ ವ್ಯಕ್ತಿಗಳಲ್ಲಿ ಪ್ರತ್ಯೇಕತೆಯನ್ನು ಸಾಧಿಸುವುದಕ್ಕೂ, ಮೋಸಗಾರಿಕೆಯನ್ನು ತಪ್ಪಿಸುವುದಕ್ಕೂ ಏನಾದರೊಂದು ಸಾಧನವನ್ನು ಕಂಡುಹಿಡಿಯುವುದು ಅಗತ್ಯವೆನಿಸತೊಡಗಿತು. ಫ್ರಾನ್ಸಿನ ಬರ್ಟಿಲೋನ್ ಎಂಬ ಶರೀರ ಶಾಸ್ತ್ರಜ್ಞನು ಮನುಷ್ಯನ ದೇಹದ ಕೆಲವು ಎಲುಬಿನ ಭಾಗಗಳು ಮೊದಲಿನಿಂದ ಕೊನೆಯವರೆಗೂ ಬದಲಾಗದೇ ಉಳಿಯುತ್ತವೆಂಬುದನ್ನು ಕಂಡುಕೊಂಡವನಾಗಿ, ಅವುಗಳ ಅಳತೆಗಳನ್ನು ತೆಗೆದುಕೊಂಡು, ಈ ಮನುಷ್ಯ ಇಂಥವನೇ, ಬೇರೊಬ್ಬನಲ್ಲ ಎಂದು ಸಿದ್ಧಪಡಿಸುವುದರ ಸಾಧ್ಯತೆಗಳನ್ನು ತೋರಿಸಿಕೊಟ್ಟನು. ಅವನ ಸಂಶೋಧನೆಯ ಸಾಹಸವನ್ನು ಯಾರೂ ಮೆಚ್ಚಬೇಕು. ಆದರೆ ಅದರ ಕಾರ್ಯಾಚರಣೆಯಲ್ಲಿ ಮಾತ್ರ ನಿಶ್ಚಿತತೆಯ ಗ್ಯಾರಂಟಿ ಇರಲಿಲ್ಲ. ಅಳತೆ ತೆಗೆದುಕೊಳ್ಳುವುದರಲ್ಲಿಯೇ ಹೆಚ್ಚು ಕಡಿಮೆಯಾಗಿಬಿಟ್ಟರೆ, ಈ ವಿಧಾನವು ಅಯಶಸ್ವಿಯಾಗುತ್ತಿತ್ತು.

ಪರ್ಕಿಂಜೆ ಎಂಬುವನಿಗೆ ಮಾತ್ರ, ಕೈಬೆರಳಿನ ಗೆರೆಗಳು ಈ ಕಾರ್ಯವನ್ನು ಸಾಧಿಸಬಲ್ಲವು

ಎಂಬುದರ ಮನವರಿಕೆಯಾಯಿತು. ಅಸಂಖ್ಯ ಜನರ ಕೈಬೆರಳುಗಳ ಗುರುತನ್ನು ತೆಗೆದುಕೊಂಡು ಅವುಗಳ ಅಭ್ಯಾಸವನ್ನು ಮಾಡಿ, 1823ರಲ್ಲಿ ಅವುಗಳಲ್ಲಿ ಒಂಭತ್ತು ಸಾಮಾನ್ಯ ವರ್ಗಗಳನ್ನು ಕಲ್ಪಿಸಿದನು. ಆಗ ಯಾರೂ ಇದಕ್ಕೆ ಯಾವುದೇ ರೀತಿಯ ಪುರಸ್ಕಾರವನ್ನು ಕೊಡಲಿಲ್ಲ.

ಮುಂದೆ, ಕೈಬೆರಳಿನ ಗುರುತುಗಳ ವ್ಯಾವಹಾರಿಕ ಉಪಯೋಗದ ಕಲ್ಪನೆಯು, ನಮ್ಮ ಭಾರತದಲ್ಲಿಯೇ ಉಗಮವಾಯಿತೆಂಬುದು ಒಂದು ಮಹತ್ವದ ಸಂಗತಿಯಾಗಿದೆ. ಹಾಗೆಂದು ವಿಶೇಷ ಅಭಿಮಾನಪಟ್ಟುಕೊಳ್ಳಬೇಕಾಗಿಲ್ಲ. ಏಕೆಂದರೆ, ಆಗಿನ ಕಾಲದಲ್ಲಿ ಅಂದರೆ 70-80 ವರ್ಷಗಳ ಹಿಂದಿನ ಕಾಲದ ನಮ್ಮ ಕೋರ್ಟು ಕಚೇರಿಗಳಲ್ಲಿ ನಮ್ಮ ಜನರ ಮೋಸಗಳನ್ನು ತಪ್ಪಿಸಲು ಏನು ಮಾಡಬೇಕೆಂಬುದು ಸಮಸ್ಯೆಯಾಯಿತು. ತಾವು ಬಿಳಿಯರಾಗಿದ್ದು, ಜನತೆಯಿಂದ ದೂರ ನಿಂತುಕೊಂಡು ರಾಜ್ಯಭಾರ ನಡೆಸುತ್ತಿರುವಾಗ, ಅವರಿಗೆ ದೇಶೀಯರ ಕುಲಗೋತ್ರ ಪರಿಚಯವಿರುವುದು ಅಶಕ್ಯಕೋಟಿಯ ಮಾತಾಗಿತ್ತು. ಯಾರಿಗೆ ಯಾರೋ ಬಂದು ನೋಂದಣಿಯ ಕಚೇರಿಯ ಕಾಗದ ಪತ್ರಗಳ ಮೇಲೆ ಸಹಿ ಮಾಡುತ್ತಿದ್ದರು. ಬೇರೊಬ್ಬರ ಆಸ್ತಿಯಲ್ಲಿ ಹಕ್ಕನ್ನು ಕೇಳುತ್ತಿದ್ದರು. ಸಾಲ ತೆಗೆದುಕೊಂಡವನು ತನ್ನ ಸಹಿಯನ್ನಿತ್ತಿದ್ದರೂ ಈ ಸಹಿ ತನ್ನದಲ್ಲ ಎಂದರೆ ಸಿದ್ಧಮಾಡುವುದು ಕೋರ್ಟುಗಳಿಗೆ ಕಠಿಣವಾಗತೊಡಗಿತು. ಪರೀಕ್ಷೆಗೆ ಕೂಡ್ರುವಾಗ ಒಬ್ಬರ ಹೆಸರಿನಲ್ಲಿ ಇನ್ನೊಬ್ಬರು ಹಾಜರಾಗುವುದು, ಆಗಿನ ಕಾಲದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದಿತಂತೆ.

ಹಾಗಾಗಿ ವಿಲಿಯಮ್ ಹರ್ಶಲ್ ಎಂಬ ಮ್ಯಾಜಿಸ್ಟ್ರೇಟನು ತನ್ನ ಅಧಿಕಾರದಲ್ಲಿರುವ ಎಲ್ಲ ಕೋರ್ಟು ಕಚೇರಿಗಳ ವ್ಯವಹಾರದಲ್ಲಿ, ಕೈಬೆರಳಿನ ಮುದ್ರೆಗಳನ್ನು ತೆಗೆದುಕೊಳ್ಳುವ ಪರಿಪಾಠವನ್ನಿಟ್ಟಿದ್ದನು. ಮತ್ತು ಅಂಥ ಮೋಸಗಳನ್ನು ತಡೆಯುವುದಕ್ಕೆ ಈ ಮಾರ್ಗವನ್ನು ಸಾರ್ವತ್ರಿಕವಾಗಿ ಬಳಸಬೇಕು ಎಂಬುದಾಗಿ 1858ರಲ್ಲಿ ಮಾನ್ಯ ಗವರ್ನರ್ ಜನರಲ್ಲರಿಗೆ ಮನವಿಯನ್ನು ಸಲ್ಲಿಸಿದನು. ಆಗಿನ ಭಾರತ ಸರಕಾರವು ತತ್ಕಾಲಕ್ಕೆ ಸುಮ್ಮನಿದ್ದಿತು. ಗಾಲ್ಟನ್ ಎಂಬಾತನು ಹರ್ಶಲ್ಲನ ಸೂಚನೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ವಿವೇಚಿಸಿ, ಕೆಲವು ಸಿದ್ಧಾಂತಗಳಿಗೆ ಬಂದು ಮುಟ್ಟಿದನು. ಅವಾವುವೆಂದರೆ-

1. ಕೈಬೆರಳಿನ ಗೆರೆಗಳು ಜನನಕಾಲದಿಂದ ಜೀವವಿರುವವರೆಗೆ ಎಷ್ಟು ಮಾತ್ರಕ್ಕೂ ಬದಲಾಗದೆ ಹಾಗೆಯೇ ಉಳಿಯುವುವು. ಜೀವವು ಹೋದ ಮೇಲೆ, ದೇಹವು ಉದೀರ್ಣವಾಗಿ ವಿಕಾರ ಹೊಂದುವವರೆಗೂ ಸಹಿತ ಹಾಗೆಯೇ ಉಳಿಯುವುವು.

2. ಒಬ್ಬರ ಕೈಬೆರಳಿನ ಗೆರೆಗಳ ರಚನೆ-ವಿನ್ಯಾಸಗಳಿರುವಂತೆ ಇನ್ನೊಬ್ಬರದು ಇರುವುದಿಲ್ಲ. ಅಷ್ಟೇ ಏಕೆ, ಒಬ್ಬನೇ ವ್ಯಕ್ತಿಯಲ್ಲಿ ಒಂದು ಬೆರಳಿನ ಗೆರೆಗಳು ಇನ್ನೊಂದು ಬೆರಳಿನವುಗಳನ್ನು ಹೋಲುವುದಿಲ್ಲ. ಅವಳಿ ಮಕ್ಕಳ ಬೆರಳ ಗೆರೆಗಳನು ಸಹಿತ ಪರಿಶೀಲಿಸಿ ನೋಡಿದಾಗಲೂ ಸಾಮ್ಯದ ಲವಲೇಶವೂ ಕಂಡುಬರಲಿಲ್ಲ.

3. ಈ ಬೆರಳಿನ ಗೆರೆಗಳಲ್ಲಿ ಸಾಮಾನ್ಯವಾಗಿ ಮೂರು ಪ್ರಕಾರಗಳನ್ನು ಮಾಡಬಹುದು. ಅವುಗಳಲ್ಲಿ ಮತ್ತೆ ಉಪಪ್ರಕಾರಗಳನ್ನು ಮಾಡಿ ಸಾವಿರಾರು ಬೆರಳುಗಳ ಮುದ್ರೆಗಳಿರುವಲ್ಲಿ ಅವನ್ನು ವರ್ಗೀಕರಿಸಿ, ಪ್ರತ್ಯೇಕಿಸಬಹುದು.

ಹೀಗೆ ಗಾಲ್ಟನ್ನನೇ ಇಂದು ಬಳಕೆಯಲ್ಲಿರುವ ಬೆರಳ ಗುರುತಿನ ಶಾಸ್ತ್ರದ ಜನಕನೆನ್ನಬಹುದು. 1897ರಲ್ಲಿ ಭಾರತ ಸರ್ಕಾರವು ಈ ವಿಧಾನಕ್ಕೆ ತನ್ನ ಮನ್ನಣೆಯನ್ನು ಕೊಟ್ಟಿತು. ಈ ಶಾಸ್ತ್ರವು ನಮ್ಮ ದೇಶದಲ್ಲಿ ಉಗಮ ಹೊಂದಿದ್ದಂತೆ ಇದಕ್ಕೆ ಮನ್ನಣೆ ಕೊಟ್ಟುದರಲ್ಲಿಯೂ ಭಾರತ ಸರ್ಕಾರವೇ ಮೊದಲಿನದಾಗಿದೆ.

ಗಾಲ್ಟನ್ನನ ಕೆಲಸವನ್ನು ಬಂಗಾಲದ ಪೊಲೀಸ್ ಅಧಿಕಾರಿಯಾಗಿದ್ದ ಇ.ಆರ್. ಹೆನ್ರಿ ಎಂಬುವನು ಮುಂದುವರೆಸಿದನು. ಮತ್ತು ಭಾರತದಿಂದ ಇಂಗ್ಲೆಂಡಿಗೆ ಮರಳಿ ಹೋದ ಮೇಲೆ, ಅಲ್ಲಿಯೂ ಬಳಕೆಗೆ ತಂದನು. 1901ರಲ್ಲಿ ಇಂಗ್ಲೆಂಡಿನ ಸುಪ್ರಸಿದ್ಧ ಪೊಲೀಸು ಪಡೆಯಾದ ಸ್ಕಾಟಲಂಡ್ ಯಾರ್ಡ್‌ನಲ್ಲಿ ಇದು ಆಚರಣೆಗೆ ಬಂದಿತು. ಗಾಲ್ಟನ್ನನು ಭಾರತ (ಬಂಗಾಲ)ದಲ್ಲಿ ಕೈಬೆರಳಿನ ಮುದ್ರೆಗಳ ಸಂಗ್ರ

ಹದ ಬ್ಯೂರೋವನ್ನು ತೆರೆಯುವುದರಲ್ಲಿ ಮೊಟ್ಟ ಮೊದಲಿಗನಾಗಿದ್ದರೆ, ಹೆನ್ರಿಯು ಆ ಕೆಲಸವನ್ನು ಇಂಗ್ಲೆಂಡಿನಲ್ಲಿ ಮಾಡಿದನು. ಅವನಿಂದಲೇ ಇದು ದೇಶ ವಿದೇಶಗಳಲ್ಲಿ ಹಬ್ಬಿ ಪ್ರಚಾರದಲ್ಲಿ ಬಂದಿತು. ಮತ್ತು ಸದ್ಯದ ಪ್ರಚಲಿತವಿರುವ ಶಾಸ್ತ್ರಕ್ಕೆ ಹೆನ್ರಿಯ ಪದ್ಧತಿಯೆಂದೇ ಹೆಸರು ಇದ್ದಿತು.

ಮನುಷ್ಯನ ಬೆರಳುಗಳಲ್ಲಿರುವ ಗೆರೆಗಳು, ಶಿಶುವು ಗರ್ಭದಲ್ಲಿರುವಾಗಲೇ ಸುಮಾರು ನಾಲ್ಕನೆಯ ತಿಂಗಳಲ್ಲಿ ಮೂಡುತ್ತವೆ. ಜನನವಾದ ಕೂಡಲೇ ನೋಡಿದಾಗಲೂ ಇವು ಸೂಕ್ಷ್ಮವಾಗಿ ಆದರೆ ಸ್ಫುಟವಾಗುತ್ತವೆ. ಮುಪ್ಪಿನ ಕಾಲದಲ್ಲಿ ಚರ್ಮವು ಸುಕ್ಕಾದಾಗ, ಗೆರೆಗಳು ಮಸುಕಾಗಬಹುದು. ಆದರೆ ಅವುಗಳ ರಚನೆಯು ಮಾತ್ರ ಬದಲಾಗುವುದಿಲ್ಲ. ಇನ್ನೇನು, ಒರಟು ರೀತಿಯಲ್ಲಿ ಕೈಬೆರಳುಗಳಿಂದ ಕೆಲಸ ಮಾಡುವವರ ಬೆರಳ ಗೆರೆಗಳು ಸವೆದಿರುತ್ತವೆ. ಬೆರಳುಗಳಿಗೆ ಏನಾದರೂ ಗಾಯವಾಗಿದ್ದರೆ ಆ ರೀತಿಯ ಅಡ್ಡ ಕೊರಕಲು ಈ ಗೆರೆಗಳ ಮೇಲೆ ಬಿದ್ದು, ಆ ಮಟ್ಟಿಗೆ ಗೆರೆಗಳು ಕಣ್ಮರೆಯಾಗಬಹುದು. ಆದರೆ ಗಾಯ ಮಾದ ಹಾಗೆ, ಅಥವಾ ಒರಟು ರೀತಿಯ ಕೈ ಕಸುಬನ್ನು ಬಿಟ್ಟ ಮೇಲೆ ಗೆರೆಗಳು ಮತ್ತೆ ಚಿಗುರಿಕೊಳ್ಳುತ್ತವೆ- ಮೊದಲಿನ ರೀತಿಯಲ್ಲಿಯೇ! ಮನುಷ್ಯ ಬಣ್ಣವು ಬದಲಾಗಬಹುದು ಕೂದಲುಗಳು ಉದುರಬಹುದು, ಅವಯವಗಳು ಹಿಗ್ಗಿ ಕುಗ್ಗಬಹುದು, ಬೆರಳಿನ ಗೆರೆಗಳು ಮಾತ್ರ ಸ್ಥಿರವಾಗಿ ಉಳಿಯುವುದರಿಂದಲೇ ಅವುಗಳಿಗೆ ಈ ಪರಿಯ ಮಹತ್ವವು ಬಂದಿದೆ.

ಕೈಬೆರಳಿನಲ್ಲಿಯ ಗೆರೆಗಳನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸುತ್ತಾರೆ. ಅವುಗಳಿಗೆ ಕಮಾನು (arch), ಶಂಖ (Loop), ಚಕ್ರ (whorl) ಮತ್ತು ಮಿಶ್ರ (composite) ಎಂದು ಹೆಸರಿಸಿದ್ದಾರೆ. ಇವುಗಳ ಲಕ್ಷಣಗಳನ್ನು ತಿಳಿಯುವುದಕ್ಕೆ ಮುಂಚೆ ಬೆರಳ ಗೆರೆಗಳಲ್ಲಿ, ಸಾಮಾನ್ಯವಾಗಿ ಎರಡು ನಿರ್ದಿಷ್ಟ ಬಿಂದುಗಳಿರುತ್ತವೆ, ಎಂಬುದನ್ನು ನೆನೆಯಬೇಕು. ಒಂದಕ್ಕೆ ಹೃದಯವೆಂದೂ (core), ಇನ್ನೊಂದಕ್ಕೆ ಮುಮ್ಮೂಲೆಯೆಂದೂ (Delta) ಹೆಸರು. ಇವುಗಳ ಸುತ್ತಮುತ್ತಲೂ ಗೆರೆಗಳು ಹರಿದಾಡುತ್ತವೆ. ಮತ್ತು ಗೆರೆಗಳ ಮುದ್ರೆಯನ್ನು ವಿಶ್ಲೇಷಿಸಿ, ಲಕ್ಷಣ ಹೇಳುವಾಗ ಇವುಗಳ ಸಹಾಯವನ್ನೇ ಹೆಚ್ಚಾಗಿ ಅವಲಂಬಿಸಲಾಗುತ್ತದೆ. (ಚಿತ್ರ 1).



ಚಿತ್ರ 1

ಮೇಲೆ ಹೇಳಿದ ನಾಲ್ಕೂ ಪ್ರಕಾರಗಳ ಲಕ್ಷಣಗಳನ್ನು ಚಿತ್ರಗಳನ್ನೂ ಈ ಕೆಳಗೆ ಕೊಟ್ಟಿದೆ:


1. ಕಮಾನು: ಕಮಾನಿನಲ್ಲಿ ಗೆರೆಗಳು ಒಂದು ಕೊನೆಯಿಂದ ಹೊರಟು, ನೇರವಾಗಿ ಇನ್ನೊಂದು ಕೊನೆಯನ್ನು ಸೇರುವುವು. ಇವುಗಳಿಗೆ ಸಾಮಾನ್ಯವಾಗಿ ಮುಮ್ಮೂಲೆ ಇರುವುದಿಲ್ಲ. ಇದ್ದಂತೆ ಕಂಡುಬಂದರೂ ಹೃದಯ ಬಿಂದು ಹಾಗೂ ಮುಮ್ಮೂಲೆಯ ಬಿಂದು ಇವುಗಳಿಗೆ ಯಾವ ಗೆರೆಯೂ ಅಡ್ಡ ಹಾಯುವುದಿಲ್ಲ. ಕಮಾನುಗಳಲ್ಲಿ ಎರಡು ಪ್ರಕಾರಗಳಿವೆ. ಒಂದು ಕೋಲು ಕಮಾನು, ಇನ್ನೊಂದು ಸಾದಾ ಕಮಾನು. (ಚಿತ್ರ 2)



ಚಿತ್ರ 2


2. ಶಂಖ: ಶಂಖ ಪ್ರಕಾರದಲ್ಲಿ ಹಲವು ಗೆರೆಗಳು ಒಂದು ಕಡೆಯಿಂದ ಹೊರಟು ಮೇಲಕ್ಕೆ ಹರಿದು, ಹೃದಯ ಹಾಗೂ ಮುಮ್ಮೂಲೆಯ ಬಿಂದುಗಳ ನಡುವೆ ಕೆಳಗಿಳಿಯುವವು. ಬೆರಳುಗಳಲ್ಲಿ 100ಕ್ಕೆ 60ರಷ್ಟು ಶಂಖಗಳೇ ಇವೆ. (ಇದು ಬೇರೊಂದು ರೀತಿಯಲ್ಲಿಯೂ ಅನ್ನ

ರ್ಥಕವಾಗಿದೆಯಲ್ಲವೆ!) ಮುಮ್ಮೂಲೆಯು ಹೃದಯದಿಂದ ಬಲಕ್ಕಿರುವುದೋ, ಎಡಕ್ಕಿರುವುದೊ ಎಂಬುದರ ಮೇಲಿಂದ, ಶಂಖಗಳಲ್ಲಿ, ಎಡಮುರಿ, ಬಲಮುರಿ ಎಂಬುದಾಗಿ ಎರಡು ಬಗೆಗಳಿವೆ. (ಚಿತ್ರ 3).



ಚಿತ್ರ 3

3. **ಚಕ್ರ:** ಇದರಲ್ಲಿ ಕೆಲವು ಗೆರೆಗಳು ಹೃದಯ ಬಿಂದುವನ್ನು ಬಳಸಿಕೊಂಡು ಒಂದು ಸುತ್ತು ಹಾಕುತ್ತವೆ. ಈ ರೀತಿ ಗೆರೆಗಳಿರುವ ಬೆರಳುಗಳಲ್ಲಿ ಯಾವಾಗಲೂ ಎರಡು ಮುಮ್ಮೂಲೆಗಳಿರುತ್ತವೆ. ಚಕ್ರಗಳು ಹೆಚ್ಚಾಗಿ ಅಂಡಾಕಾರದವಾಗಿರುತ್ತವೆ. (ಚಿತ್ರ 4).



ಚಿತ್ರ 4

4. **ಮಿಶ್ರ:** ಮೇಲಿನ ಮೂರೂ ಪ್ರಕಾರದ ಆಕೃತಿಗಳು ಇದರಲ್ಲಿ ಸೇರಿದ್ದು ನಿರ್ದಿಷ್ಟವಾಗಿ ಲಕ್ಷಣಗಳನ್ನು ಹೇಳಲಿಕ್ಕೆ ಆಗುವುದಿಲ್ಲವಾದ್ದರಿಂದ ಇವಕ್ಕೆ ಮಿಶ್ರವೆಂದು ಹೆಸರು. ಮಿಶ್ರಾಕೃತಿಗಳಲ್ಲಿ ಕನಿಷ್ಠ ಎರಡು ಮುಮ್ಮೂಲೆಗಳು ಇದ್ದೇ ಇರುತ್ತವೆ. ಮಿಶ್ರಗಳನ್ನು ಶಂಖಾವೃತ ಚಕ್ರ (Central Pocket) ಅವಳಿ ಜವಳಿ ಶಂಖ (Twinned Loop) ಪಾರ್ಶ್ವ ಶಂಖ (Lateral Pocket) ಮತ್ತು ಆಕಸ್ಮಿಕ (Accidental) ಎಂಬುದಾಗಿ ಪುನಃ ವಿಂಗಡಿಸಿದ್ದಾಗಿದೆ. (ಚಿತ್ರ 5).



ಚಿತ್ರ 5

ಈ ಆಕೃತಿಗಳನ್ನು ತಿಳಿದ ಮಾತ್ರಕ್ಕೆ, ಒಂದು ಮುದ್ರೆಯು ಇಂಥ ಒಂದು ಬೆರಳಿನದೇ ಎಂದು ಖಚಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ಈ ಮೊದಲು ತಿಳಿಯಪಡಿಸಿದಂತೆ, ಒಂದು ಬೆರಳಿನ ಗೆರೆಯಲ್ಲಿರುವ ಗೆರೆಗಳ ವಿನ್ಯಾಸವು ಇನ್ನೊಂದು ಬೆರಳಿಗೆ ಇರುವುದಿಲ್ಲವಷ್ಟೆ. ಗೆರೆಗಳ ಈ ವಿನ್ಯಾಸದ, ಲಕ್ಷಣಗಳನ್ನು ಗುರುತಿಸಲಿಕ್ಕೆ ಅರಿತರೆಯೆ, ಬೆರಳ ಮುದ್ರೆಯು ಶೋಧನೆಯ ಬಲ್ಲಿದ ನೆನಿಸಿಕೊಂಡಂತಾಗುವುದು.



ಚಿತ್ರ 6

ಈ ದೃಷ್ಟಿಯಿಂದ 6ನೆಯ ಚಿತ್ರವನ್ನು ತುಸು ಪರಿಶೀಲಿಸೋಣ. ಇದೊಂದು ಶಂಖಾಕೃತಿಯು. ಹೃದಯ ಹಾಗೂ ಮುಮ್ಮೂಲೆಗಳ ನಡುವೆ ಕೆಲವು ಗೆರೆಗಳು ಇಳಿದಿವೆ. ಓಗೆ ಇಳಿದ ಗೆರೆಗಳ ಸಂಖ್ಯೆ ಎಂಟು. ಆದುದರಿಂದ

ಇದಕ್ಕೆ ಎಂಟುಗೆರೆಯ ಶಂಖವೆಂದು ಹೆಸರು. ಈ ಎಂಟು ಗೆರೆಗಳಲ್ಲಿ ಮೊದಲಿನದು ಚಿಕ್ಕದಾಗಿದ್ದು, ಕಂಸಿನಾಕಾರದಲ್ಲಿದೆ. ಮೂರನೆಯ ಆರನೆಯ ಗೆರೆಗಳಲ್ಲಿ ನಡುವೆ ಸಣ್ಣ ನಡುಗಡ್ಡೆಗಳಾಗಿವೆ. 6 ಮತ್ತು 7 ಗೆರೆಗಳ ನಡುವೆ ಎರಡು ಚಿಕ್ಕ ಗೆರೆಯು ನೇರವಾದದ್ದಿದೆ ಇತ್ಯಾದಿ. ಇ ರೀತಿಯಾಗಿ ಪ್ರತಿಯೊಂದು ಬೆರಳಿನ ಲಕ್ಷಣಗಳನ್ನು ವಿವರವಾಗಿ ಪರಿಶೀಲಿಸುತ್ತಾ ಹೋದಂತೆ, ಅದು ಇತರ ಬೆರಳಿನ ಮುದ್ರೆಯ ಲಕ್ಷಣಗಳಿಂದ ಹಲವಾರು ರೀತಿಯಲ್ಲಿ ಭಿನ್ನವಾದುದೆಂದು ಕಂಡುಬರುತ್ತದೆ.

ಕೈಬೆರಳಿನ ಮುದ್ರೆಗಳನ್ನು ತೆಗೆದುಕೊಳ್ಳುವುದು ಅತ್ಯಂತ ಸುಲಭವಾಗಿದೆ. ಅದಕ್ಕೆ ಒಂದು ಗಾಜಿನ ಚೂರು, ಮುದ್ರಕರ ಮಸಿ ಮತ್ತು ಒಂದು ರೋಲರ್ ಇಷ್ಟಿದ್ದರೆ ಸಾಕು. ಆದರೆ ಅಪರಾಧ ಅಥವಾ ಗುನ್ಹೆಯು ಜರುಗಿದ ಸ್ಥಳದಲ್ಲಿಯ ಮುದ್ರೆಗಳನ್ನು ತೆಗೆದುಕೊಳ್ಳುವುದು ಕಷ್ಟದ ಕೆಲಸ. ಆ ಗುರುತುಗಳು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಅದಕ್ಕಾಗಿ ವಿವಿಧ ಬಗೆಯ ಪೌಡರುಗಳನ್ನು ಉದುರಿಸಿ, ಅದರ ಪ್ರತಿ-ಕೃತಿಯನ್ನು ತೆಗೆಯುತ್ತಾರೆ. ಈ ಜಟಿಲ ತಾಂತ್ರಿಕ ವಿಧಾನದಲ್ಲಿ ಬಹಳ ಪ್ರಗತಿಯಾಗಿದೆ.

ಕೈಬೆರಳಿನ ಮುದ್ರೆಗಳ ಸಹಾಯದಿಂದ ಅಪರಾಧಗಳನ್ನು ಪತ್ತೆ ಹಚ್ಚಲೇಬೇಕಾದರೆ ಮೊದಲು ಸಂಶಯಾಸ್ಪದ ವ್ಯಕ್ತಿಗಳ ಕೈಬೆರಳ ಮುದ್ರೆಗಳ ಬ್ಯೂರೋ ಇರಬೇಕಾಗುತ್ತದೆ. ಪ್ರತಿಯೊಂದು ದೇಶದಲ್ಲಿ, ಮತ್ತು ಭಾರತದ ಪ್ರತಿಯೊಂದು ರಾಜ್ಯದಲ್ಲಿ ಇಂಥ ಬ್ಯೂರೋಗಳಿವೆ. ಅಲ್ಲಿ, ಈ ಹಿಂದೆ ಶಿಕ್ಷೆಗೊಳಗಾದವರ, ಸಂದೇಹಾಸ್ಪದ ವ್ಯಕ್ತಿಗಳೆಲ್ಲರ ಕೈ ಬೆರಳ ಗುರುತುಗಳನ್ನು ಇಟ್ಟಿರುತ್ತಾರೆ. ಲಕ್ಷಗಟ್ಟಲೆ ಇರುವ ಇವುಗಳ ವರ್ಗೀಕರಣವೂ ಒಂದು ಮಹಾಶಾಸ್ತ್ರವಾಗಿ ಪರಿಣಮಿಸಿದೆ. ಪ್ರತಿಯೊಂದು ಕೈಬೆರಳಿನ ಗುರುತಿರುವ ಕಾಗದದ ಹಿಂದೆ, ಆ ವ್ಯಕ್ತಿಯ ಹೆಸರು, ದೆಸೆ, ಪೂರ್ವ ಕಥೆ ಇವನ್ನೆಲ್ಲಾ ಸ್ವಲ್ಪದರಲ್ಲಿ ಬರೆದಿಡುತ್ತಾರೆ.

ಈ ಗುರುತಿಗೆ ಒಂದು ಬೆರಳಿನ ಮುದ್ರೆಯೆ ಸಾಕಾಗುವುದಾದರೂ ಈಚೆಗೆ ಹತ್ತೂ ಬೆರಳಿನ ಮುದ್ರೆಗಳನ್ನು ತೆಗೆದುಕೊಳ್ಳುತ್ತಾರೆ.

ಈ ಶಾಸ್ತ್ರದ ಆದ್ಯ ಪ್ರವರ್ತಕನಾದ ಇ.ಆರ್.


ಹೆನ್ರಿಯೇ ಬಹಳ ವರ್ಷಗಳ ಹಿಂದೆ ಪತ್ತೆ ಹಚ್ಚಿದ ಒಂದು ಖೂನಿಯ ಕೇಸಿನ ವಿವರಗಳನ್ನು ಇಲ್ಲಿ ಕೊಡಬಹುದು. ಭೂತಾನ ಗಡಿಯ ಹತ್ತಿರದ ಒಂದು ಚಹಾ ತೋಟದಲ್ಲಿ ಮ್ಯಾನೇಜರನ ಕೊಲೆಯಾಯಿತು. ಕುತ್ತಿಗೆಯಲ್ಲಿ ಗಾಯ ಮಾಡಿದ್ದರಿಂದ ಅವನು ಮರಣ ಹೊಂದಿದನು. ಅವನ ತಿಜೋರಿ ಹಾಗೂ ಕೈಪೆಟ್ಟಿಗೆಗಳನ್ನು ಮುರಿದು ಆ ಕಳ್ಳನು ಹಣವನ್ನು ದೋಚಿಕೊಂಡು ಹೋಗಿದ್ದನು. ಕೊಂದವರಾರೆನ್ನುವುದರ ಬಗ್ಗೆ ನಾಲ್ವರ ಮೇಲೆ ಸಂದೇಹ ಹುಟ್ಟಿತು. ಓರ್ವ ಕೂಲಿಯವ, ಮನೆಯಲ್ಲಿಯ ಅಡಿಗೆಯವ, ಮ್ಯಾನೇಜರನು ಇಟ್ಟುಕೊಂಡಿದ್ದ ಓರ್ವ ಹೆಂಗಸಿನ ಗಂಡ, ಮತ್ತು ಈ ಹಿಂದೆ ಕೆಲಸಕ್ಕಿದ್ದ ಒಬ್ಬ ಸೇವಕ. ಈ ಸೇವಕನು ಒಮ್ಮೆ ಕಳವು ಮಾಡಿದ್ದಕ್ಕಾಗಿ ಅವನಿಗೆ ಜೇಲಿನ ಶಿಕ್ಷೆಯಾಗಿತ್ತು. ಶಿಕ್ಷೆಯಾಗುವುದಕ್ಕೆ ಮ್ಯಾನೇಜರನೇ ಕಾರಣನಾಗಿದ್ದನು. ಖೂನಿಯ ಸ್ಥಳದ ತನಿಖೆ ಮಾಡುವಾಗ ಒಂದು ಡೆಸ್ಕ್ ಕ್ಯಾಲೆಂಡರಿನ ಮೇಲೆ ಕೈಬೆರಳಿನ ಗುರುತುಗಳಿದ್ದಂತೆ ಕಂಡಿತು. ಅದರ ಮುದ್ರಣವನ್ನು ತೆಗೆದುಕೊಂಡು ಬಂಗಾಲದ ಫಿಗರ್ ಪ್ರಿಂಟ್ ಬ್ಯೂರೋವಿಗೆ ಕಳಿಸಿಕೊಡಲಾಯಿತು. ಅಲ್ಲಿ ಈ ಬೆರಳಿನ ಗುರುತುಗಳಿರುವಂತೆಯೇ ಇದ್ದ ಇನ್ನೊಂದು ಕೈಬೆರಳ ಮುದ್ರೆಯು ಹೊರಟಿತು. ಅದು ಮ್ಯಾನೇಜರನ ಸೇವಕನಾಗಿದ್ದ ಮತ್ತು ಈ ಹಿಂದೆ ಶಿಕ್ಷೆ ಅನುಭವಿಸಿದ್ದ ಕಾಳಿಂಗ ಚರಣನದೇ ಆಗಿದ್ದಿತು. ಮುಂದಿನ ತನಿಖೆಯಲ್ಲಿ ಅವನೇ ಕೊಲೆ ಮಾಡಿದನೆಂದು ಸಿದ್ಧವಾಗಿ ಅವನಿಗೆ ಮರಣದಂಡನೆಯನ್ನು ವಿಧಿಸಲಾಯಿತು.

ಇಂದಿಗೂ ಪುಣೆ, ಮುಂಬೈಗಳಂಥ ದೊಡ್ಡ ಊರುಗಳಲ್ಲಿ ಕಳವು, ಖೂನಿಗಳನ್ನು ಕಂಡು ಹಿಡಿಯುವಲ್ಲಿ ಕೈಬೆರಳಿನ ಗುರುತುಗಳ ಸಹಾಯವನ್ನೇ ಹೆಚ್ಚಾಗಿ ತೆಗೆದುಕೊಳ್ಳಲಾಗುತ್ತಿದೆ. ಲಾಯಿಡ್ಸ್ ಬ್ಯಾಂಕಿನ ದರೋಡೆಯನ್ನು ಪತ್ತೆಹಚ್ಚುವಲ್ಲಿಯೂ ಇದರ ನೆರವು ಇದ್ದುದು ಅಷ್ಟಿಷ್ಟಲ್ಲ. ಕರ್ನಾಟಕದಲ್ಲಿ ಮಾತ್ರ ಈ ರೀತಿಯಾಗಿ ಕೇಸುಗಳನ್ನು ಪತ್ತೆ ಹಚ್ಚಿದ್ದುದು ಕಡಿಮೆ. ಕೋರ್ಟಿನಲ್ಲಿ ಸಹಿತ ಸುಪ್ರಸಿದ್ಧ ಪುರಾವೆ ನೀತಿಯ ಕಾನೂನಿನಲ್ಲಿ (ಎವ್ಹಿಡೆನ್ಸ್ ಆ್ಯಕ್ಟ್), ಫಿಂಗರ್ ಪ್ರಿಂಟ್ಸ್ ವಾಚನ ಪ್ರವೀಣರ ಅಭಿಪ್ರಾಯವನ್ನು ಗ್ರಾಹ್ಯ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದೆ.

ಆದರೆ ಅಪರಾಧೀ ಜಗತ್ತನ್ನುಳಿದು ಇತರ ದೃಷ್ಟಿಯಿಂದಲೂ ಕೈಬೆರಳಿನ ಮುದ್ರೆಗಳ ಉಪಯೋಗವನ್ನು ಮಾಡಿಕೊಳ್ಳುವುದು ಸಾಧ್ಯವಿದೆಯೆಂದು ತೋರಿಸಿಕೊಟ್ಟವರು ಅಮೇರಿಕನ್ನರು. ಮೊದಲನೆಯ ಮಹಾಯುದ್ಧದಿಂದ ಈ ಕ್ರಮವು ಆರಂಭವಾಯಿತು. ಅಲ್ಲಿ ಸುಪ್ರಸಿದ್ಧ ವ್ಯಕ್ತಿಗಳು, ಇತರ ಅಧಿಕಾರಿಗಳು ವ್ಯಕ್ತಿಗತ ರಕ್ಷಣೆಯ ದೃಷ್ಟಿಯಿಂದ ತಾವಾಗಿ ತಮ್ಮ ಕೈ ಬೆರಳಿನ ಮುದ್ರೆಗಳನ್ನು ಕೊಡುತ್ತಾರೆ. ಅಪಘಾತ, ಮತ್ತಿತರ ದುರ್ಘಟನೆಗಳಲ್ಲಿ ಅವರನ್ನು ಗುರುತಿಸುವುದಕ್ಕೆ ಇದು ಅಗತ್ಯವೆಂದು ಕಂಡುಬಂದಿದೆ.

ಅಮೇರಿಕೆಯಲ್ಲಿ ಪ್ರತಿ ವರ್ಷ 20 ಲಕ್ಷ ಜನರು ಕಣ್ಮರೆಯಾಗುತ್ತಾರಂತೆ! ಅವರಲ್ಲಿ ಅನೇಕ, ವಿಶೇಷತಃ ಪ್ರಸಿದ್ಧ ವ್ಯಕ್ತಿಗಳನ್ನು ಹುಡುಕಿಸುವಲ್ಲಿ ಕೈಬೆರಳಿನ ಮುದ್ರೆಯು ಒಂದು ಮಹತ್ವದ ಸಾಧನವಾಗಿ ಪರಿಣಮಿಸಿದೆ. ಹೀಗಾಗಿ ಅಮೇರಿಕದ ಎಫ್.ಬಿ.ಆಯ್. ಕಚೇರಿಯಲ್ಲಿರುವ ಸುಮಾರು 6 ಕೋಟಿ ಕೈ ಬೆರಳಿನ ಗುರುತುಗಳಲ್ಲಿ 2 ಕೋಟಿ ಖಾಸಗೀ ವ್ಯಕ್ತಿಗಳ ಮುದ್ರೆಗಳಾಗಿವೆ. ಇಷ್ಟೇ ಅಲ್ಲ, ಕೈಬೆರಳಿನ ಮುದ್ರೆಗಳ ಜಾಗತಿಕ-ವಿನಿಮಯವೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಲಿದೆ. ತನ್ನ ಕುಪ್ರಸಿದ್ಧ ನಡತೆಗಾಗಿ ಎರಡು ಬಾರಿ ಜರ್ಮನಿಯಲ್ಲಿ ಶಿಕ್ಷೆ ಹೊಂದಿದ ಓರ್ವನನ್ನು ಅಮೇರಿಕೆಯಲ್ಲಿ ಮಗುವೊಂದನ್ನು ಅಪಹರಿಸಿದ್ದಕ್ಕಾಗಿ ಹೆಚ್ಚಿನ ಶಿಕ್ಷೆಗೆ ಗುರಿಪಡಿಸುವುದು ಇದರಿಂದ ಸಾಧ್ಯವಾಯಿತು. ●

(ಈ ಲೇಖನವನ್ನು ಬರೆಯುವಲ್ಲಿ ಮೂಲತಃ ಇ.ಆರ್. ಹೆನ್ರಿಯವರ ಪುಸ್ತಕವನ್ನೂ ಪೋಲೀಸು ಖಾತೆಯಲ್ಲಿರುವ ಶ್ರೀ ಜೆ.ಎಸ್. ಪಾಟೀಲರ ಸಹಾಯವನ್ನೂ ಪಡೆಯಲಾಗಿದೆ. ಆದರೆ, ಈ ಶಾಸ್ತ್ರದ ಬಗ್ಗೆ 1930ರಷ್ಟು ಹಿಂದೆಯೇ ಬೆಂಗಳೂರಿನ ಶ್ರೀ ಎಂ.ಎಸ್. ರಾಮಣ್ಣ ಎಂಬುವರು ಕನ್ನಡದಲ್ಲಿ ಒಂದು ಗ್ರಂಥವನ್ನು ಬರೆದಿದ್ದಾರೆ.)



ಸಹಾಯ

ಮೂಲ: ಜೋಗಿಂದರ್ ಪಾಲ್
ಕನ್ನಡಕ್ಕೆ: ಅಬ್ದುಲ್ ಮಜೀದ್ ಖಾನ್

ಕೆಲಸಕ್ಕಾಗಿ ಅಲೆಯುತ್ತಾ ಅಲೆಯುತ್ತಾ ಭಾಬೊ ನಮ್ಮ ಮನೆಗೂ ಬಂದಿದ್ದಳು. ಕೋಳಿಯೊಂದನ್ನು ಖರೀದಿಸುವಾಗ, ಬೇಯಿಸಿದ ಮೇಲೆ ಅದರ ಮಾಂಸ ರುಚಿಯಾಗಿರಬಹುದೆ? ಎಂದು ನನ್ನ ಬೆರಳುಗಳು ಅದರ ಅಂಗ ಅಂಗವನ್ನು ತಡಕುವಂತೆಯೇ, ನನ್ನ ದೃಷ್ಟಿ ಭಾಬೋಳ ಇಡೀ ಅಸ್ತಿತ್ವವನ್ನು ಶೋಧಿಸಿತ್ತು. ಅವಳನ್ನು ಕಂಡಾಗ ಅವಳ ವೃದ್ಧಾಪ್ಯದ ಯೋಚನೆ ಬರುತ್ತಿರಲಿಲ್ಲ. ಅವಳ ಚಹರೆಯಿಂದಲೂ ಅವಳ ಪರಿಚಯದ ಯಾವುದೇ ಗುರುತು ಸ್ಪಷ್ಟವಾಗುತ್ತಿರಲಿಲ್ಲ. ಅವಳು ಸ್ವತಹ ಅವಳೇ ಆಗಿರದೆ ಒಂದು ನಿರ್ಜೀವ ವಸ್ತುವಿನಂತೆ, ಯಾರಾದರೂ ಅವಳಿಂದ ಸುಲಭ ಸೇವೆ ಮಾಡಿಸಿಕೊಳ್ಳುವ ಸಲುವಾಗಿಯೇ ಹುಟ್ಟಿರುವಂತೆ ತೋರುತ್ತಿದ್ದಳು. ಈಗ ಅವಳು ನಮ್ಮ ಕೆಲಸದಾಳು ಎಂಬ ಪರಿಚಯವೇ ಸಾಕು. ಒಂದು ವೇಳೆ ಭಾಬೊ ಸಹ ಒಬ್ಬ ತಾಯಿ ಅಥವಾ ಹೆಂಡತಿಯಾಗಿರುತ್ತಿದ್ದರೆ, ತನ್ನ ದೇಹವನ್ನು ಮಾತ್ರ ಹೊದ್ದುಕೊಂಡು, ನಮ್ಮಿಂದ ಏನನ್ನಾದರೂ ಪಡೆಯಲು ಒಬ್ಬಂಟಿಯಾಗಿ ಏಕೆ ಬರುತ್ತಿದ್ದಳು? ತನ್ನ ಮನೆಯಲ್ಲಿ ಮಜವಾಗಿ ಕುಳಿತು ತನ್ನ ಮತ್ತು ತನ್ನ ಕುಟುಂಬದ ಒಬ್ಬೊಬ್ಬ ವ್ಯಕ್ತಿಯ ಪರಿಚಯಕ್ಕೆ, ಪ್ರೀತಿಗೆ ನೆಲೆಯಾಗುತ್ತಿದ್ದಳು.

"ನಿನ್ನ ಹೆಸರೇನು?" ನಾನವಳನ್ನು ಕೇಳಿದೆ. ಕೆಲ ಹೊತ್ತು ಅವಳು ಉತ್ತರವನ್ನೇ ಕೊಡ

ದಿದ್ದಾಗ, ಅವಳೆಲ್ಲಾದರೂ ಕಿವುಡಿಯಾಗಿದ್ದರೆ ಅವಳಿಂದ ಕೆಲಸ ಕಾರ್ಯಗಳನ್ನು ಮಾಡಿಸುವುದರಲ್ಲಿ ತುಂಬ ತೊಂದರೆ ಆಗಬಹುದೆಂದು ನನಗೆ ಕಳವಳವಾಯಿತು. ನಾನು ಪ್ರಶ್ನೆಯನ್ನು ಮತ್ತೆ ಕೇಳಿದಾಗ ಅವಳ ಅಭಿವ್ಯಕ್ತಿ 'ನನಗೊಂದು ಹೆಸರಿದ್ದಿದ್ದರೆ ನಾನು ಉತ್ತರ ಕೊಡುವ ತೊಂದರೆಯಿಂದ ಪಾರಾಗಿ, ಸಂತೋಷಪಡುತ್ತಿದ್ದೆ' ಎಂಬ ಹಾಗಿತ್ತು.

ನಾನು ಒತ್ತಾಯ ಮಾಡಿದಾಗ ಅವಳೆಂದಳು, "ಗೊತ್ತಿಲ್ಲ. ಮೊದಲಲ್ಲಿ ಏನಾದರೊಂದು ಹೆಸರು ಇದ್ದಿರಬೇಕು.ಆದರೆ ಈಗ ನಾನು ಕೆಲಸ ಮಾಡುವ ಮನೆಗಳಲ್ಲಿ ನನಗೆ 'ಭಾಬೊ' ಎಂದು ಕರೆಯುತ್ತಾರೆ."

ನಾನು ಯೋಚಿಸಿದೆ. ಈಗ ನಾನೆಷ್ಟೇ ಸಂಬಳದ ಪ್ರಸ್ತಾಪ ಮಾಡಿದರೂ ಅದಕ್ಕಿಂತ ಐದು ಹತ್ತು ರೂಪಾಯಿ ಹೆಚ್ಚು ಬೇಡುತ್ತಾಳೆ. ಆದ್ದರಿಂದ ಮೊದಲೇ ಹದಿನೈದು ರೂಪಾಯಿ ಕಮ್ಮಿ ಮಾಡಿ ಹೇಳಿದೆ, "ಹೇಳು, ಒಪ್ಪುವೆಯಾ?"

ಭಾಬೊ ಇಲ್ಲವೆನ್ನುವ ರೀತಿಯಲ್ಲಿ ತನ್ನ ಭುಜಗಳತ್ತ ತಲೆ ವಾಲಿಸುತ್ತ ಹೇಳಿದಳು, "ಹ್ಞಾಂ, ಒಪ್ಪಿಗೆ ಇದೆ."

ನನ್ನ ಹೆಂಡತಿ ಅವಳಿಗೆ ಎಚ್ಚರಿಕೆ ನೀಡಿದಳು. "ಮನೆಯ ಎಲ್ಲಾ ಕೆಲಸಗಳನ್ನು ಮಾಡಬೇಕಾಗುತ್ತೆ. ಗುಡಿಸುವುದು, ಬಟ್ಟೆ ಒಗೆಯುವುದು, ಅಡಿಗೆ ಮಾಡುವುದು, ಎಲ್ಲಾ ಕೆಲಸ. ಆಗಬಹುದೆ?"

"ಹ್ಞಾಂ..."

"ಹ್ಞಾಂ, ವ್ಹಾಂ, ಬೇಕಿಲ್ಲ. ಚನ್ನಾಗಿ ಯೋಚಿಸಿ ಹೇಳು."

ಅವಳು ಖಾಲಿ ಖಾಲಿ ಕಣ್ಣುಗಳಿಂದ ನಮ್ಮನ್ನು ನೋಡುತ್ತಾ ನಿಂತಳು, ಯೋಚಿಸುವುದೂ ತನ್ನ ಕೆಲಸವನ್ನು ಹೆಚ್ಚಿಸಿಕೊಂಡಂತೆ, ಎಂಬ ಹಾಗೆ.

"ಊಟಕ್ಕೆ ಮೂರು, ಹೆಚ್ಚೆಂದರೆ ನಾಲ್ಕು ರೊಟ್ಟಿಗಳು ಸಿಗುವುವು. ಏನಂತೀಯೆ?"

ಉತ್ತರಿಸುವಾಗ ಭಾಬೊಳ ಕಂಗಳಿಂದ ಸಂತೋಷದಂಥ ಹೆಮ್ಮೆ ಹನಿಯತೊಡಗಿತು. "ನನಗೆ ಹಸಿವಾಗುವುದೇ ಇಲ್ಲ."

ನನ್ನ ಹಣೆ ತುಡಿಯಿತು. ಅವಳೆಲ್ಲಾದರೂ ಕ್ಷಯದ ರೋಗಿಯಾಗಿರಬಹುದೆ? ಇಲ್ಲ, ನೋಡಲಿಕ್ಕೆ ಅವಳು ಧೃಡಕಾಯಳಾಗಿಯೇ ಕಾಣುತ್ತಾಳೆ. "ನಿನಗೆ ಜ್ವರವೇನಾದರೂ ಬರುತ್ತದೆಯೆ?"

"ಇಲ್ಲ."

"ಕೆಮ್ಮು?"

"ಇಲ್ಲ."

ಆದರೂ ಮುನ್ನೆಚ್ಚರಿಕೆಯ ದೃಷ್ಟಿಯಿಂದ ಅವಳ ವೈದಕೀಯ ಪರೀಕ್ಷೆ ಮಾಡಿಸಬೇಕೆಂದು ನಿರ್ಧರಿಸಿದೆ.

ಭಾಬೊ ನಮ್ಮಲ್ಲಿ ಕೆಲಸಕ್ಕೆ ಸೇರಿ ಈಗ ಮೂರುತಿಂಗಳಿಗಿಂತ ಹೆಚ್ಚಾಯಿತು. ಅವಳು ಎಷ್ಟು ಚುರುಕಾಗಿ ಎಲ್ಲ ಕೆಲಸಗಳನ್ನು ಮಾಡುವಳೆಂದರೆ ಅವಳ ಕಡೆ ಗಮನಹರಿಸುವ ಅಗತ್ಯವೇ ಬೀಳದು. ಕೆಲಸದಲ್ಲಿ ಏನಾದರೂ ಅಡ್ಡಿ ಉಂಟಾದರೆ ಅಥವಾ ದೋಷ ಕಂಡುಬಂದರೆ ನಾವು ಅವಳ ಬಗ್ಗೆ ಚಿಂತಿಸಬಹುದು. ಎಲ್ಲವೂ ನೆಮ್ಮದಿಯಿಂದ ಆಗುತ್ತಿದ್ದರೆ ನೌಕರರ ಬಗ್ಗೆ ಚಿಂತಿಸಿ ಚಿಂತಿಸಿ ನಮ್ಮ ಸುಖವನ್ನೇಕೆ ಕೆಡಿಸಿಕೊಳ್ಳಬೇಕು?

ನನ್ನ ಹೆಂಡತಿ ಭಾಬೊಳ ಕೆಲಸದಿಂದ ಸಂತುಷ್ಟಳಾಗಿ, ಹಿಂದೆ ತಾನು ಬೇಸರವಿಲ್ಲದೇ ಮಾಡುತ್ತಿದ್ದ ಚಿಲ್ಲರೆ ಕೆಲಸಗಳಿಂದಲೂ ಮುಕ್ತಿ ಪಡೆದಳು. ಇಡೀ ದಿನವನ್ನು ಈಗ ಅವಳು ನಮಗಿರುವ ಒಬ್ಬನೇ ಮಗುವಿನ ಜೊತೆ ಆಟ ಆಡುತ್ತಾ ಕಳೆಯುತ್ತಾಳೆ.ಅಥವಾ ನಾವಿಬ್ಬರೂ ಸಂಪೂರ್ಣ ಬಿಡುವು ಮಾಡಿಕೊಂಡು ಪರಸ್ಪರ ಮನತುಂಬಿ ಮಾತಾಡುವುದರಲ್ಲೇ ಅಥವಾ ಪ್ರೀತಿಸುವುದರಲ್ಲೇ ಕಾಲ ಕಳೆಯುತ್ತೇವೆ. ನಮ್ಮ ಸಂಗ ಜನ್ಮಜನ್ಮಾಂತರಗಳದ್ದು ಎಂಬ ಭಾವನೆ ನಮ್ಮಲ್ಲಿ ಮೂಡುತ್ತದೆ. ಮತ್ತು ಪ್ರತಿ ಜನ್ಮದಲ್ಲೂ ಇದೇ ಮಗು-ಬಾಲಾ-ನಮ್ಮ ಮಗುವಾಗಿ ಹುಟ್ಟುತ್ತದೆ. ಅವಳು, ನಾನು ಮತ್ತು ನಮ್ಮ ಈ ಮಗು. ಮನೆಯಲ್ಲಿ ನಮ್ಮ ಹೊರತು ಬೇರೆ ಯಾರೂ ಇಲ್ಲ. ಭಾಬೊ?...ಹ್ಞಾಂ, ಅವಳಿಲ್ಲದಿದ್ದರೆ ನಮ್ಮ ಕೌಟುಂಬಿಕ ಸುಖ ಸಾಧ್ಯವೇ ಇಲ್ಲ. ಅವಳು ಕಾಣದಿದ್ದರೆ ನಾವು ನಮ್ಮನ್ನೇ ಮರೆತು ಎಲ್ಲಕ್ಕಿಂತ ಮೊದಲು ಅವಳ ಬಗ್ಗೆಯೇ ಯೋಚಿಸುವೆವು. ಆದರೆ ಅವಳಿದ್ದಾಳೆ. ಆದ್ದರಿಂದ ಮನಸ್ಸಿನಲ್ಲಿ ದೂರ ದೂರದವರೆಗೂ ಎಲ್ಲೂ ಗೋಚರಿಸುವುದಿಲ್ಲ. ಮನಸ್ಸು ಹಾಗಿರಲಿ, ನಮ್ಮ ಕಣ್ಣುಗಳ ಎದುರಿಗಿದ್ದರೂ ಅವಳು

ಕಾಣಿಸುವುದಿಲ್ಲ. ಭೂತವೇ ಭೂತವಾಗಿ ಇಡೀ ಮನೆ ತುಂಬ ಸುಳಿದಾಡುತ್ತಿರುತ್ತಾಳೆ. ಮತ್ತು ನಮ್ಮ ದೃಷ್ಟಿ ಟೊಳ್ಳು ಗಾಳಿಯ ಮೂಲಕ ಹಾಯುವಂತೆ ಅವಳ ಅಸ್ತಿತ್ವವನ್ನು ದಾಟಿ ಬಿಡುತ್ತವೆ. ಆಕಸ್ಮಾತ್ ಅವಳು ಕಣ್ಣಿಗೆ ಬಿದ್ದರೂ ಯಾರೋ ಮಾಟಗಾತಿಯ ಹಾಗೆ ಏಕಾಏಕಿ ಶೂನ್ಯದೊಳಗಿಂದ ಪ್ರತ್ಯಕ್ಷವಾದಂತೆ ತೋರುತ್ತದೆ.

ಭಾಬೊಳ ಮೇಲೆ ಸದಾ ನಿಗಾ ಇಡುವಂತೆ ನಮ್ಮ ನೆರೆಯ ಹೆಂಗಸೊಬ್ಬಳು ನನ್ನ ಹೆಂಡತಿಗೆ ಎಚ್ಚರಿಕೆ ನೀಡಿದ್ದಳು. "ಪರಿಪೂರ್ಣ ಮಾಟಗಾತಿ ಅವಳು. ಹಿಂದೆ ಅವಳು ಚಾಕರಿ ಮಾಡಿಕೊಂಡಿದ್ದ ಮನೆಗಳವರೂ ಅವಳನ್ನು ಈ ಕಾರಣಕ್ಕಾಗಿಯೇ ತೆಗೆದು ಹಾಕಿದರು. ಅವರ ಮಗು ಸದಾ ಕಾಯಿಲೆಯಿಂದ ನರಳ ತೊಡಗಿತ್ತು. ಆದರೆ ಇವಳನ್ನು ವಜಾ ಮಾಡಿದ ದಿನದಿಂದ, ಒಂದು ಸೀನು ಕೂಡ ಆ ಮಗುವನ್ನು ಪೀಡಿಸುವಷ್ಟು ಸಾಹಸ ತೋರಲಿಲ್ಲ."

ನಮ್ಮ ಬಾಲಾ ಅವಳನ್ನು ಕಂಡು ಬಹಳ ಆನಂದಿಸುತ್ತಾನೆ. ನಮಗಂತು ಅವಳು ಗೋಚರಿಸುವುದಿಲ್ಲ. ಆದರೆ ನಮ್ಮ ಬಾಲಾನ ಕಣ್ಣುಗಳಲ್ಲಿ ಅವಳು ಸುರಸುರ ಬತ್ತಿಯ ಹಾಗೆ ಉರಿಯುತ್ತಾ,ಆರುತ್ತಾ ಇರುತ್ತಾಳೆ...ಇಗೋ ಬಂದಳು!...ಅದೋ, ಹೋದಳು!.... ಇಗೋ... ಮತ್ತೆ ಬಂದಳು!... ಮತ್ತು ಅವನು ತನ್ನ ಸಣ್ಣ ಕೈಗಳಿಂದ ಚಪ್ಪಾಳೆ ಹೊಡೆಯುತ್ತಾ ತನ್ನ ಸಂತಸಭರಿತ ದನಿಯಲ್ಲಿ ಕೂಗಿ ಕರೆಯುತ್ತಾನೆ...'ಭಾ...ಬ್...ಓ...ಓ...' ಆಗ ನನ್ನ ಹೆಂಡತಿ ಭಾಬೋಳನ್ನು ಗದರಿಸಿ, ಅಡಿಗೆ ಮನೆಗೆ ಹೋಗಿ ತನ್ನ ಕೆಲಸ ಮಾಡುವಂತೆ ಹೇಳುತ್ತಾಳೆ. ಆಗ ಅವಳು ನಂದಿ ಹೋದಂತೆ ಸುಮ್ಮನಾಗಿ, ಅತ್ತ ಧಾವಿಸಲು ಹೊರಳಿದಾಗ, ಬಾಲಾ ಅವಳನ್ನು ತಡೆಯಲು ಯತ್ನಿಸುತ್ತಾನೆ. ಒಮ್ಮೆಯಂತೂ ಅವನು ಅತ್ತೂ ಅತ್ತೂ ತಿಂದಿದ್ದನ್ನೆಲ್ಲ ವಾಂತಿ ಮಾಡಿಕೊಂಡಿದ್ದ. ಬಹುಶಃ ಇದು ಭಾಬೊಳ ಮಾಟ ಮಂತ್ರಗಳ ಪ್ರಭಾವವಿರಬಹುದೆಂದು ನನ್ನ ಹೆಂಡತಿ ಬಲವಾಗಿ ಶಂಕಿಸಿದ್ದಳು. ಆದರೆ, ನಂತರ ತನ್ನ ಸಂದೇಹಕ್ಕಾಗಿ ತಾನೇ ನಕ್ಕು ಬಿಟ್ಟಿದ್ದಳು.

ಭಾಬೊಳ ಕೆಲಸ ತುಂಬ ತೃಪ್ತಿಕರವಿತ್ತು. ಅವಳು ಮಾಟಗಾತಿ ಎಂದು ನನ್ನ ಹೆಂಡತಿಗೆ ಖಾತರಿಯಾಗುತ್ತಿದ್ದರೂ ಅವಳನ್ನು ಕೆಲಸದಿಂದ ತೆಗೆದುಹಾಕುವ ಮನಸ್ಸಾಗುತ್ತಿರಲಿಲ್ಲ. ಮನೆಯ ಸುಖಸಂತೋಷಗಳೂ ಮಾಟ ಮಂತ್ರಗಳಿಗಿಂತ ಕಮ್ಮಿ ಏನಲ್ಲ. ಕೆಲವು ಸಲ ಈ ಅನುಕೂಲತೆಗಳ ಕಾರಣ ಮಾಲೀಕರು ತಮ್ಮ ಸೇವಕರ ದಾಸರಾಗಿ ಬಿಡುತ್ತಾರೆ. ಅವರ ಮೇಲೆ ಕೋಪಗೊಳ್ಳುವ ಸಂದರ್ಭ ಬಂದರೂ ತಮ್ಮನ್ನು ತಾವೇ ಸಮಾಧಾನ ಪಡಿಸಿಕೊಂಡು ಸುಮ್ಮನಾಗುತ್ತಾರೆ. ಅಂಥ ಯಾವ ಅನಾಹುತವಾಗಿದೆ? ಎಂದುಕೊಳ್ಳುತ್ತಾರೆ. ಆದರೆ ಸಿಟ್ಟಾಗಲು ಕಾರಣವೇ ಸಿಗದಾಗ, ಆ ಕಾರಣಕ್ಕಾಗಿಯೇ ಸಿಟ್ಟಾಗುತ್ತಾರೆ. ಬಹುಶಃ ಭಾಬೊ ಬಗ್ಗೆ ಕಠಿಣ ವರ್ತನೆ ಮಾಡಿ ಮಾಡಿ, ನಮಗೆ ನೆಮ್ಮದಿ ಆದಂತೆ ಅನಿಸುತ್ತದೆ. ನಮಗಷ್ಟೇ ಅಲ್ಲ, ಭಾಬೊಗೂ ನೆಮ್ಮದಿಯಾಗಬಹುದು. ನೆನ್ನೆ ಸಂಜೆಯ ಸಂಗತಿ-ಅವಳು ನನಗಾಗಿ ಟೀ ತಂದಳು. ಬಟ್ಟಲನ್ನು ಟೀಪಾಯಿಯ ಮೇಲಿಡುವಾಗ, ಅವಳು ಗಾಬರಿಗೊಂಡಂತಾಗಿ, ಸ್ವಲ್ಪವೇ ಟೀ ತುಳುಕಿ ಟೀಪಾಯಿಯ ಮೇಲೆ ಚೆಲ್ಲಿತು. ನಾನು ಓದುವುದರಲ್ಲಿ ತಲ್ಲೀನನಾಗಿದ್ದೆ. ಆದ್ದರಿಂದ ನನ್ನ ಗಮನ ಅತ್ತ ಹರಿದಿರಲಿಲ್ಲ. ಕೆಲ ನಿಮಿಷದ ನಂತರ ತಲೆ ಎತ್ತಿ ನೋಡಿದರೆ, ಅವಳು ಅಲ್ಲೇ ನಿಂತು ನನ್ನಿಂದ ಗದರಿಸಿಕೊಳ್ಳಲು ನಿರೀಕ್ಷಿಸುತ್ತಿದ್ದಾಳೆ.

"ಏನು ಸಮಾಚಾರ?" ಎಂದೆ.

"ಅದು... ಏನೆಂದ್ರೆ,.... ಸ್ವಲ್ಪ ಟೀ ಚೆಲ್ಲಿ ಹೋಯ್ತು." ಎಂದಳು.

ಬಾಡುತ್ತಿರುವ ಅವಳ ಮುಖ ಕಂಡಾಗ, ಸ್ವಲ್ಪ ಗದರಿಸಿದರೆ ಅವಳಿಗೆ ಸಂತೋಷವಾಗುವುದೆಂದು ನನಗನ್ನಿಸಿತು. ಮತ್ತು ಇದನ್ನು ನನ್ನ ನೀಚತನವೆಂದೇ ತಿಳಿಯಿರಿ. ಅವಳನ್ನು ಆ ಸಂತಸದಿಂದ ವಂಚಿತಳಾಗಿಡಲೆಂದೇ ನಾನು ಮುಗುಳ್ನಕ್ಕು ಬಲು ಕೋಮಲ ಧಾಟಿಯಲ್ಲಿ ಹೇಳಿದೆ. "ಪರ್ವಾಯಿಲ್ಲ."

ಆದರೆ ಕೆಲವೇ ಘಳಿಗೆಗಳ ನಂತರ ನನಗೆ ವಿಷಾದವಾಯಿತು. ಸ್ವಲ್ಪ ಗದರಿಸಿದರೆ ನನ್ನದೇನು ನಷ್ಟವಾಗುತ್ತಿತ್ತು?... ನಾನು ಪುಸ್ತಕದಿಂದ ತಲೆ ಎತ್ತಿ ಅವಳ ಕಡೆ ನೋಡಿದೆ. ಆದರೆ

ಅವಳು ತನ್ನ ಜಾಗದಲ್ಲಿ ನಿಂತಂತೆಯೇ ಅದೃಶ್ಯಳಾಗಿದ್ದಳು. ನಾನು ನಕ್ಕು ಮತ್ತೆ ನನ್ನ ತಲೆಯನ್ನು ಪುಸ್ತಕದ ಮೇಲೆ ವಾಲಿಸಿದೆ. ಆದರೆ, ಇನ್ನೂ ಓದಲು ಪುನರಾರಂಭಿಸಿರಲಿಲ್ಲ, ಅಷ್ಟರಲ್ಲೆ ಅವಳ ದುರ್ಬಲ ದನಿಯನ್ನು ಕೇಳಿ ಬೆಚ್ಚಿಬಿದ್ದೆ. ಅವಳು ನನ್ನೆದುರು ನಿಂತೇ ಇದ್ದಾಳೆ. ಚಹರೆಯೇ ಇಲ್ಲದಂತೆ, ಮಾಸಿ ಮಬ್ಬಾದಂತೆ. ನಾನು ಹೆದರಿ, ಸಿಡಿಮಿಡಿಗೊಳ್ಳುತ್ತಾ, ಭೂತವೊಂದನ್ನು ಉದ್ದೇಶಿಸಿದಂತೆ ಹೇಳಿದೆ. "ಹೋಗಾಚೆ! ನನ್ನ ತಲೆಯಾಕೆ ತಿನ್ತೀಯೆ?"

ಭಾಬೊ ಭೂತವಾಗಿರಲಿ, ಇಲ್ಲದಿರಲಿ, ಭೂತ ಮಾತ್ರ ಅವಳ ಹಾಗೆಯೇ ಇರಬಹುದು. ಅದೊಂದು ದಿನ ಮನೆಯಲ್ಲಿ ನಾನೊಬ್ಬನೇ ಇದ್ದೆ. ಅಂದರೆ ನನ್ನ ಹೊರತು ಭಾಬೊ ಇದ್ದಳು. ಬಹುಶಃ ಅವಳು ಕಿಚನ್‌ನಲ್ಲಿ ಪಾತ್ರೆ ತೊಳೆಯುತ್ತಿರಬಹುದು. ಅಚಾನಕವಾಗಿ, ಅವಳು ನಗುತ್ತಿರುವ ಸದ್ದು ಕೇಳಿಸಿತು. ಅವಳ ಜತೆ ಅಲ್ಲಿ ಇನ್ಯಾರಿರಬಹುದು?.....ನನಗೆ ನಗು ಬಂತು. ಯಾರಿರಬಹುದು?...ಅವಳ ಜತೆ ಅವಳೇ ಇರಬೇಕು ಮತ್ತು ತನಗೆ ತಾನೇ ನಗುತ್ತಿರಬೇಕು! ಎದ್ದು ಹೋಗಿ ಅವಳು ನಗುತ್ತಿರುವುದನ್ನು ನೋಡಬೇಕೆಂದು ನನಗೆ ಆಸೆಯಾಯಿತು. ನಗುತ್ತಾ ನಗುತ್ತಾ ಆ ನಿಃಸ್ವರೂಪ ಹೆಂಗಸು ಬಹುಶಃ ಏನಾದರೊಂದು ಚಹರೆಯನ್ನು ಹೊಂದಿರಬಹುದು. ಅವಳು ಹೇಗಿದ್ದಾಳೋ ಹಾಗಿರುವುದನ್ನು ಮಾತ್ರ ಕಂಡಿದ್ದೇನೆ. ಮತ್ತು ಅವಳನ್ನು ನೋಡುತ್ತಿರುವಾಗ ಮನಸ್ಸಿನಲ್ಲಿ ಯಾವುದೇ ಆಕಾರವೂ ಮೂಡುವುದಿಲ್ಲ. ಕಣ್ಣುಮುಚ್ಚಿಕೊಂಡಿದ್ದು ಅವಳು ನಗುತ್ತಿರುವುದನ್ನು ಕಲ್ಪಿಸಿಕೊಳ್ಳಲು ಯತ್ನಿಸಿದೆ. ಆದರೆ ಶೂನ್ಯದ ಮಬ್ಬಿನಲ್ಲಿ ಯಾವುದೇ ಚಲನ ಉಂಟಾಗಲಿಲ್ಲ. ಅದಕ್ಕೆ ಬದಲು, ನಮ್ಮ ಬಾಲಾ ನಗುತ್ತಾ, ಓಡಾಡುತ್ತಾ, ಬೆಳಕು ಪಸರಿಸುತ್ತಾ ಇರುವುದು ಕಂಡಿತು. ಅವನು ಕೈಚಾಚಿ ನಿಂತಿರುವ ತನ್ನ ತಾಯಿಯ ಕಡೆ ಓಡಿದ. ಅವರಿಬ್ಬರ ಮೂರ್ತ ಚಹರೆಗಳ ಕಡೆ ಎಳೆಯಲ್ಪಟ್ಟು, ನಾನೂ ನನ್ನ ಹೃದಯ ಮತ್ತು ಮನಸ್ಸಿನ ಮಾರ್ಗವಾಗಿ ಅವರ ಬಳಿ ತಲುಪಿದೆ.

"ಬಾಲಾ, ನೀನು ಮಮ್ಮಿಯ ಮಗನೋ,



ಪಪ್ಪಾನ ಮಗನೋ?"...ಮಮ್ಮಿಯ ಮಗ?.. ಮಮ್ಮಿ ಅವನನ್ನು ನಿರಾಯಾಸವಾಗಿ ಅಪ್ಪಿಕೊಂಡಳು... 'ಇಲ್ಲ, ನಾನು ಪಪ್ಪಾನ ಮಗ'.. ಪಪ್ಪಾ ಅವನನ್ನು ಕಸಿದುಕೊಂಡು ತನ್ನೆದೆಗೆ ಅವುಚಿಕೊಂಡ. ಮಮ್ಮಿ ಚಿಮ್ಮುತ್ತಾ ಬಂದು ಪಪ್ಪಾನ ಸಮೇತ ಬಾಲಾನನ್ನು ತನ್ನ ತೋಳುಗಳಲ್ಲಿ ಬಂಧಿಸಿದಳು. ಅಥವಾ ಬಹುಶಃ ಪಪ್ಪಾ ಅವರಿಬ್ಬರನ್ನು ತನ್ನ ತೆಕ್ಕೆಯಲ್ಲಿ ಬಂಧಿಸಿದ...ಹಹ್ಹಾ...ಹಹ್ಹಾಮ್...!

ಇಲ್ಲ, ಬಾಲಾ ಹಠಾತ್ತನೆ ಅವರೀರ್ವರನ್ನು ಮೀರಿ ಬೆಳೆದು ತನ್ನ ಉದ್ದನೆಯ ಬಲಶಾಲಿ ಬಹುಗಳಲ್ಲಿ ಅವರನ್ನು ಸುತ್ತಿಕೊಂಡಿದ್ದಾನೆ. ಮತ್ತು ಅವರಿಬ್ಬರೂ ಚಿಕ್ಕಮಕ್ಕಳ ಹಾಗೆ ತನ್ನ ಮಗನ ಅಪ್ಪುಗೆಯಲ್ಲಿ ಆಟವಾಡುತ್ತಾ ನಗುತ್ತಿದ್ದಾರೆ. ಮತ್ತು ಕತ್ತಲೊಳಗಿಂದ ಬೆಳಕು ಪುಟಿಯುತ್ತಿದೆ. ಶೂನ್ಯದಲ್ಲಿ ಜನರ ಮುಖಗಳು ಕುಂಟಿ ಹೋಗಿವೆ. ಮತ್ತು ಆ ಜನ ಜಂಗುಳಿಯಲ್ಲಿ ಮಮ್ಮಿ, ಪಪ್ಪಾ ಮತ್ತು ಬಾಲಾನ ಗುರುತು ಕ್ಷಣಕ್ಷಣವೂ ಗಾಢವಾಗುತ್ತಿದೆ.

ಹಠಾತ್ತನೆ ಈ ಉಜ್ವಲ ಜೀವನಚಿತ್ರದ ಹಿಂದೆ, ನಿಶ್ಶಬ್ದತೆಗಳ ಮಧ್ಯೆ ಭಾಬೊ ಮಾತಾಡುತ್ತಿರುವ ಶಬ್ದ ಕೇಳಿಸಿತು. ನಾನು ಕತ್ತರದ. ಕಿಚನ್‌ನಲ್ಲಿ ಭಾಬೊ ಜತೆ ಯಾರಿರಬಹುದು? ಯಾರೊಡನೆ ಅವಳು ತಗ್ಗಿದ ದನಿ

ಯಲ್ಲಿ ಮಾತಾಡುತ್ತಿರಬಹುದು? ನಾನು ಸಪ್ಪಳವಾಗದಂತೆ ನಡೆದು ಅಡಿಗೆಮನೆಯ ಬಾಗಿಲಲ್ಲಿ ಬಂದು ನಿಂತುಕೊಂಡೆ. ಅವಳ ಬೆನ್ನು ನನ್ನ ಕಡೆ ಇತ್ತು ಮತ್ತು ಅವಳು ತೆಪ್ಪಗೆ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ಹಾಗಾದರೆ ಇಷ್ಟು ಹೊತ್ತು ಮಾತಾಡುತ್ತಿದ್ದುದು ನನ್ನ ಕಿವಿಗಳೇ ಏನು? ನಾನು ತೆಪ್ಪಗೆ ಸದ್ದುಮಾಡದೆ ಹಿಂದಿರುಗಿದೆ. ಎಂಥ ರಹಸ್ಯಪೂರ್ಣ ಹೆಂಗಸು! ಎಲ್ಲಾದರೂ ನಿಜವಾಗಿಯೂ ಮಾಟಗಾತಿಯೇ ಆಗಿರುವಳೆ?

ನಮ್ಮ ಬೆಡ್‌ರೂಮಿನ ಮೇಲ್ಭಾಗದಲ್ಲಿರುವ ಕೋಣೆಯನ್ನು ನಾವು ಭಾಬೊಗೆ ಬಿಟ್ಟುಕೊಟ್ಟಿದ್ದೇವೆ. ರಾತ್ರಿ ನಾನು ಎಚ್ಚರಗೊಂಡಾಗ, ಮೇಲೆ ಭಾಬೊ ನಡೆದಾಡುತ್ತಿರುವ ಸದ್ದು ಕೇಳಿಸುತ್ತದೆ. ಭಾಬೊಳನ್ನು ಕೇಳಬೇಕೆಂದು ದಿನವೂ ಯೋಚಿಸುತ್ತಿದ್ದೆ. ಒಂದು ದಿನ, ನನ್ನ ಊಟ ಮುಗಿದ ನಂತರ, ಅವಳು ಟೇಬಲ್ ಸ್ವಚ್ಛ ಮಾಡುವಾಗ, ನಾನು ಸಿಗರೇಟ್ ಹೊತ್ತಿಸಿ, ಕಚಗುಳಿ ಇಡುವಂಥ ಕತೆ ಕೇಳ ಸಿಗಬಹುದೆಂಬ ನಿರೀಕ್ಷೆಯಲ್ಲಿ ಅವಳನ್ನು ಕೇಳಿದೆ, "ಭಾಬೊ, ನಿನಗೆ ರಾತ್ರಿಯಿಡೀ ನಿದ್ರೆ ಬರುವುದಿಲ್ಲವೆ?"

"ನಿದ್ರೆ ಬಾರದಿರುವುದೇ ಒಳಿತು, ಬಾಬೂಜಿ."

ಅವಳ ಪ್ರತಿಯೊಂದು ಮಾತೂ ವಿಚಿತ್ರ. ಯಾರಿಗೆ ಗೊತ್ತು, ಮಾಟಗಾತಿಯೇ ಇರಬೇಕು. ಬಾಲ್ಯದಲ್ಲಿ ಕೇಳಿದ್ದ ಕತೆಯೊಂದು ಅಚಾನಕವಾಗಿ ನೆಗೆದು ಬಂದು ನನ್ನ ಧ್ಯಾನದಲ್ಲಿ ಬಿತ್ತು: ಒಬ್ಬ ಮಂತ್ರವಾದಿ ಇದ್ದ. ಸತ್ತ ಮೇಲೆ ಅವನು ಯಾರಿಗೂ ಕಾಣಿಸಲಿಲ್ಲ. ಆದರೆ ತನ್ನ ಮಂತ್ರ ಶಕ್ತಿಯಿಂದ ಅವನು ಜೀವಂತವಾಗಿದ್ದ. ಮಲಗಿಬಿಟ್ಟರೆ ತನ್ನ ಮಂತ್ರ ಶಕ್ತಿ ನಿಷ್ಪ್ರಯೋಜಕವಾಗುವುದೆಂದು ಮತ್ತು ತಾನು ನಿಜವಾಗಿಯೂ ಸತ್ತು ಹೋಗುವನೆಂದು ನಂಬಿ, ಅಂಜಿ, ಅವನು ಇಡೀ ಹಗಲಿರುಳು ಮಲಗುತ್ತಿರಲಿಲ್ಲ.

"ಭಾಬೊ, ನಿದ್ದೆಮಾಡಿದರೆ ಸತ್ತುಹೋಗುವೆ ಎಂಬ ಭಯದಿಂದ ನೀನು ನಿದ್ದೆ ಮಾಡುತ್ತಿಲ್ಲವೆ?"

ಏನೂ ಉತ್ತರ ನೀಡದೆ ಅವಳು ಎಂಜಲು ಬಟ್ಟಲುಗಳನ್ನು ಎತ್ತಲಾರಂಭಿಸಿದಳು.

"ಉತ್ತರ ಹೇಳು, ಭಾಬೊ"

"ಏನು ಉತ್ತರ ಹೇಳಲಿ ಬಾಬೂಜಿ; ಒಮ್ಮೆ ಮಲಗಿ ಎದ್ದಮೇಲೆ ನಾನು ಸತ್ತುಹೋದೆ". ಅವಳ ಕೈಯಿಂದ ಬಟ್ಟಲೊಂದು ಜಾರಿತು. ಅವಳು ನನ್ನನ್ನು ಮರೆತು ಅದರ ಕಡೆ ಲಕ್ಷ್ಯ ಕೊಟ್ಟಳು—"ಅಡಿಗೆ ಮನೆ ಸೇರಿದ ಮೇಲೆ ನಿನ್ನನು ವಿಚಾರಿಸಿಕೊಳ್ಳುತ್ತೀನಿ, ನಡಿ."

ಬಟ್ಟಲನ್ನು ಹಿಡಿದುಕೊಂಡು ಅವಳು ಹೊರಡಲು ಅನುವಾದಳು. ನಾನವಳನ್ನು ವಿಸ್ಮಯದಿಂದ ನೋಡುತ್ತ ಹೇಳಿದೆ, "ನಿಲ್ಲು ಭಾಬೊ, ನಿನಗೆ ಹುಚ್ಚು ಹಿಡಿದಿಲ್ಲ ತಾನೆ?"

"ಹುಚ್ಚಿಯಾಗಿದ್ದರೂ ಏನಂತೆ? ಕೊನೆಯ ಪಕ್ಷ ಜೀವಿಸಿದ್ದೇನಲ್ಲ!"

"ಸತ್ತು ಹೋಗಿದ್ದವಳು, ಅದ್ಹೇಗೆ ಜೀವಂತವಾಗಿದ್ದೀಯೆ?... ಹೋಗಬೇಡ, ನಿಲ್ಲು. ಮೊದಲು ನನಗೆ ನಿನ್ನ ಕತೆ ಸಂಪೂರ್ಣವಾಗಿ ಹೇಳು."

"ಅಮ್ಮನವರಿಗೆ ಹೇಳ್ತೀನಿ".

"ಇಲ್ಲ, ನನಗೂ ಹೇಳು".

"ನೀವು, ಗಂಡಸರು, ಕೇಳುವಂಥ ಕತೆಯಲ್ಲ ಅದು, ಬಾಬೂಜಿ. ಹೇಳಿದೆನಲ್ಲ, ಅಮ್ಮನವರಿಗೆ ಹೇಳ್ತೀನಿ ಅಂತ" ಪಾತ್ರೆಗಳನ್ನೆತ್ತಿಕೊಂಡು, ಗಲಿಬಿಲಿಗೊಂಡು, ಅವಳು ಕೋಣೆಯಿಂದ ಹೊರಗೋಡಿದಳು.

ನನ್ನ ಹೆಂಡತಿ ಕೇಳಿದಾಗ ಭಾಬೊ ಹೇಳಿದ್ದಳು: ತಾರುಣ್ಯ ದಿನಗಳಲ್ಲಿ ಒಮ್ಮೆ ಮಲಗಿದ್ದಾಗ, ಯಾರೋ ಅನಾಮಿಕ ಅವಳ ಮಾನಭಂಗ ಮಾಡಿಬಿಟ್ಟ. ಅವಳು ಬಸುರಿಯಾದಳು. ನೂರಾರು ಸಂಕಟಗಳನ್ನು ಸಹಿಸಿ ತನ್ನ ಮಗುವನ್ನು ಸಾಕಿ ಬೆಳೆಸಿದಳು. ಆದರೆ ದೊಡ್ಡವನಾಗುತ್ತಲೇ ಅವಳನ್ನು ತೊರೆದು ಅವನೆಲ್ಲೋ ಹೊರಟುಹೋದ. ಮೀಸೆ ಮೂಡುವ ಮೊದಲೇ ಆ ಹರಾಮಿಪಿಳ್ಳೆ ಓಡಿಹೋಗಿದ್ದು ಒಳ್ಳೆಯದಾಯ್ತು. ಇಲ್ಲವಾದರೆ ಮೀಸೆ ತಿರುವುತ್ತ ನನ್ನನ್ನು ದುರುಗುಟ್ಟಿದ್ದನೆಂದರೆ, ನನಗೆ ನಾನೆಂದೂ ನೋಡದಿರುವ ಅವನ ಅಪ್ಪನ ಮುಖ ಕಂಡಂತಾಗಿ, ಅವನೇ ನನ್ನ ಶೀಲಹರಣ ಮಾಡಿರಬಹುದೆಂದು ದಿಗಿಲಾಗುತ್ತಿತ್ತು.

ನನಗೆ ಭಾಬೊಳ ಒಂಟಿತನ ಕಂಡು ತುಂಬ

ಕನಿಕರ ಉಂಟಾಯಿತು. ಆದರೆ ತಕ್ಷಣ ಏನೋ ನೆನಪಾಗಿ, ಬಾಲಾನನ್ನು ಅವಳ ಜತೆ ಒಂಟಿ ಇರಲು ಬಿಡಬಾರದೆಂದು ಹೆಂಡತಿಗೆ ಎಚ್ಚರಿಕೆ ನೀಡಿದೆ. ಹುಚ್ಚಿ, ಪ್ರೀತಿಯ ಆವೇಶದಲ್ಲಿ ಎಲ್ಲಾದರೂ ಅವನ ಕುತ್ತಿಗೆ ಹಿಸಕಿಬಿಟ್ಟರೆ?

"ಅವಳು ಹುಚ್ಚಿ ಎಂಬುದೇನೊ ನಿಜ. ಒಬ್ಬಳೇ ಕುಳಿತು ಕಿಚನ್‌ನಲ್ಲಿ ಮಾತಾಡಿಕೊಳ್ಳು ವುದನ್ನು ನಾನೆಷ್ಟೋ ಸಲ ಕೇಳಿದ್ದೇನೆ" ನನ್ನ ಹೆಂಡತಿ ಹೇಳಿದಳು.

"ಹೌದು, ನಿಜ. ನಾನು ಒಮ್ಮೆ ಕೇಳಿದ್ದೆ. ಆದರೆ ನನಗೇನೂ ಅರ್ಥವಾಗಿರಲಿಲ್ಲ."

"ಅರ್ಥವಾಗುವಂಥ ಮಾತಾದರೆ ಅರ್ಥ ವಾಗಬಹದು. ಹುಚ್ಚಿ, ಸ್ಟೋವ್ ಹೊತ್ತಿಸ ಲಾಗದೆ, ಅದನ್ನೇ ಬೆದರಿಸುತ್ತಿದ್ದಳು-'ಒಮ್ಮೆ ಹೊತ್ತಿಬಿಡು, ಆಮೇಲೆ ನೋಡಂತೆ, ಹೇಗೆ ಸೇಡು ತೀರಿಸಿಕೊಳ್ತೀನಿ ಅಂತ; ಉರೀತಾ ಉರೀತಾ ನಿನ್ನ ಮೇಲೆ ನೀನೆ ಬೆಂಕಿ ಕಾರಿಕೊಳ್ಳು ತ್ತಿರಬೇಕು'... ಇನ್ನೂ ಏನೇನೊ!" ನಾವು ನಕ್ಕುಬಿಟ್ಟೆವು.

"ನಮ್ಮ ಜತೆ ಇರುವಾಗ ಅವಳು ಮೌನದ ಪರದೆಯ ಮರೆಯಲ್ಲೇ ಇರುತ್ತಾಳೆ."

"ಹೌದು," ನನ್ನ ಹೆಂಡತಿ ಅಂದಳು, ಆದರೆ ಅವಳು ತನ್ನದೇ ಜತೆಯಲ್ಲಿರುವಾಗ, ಸುಮ್ಮ ನಿದ್ದು ಅವಳ ಮಾತು ಕೇಳಿ. ಹುಚ್ಚಿಯ ನಾಲಗೆ ನಿಲ್ಲುವುದೇ ಇಲ್ಲ. ಒಮ್ಮೆ ಕಿಚನ್‌ಗೋಡೆಗೆ ತಗುಲಿ ನಿಂತಿದ್ದವಳು ಏಕ್ದಮ್, ಜಗಿದು, ಕೊಂಚ ಸರಿದು, ತುದಿಯಿಂದ ಬುಡದವರೆಗೆ ಅದನ್ನು ದುರುಗುಟ್ಟುತ್ತಾ ಹೇಳಿದ್ದಳು- 'ಏಯ್! ಏಯ್! ಯಾಕೆ ಹಾಗೆ ಬೀಳ್ತಿಯೆ! ನಾನಂತೂ ಮೊದಲೇ ಸತ್ತುಹೋಗಿದ್ದೀನಿ... ನಗ್ತೀಯಾ?...ಬೇಕಾದಷ್ಟು ನಗು...ಆದರೆ ನೆನಪಿಡು, ನಗ್ತಾ ನಗ್ತಾ ಕುಸಿದುಬಿದ್ದೆ ಎಂದರೆ ಮಣ್ಣಿನ ಗುಡ್ಡೆಯಾಗುತ್ತೀಯೆ,.....!"

ನಾವಿಬ್ಬರೂ ಭಾಬೊ ಬಗ್ಗೆ ನಗುತ್ತಾ ನಗುತ್ತಾ, ತೂಗಿ ತೊನೆಯುತ್ತ ಪರಸ್ಪರ ಆಕರ್ಷಿಸಲ್ಪಟ್ಟು, ಪ್ರೀತಿಯಲ್ಲಿ ಮೈಮರೆತೆವು. ತಕ್ಷಣ ಬಾಲಾ ಎಚ್ಚರಗೊಂಡು ಅಳುತ್ತಿರುವು ದನ್ನು ಕೇಳಿ, ಎಚ್ಚರಾದೆವು. ಇಬ್ಬರೂ ಸೇರಿ ಬಾಲಾನ ತೊಟ್ಟಿಲನ್ನು ತೂಗತೊಡಗಿದೆವು... ನಾನೊಬ್ಬ, ಇವಳೊಬ್ಬಳು ಮತ್ತು ನಮ್ಮ ಬಾಲಾ!...ಜನಗಣತಿಗಾಗಿ ಬಂದ ವ್ಯಕ್ತಿ ಕೇಳಿದ್ದ- "ನೀವು ಮೂರೇ ಜನರೇನು?"

"ಹೌದು".

"ನೌಕರ-ಚಾಕರ?"

"ಹ್ಞಾಂ, ಒಬ್ಬಾಕೆ ಕೆಲಸದಾಳು ಇದ್ದಾಳೆ."

"ಹಾಗಾದರೆ, ನಾಲ್ಕು ಜನ ಅಂತ ಹೇಳ ಬಾರ್ದೆ?"

"ನಮ್ಮ ಮನೆಯಲ್ಲಿ....."

"ನಮ್ಮ ಮನೆಯಲ್ಲಿ ಮೂರೇ ಜನರಿರ ಬಹುದು, ಆದರೆ ದೇಶದಲ್ಲಿ ನಾಲ್ಕು ಜನ ಇದ್ದಂತಾಗಲಿಲ್ಲವೆ?...ನಾಲ್ಕನೆಯವಳ ಹೆಸರು?"

"ಭಾಬೊಗೆ ಹೆಸರೇ ಇಲ್ಲ."

"ನಿಜ ಹೇಳ್ತಿದ್ದೀರಿ, ನೀವು. ನಮ್ಮ ದೇಶದಲ್ಲಿ ಕನಿಷ್ಠವೆಂದರೆ ಕಾಲುಭಾಗ ಜನಸಂಖ್ಯೆ ಅನಾ ಮಿಕವಾಗಿಯೇ ಇದೆ. ಈ ಜನರ ಅಸ್ತಿತ್ವವೇ ಇಲ್ಲ. ಆದರೆ ಅಧಿಕೃತ ಕಾರಣಗಳಿಗಾಗಿ ನಾವು ಅವರಿಗೆ ಕಾಲ್ಪನಿಕ ಹೆಸರುಗಳನ್ನಿಟ್ಟು ಕಾಲಮ್ಮು ಗಳನ್ನು ಭರ್ತಿ ಮಾಡಬೇಕಾಗುತ್ತದೆ. ನಿಮ್ಮ ಭಾಬೊಗಾಗಿಯೂ ಒಂದು ಕಾಲ್ಪನಿಕ ಹೆಸ ರನ್ನು ಬರೆದುಕೊಳ್ಳುತ್ತೇನೆ. ಅವಳನ್ನು 'ವಿದ್ಯಾ ದೇವಿ'...ಜ್ಞಾನದೇವತೆ...ಎಂದು ಕರೆ ಯೋಣ! ಭಾಬೊ, ಇತ್ತ ಬಾ. ಇಲ್ಲಿ ನಿನ್ನ ಹೆಬ್ಬೆಟ್ಟಿನ ನಿಶಾನಿ ಒತ್ತಿಬಿಡು...ನೋಡಿ ಮಿಸ್ಟರ್, ನೀವು ನಿಮ್ಮ ಹೆಸರನ್ನು ಕ್ರಮಾನು ಸಾರ ಅಕ್ಷರಗಳನ್ನು ಜೋಡಿಸಿ ಬರೆದರೂ, ನಿಮ್ಮ ಹೆಸರಿನ ಸಾಚಾತನದ ಬಗ್ಗೆ ಶಂಕೆ ಉಂಟಾಗಬಹದು. ಆದರೆ ಮನುಷ್ಯನ ಹೆಬ್ಬೆ ಟ್ಟಿನ ಗುರುತು ಎಷ್ಟು ನೈಜವಾಗಿ ತನ್ನ ವಾಸ್ತ ವತೆಯನ್ನು ಮುದ್ರಿಸಿಬಿಡುತ್ತೆ! ಹೋಗು ಭಾಬೊ, ಸಾಬೂನಿನಿಂದ ಮಸಿ ತೊಳೆದು ಬಿಟ್ಟು, ಚಪಾತಿಗಳನ್ನು ತಯಾರಿಸು... ಮತ್ತು ನೀವು ಸರ್, ಇಲ್ಲಿ ನಿಮ್ಮ ರುಜು ಹಾಕಿರಿ. ಅದ ಕ್ಕಾಗಿಯೇ ಇವೆಯಲ್ಲ ನಿಮ್ಮ ಕೈಗಳು...."

ಆದರೆ ಒಂದು ಘಂಟೆ ಹಿಂದೆ ನಾನೇನು ನೋಡಿದ್ದೆ ಎಂಬುದನ್ನು ಮೊದಲು ನಿಮಗೆ ತಿಳಿಸುತ್ತೇನೆ. ಬೇರೆ ಯಾರಾದರೂ ನನಗೆ ಈ ಸಂಗತಿ ಹೇಳಿದ್ದರೆ ನಾನು ನಂಬುತ್ತಿರಲಿಲ್ಲ.

ಭಾಬೊ ಕಿಚನ್‌ನಲ್ಲಿ ಚಪಾತಿ ಮಾಡಲು ಹಿಟ್ಟು ಕಲಸುತ್ತ ಕೂತಿದ್ದಳು. ನಾನು ಎಲ್ಲ

ವನ್ನೂ ನೇರವಾಗಿ ನೋಡುತ್ತಾ ಕೇಳುತ್ತಾ ಇದ್ದೆ. ಮೊದಲಿಗೆ ಅವಳು ಪರಾತವನ್ನು ಎತ್ತಿಹಿಡಿದು ಅಂದಳು- "ಏಳು, ಹೀಗೆ ಮಲಗಿದ್ದರೆ. ನಾನು ಹಿಟ್ಟನ್ನು ನನ್ನ ತಲೆಯಲ್ಲಿ ಕಲಸಬೇಕೇನು"? ನಂತರ ಎರಡು ಬಟ್ಟಲು ಹಿಟ್ಟನ್ನು ಡಬ್ಬದೊಳಗಿಂದ ಅಳೆದುಕೊಂಡು, ಅದನ್ನು ಪರಾತದಲ್ಲಿ ಸುರುವಿದಳು. ನಂತರ ಅದರೊಂದಿಗೆ ಮಾತಾಡತೊಡಗಿದಳು— "ನಿಲ್ಲು, ಯಾಕೆ ಹಾಗೆ ಹಾರಿ ಹೋಗುತ್ತಿಯೆ?... ತಗೋ ಈ ನೀರು ಕುಡಿ... ಕುಡಿಯೋದಿಲ್ವೆ?.. ಇರಲಿ ತಗೋ, ಸಣ್ಣ ಸಣ್ಣ ಗುಟುಕು ಕುಡಿ...'

ಗೋಡೆಗೆ ತಗುಲಿ ನಿಂತು, ನಗುವನ್ನು ತಡೆಯುವ ಪ್ರಯತ್ನದಲ್ಲಿ ನನ್ನ ಗಂಟಲು ಕಟ್ಟಿದ ಹಾಗಾಯ್ತು...ಒಂದೇ ಗುಟುಕಿಗೆ ಗ್ಲಾಸು ತುಂಬ ನೀರನ್ನು ನೇರವಾಗಿ ಗಂಟಲಲ್ಲಿ ಸುರುವಿಕೊಂಡೆನೇನೋ, ಎಂಬಂತೆ.

"ಹ್ಞಂ...ಹೀಗೆ...", ಭಾಬೊ ಹಿಟ್ಟು ನೋಂದುತ್ತಾ ಅದರ ಜತೆ ಮಾತಾಡುತ್ತಿದ್ದಳು, "ಹೀಗೆ ಕುಡಿದೆ ಎಂದರೆ, ನಾನು ನೋಂದು ನೋಂದು ನಿನ್ನಲ್ಲಿ ಪ್ರಾಣ ತುಂಬುತ್ತೀನಿ... ಸಾಕು ಸಾಕು, ಎಷ್ಟು ಬಾಯಾರಿಸಿದೆಯೋ ಅಷ್ಟು ಮಾತ್ರ ಕುಡಿ... ಇದೇನು? ನಾನು ಕಲಸುತ್ತಿದ್ದರೂ ನೀಯಾಕೆ ನನ್ನ ಕೈಯಿಂದ ಜಿಗಿದು ಹೊರಗೆ ಬೀಳುತ್ತೀಯೆ?...ನನ್ನನ್ನು ಭೇಟಿಯಾಗಲು ಯಾರೊ ಬರುವವನಿದ್ದಾನೆ ಎಂದೊ?...ನನ್ನ ಭೇಟಿ ಮಾಡಲು ಯಾರು ಬರ್ತಾರೊ?... ನನ್ನ ಪೋರ?... ಆ ಹರಾಮಿ ಮಗ ಎಂದು ಮನೆಬಿಟ್ಟು ಓಡಿ ಹೋದನೊ, ಅಂದೇ ತನ್ನ ತಾಯಿಯ ಕತ್ತು ಹಿಚುಕಿಬಿಟ್ಟ ಅವನು... ಎಷ್ಟು ವರ್ಷಗಳಾದವು?...ತಡಿ. ಎಣಿಸುತ್ತೀನಿ... ಒಂದು-ಎರಡು-ಮೂರು.: ಮೆತ್ತಗೆ ಯಾಕೆ? ಗಟ್ಟಿಯಾಗಿ ನೋಂದದಿದ್ದರೆ ನಿನ್ನಲ್ಲಿ ಜೀವ ಹೇಗೆ ಬರ್ಬೇಕು?...ಏಳು... ಹನ್ನೊಂದು...ಹನ್ನೆರಡು!...ಹ್ಞೂಂ, ಹನ್ನೆರಡು ವರ್ಷಗಳಾದವು. ಈ ಹನ್ನೆರಡು ವರ್ಷಗಳ ಒಂದೊಂದು ಘಳಿಗೆಯೂ ಒಂದೊಂದು ಗಾವುದದಷ್ಟು ದೀರ್ಘವಾಗಿತ್ತು...ಹ್ಞೂಂ, ಈಗ ನೀನು ಹಾದಿಗೆ ಬಂದೆ...ಈಗ ಮೃದುವಾಗಿ ನೋಂದುತ್ತೇನೆ... ನಿದ್ದೆ ಮಾಡಲು ಶುರುಮಾಡಿಲ್ಲ ತಾನೆ?... ಹನ್ನೆರಡು ವರ್ಷಗಳ ಘಳಿಗೆ ಘಳಿಗೆಯ ಲೆಕ್ಕ ಮಾಡಿ ಹೇಳು... ನಾನೆಷ್ಟು ಗಾವುದ ನಡೆದಿದ್ದೀನಿ ಅಂತ... ಇಲ್ಲ. ಎಲ್ಲೂ ಒಂದು ಕ್ಷಣವೂ ನಿಲ್ಲಲಿಲ್ಲ... ಯಾವನಾದರೂ ಮಗ ನನ್ನ ತಾಯಿಯನ್ನು ಸಾವಿರಾರು ಗಾವುದ ಧೀರ್ಘ ದಾರಿಯಲ್ಲಿ ಒಂಟಿ ಬಿಟ್ಟು ಹೋಗುತ್ತಾನೆಯೆ?... 'ಅಮ್ಮಾ ಒಮ್ಮೆ ನಾನು ದೊಡ್ಡವನಾಗಲಿ, ಆಮೇಲೆ ನೋಡಂತೆ', ಎನ್ನುತ್ತಿದ್ದ... ಏನುಳಿದಿದೆ ನೋಡಲಿಕ್ಕೆ?... ನನ್ನ ಕಣ್ಣುಗಳನ್ನೆ ಒಡೆದು ಹಾಕಿ ಹೋದಮೇಲೆ ನಾನೇನು ನೋಡಲಿ, ಹೇಳು?... ಒಮ್ಮೆ ಎಲ್ಲಾದರೂ ಕಣ್ಣಿಗೆ ಬಿದ್ದರೆ ಸಾಕು. ನಾನೆಲ್ಲವನ್ನು ನೋಡಿದಂತಾಗುತ್ತೆ —ಛೆ ಹಿಟ್ಟೇಹಿಟ್ಟೇ, ನಾನು ನನ್ನ ರಾಮಾಯಣ ಹೇಳ್ತಾ ಇದೀನಿ, ನೀನು ನನ್ನ ಮೃದುವಾದ ಕಲಿಸುವಿಕೆಯಿಂದ ತೂಕಡಿಸಲು ಆರಂಭಿಸಿದೆಯಾ?... ಆಗಲಿ ಮಹ್ರಾಯ, ನಿದ್ದೆ ಮಾಡಿ ಸ್ವಲ್ಪ ಸುಧಾರಿಸಿಕೊ, ಆಮೇಲೆ ನಿನ್ನನ್ನೆಬ್ಬಿಸಿ ನಿನ್ನ ಪೇಡೆ ಮಾಡ್ತಿನಿ..."

ನಾನು ನನ್ನ ಮೈಮರೆವಿನಲ್ಲಿ ಭಾಬೊಳ ಕೈಗಳಲ್ಲಿ ನೋಂದು-ನೋಂದು ಹೋಗಿ, ತೂಕಡಿಸಲಾರಂಭಿಸಿದ್ದೆ. ಈ ಮಾಯಾನಿದ್ದೆಯಿಂದ ಹೊರಬರಲೆಂದು ತಲೆ ಕೊಡವಬಯಸಿದೆ. ಆದರೂ ಹಾಗೆಯೇ ಗೋಡೆಗೆ ಅಂಟಿಕೊಂಡು ನಿಂತು, ಎಲ್ಲವನ್ನು ನಿದ್ದೆಯಲ್ಲೇ ನೋಡುತ್ತಾ ಕೇಳುತ್ತಾ ನಿಂತೆ.

ಆಚೆ ಇದ್ದ ಹಿತ್ತಾಳೆಯ ಹೂಜಿ ಮಿಂಚುತ್ತಾ ಮಿಂಚುತ್ತಾ ಬಹುಶಃ ದೂರದಿಂದಲೇ ಭಾಬೊಳನ್ನು ಕರೆದಿರಬೇಕು. ಅವಳು ಮೋರೆ ಅತ್ತ ತಿರುಗಿಸಿ ಹೇಳಲಾರಂಭಿಸಿದಳು- "ಹೌದು ತಾಯಿ, ನೀ ಎಚ್ಚರವಾಗಿದ್ದೀಯೆ. ಆದರೆ ಕತೆಯ ತುದಿಯೇ ನನ್ನ ಕೈಯಿಂದ ಜಾರಿ ಬಿದ್ದ ಮೇಲೆ ನಿನ್ನನ್ನು ಹೇಗೆ ಎಳೆದುಕೊಳ್ಳಲಿ?...ನನ್ನ ತಲೆಯನ್ನೆ?... ಹ್ಹಹ್ಹ, ಹ್ಹಹಾ..." ಅವಳು ಗಾಜಿನ ಗ್ಲಾಸುಗಳ ಕಡೆ ತಿರುಗಿ ನಗಲಾರಂಭಿಸಿದಳು- "ನಾನು ಇಡೀ ಲೋಕದ ಕತೆಗಳನ್ನು ನಿಮಗೆ ಹೇಳ್ತಾ ಇರ್ತೀನಿ, ಆದರೆ ನೀವು ಯಾವಾಗಲೂ ಖಾಲಿ ಬಿದ್ದಿರುತ್ತೀರಿ... ತುಂಬಿ-ತುಂಬಿದ್ದರೆ ನೋಡಿದವನು ಪ್ರೀತಿಯಿಂದ ನಿಮ್ಮನ್ನು ತುಟಿಗೆ ತಗುಲಿಸಿಕೊಳ್ಳುತ್ತಾನೆ... ಬೇಡ. ಕೆಂಪು ಮೆಣಸಿನ ಕಾಯಿಗಳಿಂದ ದೂರ

ವಿರಿ. ಇಲ್ಲವಾದರೆ ಸೀನುತ್ತ ಸೀನುತ್ತ, ಒಡೆದು ಚೂರಾಗಿ ಬೀಳುವಿರಿ... ಬಹಳ ಕಾರವಿದೆ..."

ನಂತರ ಅವಳು ಮೆಣಸಿನಕಾಯಿಗಳ ಕಡೆ ತಿರುಗಿದಳು-ಸಿಟ್ಟಾಗಬೇಡ ಮಹಾರಾಣಿ!... ಎಷ್ಟು ಕಾರವಾಗಿದ್ದೀ ಎಂದರೆ, ಎಲ್ಲರೂ ನಿನ್ನಿಂದ ದೂರ ಸರಿಯುತ್ತಾರೆ. ನಿನ್ನ ರುಚಿ ನೋಡಲೇನು?...ನನ್ನ ರುಚಿ ನೋಡಿ ನೋಡಿ ನಿನಗೆ ಬಲು ಮಜ ಎನಿಸುತ್ತದೆಯೊ? ಸರಿ, ಹಾಗಿದ್ರೆ ರುಚಿ ನೋಡ್ತಾ ಇರು, ಮಹರಾಯ್ತಿ, ನಾನ್ಯಾಕೆ ಬೇಡ ಅನ್ನಲಿ?...ಏನು, ನನ್ನ ಕಳೆದು ಹೋದ ಮಗನ ವಿಷಯ ಹೇಳ್ಬೇಕೆ?...ಎನ್ ಹೇಳ್ಲಿ...ಅವನೆಲ್ಲಾದ್ರೂ ಸಿಕ್ರೆ, ನಿನ್ನನ್ನು ಇಡಿಯಾಗಿ ಅವನ ಬಾಯಲ್ಲಿ ತುರುಕಿ ಬಿಡ್ತೀನಿ: ಹೇಳು, ಯಾರಾದರೂ ಮಗ, ತನ್ನ ಸ್ವಂತ ತಾಯಿಗೆ ಇಂಥ ಗತಿ ಕಾಣಿಸುತ್ತಾನೇನು?... ಅಯ್ಯೋ, ನೀವೆಲ್ಲರೂ ಒಟ್ಟಿಗೇ ಯಾಕೆ ಮಾತಾಡಲು ಶುರು ಮಾಡಿದಿರಿ?... ಒಬ್ಬೊಬ್ಬರಾಗಿ ಮಾತಾಡಿ... ಇಲ್ಲ. ನನಗೇನು ಗೊತ್ತು. ಈಗ ಅವನೆಲ್ಲಿದ್ದಾನೆ ಅಂತ?... ಇದ್ದಾನೋ ಇಲ್ಲವೋ; ಇದ್ದರೂ ಈಗವನು ನನ್ನವನಲ್ಲ... ಯಾರನ್ನು ಈಗ ಹೆಂಡತಿ ಮಾಡಿಕೊಂಡು ಇರುತ್ತಾನೋ, ಆ ಅಮ್ಮನ ಮಗನಾಗಿರಬಹುದು...! ಅಯ್ಯೋ, ಮತ್ತೇ ಭಾಬೊ...ಬಾಬೊ!... ನಾನೇನು ಕಿವುಡಿ ಏನು?... ಸುಮ್ಮನಿರಿ..." ಭಾಬೊ ಎಲ್ಲಾ ವಸ್ತುಗಳ ಕಡೆ ಕತ್ತು ಹೊರಳಿಸಿ ತನ್ನ ಕೈಯನ್ನು ತಲೆಯ ಮೇಲೆತ್ತಿಕೊಂಡು ಹೇಳಿದಳು- "ಸುಮ್ಮನಿರಿ!"

ನಮ್ಮ ಅಡಿಗೆ ಮನೆಯ ಒಂದೊಂದು ವಸ್ತುವೂ ಉಸಿರಾಡುತ್ತ ಉಸಿರಾಡುತ್ತ, ಮಾತಾಡುತ್ತ ಮಾತಾಡುತ್ತ, ಭಾಬೊಳ ಜಗತ್ತಿನಲ್ಲಿ ಸೇರಿಹೋಗಿದ್ದವು. ಹಾಗೆಯೇ ನಾನೂ ಕೂಡ ಹೊರಗೋಡೆಯಲ್ಲಿ ಸೇರಿ ಹೋದಂತೆ ನಿಂತುಕೊಂಡಿದ್ದೆ.

ಭಾಬೋ ಕೈತೊಳೆಯಲೆಂದು ಏಳತೊಡಗಿದಾಗ, ಸ್ಟೋವ್ ಬಹುಶಃ ತನ್ನ ತಲೆ ಎತ್ತಿ ಅವ

ಳಿಗೆ ಹೇಳಿತು-'ಇವತ್ತು ನಾನು ನಿನ್ನನ್ನು ಪೀಡಿಸುವುದಿಲ್ಲ ಭಾಬೊ, ನನ್ನಷ್ಟಕ್ಕೆ ಹೊತ್ತಿಕೊಂಡು ಉರಿಯುತ್ತೇನೆ.'

'ಹೌದು ಮಗ, ತಾನಾಗಿಯೇ ಉರಿಯುವವರು ಹೊಗೆಯಲ್ಲಿ ಉಸಿರುಕಟ್ಟಿಸಿಕೊಳ್ಳುವುದಿಲ್ಲ.'

ಭಾಬೊ ನಲ್ಲಿಯ ಬಳಿ ಬಂದು ನಿಂತಳು- 'ಇವತ್ತೂ ಖಾಲಿ ಇದ್ದೀಯೇನು? ಹಾಗಿದ್ದರೆ ಬಂದಾಗಿರು... ಇಲ್ಲ? ಇವತ್ತು ನೀರಲ್ಲಿ ಮುಳುಗಿ ಹೋಗುವಷ್ಟು ತುಂಬಿಕೊಂಡಿದ್ದೀಯಾ?...'

ಭಾಬೊ ನಳ ತೆರೆದ ತಕ್ಷಣ, ನೀರು ಸಂತೋಷದ ಅತಿರೇಕದಲ್ಲಿ 'ಬಾಬೊ ಭಾಬೊ' ಎಂದು ಚೀರುತ್ತ ಅವಳ ಕೈಗಳನ್ನು ತೊಳೆಯಲಾರಂಭಿಸಿತು..."ಯಾಕೆ ಗದ್ದಲ ಮಾಡುತ್ತೀಯೊ?... ಎಷ್ಟು ಶುಭ್ರ ಇದ್ದೀಯೆ. ಆದರೂ ಕಣ್ಣಿಗೆ ಕಾಣಿಸುತ್ತಿಲ್ಲ...ಬರೇ ಕೇಳಿಸುತ್ತಾ ಇದ್ದೀಯ... ಬೇಡಪ್ಪ, ಇಷ್ಟು ಜೋರಾಗಿ ಮಾತಾಡಬೇಡ, ಮೆಲ್ಲಮೆಲ್ಲಗೆ ಮಾತಾಡಿದರೆ ಏನಾದರೂ ಅರ್ಥವಾಗಬಹುದು..." ಚ್‌ಭಾ..ಭಾಬೊ!...ಭಾ..ಭಾಬೊ!...

ಅರೆ, ಹೌದು, ಸ್ವತಹ ನೀರು ಮಾತಾಡ್ತಿರೋದು...ಭಾ...ಭಾಬೊ...

ಭಾಬೋಳ ಮಾತುಗಳಿಂದ ನನಗೆ ಇದುವರೆಗೆ ಅನ್ನಿಸುತ್ತಿದ್ದುದೇನೆಂದರೆ, ಎಲ್ಲಾ ವಸ್ತುಗಳೂ ಮಾತಾಡುತ್ತಿವೆ ಎಂದು. ಆದರೆ ನೀವು ನಂಬಲಾರಿರಿ. ಈಗ ಅಚಾನಕವಾಗಿ, ಅವು ಮಾತಾಡುವುದನ್ನು ನನ್ನ ಕಿವಿಗಳೂ ಕೇಳತೊಡಗಿವೆ..ಭಾ...ಭಾಬೊ...

"ನಿನ್ನ ಬಳಬಳ ಸಪ್ಪಳದಲ್ಲಿ ನನಗೇನೂ ಕೇಳಿಸುತ್ತಿಲ್ಲ." ಭಾಬೊ ನಲ್ಲಿಯನ್ನು ಅರ್ಧ ತಿರುಗಿಸಿ ನೀರಿನ ರಭಸವನ್ನು ಕಮ್ಮಿ ಮಾಡಲು ಬಯಸಿದಳು.

"ಬೇಡ ಭಾಬೊ, ನನಗೆ ಸಂಪೂರ್ಣ ಮನಬಿಚ್ಚಿ ಮಾತಾಡಲು ಬಿಡು."

"ಸಂಪೂರ್ಣ ಮನಬಿಚ್ಚಿಯೇ ಮಾತಾಡು ಮಹ್ರಾಯ. ಅವನೂ ಸಹ ಮನಬಿಚ್ಚಿ ಮಾತಾಡುತ್ತಿದ್ದ. ಆದರೆ ನನ್ನನ್ನು ಮುಳುಗಿಸಿ, ಎಲ್ಲಿ ಹೋದನೋ, ಏನೋ?..."

"ಅವನೆಲ್ಲಿ ಹೋಗುತ್ತಾನೆ ಭಾಬೊ? ನೀರು ಎಲ್ಲೇ ಇರಲಿ, ನಿನ್ನೊಳಗೇ ನೀನು ಅವನಲ್ಲಿ ಮುಳುಗಿರುತ್ತಿಯೆ... ಬೇಡ, ದಯವಿಟ್ಟು ನನ್ನ ರಭಸವನ್ನು ಕಮ್ಮಿಮಾಡಬೇಡ... ನನ್ನನ್ನು ಧ್ಯಾನವಿಟ್ಟು ನೋಡು... ಇನ್ನೂ ಹೆಚ್ಚು ಲಕ್ಷ್ಯವಿಟ್ಟು ನೋಡು, ಭಾಬೊ!"

ಭಾಬೊ ನೀರನ್ನು ಎಷ್ಟು ಗಮನವಿಟ್ಟು ನೋಡತೊಡಗಿದಳೆಂದರೆ, ಅದು ಅವಳ ಕಣ್ಣುಗಳಲ್ಲಿ ಉಕ್ಕಿತು.

ನಾನು ಕಲ್ಲಿನಂತೆ ಗೋಡೆಗೆ ತಗುಲಿಕೊಂಡಿದ್ದೆ ಮತ್ತು ಛಿದ್ರ ಛಿದ್ರ ದೃಷ್ಟಿಯಿಂದ ಸುತ್ತಲೂ ನೋಡುತ್ತಾ, ಆಲೋಚಿಸುತ್ತಾ ಇದ್ದೆ-ತನ್ನ ಪ್ರಾಣವನ್ನು ಹನಿಸಿ ಹನಿಸಿ, ಒಂದೊಂದು ನಿರ್ಜೀವ ವಸ್ತುವಿನಲ್ಲೂ ಹೇಗೆ ಜೀವ ತುಂಬಿದ್ದಾಳೆ ಭಾಬೊ... ನನ್ನಲ್ಲೂ ಕೂಡ! ●

ಜಾವಾ-ಸುಮಾತ್ರಾಗಳ ಮಧ್ಯೆ ಇರುವ ಕ್ರಕೋಟಾ ದ್ವೀಪ 1883ರಲ್ಲಿ ಜ್ವಾಲಾಮುಖಿಯಿಂದ ಸ್ಫೋಟಗೊಂಡಿತು. ಈ ಸ್ಫೋಟ ಅದೆಷ್ಟು ಭಯಂಕರವಾಗಿತ್ತೆಂದರೆ ನಾಗಾಸಾಕಿ-ಹಿರೋಷಿಮಾಗಳ ಮೇಲೆಸೆದ ಬಾಂಬುಗಳೂ ಇದರ ಮುಂದೆ ಪಟಾಕಿಯ ಶಬ್ದಕ್ಕೆ ಸಮ ಎಂಬಷ್ಟು. ಕ್ರಕೋಟಾ ಸ್ಫೋಟಿಸಿದ ಸದ್ದು ಮೂರು ಸಾವಿರ ಮೈಲುಗಳಾಚೆಗಿನ ಮಡಗಾಸ್ಕರ್ ದ್ವೀಪದವರೆಗೂ ಕೇಳಿಸಿತಂತೆ. ಈ ಸ್ಫೋಟದ ಸಮಯದಲ್ಲಿ ಉಂಟಾದ ಅಲೆಗಳು ಎಂಟುಸಾವಿರ ಮೈಲುಗಳಷ್ಟು ದೂರದವರೆಗೂ ಕಂಡುಬಂದವಂತೆ. ಸ್ಫೋಟದಿಂದಾಗಿ ಆಕಾಶದತ್ತ ಚಿಮ್ಮಲ್ಪಟ್ಟ ಬೂದಿ, ಕಲ್ಲಿನ ಪುಡಿ, ಧೂಳು ಕ್ಷಿತಗೋಲಕ್ಕೂ ತಲುಪಿ ಒಂದು ವರ್ಷದವರೆಗೆ ಆ ವಲಯದಲ್ಲಿ ವಿಚಿತ್ರ ವಾತಾವರಣ ಉಂಟಾಗಿತ್ತಂತೆ.

ಸ್ಫೋಟಾನಂತರ ಸಮುದ್ರ ಪಾತಳಿಯಿಂದ 1400 ಅಡಿ ಎತ್ತರವಿದ್ದ ಕ್ರಕೋಟಾ ದ್ವೀಪದ ಆ ಜಾಗದಲ್ಲಿ ಸಾವಿರ ಅಡಿ ಆಳದ ಮೈಲು ಅಗಲದ ದೊಡ್ಡ ಕಂದಕ ಉಂಟಾಯಿತು.

● ಸಂಗ್ರಹ: ಸುರೇಶ ತಾಂಡೇಲ.

ಜೀವನ ದರ್ಶನ – 6 ★ ಕೆ.ಟಿ. ಪಾಂಡುರಂಗಿ

ಜ್ಞಾನ – ವಿಪರೀತಜ್ಞಾನ

ಮನುಷ್ಯನಿಗೆ ಜ್ಞಾನವು ಎಷ್ಟು ಅಗತ್ಯವೋ ಅಷ್ಟೇ ಅಗತ್ಯವಾದದ್ದು ವಿಪರೀತಜ್ಞಾನವಿಲ್ಲದಿರುವುದು. ಜ್ಞಾನವೆಂದರೆ ಆಯಾ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳುವುದು. ವಿಪರೀತಜ್ಞಾನವೆಂದರೆ ಆಯಾ ವಿಷಯಗಳನ್ನು ಅವು ಇರುವದಕ್ಕಿಂತ ವಿರುದ್ಧವಾಗಿ ತಿಳಿದುಕೊಳ್ಳುವುದು. ಉದಾಹರಣೆಗೆ ಎದುರಿಗೆ ಒಂದು ಹಗ್ಗದ ತುಂಡು ಬಿದ್ದಿದ್ದರೆ ಅದನ್ನು ಹಗ್ಗದ ತುಂಡು ಎಂದು ತಿಳಿದುಕೊಳ್ಳುವುದು ಸರಿಯಾದ ಜ್ಞಾನ. ಅದನ್ನು ಹಾವು ಎಂದು ತಿಳಿದುಕೊಳ್ಳುವುದು ವಿಪರೀತ ಜ್ಞಾನ. ಕೇವಲ ಕಣ್ಣಿಗೆ ಕಾಣುವ ವಸ್ತುಗಳ ಮಟ್ಟಿಗಾದರೆ ಇಂಥ ವಿಪರೀತಜ್ಞಾನವನ್ನು ಸುಲಭವಾಗಿ ತಿದ್ದಿಕೊಳ್ಳಬಹುದು. ಆದರೆ ಐತಿಹಾಸಿಕ ಘಟನೆಗಳು, ತಾತ್ವಿಕ ವಿಚಾರಗಳು, ರಾಜಕೀಯ ಧೋರಣೆಗಳು, ಸಾಮಾಜಿಕ ಸಮಸ್ಯೆಗಳು, ಜೀವನದ ಗುರಿ ಕ್ರಮಗಳು, ಸಾಹಿತ್ಯ ಕಲೆಗಳು ಮಾನವನ ಮನಸ್ಸಿನ ಮೇಲೆ ಮಾಡುವ ಪರಿಣಾಮಗಳು, ವ್ಯಕ್ತಿಗತ ಸ್ವಭಾವ ನಡತೆ ಇಂಥ ವಿಷಯಗಳಲ್ಲಿ ಇವುಗಳ ಸರಿಯಾದ ತಿಳುವಳಿಕೆಯಿಲ್ಲದೆ ತಪ್ಪಾದ, ವಿಪರೀತವಾದ ಭಾವನೆಗಳುಂಟಾದರೆ ಮತ್ತು ಇಂಥ ತಪ್ಪು ತಿಳುವಳಿಕೆ ಒಬ್ಬಿಬ್ಬರಿಗೆ ಆಗದೆ ಸಮಾಜದಲ್ಲಿಯ ಬಹು ಮಂದಿಗೆ ಸಮಾಜದ ಮುಖಂಡರಿಗೆ ಸಮಾಜವನ್ನು ಮುನ್ನಡೆಸುವ ಅಧಿಕಾರವಿದ್ದವರಿಗೆ ಆದರೆ ಇದರ ದುಷ್ಪರಿಣಾಮವನ್ನು ವ್ಯಕ್ತಿಯ ಅನುಭವಿಸಬೇಕಾಗುವುದು, ಸಮಾಜವೂ ಅನುಭವಿಸಬೇಕಾಗುವುದು.

ಎಲ್ಲರೂ ಎಲ್ಲ ವಿಷಯಗಳಲ್ಲಿಯೂ ಸರಿಯಾದ ಜ್ಞಾನವನ್ನು ಮಾಡಿಕೊಳ್ಳಬೇಕು ಎಂಬ ಅಭಿಲಾಷೆಯುಳ್ಳವರೇ. ಆದ್ದರಿಂದ ಇಂಥ ವಿಪರೀತಜ್ಞಾನ ಕೆಲವರಿಗೆ ಏಕೆ ಉಂಟಾಗುತ್ತದೆ? ಕೆಲವು ವಿಷಯಗಳಲ್ಲಿ ಅನೇಕರಿಗೆ ಏಕೆ ವಿಪರೀತಜ್ಞಾನವುಂಟಾಗುತ್ತದೆ ಎಂಬುದನ್ನು ಮೊದಲು ಆಲೋಚಿಸಬೇಕು. ಮನುಷ್ಯನು ಯಾವದೇ ವಿಷಯದಲ್ಲಿ ಆಲೋಚನೆ ಮಾಡುವಾಗ ವಸ್ತುನಿಷ್ಠವಾಗಿ ಆಲೋಚನೆ ಮಾಡುವುದಕ್ಕಿಂತ ಹೆಚ್ಚಾಗಿ ಸ್ವನಿಷ್ಠವಾಗಿ ಆಲೋಚಿಸುವನು. ತನ್ನ ಹಿತಾಸಕ್ತಿಯೇ ಅವನ ಆಲೋಚನೆಯ ಕೇಂದ್ರಬಿಂದು. ಯಾವುದೇ ಘಟನೆ ಅಥವಾ ಸಂದರ್ಭವನ್ನು ಯಾವುದೇ ವ್ಯಕ್ತಿಯ ಸ್ವಭಾವ ನಡತೆಗಳನ್ನು ಅರ್ಥಮಾಡಿಕೊಳ್ಳುವಾಗ ತಿಳಿದೋ ತಿಳಿಯದೆಯೋ ತನ್ನ ಹಿತಾಸಕ್ತಿಯ ದೃಷ್ಟಿಯಿಂದಲೇ ಅರ್ಥಮಾಡಿಕೊಳ್ಳುವನು. ಆದ್ದರಿಂದ ಅವನ ಅಭಿಪ್ರಾಯ ಮತ್ತು ನಿರ್ಣಯಗಳು ಸ್ವನಿಷ್ಠವಾಗುವವು. ಅವನ ಅಭಿಪ್ರಾಯ ಹೀಗೆ ರೂಪಿತವಾಗುತ್ತಿದ್ದರೂ ಸಮಾಜದಲ್ಲಿ ಈಗಾಗಲೇ ಕೆಲವು ಮಾನದಂಡಗಳೂ ಅಭಿಪ್ರಾಯಗಳೂ ಪ್ರಚಲಿತವಾಗಿರುವವು. ಇವುಗಳಿಗೂ ತನ್ನ ಹಿತಾಸಕ್ತಿಯಿಂದ ಮೂಡಿದ ಅಭಿಪ್ರಾಯಗಳಿಗೂ ಅಂತರವುಂಟಾದಾಗ ಅವನು ತನ್ನ ವಿಚಾರಗಳ ಸಮರ್ಥನೆ ಪ್ರಚಾರಗಳಿಗೆ ತೊಡಗುವನು. ಯುಕ್ತಿ ಪ್ರಯುಕ್ತಿಗಳಿಂದ ಅದನ್ನು ಸಮರ್ಥಿಸುವನು. ಇದರಿಂದ ವಸ್ತುನಿಷ್ಠ ಅಭಿಪ್ರಾಯಗಳು ಹಿಂದೆ ಸರಿಯುತ್ತಾ ವ್ಯಕ್ತಿನಿಷ್ಠ ಅಭಿಪ್ರಾಯಗಳು ಹೆಚ್ಚಾಗುತ್ತ ಹೋಗುವವು. ಹರಿತವಾದ ನಾಲಿಗೆಯುಳ್ಳವರೂ, ಚುರುಕಾದ ಬುದ್ಧಿಯಿದ್ದವರೂ ತಮ್ಮ ಅಭಿಪ್ರಾಯದ ಜನರ ಗುಂಪನ್ನು ಕಟ್ಟಲು ಸಮರ್ಥರಾಗುವರು. ಅರ್ಧಮುರ್ಧ ಜ್ಞಾನವಿದ್ದು ಭಾವನಾಪ್ರಧಾನರಾದವರನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಸಮರ್ಥರಾಗುವರು. ಹೀಗಾಗಿ ಜ್ಞಾನದ ಜೊತೆಗೆ ವಿಪರೀತ ಜ್ಞಾನವೂ ಬೆಳೆಯುವುದು. ಇದನ್ನು ಹಿಂಗಡಿಸಿಕೊಳ್ಳದಿದ್ದರೆ ಮಾನಸಿಕ ಸಂಘರ್ಷ, ಅಶಾಂತಿಯುಂಟಾಗುವವು. ಆದ್ದರಿಂದ ವಸ್ತುನಿಷ್ಠವಾಗಿ ನ್ಯಾಯಸಮ್ಮತವಾಗಿ ಆಲೋಚಿಸುವ ಸ್ವಭಾವವನ್ನು ಬೆಳೆಸಿಕೊಳ್ಳಬೇಕು. ಇದರಿಂದ ಜೀವನದಲ್ಲಿ ಗಟ್ಟಿ ಮನಸ್ಸಿನಿಂದ ಮತ್ತು ಸ್ಪಷ್ಟದೃಷ್ಟಿಯಿಂದ ಬಾಳಲು ಸಹಾಯವಾಗುವದು. ಇಂದಿನ ಪ್ರಚಾರಯುಗದಲ್ಲಿಯಂತೂ ಸ್ವತಂತ್ರ ವಿಚಾರಶಕ್ತಿಯನ್ನು ಜಾಗೃತವಾಗಿಟ್ಟುಕೊಳ್ಳದಿದ್ದರೆ ವಿಪರೀತಜ್ಞಾನವೇ ಹೆಚ್ಚಾಗುವದು. ●

ಒಂದು ಹೊಸ ಅನುಭವ

• ಗೋವಿಂದಮೂರ್ತಿ ದೇಸಾಯಿ •

ಇಂಗ್ಲೀಷು ಮಾತೃಭಾಷೆಯಲ್ಲದಿದ್ದರೂ ಅದನ್ನು ಆತ್ಮಸಾತ್ ಮಾಡಿಕೊಂಡ ಭಾರತೀಯಾಂಗ್ಲ ಲೇಖಕ, ಅದರಲ್ಲಿ ತನ್ನ ಸಾಧನೆ ಎಷ್ಟೇ ಉಚ್ಚಮಟ್ಟದ್ದಾಗಿರುವಾಗಲೂ ಒಂದು ಬಗೆಯ ಅನಾಥಪ್ರಜ್ಞೆಯಿಂದ ಬಳಲುವುದು ಅನಿವಾರ್ಯವೇನೋ! ಶಶಿ ದೇಶಪಾಂಡೆಯವರನ್ನೇ ಒಂದು ಉದಾಹರಣೆಯೆಂದಿಟ್ಟುಕೊಂಡು ನೋಡಬಹುದು. ಬರವಣಿಗೆಯನ್ನು ಪ್ರಾರಂಭಿಸಿದಂದಿನಿಂದ ಇಂದಿನವರೆಗೆ ನಾಲ್ಕು ಕಥಾಸಂಗ್ರಹಗಳನ್ನು ಐದು ಕಾದಂಬರಿಗಳನ್ನು ಮಕ್ಕಳಿಗಾಗಿ ಕೆಲ ಪುಸ್ತಕಗಳನ್ನು ಪ್ರಸಿದ್ಧಿಸಿರುವ ಅವರಿಗೆ ಈ ದೇಶದಲ್ಲಿ ಪ್ರಕಾಶಕರು ದೊರೆಯುವುದೇನೂ ದುಸ್ಸಾಧ್ಯವೆನಿಸಿಲ್ಲ. ಆದರೆ ಲೇಖಕರನ್ನು ಕೆಲವು ಪ್ರಸಿದ್ಧರೆನಿಸಿಕೊಂಡಿರುವ ಪ್ರಕಾಶಕರು ನಡೆಸಿಕೊಳ್ಳುವ ರೀತಿಯನ್ನು ನೋಡಿದರೆ ಅವರ ಮನ ಮುದುರುತ್ತದೆ. ಅದರಲ್ಲೂ ಪಾಶ್ಚಾತ್ಯ ದೇಶಗಳಲ್ಲಿ ಕಂಡುಬರುವ ಲೇಖಕ-ಪ್ರಕಾಶಕ ಸಂಬಂಧವನ್ನು ತಾವೇ ಅನುಭವಿಸಿದಾಗ ಇಲ್ಲಿಯ ವಸ್ತುಸ್ಥಿತಿಗೂ ಅಲ್ಲಿಯದಕ್ಕೂ ಇರುವ ಅಂತರ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

THAT LONG SILENCE (ಆ ಸುದೀರ್ಘ ಮೌನ) ಶಶಿ ದೇಶಪಾಂಡೆಯವರ ಐದನೆಯ ಹಾಗೂ ತೀರ ಇತ್ತೀಚಿನ ಕಾದಂಬರಿ. ಕೆಲವು ಭಾರತೀಯ ಪ್ರಕಾಶಕರಿಂದ ಕಾದಂಬರಿಯ ಹಸ್ತಪ್ರತಿ ಮರಳಿಬಂದಾಗ ಮೊಟ್ಟಮೊದಲ ಬಾರಿಗೆ ಇಂಗ್ಲಂಡಿನತ್ತ ಹೊರಳಿದರು. ಮದ್ರಾಸಿನ ಬ್ರಿಟಿಶ್ ಕೌನ್ಸಿಲ್ ಲೈಬ್ರರಿಯಲ್ಲಿ ಅಲ್ಲಿಯ ಪ್ರಕಾಶನ ಸಂಸ್ಥೆಗಳ ಯಾದಿಯ ಮೇಲೆ ಕಣ್ಣಾಡಿಸತೊಡಗಿದಾಗ 'ವಿರಾಗೊ' ಎಂಬ ಹೆಸರಿನ ಮೇಲೆ ದೃಷ್ಟಿ ನೆಟ್ಟಿತು. ಕಾರಣ ಈ ಸಂಸ್ಥೆಯ ವೈಶಿಷ್ಟ್ಯವೆಂದರೆ ಸ್ತ್ರೀಯರ ಕೃತಿಗಳ ಪ್ರಕಾಶನಕ್ಕೇ ಇದು ಮೀಸಲಾಗಿದ್ದುದು. ಸರಿ, ಹಸ್ತಪ್ರತಿ ಅಲ್ಲಿಗೂ ಹೋಯಿತು. ಮುಂದಿನ ಕೆಲ ದಿನಗಳಲ್ಲೇ ಅಲ್ಲಿಂದ ಸ್ವೀಕೃತಿಯ ಪತ್ರವೂ ಬಂತು; ಪ್ರಕಾಶನದ ಕುರಿತ ಒಪ್ಪಂದಕ್ಕೆ ಅಂಕಿತ ಹಾಕುವುದೂ ಆಯಿತು, ಮುಂದೆ ಆ ಪುಸ್ತಕ ಬಿಡುಗಡೆಯ ದಿನಾಂಕವನ್ನು ಕೂಡ ಮುಂಚಿತವಾಗಿಯೇ ತಿಳಿಸಲಾಯಿತು. ಆದರೆ ಶಶಿಯವರನ್ನು ಕಾದಿದ್ದ ಆಶ್ಚರ್ಯವೆಂದರೆ ಬಿಡುಗಡೆಯ ಸಮಾರಂಭಕ್ಕೆ ಲೇಖಕಿಯನ್ನು ಆಮಂತ್ರಿಸಲೂ ಅವರು ಮರೆಯಲಿಲ್ಲ. ಎರಡು ವಾರಗಳ ಮಟ್ಟಿಗೆ ಇಂಗ್ಲಂಡಿಗೆ ಬರಬೇಕೆಂದೂ, ಪ್ರವಾಸ ವೆಚ್ಚವನ್ನಲ್ಲದೆ ಆ ದೇಶದಲ್ಲಿ ಅವರ ವಾಸ್ತವ್ಯ ಕಾಲದ ವೆಚ್ಚವನ್ನು ನೋಡಿಕೊಳ್ಳುವುದಾಗಿ ವಿರಾಗೊ ತಿಳಿಸಿತು. ಆದರೆ ಇದೆಲ್ಲಕ್ಕಿಂತ ಹೆಚ್ಚಾಗಿ ಅಲ್ಲಿಯ ಸಮೂಹ ಮಾಧ್ಯಮದ ಮೂಲಕ ಆ ದೇಶಕ್ಕೆ, ಅಲ್ಲಿಯ ಜನಕ್ಕೆ ಹೊಸಬಳಾದ ಲೇಖಕಿಯನ್ನು ತೆರೆದು ತೋರಿದ್ದು, ಒಬ್ಬ ಲೇಖಕಿಯ ಬಗ್ಗೆ ಪ್ರಕಾಶಕರಲ್ಲಿರುವ ಗೌರವಭಾವನೆಯನ್ನು ಎತ್ತಿ ತೋರಿದ್ದು ವಿಶೇಷವಾಗಿದೆ.

ಭಾರತದಲ್ಲಾದರೆ ನಿಮ್ಮ ಪುಸ್ತಕ ಹೊರ

ಬಂದದ್ದು ಸಹ ಎಷ್ಟೋ ಸಲ ನಿಮಗೆ ಗೊತ್ತಾಗಲು ತಿಂಗಳುಗಳೇ ಹಿಡಿಯಬಹುದು. ಅದಕ್ಕಾಗಿ ನಿಮಗೆ ಸಂಭಾವನೆ ದೊರೆತರೆ ಅದಕ್ಕೆ ಹಲವು ವರ್ಷಗಳೇ ಬೇಕಾಗಬಹುದು; ಅಷ್ಟು ದಿನ ಕಾದ ನಂತರವೂ ನಿಮಗೆ ದೊರೆತದ್ದು ನೀವು ಲೇಖನಿ ಸಂನ್ಯಾಸವನ್ನೇ ಕೈಕೊಳ್ಳಲು ಮುಂದಾಗುವಷ್ಟು ಕ್ಷುಲ್ಲಕ ಮೊತ್ತವಿರಬಹುದು. ನೀವೇ ನಿಮ್ಮ ಸ್ನೇಹಿತರನ್ನು ಹುರಿದುಂಬಿಸಿ ಪುಸ್ತಕ ಬಿಡುಗಡೆಯ ಸಮಾರಂಭ ಮಾಡಿಸಿಕೊಂಡು ಸಂತೋಷಪಡಲೂ ಬಹುದು. ಈಗ ಎಲ್ಲೆಲ್ಲೂ ನಡೆಯುತ್ತಿರುವ ಇಂಥ ಸಮಾರಂಭಗಳಲ್ಲೆಲ್ಲ ಕಂಡುಬರುವುದು ಸಾಮಾನ್ಯವಾಗಿ ಒಂದೇ ಧಾಟಿಯ ಹಾಡು. ನಿಮ್ಮನ್ನೂ ನಿಮ್ಮ ಕೃತಿಯನ್ನೂ ಕೆಲವರು ಹೊಗಳಿ ಹಾರ ಹಾಕಿದ ನಂತರ ಅಲ್ಪೋಪಹಾರ; ಮುಂದೆ ನಿಮ್ಮ ವರ್ಚಸ್ಸು ಸಾಕಷ್ಟಿದ್ದರೆ ಒಂದೆರಡು ಪತ್ರಿಕೆಗಳಲ್ಲಿ ಚಿಕ್ಕ ವರದಿಗಳ ಪ್ರಕಟನೆ. ಇದರಿಂದ ನಿಮ್ಮ ಪುಸ್ತಕ ಮಾರಾಟಕ್ಕೇನಾದರೂ ಪ್ರಯೋಜನವಾಗುತ್ತಿದ್ದರೆ ದೇವರಿಗೇ ಗೊತ್ತು. ಆದರೆ ಒಬ್ಬ ಲೇಖಕನ ಒಂದು ಕೃತಿಯ ಸರಿಯಾದ ಮೌಲ್ಯಮಾಪನವಾಗಲಿ.

ಅದರ ಬಗ್ಗೆ ಮೌಲಿಕ ಚರ್ಚೆಯಾಗಲಿ ತೀರ ಅಪರೂಪ. ಈ ಎಲ್ಲ ಗೊಂದಲದ ಮಧ್ಯದಲ್ಲಿ ಬರಹಗಾರ ಎಲ್ಲೋ ಉಳಿದುಬಿಟ್ಟು ಸಮಾಜದ ಕಣ್ಣಿಗೆ ಬೀಳದಿರುವುದೇ ಹೆಚ್ಚು. ನಿಮಗೆ ಪ್ರಸಿದ್ಧಿ ಬೇಕಿದ್ದರೆ ಅದನ್ನು ಸಾಧಿಸುವ ಕಲೆ ನಿಮಗೆ ಅವಗತವಾಗಿರಬೇಕು. ಇಲ್ಲಿ ನಿಮ್ಮ ಬೌದ್ಧಿಕ ಸಾಧನೆಗಳಾಗಲಿ, ಪ್ರತಿಭೆಯಾಗಲಿ ಗೌಣ; ಕಾರ್ಯಸಾಧನೆಯ ಕೌಶಲವೊಂದಿದ್ದರೆ ಸಾಕು. ನಿಮಗೆ ನಿಮ್ಮದೇ ಆದ ವ್ಯಕ್ತಿತ್ವವಿದೆ ಯೆಂಬುದನ್ನು ಮರೆತು ವಾಸ್ತವದಲ್ಲಿ ಸಮಾಜದಿಂದ 'ಮನ್ನಣೆ' ದೊರಕುವುದಕ್ಕಾಗಿ ಹತ್ತಾರು ಬಗೆಯ ಶಕ್ತಿ ಪ್ರತಿಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡು 'ಸಮನ್ವಯ' ಮಂತ್ರ ಜಪಿಸುತ್ತ ಆತ್ಮವಂಚನೆ ಮಾಡಿಕೊಳ್ಳಬೇಕಾಗಬಹುದು. ನಮ್ಮ ದೇಶದಲ್ಲಿಯ ಲೇಖಕ-ಪ್ರಕಾಶಕರಲ್ಲಿರುವ ಸಾಮಾನ್ಯ ಸಂಬಂಧದ ಒಂದು ಕಿಂಡಿನೋಟವಿದು. ಇದರಲ್ಲಿ ಕೆಲವಾದರೂ ಅನುಭವಗಳು ಶಶಿಯವರಿಗೆ ಬಂದಿರಲೇಬೇಕು.

ಲಂಡನ್ನಿನ ಹಿತ್ರೊ ವಿಮಾನ ನಿಲ್ದಾಣದಲ್ಲಿ ಕಾಲಿರಿಸಿದ ಕ್ಷಣದಿಂದ ಹದಿನೈದು ದಿನಗಳ ನಂತರ ಪುನಃ ಭಾರತಕ್ಕೆ ಪ್ರಯಾಣಿಸಲೆಂದು ವಿಮಾನವೇರುವವರೆಗೂ ಶಶಿ ಪ್ರಕಾಶಕರ ಅತಿಥಿ. ಮೊದಲೇ ಸಾಕಷ್ಟು ಪತ್ರವ್ಯವಹಾರ ಮಾಡಿ ಹದಿನೈದು ದಿನಗಳ ಕಾರ್ಯಕ್ರಮವನ್ನು ಅತ್ಯಂತ ವಿವರಪೂರ್ಣವಾಗಿ ಗೊತ್ತುಪಡಿಸಲಾಗಿತ್ತು. ಅದಕ್ಕೆ ಮುನ್ನ ಲೇಖಕಿಗೆ ವೈಯಕ್ತಿಕ ಆಸ್ಥೆಯುಳ್ಳ ವಿಷಯಗಳು ಹಾಗೂ ವ್ಯಕ್ತಿಗಳ ಬಗ್ಗೆಯೂ ತಿಳಿದುಕೊಂಡು ಈ ಎರಡು ವಾರಗಳ ಕಾರ್ಯಕ್ರಮದಲ್ಲಿ ಅವುಗಳಿಗೂ ತಕ್ಕ ಅವಕಾಶವನ್ನು ಒದಗಿಸಲಾಗಿತ್ತು.

ಇಂಗ್ಲೆಂಡಿನ ಓದುಗರಿಗೆ ಹೊಸಬರಾದ ಭಾರತೀಯ ಲೇಖಕಿಯೊಬ್ಬಳನ್ನು ತನ್ನ ಓದುಗರಿಗೆ ಪರಿಚಯಿಸಲು ಅಲ್ಲಿಯ ಪ್ರಮುಖ ಪತ್ರಿಕಾಕರ್ತರೊಂದಿಗೆ, ರೇಡಿಯೋ ಸಂದರ್ಶಕರೊಂದಿಗೆ ಸಂವಾದಗಳ ತೆರದಲ್ಲಿ ಸಂದರ್ಶನಗಳನ್ನು ತುಂಬ ಅಚ್ಚುಕಟ್ಟುತನದಿಂದ ಒಬ್ಬೊಬ್ಬರಿಗೂ ಸಾಕಷ್ಟು ಅವಕಾಶ ದೊರೆಯುವ ತೆರದಲ್ಲಿ ಏರ್ಪಡಿಸಲಾಗಿತ್ತು. ಸಾಹಿತ್ಯದಲ್ಲಿ ವಿಶೇಷ ಆಸಕ್ತರು ಬೇರೆ ಬೇರೆ ಗುಂಪುಗಳೊಡನೆ ಚಿಕ್ಕಪುಟ್ಟ ಚಹಾಕೂಟ, ಚರ್ಚಾಕೂಟಗಳನ್ನು ಅತಿಥಿ ಲೇಖಕರಿಗೆ ದಣಿವಾಗದ ತೆರದಲ್ಲಿ ಯೋಜಿಸಲಾಗಿತ್ತು. ಇಂತಹ ಕಾರ್ಯಕ್ರಮಗಳು ದೇಶದ ಅನೇಕ ನಗರಗಳಲ್ಲಿ ನಡೆದುವು. ಸಾಮಾನ್ಯವಾಗಿ ಸಂದರ್ಶಕರು ಸಾಕಷ್ಟು ಓದಿಕೊಂಡವರಾಗಿರುತ್ತಿದ್ದರು. ಸಂದರ್ಶಕರು ವೈಯಕ್ತಿಕವಾದ ವಿಭಿನ್ನ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದರಾದರೂ ಎರಡು ಪ್ರಶ್ನೆಗಳನ್ನು ಮಾತ್ರ ಕೇಳಲು ಮರೆಯುತ್ತಿರಲಿಲ್ಲ.

"ನಿಮ್ಮ ಕಾದಂಬರಿಯನ್ನು ಭಾರತದಲ್ಲೇಕೆ ಪ್ರಕಟಿಸಲಿಲ್ಲ? ಇಂಗ್ಲೆಂಡಿಗೇಕೆ ಕಳಿಸಿದಿರಿ?"— ಈ ಪ್ರಶ್ನೆಗೆ ಉತ್ತರ ಸರಳವಿತ್ತು:

"ಭಾರತದಲ್ಲಿ ಪ್ರಕಾಶಕರು ಇದನ್ನೆತ್ತಿಕೊಳ್ಳಲು ಮಿಜಿಮಿಜಿ ಮಾಡತೊಡಗಿದ್ದರಿಂದ ನಾನು ಲಂಡನ್ನಿನ ಈ ಪ್ರಕಾಶನ ಸಂಸ್ಥೆಯನ್ನು ಸಂಪರ್ಕಿಸಬೇಕಾಯಿತು."

"ಇದು ನಿಮ್ಮ ಆತ್ಮಕಥನವೆ?"

"ಖಂಡಿತ ಅಲ್ಲ. ಆದರೆ ಕಥಾನಾಯಕಿಯ ಕೆಲವು ಅನುಭವಗಳು ನನ್ನ ಅನುಭವಗಳೂ ಆಗಿವೆ, ಅಷ್ಟೆ."

ಪುಸ್ತಕ ಬಿಡುಗಡೆಯ ನಂತರ ಲೇಖಕಿಯನ್ನು ಪ್ರಕಾಶಕರು ಕೆಲವು ಪ್ರಮುಖ ಪುಸ್ತಕದ ಅಂಗಡಿಗಳಿಗೆ ಕರೆದೊಯ್ದರು. ಅಲ್ಲಿ ಈ ಪುಸ್ತಕದ ಹಲವಾರು ಪ್ರತಿಗಳ ಮೇಲೆ ಅವರ ಅಂಕಿತ ಹಾಕಿಸಿದರು. ನಂತರ ಅಂಗಡಿಯ ಹೊರಗಡೆ 'ಲೇಖಕಿಯ ಹಸ್ತಾಕ್ಷರವುಳ್ಳ ಕಾದಂಬರಿ ಲಭ್ಯ' ಎಂದು ಕರಿ ಹಲಗೆಯ ಮೇಲೆ ಬರೆಸಿ ತೂಗು ಹಾಕಿದರು. ಅಲ್ಪಾವಧಿಯಲ್ಲಿ ಕಾದಂಬರಿಯ ನೂರಾರು ಪ್ರತಿಗಳು ಮಾರಾಟವಾದವು.

ಎರಡು ವಾರಗಳ ಅವಿರತ ಕಾರ್ಯಕ್ರಮದ ನಂತರ ಬೀಳ್ಕೊಡುವಾಗ ಪ್ರಕಾಶಕರು ಕ್ಷಮಾಪಣೆಯ ಧ್ವನಿಯಲ್ಲೇ ಕೇಳಿದರಂತೆ:

"Madam, have we overused you?" (ನಿಮ್ಮನ್ನು ಅತಿಯಾಗಿ ಬಳಸಿಕೊಂಡಂತಾಯ್ತೆ?) ಎಂದು. ಒಂದು ಪುಸ್ತಕದ ಮಾರಾಟ ತಂತ್ರದ ಅಂಗವಾಗಿ ಇಂಥ ಅನೇಕ 'ಕಸರತ್ತು'ಗಳನ್ನು ಮಾಡುವುದು ಅನಿವಾರ್ಯವಾಗುತ್ತದೆಂಬುದನ್ನು ಅವರೇ ಸೂಚ್ಯವಾಗಿ ಹೇಳಿದರು ಕೂಡ. ●

ಶಶಿ ದೇಶಪಾಂಡೆ

ಶಶಿ ದೇಶಪಾಂಡೆ- ಕನ್ನಡಿಗರಿಗೆ ಅಷ್ಟಾಗಿ ಪರಿಚಯವಿರದ ಕನ್ನಡತಿ, ಆಂಗ್ಲ ಬರಹಗಾತಿ. ಅವರ ಕಥೆಗಳು ಆಗೀಗ ಅನುವಾದಗೊಂಡು ಕನ್ನಡ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಅಂತಾರಾಷ್ಟ್ರೀಯ ಘಟ್ಟದ ಈ ಲೇಖಕಿಯ ಕಥಾಸಂಗ್ರಹಗಳು, ಆಂಗ್ಲ ಕಾದಂಬರಿಗಳು ಭಾರತೀಯವೆನಿಸಿಯೂ ಪಾಶ್ಚಾತ್ಯ ಓದುಗರನ್ನು ಸೆಳೆದಿವೆ.

ಕನ್ನಡ ರಂಗಭೂಮಿಯ ಬರ್ನಾರ್ಡ್ ಶಾ ಎಂದೆನಿಸಿದ ನಾಟಕಕಾರ ಶ್ರೀರಂಗರ ಮಗಳೀಕೆ. ಆದರೆ ಈಕೆಯ ಬರಹದ ಬದುಕಿನಲ್ಲೆಲ್ಲೂ ತಂದೆಯ ಪ್ರಭಾವ-ಮಾರ್ಗದರ್ಶನಗಳಾಗದೆ ಇರುವುದು ಶಶಿಯವರ ಸ್ವಯಂಸಿದ್ಧ ವ್ಯಕ್ತಿತ್ವಕ್ಕೆ ಸಾಕ್ಷಿ.

ಧಾರವಾಡದಲ್ಲಿ ಹುಟ್ಟಿ, ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಿಂದ ಅರ್ಥಶಾಸ್ತ್ರದಲ್ಲಿ ಪದವಿ ಪಡೆದು, ಬೆಂಗಳೂರಿನಲ್ಲಿ ನೆಲೆಸಿ ಲಾ ಪರೀಕ್ಷೆಯನ್ನು ಮುಗಿಸಿ ಇತ್ತೀಚೆಗಷ್ಟೇ ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಮಾಡಿಕೊಂಡಿರುವ ಶಶಿ ದೇಶಪಾಂಡೆ ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ ಪಡೆದಿದ್ದಾರೆ.

ಮನೆಯ ವಾತಾವರಣವೇ ಹಾಗಿದ್ದುದರಿಂದ ಎಳವೆಯಲ್ಲೇ ಸಾಕಷ್ಟು ಗ್ರಂಥಗಳನ್ನು ಓದಿದ ಶಶಿ ದೇಶಪಾಂಡೆ."ನಮ್ಮ ತಂದೆ ನಮ್ಮನ್ನು ನಾವು ಉಚ್ಚಕುಲದವರು ಎಂದು ಭಾವಿಸುವ ಅವಕಾಶ ಕೊಡದೆ, ನಾವು ಹೆಣ್ಣುಮಕ್ಕಳು ಎಂಬ ಭಾವನೆಯೂ ಬರದ ಹಾಗೆ ಬೆಳೆಸಿ



ವರು. ನಾವೇನು ಓದುತ್ತೇವೆ, ಏನು ಮಾಡುತ್ತೇವೆಂಬುದನ್ನೂ ಅವರು ಗಮನಿಸುತ್ತಿರಲಿಲ್ಲ. 'ಹೀಗೆ ಮಾಡಬೇಡ, ಹಾಗೆ ಮಾಡಬಾರದು,' ಎಂದು ಎಂದಿಗು ಹೇಳಲಿಲ್ಲ. ಒಂದು ರೀತಿಯಲ್ಲಿ ಅವರು ದೂರವೇ ಇರುತ್ತಿದ್ದರು" ಎನ್ನುತ್ತಾರೆ.*

ಶ್ರೀರಂಗರ ಬರಹವೆಲ್ಲ ಬುದ್ಧಿಪ್ರಧಾನ: ಅವರ ನಾಟಕಗಳೆಲ್ಲ ಹೆಚ್ಚಾಗಿ ಬೌದ್ಧಿಕವಾಗಿವೆಯೆ ಹೊರತು ವ್ಯಕ್ತಿಗಳು ಪಾತ್ರಗಳ ರೂಪದಲ್ಲಿ ಅಲ್ಲಿ ಬಂದು ಹೋಗುವಾಗಲೂ ಅವೆಲ್ಲ ಆನುಷಂಗಿಕವೂ ಏನೋ ಎಂಬ ಭಾವನೆ ಉಳಿದುಬಿಡುತ್ತದೆ. ಆದರೆ ಶಶಿ ದೇಶಪಾಂಡೆಯವರ ಮೂಲ ಕಾಳಜಿ ಜನರನ್ನು ಕುರಿತದ್ದು, ವ್ಯಕ್ತಿಗಳ ಒಳಗಿನ ತುಮುಲ, ಉದ್ವೇಗ, ಆತಂಕಗಳನ್ನು ಕುರಿತದ್ದು. ಅವರೇ ತಮ್ಮ ಅತ್ಯುತ್ತಮ ಕೃತಿಯೆಂದು ಭಾವಿಸುವ The Dark Holds No Terrors ಕಾದಂಬರಿಯನ್ನು ನೋಡಬಹುದು. "ನಾನೊಂದು ದಂಪತಿಯನ್ನು ನೋಡಿದೆ. ಗಂಡ-ಹೆಂಡಿರಿಬ್ಬರೂ ನೌಕರಿಯಲ್ಲಿದ್ದವರು; ಆದರೆ ಹೆಂಡತಿಯ ನೌಕರಿ ಗಂಡನದಕ್ಕಿಂತ ಚೆನ್ನಾಗಿತ್ತು. ಈ ಕಾರಣದಿಂದಾಗಿಯೇ ಪರಸ್ಪರರಲ್ಲಿ ಅಸಮಾಧಾನದ ಹೊಗೆಯಾಡತೊಡಗಿ ಘರ್ಷಣೆಯಲ್ಲಿ ಪರ್ಯಾವಸಾನಗೊಂಡಿತು. ಆಕ್ರಾಮಕ ಪ್ರವೃತ್ತಿಯವನಾದ ಗಂಡ ಒರಟನೂ ಆಗಿದ್ದ. ಅವರಲ್ಲಿಯ ತುಮುಲವೇ ನನ್ನ ಕಥಾವಸ್ತುವಾಗಿ ಈ ಕಾದಂಬರಿಯ ಗಾತ್ರ ತಳೆಯಿತು." ಎನ್ನುತ್ತಾರೆ ಶಶಿ.

ಆದರೆ ತಂದೆಗಿಂತ ತಾನು ಭಿನ್ನವಾಗಿ ಇರಬೇಕೆಂಬ ಯತ್ನ-ಯೋಚನೆಗಳಿಂದಾಗಿ ಶಶಿ ಹೀಗೆ ಮಾಡಿದರು ಎಂದೇನೂ ಅಲ್ಲ. ಶ್ರೀರಂಗರು ಬರೆಯುತ್ತಿದ್ದುದು ಕನ್ನಡದಲ್ಲಿ. ಮಗಳಿಗೋ ಇಂಗ್ಲೀಷು ಬಿಟ್ಟರೆ ಬೇರೆ ಭಾಷೆಯ ಓದು ಬರಹ ಅಷ್ಟಾಗಿ ಗೊತ್ತಿಲ್ಲ. ತಾನು ಕನ್ನಡ ಅಥವಾ ಮರಾಠಿ ಕಲಿಯದಿರುವುದರ ಬಗ್ಗೆ ಶಶಿಗೆ ತುಂಬ ಖೇದವಿದೆ. "ನನಗೆ ಬರೆಯಲು ಗೊತ್ತಿರುವುದೊಂದೇ ಭಾಷೆ. ನಾನು ಓದಿದ್ದು ಕೂಡ ಅದೇ ಭಾಷೆಯಲ್ಲಿಯೆ. ಹೀಗಾಗಿ ಇಂಗ್ಲಿಷ್ ಬಿಟ್ಟು ಬೇರೆ ಭಾಷೆಯಲ್ಲಿ ಅದು ಹೇಗೆ ಬರೆದೇನು?" ಎಂಬುದವರ ಪ್ರಶ್ನೆ.

ಶ್ರೀರಂಗರು ತಮ್ಮ ಮಹಾನ್ ಕೃತಿ 'ಭರತನ ನಾಟ್ಯಶಾಸ್ತ್ರ'ವನ್ನು ತಾವೇ ಇಂಗ್ಲೀಷಿಗೆ ಅನುವಾದಿಸಲಾರಂಭಿಸಿದ್ದರು. ಆದರೆ ಅದರ ಇನ್ನೆರಡು ಪ್ರಕರಣಗಳ ಅನುವಾದ ಬಾಕಿ ಉಳಿದಿರುವ ಹೊತ್ತಿಗೆ ಕೊನೆಯುಸಿರೆಳೆದರು. ತಂದೆ ಅಪೂರ್ಣಗೊಳಿಸಿದ್ದ ಕೆಲಸವನ್ನು ಮಗಳು ಮಾಡಿ ಮುಗಿಸಿದರು. ಆ ಎರಡು ಪ್ರಕರಣಗಳನ್ನು ಶಶಿ ದೇಶಪಾಂಡೆ ಕನ್ನಡದಿಂದ ಇಂಗ್ಲೀಷಿಗೆ ತಂದೆಯಷ್ಟೇ ಸಮರ್ಥವಾಗಿ ಅನುವಾದಿಸಿದರು.

ತಾವು ಶ್ರಮಿಸುತ್ತಿದ್ದ ಪತ್ರಿಕೆಯ ಸಹೋದ್ಯೋಗಿಯೊಬ್ಬ ಶಶಿಯವರಿಗೆ ಕಥೆ ಬರೆಯಲು ಹಚ್ಚಿದನಂತೆ. ಸಾಮರ್‌ಸೆಟ್ ಮಾಮ್ ಶೈಲಿಯಲ್ಲೊಂದು ಕಥೆ ಇವರಿಂದ ಮೂಡಿಬಂತು. ಮೊಟ್ಟಮೊದಲ ಕಥೆ ಅದು. ನಂತರ ಬರೆದೇ ಬರೆದರು. ವಸ್ತು, ತಂತ್ರ ಮತ್ತು ಪ್ರಕಾಶಕರ ಕುರಿತು ತಲೆ ಕೆಡಿಸಿಕೊಳ್ಳದೆಯೇ ಬರೆದರು. ಹಾಗೆಂದು ಮಾಮ್ ಪ್ರಭಾವ ತಮ್ಮ ಮೇಲೆ ಗಾಢವಾಗಿ ಆಗಿದೆಯೆಂದು ಅವರು ಭಾವಿಸುವುದಿಲ್ಲ. ಅವರನ್ನು ತುಂಬ ಆಕರ್ಷಿಸಿದ ಲೇಖಕಿ ಜೇನ್ ಆಸ್ಟಿನ್. ಆಕೆಯ ಕೃತಿಗಳನ್ನು ಈಗಲೂ ಅವರು ಓದುತ್ತಿರುತ್ತಾರೆ. "ಆದರೆ ನನ್ನ ಬುದ್ಧಿಗೋಚರವಾಗುವ ರೀತಿಯಲ್ಲಿ ನನ್ನ ಬರವಣಿಗೆಯ ಮೇಲೆ ಯಾರದಾದರೂ ಪರಿಣಾಮ ಆಗಿದೆಯೆಂದು ನನಗನಿಸುವುದಿಲ್ಲ" ಎನ್ನುತ್ತಾರೆ ಶಶಿ.

ಶಶಿ ಕಾದಂಬರಿಗಳನ್ನು ಬರೆಯಲಾರಂಭಿಸಿದ್ದು ತುಂಬ ತಡವಾಗಿ. ಈಗ ಕಾದಂಬರಿಯಷ್ಟು ಸುಲಭವಾಗಿ ಸಣ್ಣ ಕಥೆ ಬರೆಯುವುದು ತಮ್ಮಿಂದಾಗದೆನ್ನುತ್ತಾರೆ. ಅಮೂರ್ತವಾದ ಕಾವ್ಯ ಪ್ರಕಾರದಲ್ಲಿ ಶಶಿ ಎಂದೂ ಗಮನ ಹರಿಸಿಲ್ಲ.

ಪ್ರಾದೇಶಿಕ ಸಾರಸ್ವತ ಲೋಕಕ್ಕೆ, ತನ್ಮೂಲಕ ಪ್ರಾದೇಶಿಕರಿಗೆ ತಾವು ಅಪರಿಚಿತರಾಗಿ ಉಳಿದಿರುವುದು ಮುಖ್ಯ ಪ್ರವಾಹದಿಂದ ತಾವು ಬೇರೆಯೇ ಆಗುಳಿದಿದ್ದೇನೆಂಬ ಕೊರಗನ್ನು ಶಶಿಯವರಲ್ಲಿ ಹುಟ್ಟಿಸಿದೆ. ಆದರೆ ಇವರ ವಿಚಾರದ ರೀತಿ, ವಸ್ತುವಿನ ಪ್ರಸ್ತುತೀಕರಣ ಮಾತ್ರ ತಮ್ಮಿಂದ ಇನ್ನೂ ಸಾಧ್ಯವಾಗಿಲ್ಲ

ಆ ಸುದೀರ್ಘ ಮೌನ

THAT LONG SILENCE ಮಧ್ಯಮವರ್ಗದ ಸುಶಿಕ್ಷಿತ ಮಹಿಳೆಯೊಬ್ಬಳ ಆತ್ಮಕಥನ ಈ ಕಥೆ. ಪ್ರಥಮ ಪುರುಷದಲ್ಲಿ ನಾಯಿಕೆಯ ಮುಖದಿಂದಲೇ ಕಥೆ ಬಿಚ್ಚಿಕೊಳ್ಳುತ್ತದೆ. ನಾಯಿಕೆ ಜಯಾಳ ಸುಖ-ದುಃಖ, ಕ್ರಿಯೆ-ಪ್ರತಿಕ್ರಿಯೆ; ಆಶೆ-ನಿರಾಶೆ; ಅನಿಸಿಕೆ-ಭಾವನೆಗಳನ್ನೆಲ್ಲ ತಾನು ಅನುಭವಿಸಿದಂತೆ, ಕಂಡಂತೆ ಜಯಾ ಹೇಳುತ್ತ ಹೋಗುತ್ತಾಳೆ. ತಾನು, ತನ್ನ ಗಂಡ, ಇಬ್ಬರು ಮಕ್ಕಳು—ಇಷ್ಟೇ ಜಗತ್ತಿನಲ್ಲಿ ಓಡಾಡುತ್ತಿದ್ದ ನಾಯಿಕೆಯ ಕ್ರಿಯಾ ಕೇಂದ್ರವೆಲ್ಲ ಆಕೆಯ ಗಂಡ: ಆದರೆ ಗಂಡ ಯಾವುದೋ ಅವ್ಯವಹಾರದಲ್ಲಿ ಸಿಕ್ಕಿ ಹಾಕಿಕೊಂಡ ನಂತರ ಇಡೀ ಕುಟುಂಬದ ಭವಿತವ್ಯದೆದುರು ದೊಡ್ಡದೊಂದು ಪ್ರಶ್ನಾರ್ಥಕ ಚಿಹ್ನವೆದ್ದು ನಿಲ್ಲುತ್ತದೆ. ಒಂದು ಹತಾಶ ಕ್ಷಣದಲ್ಲಿ, ಹೆಂಡತಿ ಮಕ್ಕಳಿಗಾಗಿ ತಾನು ಎಷ್ಟೆಲ್ಲ ಮಾಡಿದಾಗಲೂ ಹೆಂಡತಿ ಅದನ್ನು ಅರ್ಥಮಾಡಿಕೊಳ್ಳದ ಸ್ವಾರ್ಥಲೋಲುಪಳೆಂದು ಜರಿದು ಗಂಡ ಹೊರಟೆದ್ದು ಹೋದಾಗಿನ ಕಥೆಯೇ ಇದು. ಇಲ್ಲಿ ಸಾಮಾನ್ಯ ಭಾರತೀಯ ವಾಚಕರು ಬಯಸುವ ಪ್ರೇಮ-ಕಾಮಗಳ ಚಿತ್ರಣವಿಲ್ಲ. ಆದರೆ ವ್ಯಕ್ತರೂಪಕ್ಕೆ ಮೌಲ್ಯಗಳನ್ನೆಲ್ಲ ಕಳೆದುಕೊಂಡಂತೆ ತೋರುವ ಭಾರತೀಯ ಸಮಾಜದಲ್ಲಿ ಮೌನವಾಗಿಯಾದರೂ ನಡೆಯುತ್ತಿರುವ ಪರಿವರ್ತನೆಯ ಚಿತ್ರಣವಿಲ್ಲಿದೆ. ಪೂರ್ತಿ ಪುರುಷಪ್ರಧಾನ ಸಮಾಜವಾಗಿರುವ ನಮ್ಮ ದೇಶದಲ್ಲಿ ಹೆಣ್ಣು ಹಾಸ್ಯಕ್ಕಾಗಿ ಕೂಡ ಗಂಡನನ್ನು ಟೀಕಿಸುವುದಿಲ್ಲ. ಶತಮಾನಗಳಿಂದ ಇಲ್ಲಿ ಹೆಣ್ಣಿನ ಹುಟ್ಟುಗುಣವೆಂಬಷ್ಟು ಸ್ವಾಭಾವಿಕವೆಂಬ ರೀತಿಯಲ್ಲಿ ಬೆಳೆದುಬಂದಿರುವ ಮನೋದಾಸ್ಯದ ಬಂಧನದಿಂದ ಹೊರಬರಲೆತ್ನಿಸುತ್ತಿರುವ ನಾರಿಯ ಕಥೆ ಇದು. ●

...ದು ಅನೇಕ ಕನ್ನಡ ಲೇಖಕಿಯರು ಅಭಿಪ್ರಾಯ ವ್ಯಕ್ತಪಡಿಸಿದ್ದುಂಟು.

ಮನೆಯಲ್ಲೇ ಕುಳಿತು, ಯಾವ ಪ್ರಚಾರದ ಗೋಜಿಗೂ ಹೋಗದೇ ತಮ್ಮಷ್ಟಕ್ಕೆ ತಾವು ಬರವಣಿಗೆಯಲ್ಲಿ ತೊಡಗಿರುವ ಶಶಿ ದೇಶಪಾಂಡೆಯವರ ಮೊಟ್ಟ ಮೊದಲ ಕಥಾಸಂಗ್ರಹ The Legacy ಕೋಲಂಬಿಯಾ ವಿಶ್ವವಿದ್ಯಾಲಯದ ಪದವಿ ತರಗತಿಗೆ ಪಠ್ಯವಾಗಿತ್ತು. The Dark Holds No Terrors ಜರ್ಮನ್ ಮತ್ತು ರಶಿಯನ್ ಭಾಷೆಗಳಿಗೆ ತರ್ಜುಮೆಗೊಂಡಿದೆ.

ಪುರುಷರು ಬರೆದದ್ದನ್ನು 'ಸಾಹಿತ್ಯ'ವೆಂದು ಗುರುತಿಸುತ್ತ, ಮಹಿಳೆಯರು ಬರೆದದನ್ನು 'ಸ್ತ್ರೀ ಸಾಹಿತ್ಯ'ವೆಂಬ ಪ್ರತ್ಯೇಕ ಹಣೆಪಟ್ಟಿಯೊಂದಿಗೆ ಭಿನ್ನದೃಷ್ಟಿಯಿಂದ ನೋಡಿ ಮೌಲ್ಯಮಾಪನ ಮಾಡುವ ಪ್ರವೃತ್ತಿಯೇ ಶಶಿಯವರಿಗೆ ಹಿಡಿಸುವುದಿಲ್ಲ. ಯಾವುದೇ ಕೃತಿಯ ಮೌಲ್ಯಮಾಪನ ಮಾಡಬೇಕಾದಾಗ ಅಳತೆಗೋಲು ಕೃತಿಕಾರನ ಲಿಂಗವಲ್ಲವೆಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ.

ತಮ್ಮ ಬರವಣಿಗೆಯಲ್ಲಿ ಪುನರಾವರ್ತನೆ ತಲೆಹಾಕತೊಡಗಿದ ಕ್ಷಣವೇ ತಾವು ಬರೆಯುವುದನ್ನು ನಿಲ್ಲಿಸಿಬಿಡುತ್ತೇವೆನ್ನುವ ಶಶಿ ದೇಶಪಾಂಡೆ ಕೇವಲ ಗಂಡು-ಹೆಣ್ಣುಗಳ ಬಗ್ಗೆ ಬರೆಯದೇ ವ್ಯಕ್ತಿಗಳನ್ನು ಮನುಷ್ಯರೆಂದು ನೋಡಿ ಬರೆಯುವ ಹಂತವನ್ನು ತಲಪುವುದನ್ನು ಎದುರುನೋಡುತ್ತಿದ್ದಾರೆ. ●

*ನೋಡಿ: 'ಶ್ರೀರಂಗ ಮಗಳು ಕಂಡಂತೆ'-ಕಸ್ತೂರಿ ಮೇ 1988 (ವಸಂತ ಸಂಚಿಕೆ)

ಅಪರೂಪದ ಪ್ರತಿಭಾವಂತನನ್ನು ಗುರುತಿಸುವುದು ಸುಲಭ. ಅವನು ಹೇಳಿದ್ದೆಲ್ಲ ತಪ್ಪು ಅಂತ ಸಾಧಿಸೋಕೆ ಹಿಂದುಹಿಂದಾಗಿ ಜನ ಪ್ರಯತ್ನಿಸುತ್ತಾರೆ. — ಸ್ವಿಫ್ಟ್

ಕಪಿಲ: ಇನ್ನಷ್ಟು ವಿಚಾರಗಳು

ಕಸ್ತೂರಿಯ ಜೂನ್ ಸಂಚಿಕೆಯಲ್ಲಿ ಡಾ॥ ಬೆಳ್ಳೆ ದಿನಕರ ರೈಯವರ 'ಕಪಿಲರಿಗೆ ವಂದನೆ' ಓದಿ ಸಂತೋಷ ವಾಯಿತು. ಕಪಿಲರ ಹಿರಿಮೆಯ ಬಗ್ಗೆ ಮತ್ತು ನಂತರದ ಚಿಂತನೆಗಳ ಮೇಲೆ ಅವರು ಬೀರಿರುವ ಪ್ರಭಾವದ ಬಗ್ಗೆ ಎರಡು ಮಾತಿಲ್ಲವಾದರೂ ಅವರನ್ನೂ ಪ್ರಭಾವಿಸಿರಬಹುದಾದ ಒಂದು ಮೂಲವಿದೆ. ಅದೇ ಉಪನಿಷತ್ತುಗಳು. ಈ ಉಪನಿಷತ್ತುಗಳಲ್ಲಿ ಸಾಂಖ್ಯದ ಅನೇಕ ಪರಿಕಲ್ಪನೆಗಳು ಅಡಕವಾಗಿವೆ. ಸಾಂಖ್ಯರು ಕ್ರಮೇಣ ಸ್ವತಂತ್ರವಾದ ವಿಚಾರ ಪ್ರವೃತ್ತಿಯನ್ನು ತಳೆದಿದ್ದರೂ ಅದು ವೈದಿಕ ಹಿನ್ನೆಲೆಯ ಚೌಕಟ್ಟಿನೊಳಗೆ ಮಾತ್ರ. ಅವರು ಈಶ್ವರನನ್ನು ನಿರಾಕರಿಸುವವರಾದರೂ ಉಪನಿಷತ್ತುಗಳ ಆತ್ಮವನ್ನು ಅಂಗೀಕರಿಸುತ್ತಾರೆ. ಉಪನಿಷತ್ತುಗಳ ಕಾಲದಲ್ಲಿ ಒಂದು ಸಮಾನಾಂತರ ವಿಚಾರಧೋರಣೆಯನ್ನು ಬಿಂಬಿಸಿತ್ತೆ ಎಂಬ ಬಗ್ಗೆ ಪ್ರೊ॥ ಎ.ಬಿ. ಕೀತ್ ತಮ್ಮ ಸಂದೇಹವನ್ನು ವ್ಯಕ್ತಪಡಿಸುತ್ತಾರೆ.

ಎರಡನೆಯದಾಗಿ ಸಾಂಖ್ಯಕ್ಕೂ ಮತ್ತು ಬುದ್ಧನ ನಿರ್ವಾಣಸಿದ್ಧಾಂತ ಹಾಗೂ ಅಜ್ಞೇಯ ವಾದಗಳಿಗೆ ಇರುವ ಸಂಬಂಧ ಸ್ಪಷ್ಟವಾಗಲಿಲ್ಲ. ಸಾಂಖ್ಯರ ಪ್ರಕಾರ ಪ್ರಕೃತಿ ಪುರುಷರು ಬೇರೆಂಬ ವಿವೇಕವೇ ಮುಕ್ತಿ ಅಥವಾ ಕೈವಲ್ಯಕ್ಕೆ ಸಾಧನ. ಆದರೆ ಬುದ್ಧನ ಪ್ರಕಾರ ಪುರುಷನು ಮಾನಸಿಕ ಮತ್ತು ಭೌತಿಕ ಅಂಶಗಳ ಒಂದು ಸಂಘಾತ. ಆತನು ಇವುಗಳನ್ನು ಕ್ರಮವಾಗಿ ನಾಮರೂಪಗಳೆನ್ನುತ್ತಾನೆ. ಇವುಗಳ ಹಿನ್ನೆಲೆಯಲ್ಲಿದ್ದು ಅವುಗಳನ್ನು ಒಂದುಗೂಡಿಸಿ ನಿಯಂತ್ರಿಸುವ ಮತ್ತು ನಿರ್ವಾಣಸ್ಥಿತಿಯಲ್ಲಿ ನಾವು ತಿಳಿಯಬೇಕಾದ ಸ್ಥಿರ ಹಾಗೂ ಸ್ವತಂತ್ರವಾದ ಮತ್ತೊಂದು ಆತ್ಮವಿದೆಯೇ ಎಂಬ ಬಗ್ಗೆ ಆತನು ಮೌನ ತಳೆಯುತ್ತಾನೆ. ಹಾಗೆಯೇ "ವಸ್ತುವೊಂದಿದೆ, ಆದರೆ ಅದು ಯಾವುದೇ ರೀತಿಯ ಅನುಭವಕ್ಕೂ ಒಳಪಟ್ಟಿಲ್ಲ" ಎನ್ನುವ ವಾದವೇ ಅಜ್ಞೇಯವಾದ. ಈ ಅರ್ಥದಲ್ಲಿ ಸಾಂಖ್ಯವು ಅಜ್ಞೇಯವಾಗಲು ಸಾಧ್ಯವಿಲ್ಲ. ಏಕೆಂದರೆ ಅದು ಅಂತಿಮ ಸತ್ಯದ ಸ್ವರೂಪವನ್ನಷ್ಟೇ ಅಲ್ಲದೇ ಅದನ್ನು ಕಾರ್ಯತಃ ತಿಳಿಯುವ ವಿಧಾನದ ಬಗ್ಗೆಯೂ ವಿವರಿಸುತ್ತದೆ. ಸಾಂಖ್ಯವೆಂಬ ಪದವು ಗಣಿತದ ಸಂಖ್ಯೆಯನ್ನು ಸೂಚಿಸಿದರೂ ವಾಸ್ತವವಾಗಿ ಅದರ ನಿಜವಾದ ಅರ್ಥ ಜ್ಞಾನ ಎಂದು. ಪ್ರಕೃತಿ ಪುರುಷರು ಬೇರೆಂಬ ವಿವೇಕ ಜ್ಞಾನವೇ ಸಾಂಖ್ಯ. ಒಂದು ಪಕ್ಷ ಈ ಗಣಿತ ಶಾಸ್ತ್ರೀಯ ಅರ್ಥವೇ ಸರಿಯಾದಲ್ಲಿ ಸಾಂಖ್ಯ ಎಂಬ ಪದವು ಸಾಂಖ್ಯವಷ್ಟೇ ಅಲ್ಲದೇ ಇತರ ದರ್ಶನಗಳಿಗೂ ಅದರಲ್ಲೂ ವಿಶೇಷವಾಗಿ ವೈಶೇಷಿಕ ದರ್ಶನಕ್ಕೆ ಅನ್ವಯಿಸುತ್ತದೆ. ಏಕೆಂದರೆ ಸಾಂಖ್ಯದ ಭೌತ ತತ್ವಗಳು ಸಂಖ್ಯೆಯಲ್ಲಿ 23 ಆದರೂ ಅವುಗಳ ಮೂಲವಾದ ಪ್ರಕೃತಿಯು ಏಕ. ಆದರೆ ವೈಶೇಷಿಕರು ಈ ಭೌತಜಗತ್ತಿನ ಮೂಲವನ್ನು ಏಳು ಪದಾರ್ಥಗಳಿಗೆ ಗುರುತಿಸುತ್ತಾರೆ.

ಹಾಗೆಯೇ ಸತ್ವವು ಒಂದು ತಟಸ್ಥ ಗುಣವೆಂಬ ಲೇಖಕರ ಅಭಿಪ್ರಾಯ ಸ್ಪಷ್ಟವಿಲ್ಲ. "ಸತ್ವಂ ಲಘು ಪ್ರಕಾಶಕಂ" ಎಂಬುದು ಈಶ್ವರ ಕೃಷ್ಣರ ಉಕ್ತಿ. ಯಾವ ವಸ್ತುವು ಹಗುರವಾಗಿದ್ದು ಬೆಳಕನ್ನು ಸುಲಭವಾಗಿ ಪ್ರತಿಫಲಿಸಬಲ್ಲದೋ ಅದು ಸತ್ವಗುಣಪ್ರಧಾನವಾಗಿರುತ್ತದೆ.

ಅದೇ ರೀತಿ ಲೇಖಕರು ತಿಳಿಸಿರುವಂತೆ ಸಾಂಖ್ಯದ ಪ್ರಕಾರ ಪುರುಷನು ಆನಂದ ಸ್ವರೂಪನಲ್ಲ. ಅವನು ಕೇವಲ ಚಿತ್‌ಸ್ವರೂಪ. ಈ ವಿಷಯದಲ್ಲೇ ಸಾಂಖ್ಯರಿಗೂ ವೇದಾಂತಿಗಳಿಗೂ ವ್ಯತ್ಯಾಸವಿರುವುದು.

ಕಡೆಯದಾಗಿ ಲೇಖಕರು ಪುರುಷನಿಗೆ ವಿಕಾಸ ಪದವನ್ನು ಆರೋಪಿಸುತ್ತಾರೆ. ವಿಕಾಸವು ಬದಲಾವಣೆಯನ್ನು ಮತ್ತು ಒಬ್ಬನು ಈ ಮೊದಲೇ ತಾನು ಹೊಂದಿಲ್ಲದ ಉತ್ತಮ ಸ್ಥಿತಿಯ ಪ್ರಾಪ್ತಿಯನ್ನು ಸೂಚಿಸುತ್ತದೆ. ಈ ವಿಧದಲ್ಲಿ ಯಾವ ಅರ್ಥದಲ್ಲೂ ಪುರುಷನು ವಿಕಾಸ ಹೊಂದಲಾರ. ಬದಲಾವಣೆಯು ಪ್ರಕೃತಿ ಲಕ್ಷಣವಾದ ರಿಂದ ಪುರುಷನು ಈ ಅರ್ಥದಲ್ಲಿ ವಿಕಾಸಹೊಂದಲು ಸಾಧ್ಯವಿಲ್ಲ. ಸಾಂಖ್ಯರು ಪುರುಷನನ್ನು 'ಅನುಭಯ' ಎನ್ನುತ್ತಾರೆ. ಎಂದರೆ ಅವನು ಒಂದು ತತ್ವವಾಗಿ ಮಾರ್ಪಡಿಸುವ ಕಾರಣವೂ ಅಲ್ಲ ಮತ್ತು ಮತ್ತೊಂದು ತತ್ವದಿಂದ ಹೊರಹೊಮ್ಮಿದ ಕಾರ್ಯವೂ ಅಲ್ಲ. ಹಾಗೆಯೇ ಪುರುಷನು ಆಧ್ಯಾತ್ಮಿಕ ಅರ್ಥದಲ್ಲೂ ವಿಕಾಸನಾಗಲು ಸಾಧ್ಯವಿಲ್ಲ. ಜೀವವು ಮುಕ್ತಿಯಲ್ಲಿ ಈ ಮೊದಲು ತಾನಾಗಿರದ ಯಾವುದೋ ಒಂದು ಹೊಸ ಸ್ಥಿತಿಯನ್ನು ಪಡೆಯುವುದಿಲ್ಲ, ಅಲ್ಲಿ ಅವನು ತನ್ನ ನೈಜಸ್ವರೂಪದ ಅರಿವನ್ನು ಅದಕ್ಕೆ ಭಂಗವಾಗಿರುವ ಅಡಚಣೆಯನ್ನು ನಾಶಪಡಿಸುವ ಮೂಲಕ ಪಡೆಯುತ್ತಾನೆ.

ಈ ಮೇಲಿನ ಅಂಶಗಳನ್ನು ಕಡೆಗಣಿಸಿದಲ್ಲಿ ಲೇಖನದ ಐತಿಹಾಸಿಕ ದೃಷ್ಟಿಕೋನವು ಅರ್ಥಪೂರ್ಣವಾಗಿದ್ದು ಅನೇಕ ಹೊಸ ವಿಚಾರಗಳನ್ನು ನಮ್ಮ ಗಮನಕ್ಕೆ ತರುತ್ತದೆ. ●

● ಡಾ॥ ಹು.ಲ. ಚಂದ್ರಶೇಖರ ●

ಇದು ಜೀವ ಇದು ಜೀವನ

ನಮ್ಮ ಮನೆಯ ಮಹಡಿಯ ಮೇಲಿನಿಂದ ಒಂದು ದಿನ ಬೆಕ್ಕಿನ ಮರಿಗಳ ಅರಚಾಟ ಕೇಳಿ ಬಂತು. ಹೋಗಿ ನೋಡಿದಾಗ ನಾಲ್ಕು ಎಳೆ ಮರಿಗಳು ಕಿರುಚಾಡುತ್ತಿದ್ದವು. ನಾಲ್ಕಾರು ದಿನಗಳಾದರೂ ಅವುಗಳು ಜಾಗ ಬಿಟ್ಟು ಕದಲಲೇ ಇಲ್ಲ. ಅವುಗಳ ಕಿರುಚಾಟವಂತೂ ತುಂಬಾ ಅಸಹನೀಯವಾಗಿತ್ತು. ತಾಯಿ ಬೆಕ್ಕು ಅವುಗಳನ್ನು ಹುಡುಕಿಕೊಂಡು ಬರಲಿಲ್ಲ.

ಕೊನೆಗೆ ಒಂದು ದಿನ ಅವುಗಳನ್ನು ಗೋಣಿ ಚೀಲದಲ್ಲಿ ತುಂಬಿ ದೂರ ಸಾಗಿಸಿ ಬಂದೆವು. ಆ ರಾತ್ರಿ ನಿಶ್ಚಿಂತೆಯಿಂದ ನಿದ್ದೆ ಮಾಡಿದ್ದಾಯ್ತು. ಆದರೆ ಮಾರನೆಯ ದಿನ ಬೆಳಿಗ್ಗೆ ತಾಯಿ ಬೆಕ್ಕು ಬಂದು ಒಂದು ಸಾರಿ ನಮ್ಮ ಮನೆಯ ಎಲ್ಲ ಕೋಣೆಗಳನ್ನು ಹೊಕ್ಕು ತನ್ನ ಪ್ರೀತಿಯ ಮರಿಗಳು ಇಲ್ಲದೇ ಇದ್ದುದನ್ನು ಕಂಡು ಮಹಡಿಯ ಮೇಲೆ ಹೋಯಿತು. ಅಲ್ಲೂ ತನ್ನ ಮರಿಗಳು ಕಾಣದಿದ್ದಾಗ ಅದು ನಮ್ಮತ್ತ ರೋಷದಿಂದ ನೋಡುತ್ತ, ವಿಕಾರವಾಗಿ ಅರಚುತ್ತ ಮೆಲ್ಲಗೆ ಹೊರಟುಹೋಯಿತು. ಮನ ನೋಯುವಂಥ ಆ ದೃಶ್ಯ ನಮಗೆ ನಾವು ಮಾಡಿದ ಘೋರ ತಪ್ಪಿನ ಅರಿವು ಮಾಡಿಕೊಟ್ಟಿತು.

● ಎನ್ನಾರ ವಾಸುದೇವರಾವ್

ಸುಮಾರು ಹದಿನಾಲ್ಕು ವರ್ಷಗಳ ಹಿಂದಿನ ಮಾತು. ಶಿರಸಿ ಸಮೀಪದ ಹಳ್ಳಿಯೊಂದರ ಜನರು. ಬೆಳೆ ಫಸಲು ಸಮೃದ್ಧಿಗಾಗಿ, ಮಹಾರುದ್ರ, ಚಂಡೀಹವನ ಮೊದಲಾದ ಹೋಮ-ಹವನ ನಡೆಸಿದರು. ಊರು-ಪರ ಊರ ಅನೇಕ ವೈದಿಕರು, ಪಂಡಿತ-ವಿದ್ವಾಂಸರುಗಳನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು. ಮುಕ್ತಾಯ ಸಮಾರಂಭದಲ್ಲಿ, ಸಮಾರೋಪ ಭಾಷಣ ಮಾಡಿದ ಅಧ್ಯಕ್ಷರು, ಮಂತ್ರಶಕ್ತಿಯ ಬಗ್ಗೆ ಪ್ರಸ್ತಾಪಿಸುತ್ತಾ "ಅರ್ಥವನ್ನು ಅರಿಯದೇ ಬರೇ ಮಂತ್ರ ಪಠಣದಿಂದೇನು ಪ್ರಯೋಜನ?" ಎಂಬ ಗಂಭೀರ ಪ್ರಶ್ನೆಯನ್ನು ಸಭೆಯ ಮುಂದಿಟ್ಟು ಕುಳಿತು ಬಿಟ್ಟರು.

ಸಭೆಯಲ್ಲಿ ಗುಸು-ಗುಸು ಆರಂಭವಾಯಿತು. ವೈದಿಕರು-ವಿದ್ವಾಂಸರು ಪರಸ್ಪರ ಮುಖ-ಮುಖ ನೋಡಿಕೊಂಡರು. ಮಂತ್ರಗಳ ಅರ್ಥ ತಿಳಿಯದೇ ಹವನ ಮಾಡಿದ್ದಕ್ಕೆ ಎಲ್ಲರಿಗೂ ಕಳವಳ. ಕೊನೆಗೆ ಅಧ್ಯಕ್ಷರನ್ನೇ ಕೇಳೋಣ ಎಂದು ಎಲ್ಲರೂ ಒಟ್ಟಾಗಿ ತೀರ್ಮಾನಿಸಿದರು. ಆದರೆ ಅಧ್ಯಕ್ಷರು ತಮ್ಮ ಪಕ್ಕದಲ್ಲಿ ಕುಳಿತಿದ್ದ ಗೋಕರ್ಣದ ದೀಕ್ಷಿತರ ಕಡೆಗೆ ಕೈತೋರಿಸಿ

ಸುಮ್ಮನಾದರು. ದೀಕ್ಷಿತರು ಸಭೆಯನ್ನುದ್ದೇಶಿಸಿ ಹೇಳಿದರು. "ಒಂಭತ್ತು ದಿನಗಳ ಕಾಲ ಅಖಂಡವಾಗಿ ಉಚ್ಚರಿಸಲ್ಪಟ್ಟಂಥ ಈ ಮಂತ್ರಗಳ ಒಳ ಅರ್ಥವನ್ನು ಐದು ಹತ್ತು ನಿಮಿಷಗಳಲ್ಲಿ ಹೇಳುವುದು ಅಸಾಧ್ಯ. ಆದರೆ ಅರ್ಥ ಗೊತ್ತಿಲ್ಲದೇ ಬರೀ ಮಂತ್ರ ಪಠಣದಿಂದ ಪ್ರಯೋಜನ ಇಲ್ಲ ಎನ್ನುವುದು ತಪ್ಪು. ಉದಾಹರಣೆಗೆ ಇಲ್ಲೊಂದು ಪುಟ್ಟ ಮಗುವಿದೆ. ಅದಕ್ಕೆ ಬೆಂಕಿಯ ಬಗ್ಗೆ ಏನೋನೂ ಗೊತ್ತಿಲ್ಲ. ಆದರೂ, ಮಗು ಬೆಂಕಿಯನ್ನು ಮುಟ್ಟಿದಲ್ಲಿ, ಅದರ ಕೈ ಸುಡದೇ ಇರುತ್ತದೆಯೇ?...."

ಸಭಿಕರ ಕರತಾಡನದಲ್ಲಿ ದೀಕ್ಷಿತರ ಮುಂದಿನ ಮಾತುಗಳು ಕೇಳಿಸಲಿಲ್ಲ. ●

● ಚಿಂತಾಮಣಿ ಸಭಾಹಿತ.

ಧಾರವಾಡದಿಂದ ಗಣೇಶಗುಡಿಗೆ ಹಿಂದಿರುಗುತ್ತಿದ್ದೆ. ಮಂಗಳವಾರ ಧಾರವಾಡದ ಸಂತೆಗೆ ಬಂದ ಜನರಿಂದ ಬಸ್ಸು ಕಿಕ್ಕಿರಿದು ತುಂಬಿತ್ತು. ಕಂಡಕ್ಟರ್ ಟಿಕೀಟು ಕೊಡುತ್ತ ಕೊನೆಯ ಸೀಟಿನವರೆಗೂ ಬಂದಿದ್ದ. ಆಗ ಒಬ್ಬ ಗ್ರಾಮೀಣ ಮಹಿಳೆ ನಿಗದಿಗೆ ಒಂದು ಟಿಕೆಟ್ ಕೊಳ್ಳಲು ಐದು ರೂಪಾಯಿ ನೋಟು ಚಾಚಿದಳು. ಆಕೆಯ ತೊಡೆಯ ಮೇಲೆ ಮಲಗಿದ್ದ ಸುಮಾರು ಏಳೆಂಟು ವರ್ಷದ ಹುಡುಗನನ್ನು ನೋಡಿ ಕಂಡಕ್ಟರ್ ಅವನಿಗೂ ಅರ್ಧ ಟಿಕೆಟ್ ಕೊಳ್ಳುವಂತೆ ಒತ್ತಾಯಿಸಿದ. ಆ ಮಹಿಳೆ "ಹುಡುಗಂಗೆ ತೆಗೆಯೋ ಹಂಗಿಲ್ರೀ" ಎಂದಳು. ಕಂಡಕ್ಟರ್ ಪಟ್ಟು ಬಿಡಲಿಲ್ಲ.

ನಂತರ ಒಮ್ಮೆಲೆ ಆಕೆ ಹುಡುಗನ ಮೇಲೆ ಹೊದಿಸಿದ್ದ ಸೀರೆಯನ್ನು ತೆಗೆದು "ಸಾಹೇಬ್ರ ನನ್ನ ಒಬ್ನ ಗಂಡುಮಗ ಸತ್ತು ಹೋಗ್ಯೈತ್ರಿ.... ದವಾಖಾನಿಗೆ ಒಯ್ಯೋದ್ರೊಳಗೆ ಪ್ರಾಣ ಹೋತು." ಎಂದು ರೋದಿಸತೊಡಗಿದಾಗ ಬಸ್ಸಿನಲ್ಲಿ ಸ್ಮಶಾನ ಮೌನ ನೆಲೆಸಿತ್ತು.

● ಸುರೇಶ ಹೆಗಡೆ

ನಾನು ನಮ್ಮ ಕಾರ್ಮಿಕ ಸಂಘದ ಕಾರ್ಯದರ್ಶಿಯಾಗಿದ್ದಾಗ ನಡೆದ ಘಟನೆಯಿದು.

ಕುಡಿತದ ಚಟಕ್ಕೆ ಬಲಿಯಾಗಿದ್ದ ಓರ್ವ ಕಾರ್ಮಿಕನನ್ನು ಅನಾರೋಗ್ಯದ ಕಾರಣ ಆಸ್ಪತ್ರೆಗೆ ಸೇರಿಸಲಾಗಿತ್ತು. ಆತ ವೈದ್ಯರ ನಿರೀಕ್ಷೆಗಿಂತ ಬೇಗನೆ ಚೇತರಿಸಿಕೊಂಡಿದ್ದ. ಆದರೂ ಅವನಿಗೆ ಗಂಟಲಿನೊಳಗೆ ಆಹಾರ ಇಳಿಯುತ್ತಿರಲಿಲ್ಲವಾದ್ದರಿಂದ ನಳಿಕೆ ಹಾಕಿ ದ್ರವರೂಪದ ಆಹಾರ ಕೊಡುತ್ತಿದ್ದರು. ಆದ್ದರಿಂದ ಅವನು ಇನ್ನೂ 15 ದಿನ ಆಸ್ಪತ್ರೆಯಲ್ಲಿರಬೇಕಾಗುವುದೆಂದು ವೈದ್ಯರು ಹೇಳಿದರು.

ಒಂದು ವಾರದ ನಂತರ ಒಂದು ದಿನ ನಾನು ಸಂಘದ ಕಛೇರಿಯಲ್ಲಿ ಲೆಕ್ಕಪತ್ರ ನೋಡುತ್ತ ಕುಳಿತಿದ್ದೆ. ಆಗ ಆ ಕಾರ್ಮಿಕನ ಹೆಂಡತಿ ಮತ್ತು ಮಗ ನನ್ನನ್ನು ಭೇಟಿಯಾಗಲು ಬಂದರು. ಒಳಬಂದ ತಕ್ಷಣ ಅವನ ಪತ್ನಿ "ನನ್ನ ಗಂಡನಿಗೆ ಗುಣವಾಗುವವರೆಗೆ ಆಸ್ಪತ್ರೆಯಲ್ಲಿಟ್ಟುಕೊಳ್ಳಲು ವೈದ್ಯರಿಗೆ ಹೇಳಿ" ಎಂದು ಅಳತೊಡಗಿದಳು.

ನನಗೇನೂ ಅರ್ಥವಾಗಲಿಲ್ಲ. "ಚಿಕಿತ್ಸೆ ಅವಶ್ಯವೆನಿಸಿದರೆ ಅವರೇ ಇಟ್ಟುಕೊಳ್ಳುತ್ತಾರೆ. ಅದಕ್ಕೆ ನನ್ನ ಶಿಫಾರಸ್ಸು ಅಗತ್ಯವಿಲ್ಲ." ಎಂದು ಸಮಾಧಾನ ಮಾಡಿ ಕಳಿಸಲೆತ್ನಿಸಿದೆ. ಆದರೂ ಆಕೆ ಪಟ್ಟು ಬಿಡದೆ ಅಲ್ಲಿಯೇ ಕುಳಿತಳು. ಕೊನೆಗೆ ನಾನು ವಿಷಯವೇನೆಂದು ತಿಳಿದುಕೊಳ್ಳಲು ಅವಳೊಂದಿಗೆ ಆಸ್ಪತ್ರೆಗೆ ಹೋದೆ. ಮೊದಲು ರೋಗಿಯನ್ನು ಮಾತನಾಡಿಸಲು ಅವನ ಕೋಣೆಗೆ ತೆರಳಿದೆ. ವೈದ್ಯರನ್ನು ಭೇಟಿಯಾಗುವಂತೆ ಅವನ ಪತ್ನಿಗೆ ಹೇಳಿಕಳಿಸಿದೆ.

ಕೆಲ ನಿಮಿಷಗಳ ನಂತರ ನಾನು ವೈದ್ಯರ ಕೋಣೆಗೆ ಹೋದಾಗ ಅವರು "ಇಂದೇ ನಿನ್ನ ಗಂಡನನ್ನು ಮನೆಗೆ ಕರೆದುಕೊಂಡು ಹೋಗು. ಅವನು ಅಲ್ಲೇ ಸಾಯಲಿ." ಎಂದು ಕಾರ್ಮಿಕನ ಪತ್ನಿಯನ್ನು ಕೋಪದಿಂದ ಗದರಿಸುತ್ತಿದ್ದುದು ಕೇಳಿಸಿತು.

ನನ್ನನ್ನು ಕಂಡೊಡನೆ ಅವರು ಸುಮ್ಮನಾದರು. ನಂತರ, ವಿಷಯವೇನೆಂದು ಕೇಳಿದಾಗ ಅವರು ಕೊಟ್ಟ ಉತ್ತರ ನನ್ನನ್ನು ಮೂಕನನ್ನಾಗಿಸಿತು.

ಆಸ್ಪತ್ರೆ ಸೇರಿದರೂ ಚಟ ಬಿಡದ ಆ ಕಾರ್ಮಿಕ ಮಹಾಶಯ ಆಹಾರ ತೆಗೆದುಕೊಳ್ಳಲು ಹಾಕಿದ್ದ ನಳಿಕೆಯ ಮೂಲಕ ಪ್ರತಿದಿನ ಗೆಳೆಯನ ನೆರವಿನಿಂದ ಕದ್ದು ಸಾರಾಯಿ ಕುಡಿಯುತ್ತಿದ್ದ. ವೈದ್ಯರಿಗೆ ಸಂಶಯ ಬಂದು ಪರೀಕ್ಷಿಸಿದಾಗ ಕಳ್ಳಮಾಲು ಸಹಿತ ಸಿಕ್ಕು ಬಿದ್ದಿದ್ದ.

● ಶ್ರೀಕಂಠಯ್ಯ, ನಿಡಗೆರೆ.

ಅಲಿಸ್ ಎಂಬ ಆನೆಯ ಕಥೆ

● ಕೆ. ವೆಂಕಣ್ಣಾಚಾರ್ ●

ಸುಮಾರು 75 ವರ್ಷಗಳ ಹಿಂದೆ ನಡೆದ ಘಟನೆ. ಆಸ್ಟ್ರೇಲಿಯದ ನ್ಯೂಸೌತ್‌ವೇಲ್ಸಿನ ಟೆಂಟಲ್‌ಫೀಲ್ಡ್ ರೈಲ್ವೆ ಸ್ಟೇಶನ್ ಸನಿಹದ ಲೆವೆಲ್ ಕ್ರಾಸಿಂಗ್ ಬಳಿ ಹಳಿಗಳ ಮೇಲೆ ಭಾರಿ ಪ್ರಮಾಣದ ಉಣ್ಣೆಯ ಬೇಲುಗಳನ್ನು ಹೇರಿದ್ದ ಎತ್ತಿನ ಗಾಡಿಯೊಂದು ಸಿಕ್ಕಿಬಿಟ್ಟಿದೆ. ಗಾಡಿಯನ್ನು ಅಲ್ಲಿಂದ ಮುಂದೆ ಎಳೆಯಲು ಎತ್ತುಗಳು ತಿಣುಕಾಡುತ್ತಿವೆ. ಕೆಲವೇ ಸೆಕೆಂಡುಗಳಲ್ಲಿ ಎಕ್ಸ್‌ಪ್ರೆಸ್ ರೈಲೊಂದು ಆ ಮಾರ್ಗವಾಗಿ ಸಾಗಿ ಹೋಗಲಿದೆ. ಗಾಡಿಯವ ಕಂಗೆಟ್ಟು ಅರಚುತ್ತಿದ್ದಾನೆ. ಅವನ ಕೂಗನ್ನು ಸಮೀಪದ ಸ್ಟೇಶನ್ನಿನಲ್ಲಿ ಸರ್ಕಸ್ ಒಂದರ ಭಾರಿ ಪೆಟ್ಟಿಗೆಗಳನ್ನು ವ್ಯಾಗನ್ನುಗಳಿಂದ ಇಳಿಸುತ್ತಿರುವ ಆನೆಯೊಂದು ಕೇಳಿಸಿಕೊಂಡಿದೆ. ಆ ಆನೆ ಯಾರ ಸೂಚನೆಯೂ ಇಲ್ಲದೆ ಸ್ಥಳಕ್ಕೆ ಬಂದು ಗಾಡಿಯ ಹಿಂಭಾಗಕ್ಕೆ ತಲೆಯನ್ನು ಕೊಟ್ಟು ಕೊಂಚ ದಬ್ಬಿತು. ಗಾಡಿ ಸರಾಗವಾಗಿ ಹಳಿಗಳನ್ನು ಬಿಟ್ಟು ಮುಂದೆ ಹೋಯಿತು. ಕೆಲವೇ ಕ್ಷಣಗಳಲ್ಲಿ ಎಕ್ಸ್‌ಪ್ರೆಸ್ ರೈಲು ಭುಸುಗುಟ್ಟುತ್ತ ಆ ಹಾದಿಯಲ್ಲಿ ಹಾದು ಹೋಯಿತು. ಕಣ್ಣುಮುಚ್ಚಿ ತೆರೆಯುದರಲ್ಲಿ ದುರಂತವೊಂದನ್ನು ತಪ್ಪಿಸಿದ್ದು ವಿಖ್ಯಾತ ಸರ್ಕಸ್ ಆನೆ ಅಲಿಸ್.

ಇನ್ನೊಮ್ಮೆ ಗೋದಿ ಮೂಟೆಗಳನ್ನು ಹೇರಿದ್ದ ಗಾಡಿಯೊಂದರ ಗಾಲಿಗಳು ನೀರಿಲ್ಲದ ಹಳ್ಳವೊಂದರ ಮರಳಿನಲ್ಲಿ ಹೂತುಹೋಗಿದ್ದವು. ಅದಕ್ಕೆ ಕಟ್ಟಿದ್ದ ಹದಿನಾರು ಕುದುರೆಗಳು ಗಾಡಿಯನ್ನು ಎಳೆದು ಹಾಕುವ ಯತ್ನ ಮಾಡಿ ಸೋತು ಹೋಗಿದ್ದವು. ಸೊಪ್ಪುಸದೆ ಮೇಯಲು ಎತ್ತಲೋ ಹೊರಟಿದ್ದ ಅಲಿಸ್ ಇದನ್ನು ಕಂಡಿತು. ಮೂವತ್ತಮೂರು ಸಾವಿರ ಪೌಂಡುಗಳ ಭಾರದ ಆ ಗಾಡಿಯನ್ನು ಅಲಿಸ್ ಆಟದ ಬಂಡಿಯಂತೆ ತಳ್ಳಿ ಮರಳಿನಿಂದ ಪಾರು ಮಾಡಿದಾಗ ಬಡ ಗಾಡಿಯವನ ಕಂಗಳು ಹಸಿಗೂಡಿದವು.

ಅಲಿಸ್ ಆಸ್ಟ್ರೇಲಿಯದ ಹೆಸರಾಂತ ರಿತ್ಸ್ ಸರ್ಕಸ್ ಕಂಪನಿಗೆ ಸೇರಿದ್ದು. ಭಾರತೀಯ ಮೂಲದ ಆ ಹೆಣ್ಣಾನೆ ತನ್ನ ಜಾಣತನ ಹಾಗೂ ಮಾನವೀಯ ಗುಣಗಳಿಂದಾಗಿ ಖಂಡದಾದ್ಯಂತ ಮನೆಮಾತಾಗಿತ್ತು. ಸಿರಿವಂತರಿಂದ ಬಡವರವರೆಗೆ ಮಕ್ಕಳಿಂದ ಮುದುಕರವರೆಗೆ ಎಲ್ಲರಿಗೂ ಅಲಿಸ್ ಪ್ರೀತಿ ಪಾತ್ರವಾಗಿತ್ತು.

ಒಮ್ಮೆ ಸರ್ಕಸ್ ನಡೆಯುತ್ತಿದ್ದಾಗ ಮುದ್ದು ಬಾಲೆಯೊಬ್ಬಳು ಪುಷ್ಪಗುಚ್ಛವೊಂದನ್ನು ಅಲಿಸ್‌ಗೆ ನೀಡಿದಳು. ಅದನ್ನು ಪ್ರೀತಿಯಿಂದ ಸ್ವೀಕರಿಸಿದ ಅಲಿಸ್ ಒಂದುಬಾರಿ ಕೃತಜ್ಞತಾ ಸೂಚಕವಾಗಿ ಘೀಳಿಟ್ಟು ಆ ಪುಷ್ಪಗುಚ್ಛವನ್ನು ಸೊಂಡಿಲಲ್ಲಿ ಹಿಡಿದುಕೊಂಡು ಮೈಮೇಲಿನ ಧೂಳು, ನೊಣ, ಸೊಳ್ಳೆಗಳನ್ನು ಝಾಡಿಸಿಕೊಂಡಾಗ ಸರ್ಕಸ್ ನೋಡಲು ಬಂದಿದ್ದ ಭಾರಿ ಜನಸ್ತೋಮ ಎಬ್ಬಿಸಿದ ನಗೆಯ ಅಲೆ ಹಾಗೂ ಚಪ್ಪಾಳೆ ಶಮನಯಾಗಲು ಅದೆಷ್ಟೋ ಸಮಯ ಬೇಕಾಯಿತು. ಆ ಮಗುವಿನ ಆನಂದ ಅವರ್ಣನೀಯ.

ಇನ್ನೊಮ್ಮೆ ಪಶ್ಚಿಮ ಆಸ್ಟ್ರೇಲಿಯದ ಪಾರ್ಕೊಂದರಲ್ಲಿ ಇಬ್ಬರು ಚಿಣ್ಣರು ಜೀಕ ಝೂಕ(ತೂಗುಹಲಗೆ) ಆಡುತ್ತಿದ್ದರು. ಅವರಲ್ಲಿ ಒಬ್ಬ ಬಾಲಕ ಅದೇಕೊ ಅಲ್ಲಿಂದ ನಡೆದುಬಿಟ್ಟ. ನೆಲಕ್ಕೆ ಕುಸಿದ ಇನ್ನೊಬ್ಬ ಬಾಲಕನ ಮುಖ ಪೆಚ್ಚಾಯಿತು. ಇದನ್ನು ಯಾವುದೋ ಕೆಲಸದ ಮೇಲೆ ಪಾರ್ಕಿಗೆ ಬಂದಿದ್ದ ಅಲಿಸ್ ನೋಡಿತು. ಒಡನೆಯೇ ಅದು ಅತ್ತ ತೆರಳಿ ತೂಗು ಹಲಗೆಯ ಇನ್ನೊಂದು ಕಡೆ ತನ್ನ ಕಾಲನ್ನಿಟ್ಟು ಮೃದುವಾಗಿ ಆ ಬಾಲಕನನ್ನು ಆಡಿಸಿತು. ಈ ವಿಚಿತ್ರ ದೃಶ್ಯವನ್ನು ನೋಡಲು ಕ್ಷಣಮಾತ್ರದಲ್ಲಿ ಅಲ್ಲಿ ಸಾವಿರಾರು ಜನ ಘೇರಾಯಿಸಿ ಬಿಟ್ಟರು. ಅವರ ಚಪ್ಪಾಳೆ, ಕೇಕೆ, ಹರ್ಷೋದ್ಗಾರಗಳು ಅದೆಷ್ಟೋ ಹೊತ್ತು ಮುಂದುವರಿಯಿತು. ಚಿಣ್ಣನಿಗಂತೂ ಅದೊಂದು ಚಿರಸ್ಮರಣೀಯ ಅನುಭವ.

ರಿತ್ಸ್ ಸರ್ಕಸ್ಸಿನವರು ಅರಣ್ಯ ಕಂಟ್ರಾಕ್ಟರ್ ಒಬ್ಬರಿಂದ ಅಲಿಸ್‌ನ್ನು ಕೊಂಡಾಗ ಅದಕ್ಕೆ 53 ವರ್ಷಗಳ ಪ್ರಾಯ. ಸರ್ಕಸ್ಸಿಗೆ ಬರುವ ಮುನ್ನ ಅದು ಬರ್ಮಾದ ಅರಣ್ಯದಲ್ಲಿ ಮರದ ದಿಮ್ಮಿಗಳನ್ನು ಎಳೆಯುವ ಕೆಲಸ ಮಾಡುತ್ತಿತ್ತು. ಸರ್ಕಸ್ ಕಂಪನಿಗೆ ಬಂದ ಮೇಲೆ ಅಲ್ಲಿಯ ಮುಖ್ಯ ಆನೆ ಗನಿಸಾ (ಗಣೇಶ್) ಜೊತೆ ಸರ್ಕಸ್ಸಿನಲ್ಲಿ ಪ್ರದರ್ಶನ ನೀಡುವುದು ಹಾಗೂ ಪ್ರಾಣಿ ಗಳ ಪಂಜರಗಳೇ ಮೊದಲಾದ ಭಾರವಾದ ಸರಕುಗಳನ್ನು ಎತ್ತಿಳಿಸುವುದೇ ಮುಂತಾದ ಕೆಲಸಗಳಲ್ಲಿ ಮೂರು ವರ್ಷ ತರಬೇತಿ ಪಡೆ ಯಿತು. ಗನಿಸಾ ಸತ್ತ ಮೇಲೆ ಅದರ ಸಮಸ್ತ ಕೆಲಸವೂ ಅಲಿಸ್ ಪಾಲಿಗೆ ಬಂತು.

ಅಲಿಸ್‌ನ ಒಂದು ವಿಶೇಷ ಗುಣವೆಂದರೆ ಅದರ ವಿವೇಚನಾಶಕ್ತಿ. ಒಮ್ಮೆ ಅದು ಲಾರಿಯ ಮೇಲೆ ಭಾರವಾದ ಪಂಜರವೊಂದನ್ನು ಏರಿಸುತ್ತಿತ್ತು. ಅಷ್ಟರಲ್ಲಿ ಪಂಜರದ ಗಾಲಿಯೊಂದು ಕಳಚಿಕೊಂಡು ಲಾರಿಯ ಪಕ್ಕದಿಂದ ಜಾರಿ ಬೀಳುವುದರಲ್ಲಿತ್ತು. ಇದರಿಂದ ಗಾಡಿಗೆ ಮಾತ್ರ ವಲ್ಲದೆ ಅದರಲ್ಲಿದ್ದ ಅಪರೂಪದ ಪ್ರಾಣಿ ಗಳಿಗೂ ಅಪಾಯವಾಗುತ್ತಿತ್ತು. ಆಗ ಅಲಿಸ್ ಯಾರ ನಿರ್ದೇಶನವೂ ಇಲ್ಲದೆ ತನ್ನ ಅಸೀಮ ಶಕ್ತಿಯಿಂದ ಆ ಪಂಜರವನ್ನು ಮೇಲೆ ನೂಕಿ ಬೇರೆ ಪಂಜರಕ್ಕೆ ಅದನ್ನು ಆನಿಸಿ ಸರಿಯಾಗಿ ನಿಲ್ಲಿಸಿತು.

ಅಲಿಸ್‌ಗೆ ತನ್ನ ಕೆಲಸವನ್ನು ಬೇರೆಯವರು ಮಾಡುವುದು ಹಿಡಿಸುತ್ತಿರಲಿಲ್ಲ. ಒಂದು ಸಾರಿ ಅದು ವಿಕ್ಟೋರಿಯಾ ಪ್ರಾಂತದ ಪೋರ್ಟ್ ಫೇರಿ ಎಂಬಲ್ಲಿ ಸರ್ಕಸ್ಸಿನ ಸರಕುಗಳನ್ನು ರೈಲಿಗೇರಿಸುತ್ತಲಿತ್ತು. ಬೆಳಗಿನಿಂದ ಮಧ್ಯಾಹ್ನದವರೆಗೆ ಒಂದೇ ಸಮನೆ ಕೆಲಸ ಮಾಡಿದ್ದರಿಂದ ಉಪಾಹಾರ ಹಾಗೂ ವಿಶ್ರಾಂತಿಗೆಂದು ಅದನ್ನು ಅಲ್ಲಿಂದ ಕಳಿಸಲಾಯಿತು. ಅದೇ ಸಮಯಕ್ಕೆ ಇನ್ನೊಂದು ಆನೆಯನ್ನು ತೊಡಗಿಸಲಾಯಿತು. ಇದರಿಂದ ಅಲಿಸ್‌ಗೆ ಏನೆನ್ನಿಸಿತೋ? ಅದು ಹಿಡಿದಿದ್ದುದನ್ನು ಬಿಟ್ಟು ಸರಸರನೆ ಅಲ್ಲಿಗೆ ಬಂದು ಇನ್ನೊಂದು ಆನೆಯನ್ನು ಅತ್ತ ಕಳಿಸಿ ಎಲ್ಲಾ ಕೆಲಸವನ್ನೂ ತಾನೇ ಮಾಡಿತು.

ಮಾನವರ ಮಾತುಕತೆ ಹಾಗೂ ಮನೋಭಾವ ಅಲಿಸ್‌ಗೆ ಅರ್ಥವಾಗುತ್ತಿತ್ತು ಎಂಬುದಕ್ಕೆ ಇದೊಂದು ನಿದರ್ಶನ. ಒಮ್ಮೆ ಮಿ॥ ರಿತ್ ಯಾರೊಡನೆಯೋ ಮಾತಾಡುವ ಭರದಲ್ಲಿ ಅಲಿಸ್ಸನ್ನು ಮರೆತು ಬಿಟ್ಟರು. ತನ್ನನ್ನು ಕಡೆಗಣಿಸುವುದು ಅಲಿಸ್‌ಗೆ ಹಿಡಿಸುತ್ತಿರಲಿಲ್ಲ. ಆಗ ಅದು ತನ್ನ ಸೊಂಡಿಲನ್ನು ರಿತ್‌ರತ್ತ ಚಾಚಿ ಅವರ ಗಮನವನ್ನು ತನ್ನತ್ತ ಸೆಳೆದುಕೊಳ್ಳುವುದರಲ್ಲಿ ಯಶಸ್ವಿಯಾಯಿತು. ಅದೊಂದು ದಿನ ಕಂಪನಿಯ ಇನ್ನೊಂದು ಆನೆಗೆ ಮದವೇರಿ ಅದು ಹುಚ್ಚುಚ್ಚಾಗಿ ಆಡುತ್ತಾ ಅಲ್ಲಿಯೇ ಇದ್ದ ಸರ್ಕಸ್ ಮಾಲೀಕರ ಪತ್ನಿ ಶ್ರೀಮತಿ ರಿತ್ ಅವರನ್ನು ನೆಲದ ಮೇಲೆ ಕೆಡವಿ ಅವರ ಎದೆಯಮೇಲೆ ಕಾಲಿಟ್ಟು ಹೊಸಕಿ ಹಾಕುವುದರಲ್ಲಿತ್ತು. ಅದೇ ಸಮಯಕ್ಕೆ ಅದಲ್ಲಿತ್ತೋ ಅಲಿಸ್. ದಾಪುಗಾಲು ಹಾಕುತ್ತಾ ಅಲ್ಲಿಗೆ ಬಂದದ್ದೇ ಮದ್ದಾನೆಯನ್ನು ಅತ್ತ ದಬ್ಬಿ ಶ್ರೀಮತಿ ರಿತ್‌ರ ಪ್ರಾಣ ಉಳಿಸಿತು.

ಇನ್ನೊಂದು ದಿನ ಸಿಡ್ನಿಯಲ್ಲಿ ಭಾರಿ ಜನಸ್ತೋಮದ ಎದುರಿಗೆ ಸರ್ಕಸ್ ಆರಂಭದ ವಿಜೃಂಭಣೆಯ ಮೆರವಣಿಗೆ ನಡೆದಿತ್ತು. ಆಗ ಒಂದು ಹಸುಳೆ ತನ್ನ ತಾಯ ಕಣ್ಣುತಪ್ಪಿಸಿ ತಪ್ಪು ಹೆಜ್ಜೆ ಹಾಕುತ್ತಾ ಅದು ಹೇಗೊ ರಿಂಗಿನೊಳಗೆ ನುಸುಳಿಕೊಂಡಿತು. ಇನ್ನೊಂದು ಕ್ಷಣದಲ್ಲಿ ಧಪ

ಧಪ ಹೆಜ್ಜೆ ಹಾಕುತ್ತ ಸುತ್ತು ಹಾಕುತ್ತಿದ್ದ ಪ್ರಾಣಿಗಳ ಕಾಲಿಗೆ ಸಿಲುಕಬೇಕು. ಅಷ್ಟರಲ್ಲಿ ಇದು ಅಲಿಸ್ ಕಣ್ಣಿಗೆ ಬಿತ್ತು. ತಕ್ಷಣ ಅದು ಸಾಲನ್ನು ಬಿಟ್ಟು ಆ ಸ್ಥಳಕ್ಕೆ ಬಂದು ಮಗುವನ್ನು ಸೊಂಡಿಲಿನಲ್ಲಿ ಎತ್ತಿ ಒಂದೆರೆಡು ಬಾರಿ ಜೋಕಾಲಿಯಾಡಿಸಿ ರಿಂಗಿನಿಂದ ಆಚೆ ಬಿಟ್ಟು ಬಿಟ್ಟಿತು.

1946ರಲ್ಲಿ ಅಲಿಸ್‌ನ 100ನೇ ಹುಟ್ಟುಹಬ್ಬ ವನ್ನು ಮೆಲ್ಬೋರ್ನಿನಲ್ಲಿ ಅತ್ಯಂತ ವೈಭವ ದಿಂದ ಆಚರಿಸಲಾಯಿತು. ಅದಕ್ಕಾಗಿ ಐದು ಅಡಿ ಎತ್ತರದ ವಿಶೇಷ ಕೇಕನ್ನು ಸಿದ್ಧಪಡಿಸಿ ಅದನ್ನು ಕತ್ತರಿಸಲು ಅಲಿಸ್‌ಗೆ ಸೂಕ್ತ ತರಬೇತಿ ನೀಡಲಾಗಿತ್ತು. ಅದನ್ನು ನೋಡಲು ಸರ್ಕಸ್ ಡೇರೆ ತುಂಬಿ ತುಳುಕುವಷ್ಟು ಜನ ಸೇರಿದ್ದರು. ಗೊತ್ತಾದ ಸಮಯಕ್ಕೆ ವಿಶೇಷವಾಗಿ ಸಿಂಗಾರ ಗೊಂಡ ಅಲಿಸ್ ವಾದ್ಯ ಸಂಗೀತಕ್ಕೆ ತಕ್ಕಂತೆ ಹೆಜ್ಜೆಯಿಡುತ್ತ ವೇದಿಕೆಯ ಬಳಿ ಬಂದು ಸೊಂಡಿಲಿಂದ ಊದಿ ಮೊಂಬತ್ತಿಗಳನ್ನು ಆರಿಸಿತು. ಸೊಂಡಿಲಿನಲ್ಲಿ ಅಲಂಕೃತವಾದ ಚಾಕು ಹಿಡಿದು ಭಾರಿ ಕೇಕನ್ನು ಕತ್ತರಿಸಿದಾಗ ಎಲ್ಲಾ ಸರ್ಕಸ್ ಆನೆಗಳೂ ಒಟ್ಟಿಗೆ ಘೀಳಿಟ್ಟು "ಹ್ಯಾಪಿ ಬರ್ತ್ ಡೇ ಟು ಯು" ಎಂದು ಘೋಷಿಸಿದವು. ಸರ್ಕಸ್ ಬ್ಯಾಂಡ್ ಸೆಟ್ ಸಂಭ್ರಮದ ಗೀತೆಗಳನ್ನು ನುಡಿಸಹತ್ತಿತು. ಸುತ್ತಲಿದ್ದ ಸಾವಿರಾರು ಜನರ ಅದರಲ್ಲೂ ಹಸುಳೆಗಳ ಆನಂದವಂತೂ ವರ್ಣನಾತೀತ.

1953ರಲ್ಲಿ ಅಲಿಸ್‌ಗೆ 107 ವರ್ಷಗಳು ತುಂಬಿದವು. ಅಲ್ಲಿಂದ ಮುಂದೆ ಅದನ್ನು ವೃದ್ಧಾಪ್ಯ ಕಾಡಹತ್ತಿತು. ಸರ್ಕಸ್ ಜೊತೆಗೆ ಅದನ್ನು ಊರಿಂದೂರಿಗೆ ಒಯ್ಯುವುದೂ ಕಷ್ಟವೆನಿಸಿ ಅದನ್ನು ಮೆಲ್ಬೋರ್ನಿನ ಮೃಗಾಲಯದಲ್ಲಿ ಬಿಡಲಾಯಿತು. ಅಲ್ಲಿಯ ಜೀವನ, ಜೊತೆಗಾರರ ಅಗಲಿಕೆ ಅಲಿಸ್‌ಗೆ ಅಸಹನೀಯವೆನಿಸಿತೇನೋ. ಅದು ಆಹಾರ ನೀರುಗಳನ್ನು ಬಿಟ್ಟು ನಿಂತಲ್ಲಿಯೇ ನಿಂತು ಪರಮ ಸಂಕಟದಿಂದ ಕಾಲಯಾಪನೆ ಮಾಡತೊಡಗಿತು. ಪ್ರವಾಸವನ್ನು ಮುಗಿಸಿ ಸರ್ಕಸ್ ಹಿಂದಿರುಗಿ ಬರುವಷ್ಟರಲ್ಲಿ ಅದರ ಸ್ಥಿತಿ ಕರುಣಾಜನಕವಾಗಿತ್ತು. ವಿಶೇಷ ವಾಹನವೊಂದರಲ್ಲಿ ತುಂಬಾ ಪ್ರಯಾಸದಿಂದ ಅದನ್ನು ಕ್ಯಾಂಪಿಗೆ ತಂದಾಗ ಅಲ್ಲಿಯ ಜನ ಹಾಗೂ ಪ್ರಾಣಿಗಳು ಅದನ್ನು ಬರಮಾಡಿಕೊಂಡ ರೀತಿ ಅತ್ಯಂತ ಹೃದಯಸ್ಪರ್ಶಿ.

1956ರ ನಂತರ ಅದರ ಸ್ಥಿತಿ ಮತ್ತಷ್ಟು ಕೆಟ್ಟಿತು. ಅದರ ತೂಕ ದಿನೇ ದಿನೇ ಕಡಿಮೆಯಾಗಹತ್ತಿತ್ತು. ಚರ್ಮ ಜೋತು ಬಿದ್ದಿತು. ಕೊಂಚ ತಿಂದರೂ ಅಪಚನವಾಗುತ್ತಿತ್ತು. ನಡೆಯಲು ಹೋದರೆ ಹೆಜ್ಜೆ ತಪ್ಪುತ್ತಿತು. ಆದರೂ ಸರ್ಕಸ್ಸಿನ ಸಮಸ್ತರೂ ಅದನ್ನು ಗೌರವಾನ್ವಿತ ಅತಿಥಿಯೆಂದು ಭಾವಿಸಿ ಎಷ್ಟೇ ತ್ರಾಸದಾಯಕವಾದರೂ ಅದನ್ನು ಸಂಗಡ ಒಯ್ಯುತ್ತಿದ್ದರು.

ಆ ವರ್ಷದ ಈಸ್ಟರ್ ಹಬ್ಬದಂದು ಅಲಿಸ್ ಎಂದಿನಂತೆ ತನ್ನ ಪಾಲಿನ ಗಂಜಿಯನ್ನು ಕುಡಿಯಿತು. ಅದೇ ದಿನ ಸರ್ಕಸ್ ಅಲ್ಲಿಂದ ಕ್ಯಾಂಪ್ ಕಿತ್ತಲಿತ್ತು. ಸಂಜೆ ಆರರ ಸಮಯ. ಅಲಿಸ್ಸನ್ನು ಲಾರಿಗೆ ಹತ್ತಿಸುವ ಯತ್ನ ಆರಂಭವಾಯಿತು. ಆದರೆ ಅದಕ್ಕೆ ಹೆಜ್ಜೆಯನ್ನು ಎತ್ತಿಡಲೂ ಆಗುತ್ತಿರಲಿಲ್ಲ. ಸಂಗಾತಿ ಆನೆಗಳು ಒತ್ತಾಸೆ ನೀಡಿದರೂ ಅದಕ್ಕೆ ಮಿಸುಕಾಡಲೂ ಆಗಲಿಲ್ಲ. ಕೊಂಚಕಾಲ ನಡುಗಿದ ಅಲಿಸ್ ಧೊಪ್ಪೆಂದು ಉರುಳಿ ಬಿದ್ದುಬಿಟ್ಟಿತ್ತು. ತಕ್ಷಣ ವಿಖ್ಯಾತ ಪಶು ವೈದ್ಯರನ್ನು ಕರೆಸಲಾಯಿತು. ತಪಾಸಣೆ ನಡೆಸಿದ ಅವರು ಅಲಿಸ್ ಇನ್ನು ನಿಲ್ಲಲಾರದೆಂದೂ ಸಾವು ಮಾತ್ರ ಅದನ್ನು ಸಂಕಟದಿಂದ ಪಾರು ಮಾಡಬಲ್ಲದೆಂದೂ ಹೇಳಿದರು. ಇದನ್ನು ಕೇಳಿದ ಎಲ್ಲರೂ ಉಮ್ಮಳಗೊಂಡರು. ಕ್ಯಾಂಪಿನ ಪ್ರಯಾಣ ಮುಂದೆ ಹೋಯಿತು. ಎಲ್ಲರೂ ಕಂಬನಿಗರೆಯುತ್ತಾ ಅಲಿಸ್ ಸುತ್ತ ನಿಂತರು. ಬ್ಯಾಂಡ್ ಸೆಟ್ ಶೋಕ ಗೀತೆ ನುಡಿಸುತ್ತಿದ್ದಂತೆ ಕಣ್ಣೀರು ಹರಿಸುತ್ತಿದ್ದ ಅಲಿಸ್‌ನ ಹಣೆಯನ್ನು ಮೂರು ಗುಂಡುಗಳನ್ನು ಹೊಕ್ಕವು. ಕೊಂಚಕಾಲ ಒದ್ದಾಡಿ ಅದು ಗತಪ್ರಾಣವಾಯಿತು.

ಅಲಿಸ್ ನಿಧನ ವಾರ್ತೆಯನ್ನು ಎಲ್ಲಾ ಪ್ರಮುಖ ಪತ್ರಿಕೆಗಳೂ ಮುಖಪುಟದಲ್ಲಿ ಚಿತ್ರದೊಂದಿಗೆ ಪ್ರಕಟಿಸಿದವು. ●

(ಸಾಧಾರ)

ಮಂಜು ಕರಗಿತು

● ಪ್ರೊ॥ ಮಧು ವೆಂಕಾರೆಡ್ಡಿ ●

ಸ್ವಾಮಿ ವಿವೇಕಾನಂದರ ಬಗ್ಗೆ ಬರೆದಷ್ಟು ಬೇರೆ ಇನ್ನಾವ ಭಾರತೀಯನ ಬಗೆಗೂ ಪ್ರಾಯಶಃ ಬರೆಯಲ್ಪಟ್ಟಿರಲಿಕ್ಕಿಲ್ಲ. ವಿವೇಕಾನಂದರು ಈ ಲೋಕದಲ್ಲಿದ್ದುದು ತೀರ ಅಲ್ಪ ಕಾಲ ಮಾತ್ರ. ಅವರ ಸಾಧನೆಯನ್ನಳೆಯಲು ಶಬ್ದಗಳಿನ್ನೂ ಹುಟ್ಟಬೇಕು.

ವಿಶ್ವಧರ್ಮಗಳ ಮೊದಲ ಸಮ್ಮೇಳನ ಅಮೇರಿಕದ ಚಿಕ್ಯಾಗೋದಲ್ಲಿ. 1893 ಸೆಪ್ಟೆಂಬರ್ 11– ಸಮ್ಮೇಳನದ ಮೊದಲ ದಿನ. ಜಗತ್ತಿನ ವಿಭಿನ್ನ ಧರ್ಮಗಳನ್ನು ಪ್ರತಿನಿಧಿಸುವ ಅನೇಕ ಅತಿರಥ ಮಹಾರಥರು ಅಲ್ಲಿ ಒಂದುಗೂಡಿದ್ದರು. ಭಾರತದಿಂದ ಅನೇಕ ಧರ್ಮಪ್ರತಿನಿಧಿಗಳು ಬಂದಿದ್ದರು. ಸನಾತನ ಧರ್ಮದ ಪ್ರತಿನಿಧಿ ವಿವೇಕಾನಂದರೇ ಅವರಲ್ಲಿ ವಯಸ್ಸಿನಲ್ಲಿ ಅತ್ಯಂತ ಕಿರಿಯರು. ಉಳಿದವರೆಲ್ಲ "ಮಹಿಳೆಯರೆ, ಮಹನೀಯರೆ" ಎಂದಾರಂಭಿಸಿ ತಂತಮ್ಮ ರೀತಿಯಲ್ಲಿ ತಂತಮ್ಮ ಧರ್ಮದ ಶ್ರೇಷ್ಠತೆಯನ್ನು ಕುರಿತು ಮಾತನಾಡಿದರು. ಕೆಲವರು ಚೆನ್ನಾಗಿ ಮಾತನಾಡಿದರು; ಇನ್ನು ಕೆಲವರು ಕೇಳುಗರಿಗೆ ತಲೆಬೇಸರವೆನಿಸಿದರು. 'ನಾಗರಿಕ' ಜಗತ್ತಿನ ದೃಷ್ಟಿಯಲ್ಲಿ ಸನಾತನ ಹಿಂದೂ ಧರ್ಮ ಲೆಕ್ಕಕ್ಕೆ ಮಾತ್ರ ಒಂದು ಧರ್ಮ. ವಿವೇಕಾನಂದರು ಸಂಘಟಕರ ದೃಷ್ಟಿಯಲ್ಲಿ ಇಂಥ ಒಬ್ಬ ಪ್ರತಿನಿಧಿ. ಆದರೆ ಅಪೂರ್ವ ತೇಜಸ್ಸುಳ್ಳ ಈ ಆಜಾನುಬಾಹು ಸುಂದರ ಯುವಕ ಎದ್ದು ನಿಂತು ನಿಮಿಷಾರ್ಧ ಧ್ಯಾನೋನ್ಮುಖನಾದಾಗ ಪ್ರೇಕ್ಷಕರಲ್ಲಿ ಕುತೂಹಲ ಕೆರಳಿರಬೇಕು.

"ಅಮೇರಿಕದ ಸೋದರ ಸೋದರಿಯರೇ" ಎಂಬ ಶಬ್ದಗಳು ವಿವೇಕಾನಂದರ ಮುಖದಿಂದ ಹೊರಬರುತ್ತಿದ್ದಂತೆಯೇ ಇಡೀ ಸಭೆಯೇ ರೋಮಾಂಚನಗೊಂಡಿತು. ಔಪಚಾರಿಕತೆಯ ಲವಲೇಶವೂ ಇಲ್ಲದ ಈ ಕಂಚಿನ ಧ್ವನಿಯಲ್ಲಿಯ ಆಕರ್ಷಣೆ ತಟ್ಟನೇ ತನ್ನ ಮೋಡಿಯನ್ನು ಬೀರಿತು. ಇತರರು ತಂತಮ್ಮ ಧರ್ಮಗಳ ಶ್ರೇಷ್ಠತೆಯ ಗುಣಗಾನವನ್ನೆ ಹಾಡಿದ್ದರೆ ವಿವೇಕಾನಂದರು ಸರ್ವಧರ್ಮ ಸಮನ್ವಯವನ್ನು ಪ್ರಸ್ತಾಪಿಸಿ ಕೇಳುಗರನ್ನು ಮೂಕವಿಸ್ಮಿತರನ್ನಾಗಿಸಿದರು. "ಪರಸ್ಪರರನ್ನು ಅರಿಯಿರಿ. ಅರಿತು ಅಪ್ಪಿಕೊಳ್ಳಿರಿ" ಎಂಬುದಾಗಿ ಸಾರುವ ಹಿಂದೂಧರ್ಮ ಸಕಲ ಧರ್ಮಗಳ ಮಹಾತಾಯಿ. "ಯಾರು ಯಾವ ರೂಪದಲ್ಲಿ ನನ್ನನ್ನು ಭಜಿಸುತ್ತಾರೋ ಅವರಿಗೆ ಆ ರೂಪದಲ್ಲಿ ಗೋಚರಿಸುತ್ತೇನೆ. ಬೇರೆ ಬೇರೆ ನದಿಗಳು ವಿಭಿನ್ನ ಪ್ರದೇಶದಲ್ಲಿ ಹುಟ್ಟುವವಾದರೂ ಕೊನೆಗೆ ಅವು ಸೇರುವುದು ಕಡಲನ್ನೆ. ಅಂತೆಯೇ, ಯಾರು ಯಾವ ಹೆಸರಿನಿಂದ ಪೂಜಿಸಿದರೂ ಅದೆಲ್ಲ ತಲುಪುವುದು ನನ್ನನ್ನೆ" ಎಂದು ಪಾರ್ಥನಿಗೆ ಹೇಳುವ ಶ್ರೀಕೃಷ್ಣನ ನುಡಿಯನ್ನು ಉದ್ಧರಿಸಿ, ಪ್ರತಿಯೊಂದು ಧರ್ಮದ

...ದೇಶವೂ ಮನುಷ್ಯನನ್ನು ಪರಮಾತ್ಮನ ಬಳಿ ಕರೆದೊಯ್ಯುವುದೇ ಆಗಿರುತ್ತದೆಂದಾಗ ಅದು ಹೆಚ್ಚು, ಇದು ಕಡಿಮೆಯೆಂಬುದು ನಿರರ್ಥಕವೆಂದು ಸಾರಿ ಧರ್ಮದ ಬಗ್ಗೆ ಹೊಚ್ಚ ಹೊಸತೊಂದು ಪರಿಕಲ್ಪನೆಯನ್ನೇ ನೀಡಿದರು.

ವಿವೇಕಾನಂದರ ಈ ಪ್ರಥಮ ಭಾಷಣದ ಪರಿಣಾಮ ಅದೆಷ್ಟು ಅದ್ಭುತವಾಯಿತೆಂದರೆ ಅಮೇರಿಕದ ಪ್ರಮುಖ ಪತ್ರಿಕೆಯೊಂದು, "ಸರ್ವಧರ್ಮ ಸಮ್ಮೇಲನದಲ್ಲೇ ವಿವೇಕಾನಂದರು ಶ್ರೇಷ್ಠ ವ್ಯಕ್ತಿ. ಇಂಥ ಸುಸಂಸ್ಕೃತ ಹಿಂದೂ ಜನಾಂಗಕ್ಕೆ ಹೊರಗಿನಿಂದ ಧರ್ಮ ಪ್ರಚಾರಕರನ್ನು ಕಳಿಸುವುದು ಮೂರ್ಖತನ"ವೆಂದು ಸಾರಿತು. "ಎಲ್ಲ ಕಡೆಗಳಲ್ಲೂ ಅವರನ್ನು ಕಟ್ಟಕಡೆಯ ಉಪನ್ಯಾಸಕರಾಗಿ ಕಳಿಸುತ್ತಿದ್ದರೂ ಲಕ್ಷೋಪಲಕ್ಷ ಜನ ಬಿಸಿಲ ಬೇಗೆಯ ಪರಿವೆಯಿಲ್ಲದೇ ಅವರ ಪುಟ್ಟ ಭಾಷಣ ಕೇಳಲು ತಾಳ್ಮೆಯಿಂದ ನಿರೀಕ್ಷಿಸುತ್ತಾರೆ" ಎಂದು ಇನ್ನೊಂದು ಪತ್ರಿಕೆ ಬರೆಯಿತು.

ಸ್ವಾಮಿ ವಿವೇಕಾನಂದರು ಅಮೇರಿಕದಲ್ಲಿದ್ದಾಗ ಅಮೇರಿಕನ್ನರಿಗೆ ಹೇಳಿದರು. "ನೀವು ಕ್ರೈಸ್ತರು ಭಾರತೀಯರ ಆತ್ಮಗಳ ರಕ್ಷಣೆಗಾಗಿ ಪಾದ್ರಿಗಳನ್ನು ಕಳಿಸುತ್ತೀರಿ. ಭಾರತದಲ್ಲಿ ಅಜೀರ್ಣವಾಗುವಷ್ಟು ಧರ್ಮ ಇದೆ. ನನ್ನನ್ನು ಸತತವಾಗಿ ಕಾಡುತ್ತಿರುವ ಭಾರತೀಯ ಸಮಸ್ಯೆಯೆಂದರೆ ಅಲ್ಲಿ ತಾಂಡವವಾಡುತ್ತಿರುವ ಕಡು ಬಡತನ. ನೀವು ಹಸಿದವರಿಗೆ ಧರ್ಮವನ್ನು ಬೋಧಿಸಿದರೆ ಕಲ್ಲುನಾಗರಕ್ಕೆ ಹಾಲೆರೆದಂತಾದೀತು. ಅವರಿಗೆ ಅನ್ನ ನೀಡಿ, ರೋಗ ನಿವಾರಣೆಗಾಗಿ ವೈದ್ಯಕೀಯ ಸೇವೆ ನೀಡಿ; ಅವರಿಗೆ ಬೇಕಾದದ್ದು ನಿಮ್ಮ ಸೋದರಭಾವವೇ ಹೊರತು ಧರ್ಮವಲ್ಲ" ಎಂದು.

ಅಮೇರಿಕದಲ್ಲಿದ್ದಷ್ಟು ಕಾಲವೂ ವಿವೇಕಾನಂದರ ಜನಪ್ರಿಯತೆ ಹೆಚ್ಚುತ್ತಲೇ ನಡೆದುದು ಅಲ್ಲಿಯ ಅನೇಕ ಕ್ರೈಸ್ತ ಧರ್ಮಗುರುಗಳಿಗೂ ಭಾರತದಿಂದ ಬಂದಿದ್ದ ಬ್ರಹ್ಮೋ ಸಮಾಜದ ಪ್ರತಿನಿಧಿಗೂ ರುಚಿಸಲಿಲ್ಲವಂತೆ. ಅವರ ಬಗ್ಗೆ ಅಲ್ಲಸಲ್ಲದ ಕಥೆಗಳನ್ನು ಕಟ್ಟಿ ಪ್ರಚಾರ ಮಾಡಲೆತ್ನಿಸಲಾಯಿತಾದರೂ ಸೂರ್ಯೋದಯದೊಂದಿಗೆ ಕರಗಿ ಹೋಗುವ ಮಂಜಿನಂತೆ ಅದೆಲ್ಲ ವ್ಯರ್ಥವಾಯಿತೆಂಬ ಮಾತು ಬೇರೆ.*

ವೃಶ್ಚಿಕ ವೃತ್ತಾಂತ

ಭಾರತದಲ್ಲಿ ಎಂಭತ್ತಕ್ಕೂ ಹೆಚ್ಚು ವಿಧದ ಚೇಳುಗಳಿದ್ದರೂ ಆರೋಗ್ಯವಂತ ಮನುಷ್ಯನನ್ನು ಕೊಲ್ಲುವಷ್ಟು ವಿಷಭರಿತವಾದ ಚೇಳು ಒಂದೂ ಇಲ್ಲ. ಆದರೆ ಚೇಳು ಕಚ್ಚಿದಾಗ ಹೆದರಿಕೆಯಿಂದ ಸತ್ತ ನಿದರ್ಶನಗಳೇ ಹೆಚ್ಚು. ಈ ಭೂಮಿಯಲ್ಲಿ ಮನುಷ್ಯನ ಉಗಮವಾಗುವ ಮೊದಲೆ ಚೇಳುಗಳಿದ್ದವು. ಇವುಗಳ ಗಾತ್ರ ಸಾಮಾನ್ಯವಾಗಿ ಎರಡು ಅಂಗುಲದಷ್ಟು. ಆದರೆ ಆಫ್ರಿಕದಲ್ಲಿ ಎಂಟು ಅಂಗುಲದಷ್ಟು ಉದ್ದವಾದ ಚೇಳುಗಳೂ ಇವೆ. ಬಹು ಹಿಂದೆ ಅಸ್ತಿತ್ವದಲ್ಲಿದ್ದ ಕಡಲಚೇಳು ಆರು ಅಡಿಗಳಿಗಿಂತಲೂ ಉದ್ದವಾಗಿತ್ತಂತೆ.

ಚೇಳುಗಳಲ್ಲಿ ಗಂಡು ಹೆಣ್ಣು ಮಿಲನವಾದ ನಂತರ ಹೆಣ್ಣು ಗಂಡನ್ನು ತಿನ್ನುವುದುಂಟು. ಹೆಣ್ಣು ಚೇಳು ಒಂದು ಸಲಕ್ಕೆ ಮೂರು ಮರಿಗಳಿಗೆ ಜನ್ಮವೀಯುವುದು. ಕೆಲವೊಮ್ಮೆ ಲೆಕ್ಕ ಮರೆತು ತೊಂಭತ್ತು ಮರಿಗಳಿಗೂ ಜನ್ಮ ನೀಡಬಹುದು! ಮರಿಗಳ ಬಣ್ಣ ಬಿಳಿ. ಇವುಗಳಿಗೆ ತಾಯಿಯ ಬೆನ್ನ ಮೇಲೆ ಸವಾರಿ ಮಾಡುವುದೆಂದರೆ ಬಲು ಇಷ್ಟ. ಚೇಳಿನ ಆಹಾರ ಜಿರಲೆ, ಜೇಡ ಇತ್ಯಾದಿ. ತಾವು ಹಿಡಿದ ಪ್ರಾಣಿಗಳ ದೇಹದ ದ್ರವ ಮತ್ತು ಮೃದು ಭಾಗವನ್ನು ಮಾತ್ರ ಹೀರುವುದರಿಂದ ಅವು ಆಹಾರ ತಿನ್ನುತ್ತವೆ ಎನ್ನುವುದಕ್ಕಿಂತ ಕುಡಿಯುತ್ತವೆ ಎನ್ನುವುದೇ ಹೆಚ್ಚು ಸಮಂಜಸ. ಒಂದು ಸಾಧಾರಣ ಗಾತ್ರದ ಜಿರಲೆಯನ್ನು ತಿನ್ನಲು ಇದು ಎರಡು ಗಂಟೆಗಳಿಗೂ ಹೆಚ್ಚು ಕಾಲ ತೆಗೆದುಕೊಳ್ಳುತ್ತದೆ.

● ಮುನಿಯಾಲ ಗಣೇಶ ಶೆಣೈ

ಅನಿಸಿಕೆ

ಬೇಕು ಸ್ವಲ್ಪ ಕರುಣೆ

ಹಾಸ್ಟೆಲ್‌ನಲ್ಲಿರುವ ನನ್ನ ಮಿತ್ರನನ್ನು ಭೆಟ್ಟಿಯಾಗಲು ಹೋಗಿದ್ದೆ. ಹಾಸ್ಟೆಲ್‌ನ ಪಕ್ಕದಲ್ಲೇ ಒಂದು ಕುರುಡರ ಶಾಲೆ ಇದೆ. ನಾವಿಬ್ಬರೂ ಹರಟೆ ಹೊಡೆಯುತ್ತ ಕುಳಿತಿದ್ದೆವು. ಸ್ವಲ್ಪ ಸಮಯ ಕಳೆದ ನಂತರ ಹೊರಗೆ ಕಾರಿಡಾರ್‌ನಲ್ಲಿ ಬಡಿಗೆ ಸಪ್ಪಳ ಕೇಳಿಬಂತು. ಬಾಗಿಲುಗಳು ಧಡಾರನೆ ಮುಚ್ಚಿಕೊಂಡ ಸದ್ದೂ ಕೇಳಿಸಿತು. ಅಷ್ಟರಲ್ಲಿ "ಇದೇ ರೂಂ ನಂಬರ್ 12. ಬಾ" ಎನ್ನುತ್ತಾ ಒಬ್ಬ ಸದೃಢ ಯುವಕ ಇನ್ನೊಬ್ಬನನ್ನು ಕರೆದುಕೊಂಡು ನನ್ನ ಸ್ನೇಹಿತನ ಕೋಣೆ ಪ್ರವೇಶಿಸಿದ. ಆ ಯುವಕ ಮಾತನಾಡುತ್ತಿದ್ದ ರೀತಿ. ಕಣ್ಣಿಗೆ ಧರಿಸಿದ ಕಪ್ಪು ಕನ್ನಡಕ ನೋಡಿದಾಗ ನನಗೆ ಯಾವುದೇ ಸಂಶಯ ಬಂದಿರಲಿಲ್ಲ. ಆದರೆ ನನ್ನ ಸ್ನೇಹಿತ ಪರಿಚಯ ಮಾಡಿಕೊಟ್ಟ ನಂತರ ತಿಳಿಯಿತು- ಆತ ಕುರುಡ. ಪಕ್ಕದಲ್ಲಿದ್ದ ಕುರುಡರ ಶಾಲೆಯ ವಿದ್ಯಾರ್ಥಿ. ಜೊತೆಗೆ ಬಂದವ ಅವನ ಸಹಪಾಠಿ.

ತಮ್ಮ ಪಾಲಕರಿಗೆ ಪತ್ರ ಬರೆಸಿಕೊಳ್ಳಲೆಂದು ಅವರಿಬ್ಬರೂ ಬಂದಿದ್ದರು. ಹಾಸ್ಟೆಲ್‌ನ ಬಹಳಷ್ಟು ವಿದ್ಯಾರ್ಥಿಗಳಿಗೆ ಈ ಕೆಲಸ ಮಾಡುವಷ್ಟು ತಾಳ್ಮೆಯಿಲ್ಲ. ನನ್ನ ಸ್ನೇಹಿತ ಕರುಣಾಮಯಿ. ಅವರಿಗೆ ಸಹಾಯ ಮಾಡುತ್ತಿದ್ದ. ಆದ್ದರಿಂದ ಅವರು ಅವನ ಕೋಣೆಯನ್ನು ಹುಡುಕಿಕೊಂಡು ಬರುತ್ತಿದ್ದರು. "ನಮ್ಮ ಬಗ್ಗೆ ಯಾರು ಸಹಾನುಭೂತಿ ತೋರುತ್ತಾರೋ ಅವರ ಬಳಿ ಹೋಗುತ್ತೇವೆ" ಎಂದು ಬಂದಿದ್ದ ವ್ಯಕ್ತಿ ಹೇಳಿದಾಗ ನನಗೆ ಕಸಿಕರವೆನಿಸಿತು.

ಬಂದ ಕೆಲಸ ಮುಗಿಯಿತು. ಅವರಿಬ್ಬರೂ ಕೃತಜ್ಞತೆ ಸಲ್ಲಿಸಿ ಹೊರಟರು. ನಾನು ಏನೋ ಕುತೂಹಲದಿಂದ ಅವರ ಜೊತೆಯಲ್ಲಿ ಹೊರಟೆ. ದಾರಿಯಲ್ಲಿ ಒಬ್ಬ ವ್ಯಕ್ತಿ ಇವರನ್ನು ಕುರುಡರೆಂದು ಅರಿಯದೆ "ಟೈಮ್ ಎಷ್ಟಾಯ್ತು?" ಎಂದು ಕೇಳಿದ ತಕ್ಷಣ ಒಬ್ಬ ತನ್ನ ಕೈಗಡಿಯಾರದಿಂದ ಮೇಲಿನ ಗ್ಲಾಸ್ ಬಿಚ್ಚಿ ಒಳಗೆ ಕೈಯಾಡಿಸಿ ಟೈಮ್ ಹೇಳಿದ. ವಸ್ತುಸ್ಥಿತಿ ಅರಿತ ಅಪರಿಚಿತ ಕ್ಷಮೆ ಕೇಳಿ ಹೊರಟುಹೋದ. "ನಮಗೆ ಏನು ಕಲಿಯಲು ಸಾಧ್ಯವೋ. ಅದನ್ನೆಲ್ಲಾ ಕಲಿಯುತ್ತೇವೆ. ಕೆಲ ವಿಷಯಗಳಲ್ಲಿ ಮಾತ್ರ ನಾವು ಬೇರೆಯವರನ್ನು ಅವಲಂಬಿಸುವುದು ಅನಿವಾರ್ಯ" ಎಂದು ಆ ಕುರುಡ ಹೇಳಿದ.

ಇವರಿಗೆ ಕಲಿಯಬೇಕೆಂಬ ಛಲವಿದೆ. ಆದರೆ ಇವರ ಬಗ್ಗೆ ತಾಳ್ಮೆ ವಹಿಸಿ ಸಹಾಯ ಮಾಡುವವರು ಬೆರಳೆಣಿಕೆಯ ಜನ ಮಾತ್ರ. ಕುರುಡರ ಕಠಿಣ ಬದುಕಿನ ಬಗ್ಗೆ ಗಹನವಾಗಿ ವಿಚಾರ ಮಾಡುವ ಜನ ಬಹಳ ಕಡಿಮೆ.

ಸ್ವತಃ ಸಹಾಯ ಮಾಡುವುದು ಒತ್ತಟ್ಟಿಗಿರಲಿ. ಸಹಾಯ ಮಾಡುವವರಿಗೆ ಅಡ್ಡಬರುವವರೂ ಉಂಟು. ಇಂಥ ಅನುಭವಗಳು ತನಗೆ ಸಾಕಷ್ಟಾಗಿವೆಯೆಂದು ನನ್ನ ಮಿತ್ರ ಹೇಳುತ್ತಾನೆ.

ಕುರುಡರಿಗಾಗಿ ಸರಕಾರ. ಸಂಘ-ಸಂಸ್ಥೆಗಳು ಅನೇಕ ಸೌಲಭ್ಯ ನಿರ್ಮಿಸಿವೆ. ಆದರೆ ಅವರಿಗೆ ಇಂಥ ಸೌಲಭ್ಯಗಳಿಗಿಂತ ಹೆಚ್ಚಾಗಿ ಬೇಕಿರುವುದು ಜನತೆಯ ಸಹಾನುಭೂತಿ. ಸಹಾಯ. "ದೈಹಿಕ ತೊಂದರೆಯನ್ನು ಅನುಭವಿಸಲು ನಾವು ಸಿದ್ಧರಿದ್ದೇವೆ. ಸಮಾಜದ ಬಿರುನುಡಿಗಳ ಬಾಣ ನಮ್ಮ ಮನಸ್ಸಿಗೆ ತಾಗದಿದ್ದರೆ ಸಾಕು" ಎಂದು ಆ ಕುರುಡ ಹೇಳಿದ ಮಾತು ಮಾರ್ಮಿಕವಾಗಿತ್ತು. ಕಣ್ಣಿದ್ದ ಜನತೆ ಕುರುಡರನ್ನು ಅವಹೇಳನ ಮಾಡುವ ಬದಲು ಸ್ವಲ್ಪ ಕರುಣೆ ತೋರಿದರೆ ಅವರ ಬಾಳೂ ಸಹನೀಯವಾದೀತು.

● ರಂಗನಾಥ ಜೆ. ಜೋಶಿ.


ಮನುಷ್ಯ ಶರೀರಕ್ಕಿದು ಕನ್ನಡಿ

ಡಾ|| ಆರ್.ಸಿ. ಅಗಡಿ

ಏಪ್ರಿಲ್ 7 ಜಗತ್ತಿನಾದ್ಯಂತ ಆರೋಗ್ಯ ದಿನವಾಗಿ ಆಚರಿಸಲ್ಪಡುತ್ತಿದೆಯಷ್ಟೇ. ಕಳೆದ ವರ್ಷದ(1987) ಆ ದಿನ ಜರ್ಮನ್ ಆರೋಗ್ಯ ವಿಜ್ಞಾನ ಸಂಗ್ರಹಾಲಯದ ಪಾಲಿಗೆ ಅವಿಸ್ಮರಣೀಯ. ಆ ಸಂಸ್ಥೆ ಅಂದೇ ತನ್ನ 75ನೇ ಹುಟ್ಟುಹಬ್ಬವನ್ನು ಆಚರಿಸಿತು.

ಡ್ರೆಸ್ಡೆನ್ನಿನಲ್ಲಿರುವ ಜರ್ಮನ್ ಹೈಜೀನ್ ಮ್ಯೂಜಿಯಂ ಅತಿ ಹಳೆಯ ಹಾಗು ದೊಡ್ಡ ಸಂಸ್ಥೆ. ಜಗತ್ತಿನಲ್ಲಿ ಇಂಥದು ಇದೊಂದೆ. 1883ರಲ್ಲಿ ಮೊಟ್ಟಮೊದಲ ಬಾರಿಗೆ ಇಂಥದೊಂದು ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವ ವಿಚಾರ ಹೊಳೆದದ್ದು 'ಸೊಸೈಟಿ ಆಫ್ ಮೆಡಿಸಿನ್ ಆಂಡ್ ನ್ಯಾಚರಲ್ ಹಿಸ್ಟರಿ'ಗೆ. ಕಾರಖಾನೆಯೊಂದರ ಒಡೆಯ ಕಾರ್ಲ್ ಆಗಸ್ಟ್ ಲಿಂಗ್ನರ್ (1861-1916) ಈ ವಿಚಾರವನ್ನು ಸಾಕಾರಗೊಳಿಸಲು ತೊಡಗಿದ. ಸಹ ಉದ್ಯಮಿಗಳು ಮತ್ತು ವಿಖ್ಯಾತ ವಿಜ್ಞಾನಿಗಳ ಬೆಂಬಲವೂ ಆತನಿಗಿತ್ತು.

1911ರಲ್ಲಿ ಲಿಂಗ್ನರ್ ಒಂದು ಅಂತಾರಾಷ್ಟ್ರೀಯ ಮಟ್ಟದ ಬೃಹತ್ 'ಆರೋಗ್ಯ ವಿಜ್ಞಾನ ವಸ್ತು ಪ್ರದರ್ಶನ ವನ್ನೇರ್ಪಡಿಸಿದಂದೇನಲ್ಲ. ಅದು ಅಂಥ ಮೊಟ್ಟ ಮೊದಲನೆಯದಾದ್ದರಿಂದ ಬಹು ಮಹತ್ವದ್ದೆನಿಸಿತೆಂದೇನಲ್ಲ. ನಿಜವಾಗಿಯೂ ನಮ್ಮ ಆರೋಗ್ಯ ವಿಜ್ಞಾನದ ಪ್ರಗತಿಗೆ ಮಾರ್ಗದರ್ಶಿಯಾಗಿ ನಿಂತಿತದು. 320,000 ಚದರ ಮೀಟರ್ ಪ್ರದೇಶದಲ್ಲಿ ಹರಡಿಕೊಂಡಿದ್ದ ಈ ವಸ್ತುಪ್ರದರ್ಶನದಲ್ಲಿ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಎಲ್ಲವೂ ಏರ್ಪಾಡಾಗಿತ್ತು. ಸೆಮಿನಾರು, ಚಿತ್ರಪ್ರದರ್ಶನ, ಚರ್ಚಾಗೋಷ್ಠಿ ಇತ್ಯಾದಿ. ತಾಂತ್ರಿಕ ಹಂತದಲ್ಲಿ, ತಾತ್ತ್ವಿಕ ಹಂತ



ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠವೆಂದು ಪರಿಗಣಿಸಲ್ಪಡುವ ಆರೋಗ್ಯ ವಿಜ್ಞಾನ ವಸ್ತು ಸಂಗ್ರಹಾಲಯವಿದು. ಇದು ಜರ್ಮನ್ ವಿಜ್ಞಾನಿಗಳ ಅಪೂರ್ವ ಕೊಡುಗೆ.

ವಲ್ಲಿ ಪ್ರಯೋಗ ಹಾಗೂ ಸಿದ್ಧಾಂತಗಳ ಹಂತದಲ್ಲಿ ಇದೊಂದು ತುಂಬ ಪ್ರಯೋಜನಕಾರಿ ಪ್ರದರ್ಶನವಾಯಿತು.

ಈ ಪ್ರದರ್ಶನ ನಡೆದದ್ದು ಆರು ತಿಂಗಳುಗಳ ಕಾಲ. ಈ ಅವಧಿಯಲ್ಲಿ ಇದರ ಪ್ರಯೋಜನವನ್ನು ಪಡೆದವರು 55 ಲಕ್ಷ ಜನ. ಅವರೆಲ್ಲರಿಗೆ ಲಿಂಗ್ನರ್ ಈ ಪ್ರದರ್ಶನವನ್ನು ಇಷ್ಟು ಬೇಗನೇ ಮುಚ್ಚಿಬಿಟ್ಟನಲ್ಲ ಎಂಬ ಅಸಮಾಧಾನ. "ಇದನ್ನು ನಿರಂತರವಾಗಿ ನಡೆಸಿ" ಎಂದು ಅವರೆಲ್ಲ ಆತನಿಗೆ ದುಂಬಾಲು ಬಿದ್ದರು. ಇಷ್ಟೆಲ್ಲ ಕಷ್ಟಪಟ್ಟು ಸೇರಿಸಿದ ವಸ್ತುಗಳು ವ್ಯರ್ಥ ಹಾಳಾಗುವ ಬದಲು ಮುಂಪೀಳಿಗೆಗೆಲ್ಲ ದಾರಿ ತೋರಿ ಅವರ ಆರೋಗ್ಯ ಜ್ಞಾನಕ್ಕೆ ದೀವಿಗೆಯಾಗಬೇಕು ಎಂದವರ ವಾದ. ಅವರೆಲ್ಲರ ಒತ್ತಾಯಕ್ಕೆ ಮಣಿದು ಲಿಂಗ್ನರ್ ಒಂದು ಕಾಯಂ ವಸ್ತುಸಂಗ್ರಹಾಲಯವನ್ನು ಡ್ರೆಸ್ಡೆನ್ನಿನಲ್ಲಿ ಸ್ಥಾಪಿಸುವ ನಿರ್ಧಾರ ಕೈಗೊಂಡ. 1912ರಲ್ಲಿ ಆತ ಒಂದು ವಿಜ್ಞಾಪನ ಪತ್ರವನ್ನು ಪ್ರಕಟಿಸಿ ರಾಷ್ಟ್ರೀಯ ಆರೋಗ್ಯ ವಿಜ್ಞಾನ ವಸ್ತುಸಂಗ್ರಹಾಲಯದ ಸ್ಥಾಪನೆಯ ಮಹತ್ವವನ್ನು ಎಲ್ಲರಿಗೂ ತಿಳಿಸಿಕೊಟ್ಟ.

ಆದರೆ ಅದೇ ಅವಧಿಯಲ್ಲಿ ಆತ ಪ್ರಯತ್ನಶೀಲನಾಗಿದ್ದಂತೆಯೇ ಕಣ್ಣು ಮುಚ್ಚಿದ. ಮುಂದೆ ಮೊದಲ ಮಹಾಯುದ್ಧ ಪ್ರಾರಂಭವಾಗಿ ಯುದ್ಧಸಮಯ ಮತ್ತು ಯುದ್ಧೋತ್ತರ ಸಮಯದ ಪರಿಸ್ಥಿತಿಗಳಿಂದಾಗಿ ಆ ವಸ್ತುಸಂಗ್ರಹಾಲಯ ಕಲ್ಪನೆ ಮಾತ್ರವಾಗಿ ಉಳಿಯಿತು. ಅಂತೂ ಲಿಂಗ್ನರ್‌ನ ಕನಸನ್ನು ಆತನ ಸ್ನೇಹಿತರು ಮತ್ತು ಆಸಕ್ತರು ಸೇರಿ ನನಸಾಗಿಸುವ ದಿಸೆಯಲ್ಲಿ 1930ರಲ್ಲಿ ಎರಡನೆಯ ಬಾರಿಗೆ ಡ್ರೆಸ್ಡೆನ್ನಿನಲ್ಲೇ ಆರೋಗ್ಯವಿಜ್ಞಾನ ವಸ್ತುಪ್ರದರ್ಶನವನ್ನೇರ್ಪಡಿಸಿದರು. ಮೊದಲ ಪ್ರದರ್ಶನದಲ್ಲಿಯಂತೆಯೇ ಈ ಸಲವೂ ಪ್ರಮುಖ ಆಕರ್ಷಣೆಯಾದದ್ದು ಮಾನವ ದೇಹಕ್ಕೆ ಸಂಬಂಧಿಸಿದ ಪ್ರದರ್ಶನಾಲಯ. ಅಲ್ಲಿ ಸ್ಥಾಪಿಸಲ್ಪಟ್ಟ 'ಗಾಜಿನ ಮನುಷ್ಯ' ಎಲ್ಲರನ್ನೂ ಅಚ್ಚರಿಗೀಡುಮಾಡಿದ. ಮ್ಯೂಜಿಯಮ್ಮಿನ ಸ್ವಂತ ಕಾರ್ಯಾಗಾರದಲ್ಲಿಯೇ ಈ ಆಕೃತಿ ನಿರ್ಮಿಸಲ್ಪಟ್ಟಿತ್ತು.

1945 ಫೆಬ್ರವರಿಯಲ್ಲಿ ಡ್ರೆಸ್ಡೆನ್ ಮೇಲೆ ನಡೆದ ದಾಳಿಯಿಂದಾಗಿ ಸಂಪೂರ್ಣ ನಾಶಗೊಂಡ ಜರ್ಮನ್ ಹೈಜೀನ್ ಮ್ಯೂಜಿಯಂ ಕಾಲಾಂತರದಲ್ಲಿ ಮತ್ತೆ ಕಟ್ಟಲ್ಪಟ್ಟು ಈಗ ಅಂತಾರಾಷ್ಟ್ರೀಯ ಮಹತಿಯ ಸಂಸ್ಥೆಯಾಗಿ ಬೆಳೆದು ನಿಂತಿದೆ. ಅಷ್ಟೇ ಅಲ್ಲ. ಈಗದು ಆ ದೇಶದ ವೈದ್ಯಕೀಯ ಸಂಶೋಧನೆ, ವೈದ್ಯಕೀಯ ವಾರ್ತೆ ಮತ್ತು ವೈದ್ಯ ಶಿಕ್ಷಣದ ಹಿರಿಯ ಸಂಸ್ಥೆಯೂ ಆಗಿದೆ. ಮಾನವ ಜೀವಶಾಸ್ತ್ರಕ್ಕೆ ಸಂಬಂಧಿಸಿದ ಶೈಕ್ಷಣಿಕ ವಸ್ತುಗಳು ಮತ್ತು ಪ್ರಾತ್ಯಕ್ಷಿಕೆ ವಸ್ತುಗಳ ತಯಾರಿಕೆ ಮತ್ತು ಅವುಗಳ ರಫ್ತು ಈ ಸಂಸ್ಥೆಯ ಇನ್ನೊಂದು ಮುಖ್ಯ ಚಟುವಟಿಕೆ.

ಐದು ಸಾವಿರ ಚದರ ಮೀಟರ್ ವಿಸ್ತೀರ್ಣದಲ್ಲಿ 15 ದೊಡ್ಡ ಕೋಣೆಗಳಲ್ಲಿ ನಿಂತ ಈ ಮ್ಯೂಜಿಯಂ ಆಸಕ್ತರಿಗೆ ಇನ್ನಷ್ಟು ಆಸಕ್ತಿಯನ್ನು ಹುಟ್ಟಿಸಿ ತಿಳುವಳಿಕೆಯನ್ನು ನೀಡುತ್ತದೆ. ಮಾನವದೇಹದ ರಚನೆ ಹಾಗೂ ಕಾರ್ಯವಿಧಾನಗಳ ವಿಸ್ತೃತ ಮಾಹಿತಿ ನೀಡುವುದಲ್ಲದೆ ಇತ್ತೀಚಿನ ವೈಜ್ಞಾನಿಕ ಮಾಹಿತಿಯೊಂದಿಗೆ ಆರೋಗ್ಯಕರ ಜೀವನವನ್ನು ಸಾಗಿಸುವ ಬಗೆಯನ್ನು ಹೇಳಿಕೊಡುತ್ತದೆ ಈ ವಸ್ತು ಸಂಗ್ರಹಾಲಯ. ಮಾನವ ಶರೀರ ವಿಜ್ಞಾನ, ಜೀವ ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳನ್ನು ಅನುಲಕ್ಷಿಸಿ ಇಲ್ಲಿರುವ ಪ್ರಾತ್ಯಕ್ಷಿಕ ವಸ್ತುಗಳು ಕೂಡ ಕಾಲಕಾಲಕ್ಕೆ ಬದಲಾಗುವುದುಂಟು. ಆಸಕ್ತ ತನ್ನ ಸ್ವಭಾವ ಹಾಗೂ ನಡೆವಳಿಕೆಯನ್ನು ಪರೀಕ್ಷಿಸಿ ತಿಳಿದುಕೊಳ್ಳಲು ಇರುವ ಯಂತ್ರ ನಿಮ್ಮನ್ನು 'ತೆರೆದಿಡು'ತ್ತದೆ. ವಿಶೇಷ ಪ್ರದರ್ಶನಗಳ ಜೊತೆಗೆ ಆಗಾಗ ಆರೋಗ್ಯತಜ್ಞರಿಂದ ಉಪನ್ಯಾಸಗಳು, ಪ್ರಾತ್ಯಕ್ಷಿಕೆಗಳು ಸಾರ್ವಜನಿಕರ ಅನುಕೂಲಕ್ಕಾಗಿ ಇಲ್ಲಿ ನಡೆಯುತ್ತವೆ. ವ್ಯಾಯಾಮ ಇತ್ಯಾದಿಗಳ ತರಗತಿಗಳೂ ಇಲ್ಲಿವೆ. ಇದೇ ಆವರಣದಲ್ಲಿರುವ ಕಾರ್ಯಾಗಾರದಲ್ಲಿ ಪ್ಲಾಸ್ಟಿಕ್ಕಿನ ಮಾಡೆಲ್‌ಗಳು, ಗಾಜಿನ ಗೊಂಬೆಗಳು ತಯಾರಾಗುತ್ತವೆ.

ಜಾಗತಿಕ ಆರೋಗ್ಯದ ದಿಶೆಯಲ್ಲಿ ತೆಗೆದುಕೊಳ್ಳಲ್ಪಡುವ ಎಲ್ಲ ಕ್ರಮ ಹಾಗೂ ನಿರ್ಣಯಗಳ ಹಿಂದೆ ಈ ಮ್ಯೂಜಿಯಂ ಇದ್ದೇ ಇರುತ್ತದೆ. *

('ವರ್ಲ್ಡ್ ಹೆಲ್ತ್'ನ ಆಧಾರದಿಂದ)

ಹಾಲುಮಡ್ಡಿಯ ನಾಡು ಖರ್ಜೂರದ ಬೀಡು

• ವೃಷಭೇಂದ್ರಯ್ಯ •

ಗುಜರಾತಿನ ಕರಾವಳಿಗೆದುರಾಗಿ ನಿಂತು, ಹಾಗೆಯೇ ನೋಡುತ್ತಲಿದ್ದರೆ ನಿಮಗೆ ಆ ತೆರೆಗಳೊಂದಿಗಿನ ಗಾಳಿಯ ಜೊತೆಗೆ ಸಾಂಬ್ರಾಣಿ (ಹಾಲುಮಡ್ಡಿ)ಯ ಹೊಗೆಯ ಸುವಾಸನೆ ಮೂಗಿಗಡರೀತು; ಖರ್ಜೂರದ ರುಚಿಯ ನೆನಪಾಗಿ ಬಾಯಲ್ಲಿ ನೀರೂರೀತು! ಯಾಕೆಂದರೆ ಪಶ್ಚಿಮದೆಡೆ ಮುಖ ಮಾಡಿ ನಿಂತಿರುವ ನಿಮಗೆದುರಾಗಿಯೇ –ಅರಬ್ಬೀ ಸಮುದ್ರದಾಚೆಗೆ– ನಿಂತುಕೊಂಡಿದೆ ಹಾಲುಮಡ್ಡಿಯ ನಾಡು, ಖರ್ಜೂರದ ಬೀಡು: ಒಮಾನ್.

ಅರಬ್ ಜಗತ್ತಿನ ಈ ದೇಶ 'ಅತಿ'ಗೆ ಒಂದು ಶ್ರೇಷ್ಠ ಉದಾಹರಣೆಯೇನೋ. ಒಮಾನ್ ಅತಿ ಸುಂದರ, ಅತಿ ಧರ್ಮಾಭಿಮಾನಿ. ಅತಿ ಶ್ರೀಮಂತ. ಅತಿ ಕುತೂಹಲಕರ ಹಾಗೆಯೇ ಅತಿ ರಹಸ್ಯಮಯ ಕೂಡ. ಹೊರ ಜಗತ್ತಿಗೆ ತನ್ನ ಗುಟ್ಟುಗಳನ್ನು ಬಿಟ್ಟುಕೊಡದೆ ಶತಮಾನಗಳಿಂದಲೂ ಉಳಿಸಿಕೊಂಡು ಬಂದಿರುವ ಒಮಾನ್ ಇತ್ತೀಚೆಗಷ್ಟೇ ಪ್ರವಾಸೋದ್ಯಮವನ್ನು ಪ್ರಾರಂಭಿಸುವ ಮೂಲಕ ಉಳಿದ ದೇಶಗಳೊಂದಿಗೆ ಬೆರೆಯಲು ಮುಂದಾಗುತ್ತಲಿದೆ. ವಿದೇಶಿ ಪ್ರವಾಸಿಕರಿಗೆಂದು ತನ್ನ ಮುಸುಕನ್ನು ತುಸುವೆ ತೆರೆಯಲು ಯತ್ನಿಸುತ್ತಿದೆ.

ಅರಬ್ ದೇಶಗಳಲ್ಲೊಂದು ಎಂದಾಕ್ಷಣವೇ ಯಾವುದೇ ವಿದೇಶಿ ಪ್ರವಾಸಿಗೆ ಆ ರಾಷ್ಟ್ರಗಳ ಕುರಿತ ಜನಜನಿತ ಕಲ್ಪನೆಗಳು ಒಮಾನ್ ಬಗ್ಗೆಯೂ ಬರಲಾರಂಭಿಸುತ್ತವೆ.... ಮರಳುಗಾಡಿನ ನಡುವೆ 'ಬೇಡು'(ಡೇರೆ)ವಿನಲ್ಲಿ ವಾಸ; ಮೇಕೆಯ ಮಾಂಸವನ್ನು ಕಾಡು ಬೆಂಕಿಯಲ್ಲಿ ಬೇಯಿಸಿ ತಿನ್ನುವುದು; ಸಿಂದಬಾದನಂತೆ ನಾವಿನಲ್ಲಿ ಸಂಚರಿಸುವುದು; . ಮರಳಿನಲ್ಲಾದರೆ ಒಂಟೆಯ ಸವಾರಿ; ಖರ್ಜೂರ ತಿಂದೇ ಇರುವುದು; ವಿದ್ಯುದ್ದೀಪ ಗೊತ್ತಿದೆಯೋ ಇಲ್ಲವೋ ಅವರಿಗೆ; ಕಕ್ಕಸಿಗೆ ಆ ಮರಳ ಬಯಲಲ್ಲೇ... ಛೀ!– ಮುಂತಾಗಿ.

ಈಗಲ್ಲಿಯ ಚಿತ್ರ ಬದಲಾಗಿದೆ. ಪ್ರವಾಸಿಗರಿಗೆ ಈಗ ಅಲ್ಲಿಯ 'ಬೇಡು'ಗಳೆಂದರೆ ಪಂಚತಾರಾ ಹೋಟೆಲುಗಳು. ಊಟಕ್ಕೆ ಉತ್ತಮವೆನ್ನಬಹುದಾದ ಎಲ್ಲಿಯದು ಬೇಕೆಂದರಲ್ಲಿಯ ಅಡಿಗೆ. ಸಿಂದಬಾದನ ಪರಿಸ್ಥಿತಿ ಇಲ್ಲವೇ ಇಲ್ಲ- ನಿಮ್ಮನ್ನು ಹೆಲಿಕಾಪ್ಟರುಗಳು ಬೇಕಾದಲ್ಲಿಗೆ ಕರೆದೊಯ್ಯುತ್ತವೆ. ಇನ್ನು ನೈರ್ಮಲ್ಯದ ವಿಷಯಕ್ಕೋ ಈ ದೇಶದ ನಗರಗಳು ಕನ್ನಡಿಯಿದ್ದಂತೆ ಎನ್ನಬೇಕು.

ಒಮಾನಿಗಳು ಬಯಸುವುದು ವಿಶಿಷ್ಟ ವರ್ಗದ ಪ್ರವಾಸಿಗರನ್ನು. ಎಲ್ಲರಿಗೂ ಅಲ್ಲಿ ಸ್ವಾಗತವಿಲ್ಲ. ಒಮಾನ್ ಬಗ್ಗೆ ಆಸಕ್ತಿ, ಇದ್ದು ಆ ದೇಶದ ಪರಂಪರೆ, ಇತಿಹಾಸ, ಧರ್ಮಗಳ ಬಗ್ಗೆ ಗೌರವವಿಟ್ಟುಕೊಂಡು ಇನ್ನಷ್ಟು 'ನೋಡಿ' ಬರೆಯುವ ಸೂಕ್ಷ್ಮಗ್ರಾಹಿ. ಒಳ್ಳೆಯ ನಡೆನುಡಿಯ ಜನರನ್ನು ಮಾತ್ರ ಆ ಜನ ತುಂಬು ಹೃದಯದಿಂದ ಬರಮಾಡಿಕೊಳ್ಳುತ್ತಾರೆ. "ಪ್ರವಾಸ ಮಾಡುವುದು ಹೇಗೆಂದು ಗೊತ್ತಿರುವ ಪ್ರವಾಸಿಗಳು ನಮಗೆ ಬೇಕು. ಮೂವತ್ತು ಮೀರಿದವರಾಗಿರಬೇಕು. ಹಿಪ್ಪಿಗಳಾಗಲಿ, ಹೊಲಸು ದೀರ್ಘಕೇಶಿಗಳಾಗಲಿ. ಮೊದಲ ಬಾರಿಗೆ ಪ್ರವಾಸ ಹೊರಟವರಾಗಲಿ ನಮಗೆ ಬೇಡ. ಇಲ್ಲಿ ಬಂದು ಸಮುದ್ರ ಸ್ನಾನ ಮಾಡಿಕೊಂಡು ಹೋದರಾಯಿತೆನ್ನುವವರಿಗೆ

ಒಮಾನೇ ಆಗಬೇಕಿಲ್ಲವಲ್ಲ-ಬೇರೆ ಸಾಕಷ್ಟು ದೇಶಗಳಿವೆಯಲ್ಲ" ಎಂಬುದು ಒಮಾನ್ ಪ್ರವಾಸೋದ್ಯಮ ಇಲಾಖೆಯ ನೀತಿ.

ಒಮಾನ್ ಭಾರತಕ್ಕೆ ತೀರ ಸಮೀಪವಿರುವ ಅರಬ್ ದೇಶ. ಅರಬ್ ದ್ವೀಪಕಲ್ಪದ ಎರಡನೆಯ ದೊಡ್ಡ ದೇಶವೂ ಹೌದು. ಇಲ್ಲಿಯ ಜನಸಂಖ್ಯೆಯ ಶೇಕಡಾ 90 ಭಾಗ ಅರಬರೇ. ಉಳಿದ 10 ಭಾಗದಲ್ಲಿ ಇರಾನಿನಿಂದ ಬಂದ ಬಲೂಚಿಗಳು, ಆಫ್ರಿಕದಿಂದ ಬಹುಹಿಂದೆಯೇ ಗುಲಾಮರಾಗಿ ತರಲ್ಪಟ್ಟು ಇಲ್ಲಿಯೇ ನೆಲೆಸಿದ ಆಫ್ರಿಕನ್ ವಂಶಜರು (ನಮ್ಮ ಉತ್ತರ ಕನ್ನಡ ಜಿಲ್ಲೆಯ ಸಿದ್ದಿಗಳ ಹಾಗೆ) ಭಾರತ, ಪಾಕಿಸ್ತಾನ, ಇರಾನ್, ದಕ್ಷಿಣ ಕೋರಿಯ ಮತ್ತು ಯುರೋಪ್ ಮುಂತಾದೆಡೆಗಳಿಂದ ವಲಸೆ ಬಂದ ಕಾರ್ಮಿಕರು ಇತ್ಯಾದಿ ಸೇರುತ್ತಾರೆ. ಶೇಕಡಾ 70ರಷ್ಟು ಜನ ಕೃಷಿ ಮತ್ತು ಮೀನುಗಾರಿಕೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರು. ಆದರೆ ಒಳನಾಡಿನಲ್ಲಿ ಕೃಷಿಕರೊಂದಿಗೆ ಕಣ್ಣುಮುಚ್ಚಾಲೆಯಾಡುವ ವಿರಳ ಮಳೆಯಿಂದಾಗಿ ಶೇಕಡಾ 0.1 ಭೂಮಿಯಲ್ಲಿ ಮಾತ್ರ ಕೃಷಿ ನಡೆಯುತ್ತದೆ. ಒಮಾನಿನ ಹವಾಮಾನ ಉಷ್ಣ ಮತ್ತು ಒಣ 18° ಸೆ-ಯಿಂದ 30° ಸೆ-ವರೆಗೆ (64° ಫ್ಯಾ.ಯಿಂದ 93° ಫ್ಯಾ. ವರೆಗೆ). ವರ್ಷಕ್ಕೆ ಮಳೆ 76 ರಿಂದ 102 ಮಿಲಿ ಮೀಟರ್ (3 ರಿಂದ 4 ಇಂಚು)ನಷ್ಟು ಬೀಳುತ್ತದೆ.

ಸುನ್ನಿ ಪಂಥದ ಇಬಾದ್ ಅನುಯಾಯಿಗಳು ಇಲ್ಲಿಯ ಅರಬರು. ಧಾರ್ಮಿಕ ಶಿಕ್ಷಣ ಮನೆಯಲ್ಲೇ. ಅದು ಬಹು ಕಟ್ಟುನಿಟ್ಟಿನದು. ಇನ್ನುಳಿದಂತೆ ಸಾಮಾನ್ಯ ಶಿಕ್ಷಣ ಉಚಿತವಾಗಿದ್ದರೂ ಕಡ್ಡಾಯವಲ್ಲ. ಹಳೆಯ ಸುಲ್ತಾನನ ಕಾಲಕ್ಕೆ ಕೇವಲ ಮೂರು ಶಾಲೆಗಳಿದ್ದರೆ, ಈಗ ಅವುಗಳ ಸಂಖ್ಯೆ 560. ಮೊದಲು ದೇಶಕ್ಕೊಂದೇ ದೊಡ್ಡ ಆಸ್ಪತ್ರೆ- ಈಗ ಅವುಗಳ ಸಂಖ್ಯೆ 14ಕ್ಕೇರಿದೆ. ಈಗಲ್ಲಿ ಶೇಕಡಾ 20ರಷ್ಟು ಜನ ಪ್ರೌಢರು ಮಾತ್ರ ಸುಶಿಕ್ಷಿತರು. ಬ್ರಿಟನ್ನಿನಲ್ಲಿ ಓದಿ ಈಗ ಈ ದೇಶದ ಆಡಳಿತ ಸೂತ್ರ ಹಿಡಿದಿರುವ ಸುಲ್ತಾನ ಕಾಬೂಸ್ ಬಿನ್ ಸಯಿದ್ ಶಿಕ್ಷಣಕ್ಕೆ ಅಗ್ರ ಪ್ರಾಶಸ್ತ್ಯ ಕೊಟ್ಟವರು. ಒಮಾನಿ ರಿಯಾಲ್ ಇಲ್ಲಿ ಚಲಾವಣೆಯಲ್ಲಿ



ರುವ ನಾಡು.

ಮಧ್ಯಪ್ರಾಚ್ಯ ಮತ್ತು ದೂರ ಪ್ರಾಚ್ಯಗಳ ನಡುವಿನ ಕೊಂಡಿಯಾಗಿದ ಒಮಾನಿ ಏಳನೆಯ ಶತಮಾನದಲ್ಲಿ ಇಸ್ಲಾಮ್ ಧರ್ಮವನ್ನಪ್ಪಿಕೊಂಡಿತು. 1507ರಲ್ಲಿ ಮಸ್ಕತ್ (ಈಗ ಒಮಾನಿನ ರಾಜಧಾನಿ) ಮತ್ತು ಅದರ ಒನ್ನಾಪೆಲ್ಲಾ ಪೋರ್ಚುಗೀಸರ ವಶವಾಯಿತು. 1650ರಲ್ಲಿ ಒಮಾನಿಗಳು ಜಾಂಜಿಬಾರ್ ವರೆಗೂ ತಮ್ಮ ಪ್ರಭಾವವನ್ನು ಬೆಳೆಸಿಕೊಂಡು ಹೋರಾಡಿ ದೇಶವನ್ನು ಪೋರ್ಚುಗೀಸರ ಕೈಯಿಂದ ಬಿಡಿಸಿಕೊಂಡರು. ಪರ್ಶಿಯನ್ನರು ಒಮಾನಿನ ಕೆಲಭಾಗದ ಮೇಲೆ ತಮ್ಮ ಅಧಿಕಾರ ಸ್ಥಾಪಿಸಿದರಾದರೂ (1741-49) ಮುಂದೆ 1798ರಲ್ಲಿ ಗ್ರೇಟ್ ಬ್ರಿಟನ್ನಿನೊಂದಿಗೆ ಸ್ನೇಹ ಒಪ್ಪಂದವನ್ನು ಈ ದೇಶ ಮಾಡಿಕೊಂಡಿತು. ಈಗಲೂ ಗ್ರೇಟ್ ಬ್ರಿಟನ್ ಮತ್ತು ಅಮೆರಿಕಗಳೊಂದಿಗೆ ನಿಕಟ ಸೈನಿಕ ಸಂಬಂಧವನ್ನುಳಿಸಿಕೊಂಡಿದೆ ಒಮಾನ್.

ಪ್ರಸಕ್ತ ಶತಮಾನದ ಆದಿಯಲ್ಲಿ ಒಮಾನ್ ಕಟ್ಟಾ ಧಾರ್ಮಿಕ ರಾಜ್ಯವಾಗಿ, ತೀರ ಬಡದೇಶವಾಗಿ ಸುಲ್ತಾನ್ ಸೈಯದ್ ಬಿನ್ ತೈಮೂರನಿಂದ ಆಳಲ್ಪಟ್ಟಿತು (1932ರಿಂದ 1970). ಆತನ ಮಗ ಕಾಬೂಸ್ 1970ರಲ್ಲಿ ತಂದೆಯನ್ನು ಪದಚ್ಯುತಗೊಳಿಸಿ ತಾನೇ ಸುಲ್ತಾನನಾಗಿ ದೇಶವನ್ನು ಪ್ರಗತಿ ಪಥದತ್ತ ಕರೆದೊಯ್ಯಲು ಸಂಕಲ್ಪಿಸಿದ. ಅದಕ್ಕಾಗಿ ಆತ ಕಂಡುಕೊಂಡ ಮಾರ್ಗ ಆಧುನೀಕರಣ. "ಹದಿನಾರನೆಯ ಶತಮಾನದಲ್ಲೇ ಇನ್ನೂ ಇದ್ದ ದೇಶವನ್ನು ಕಾಬೂಸ್ ಇಪ್ಪತ್ತನೆಯ ಶತಮಾನಕ್ಕೆ ತಂದ" ಎಂದು ಜನ ಹೇಳುವುದುಂಟು. ಪ್ರಗತಿಪರ ಧೋರಣೆಯವ ಈಗಿನ ಸುಲ್ತಾನ. ಆತನೇ ಆ ದೇಶದ ನಿರಂಕುಶ ಪ್ರಭು. ಒಮಾನಿಗೆ ಸಂವಿಧಾನವಿಲ್ಲ, ಶಾಸನ ಸಭೆಯಿಲ್ಲ, ರಾಜಕೀಯ ಪಕ್ಷಗಳೂ ಅಲ್ಲಿಲ್ಲ. ಮಂತ್ರಿಗಳು ಮತ್ತು ವಿಭಾಗೀಯ ರಾಜ್ಯಪಾಲರನ್ನು ಸ್ವತಃ ಸುಲ್ತಾನನೇ ನೇಮಕ ಮಾಡುತ್ತಾನೆ. ಅವರೆಲ್ಲ ಅವನಿಗೆ ಅಧೀನ ಅಧಿಕಾರಿಗಳು ಮಾತ್ರ.

ಒಮಾನಿನ ಮುಖ್ಯ ಆದಾಯಮೂಲ ಪೆಟ್ರೋಲಿಯಂ. ಉಳಿದ ಅರಬ್ ರಾಷ್ಟ್ರಗಳಂತೆ ಒಮಾನ್ ಕೂಡ ತೈಲ ಸಮೃದ್ಧ. ಉಳಿದಂತೆ ತಾಮ್ರದ ಅದಿರು, ನೈಸರ್ಗಿಕ

ಹಾಲುಮಡ್ಡಿ

ಯೇಸು ಹುಟ್ಟಿದಾಕ್ಷಣ ಆತನಿಗೆ ಕಾಣಿಕೆಯೆಂದು ಮೂವರು ರಾಜರು ಕೊಂಡೊಯ್ದ ಅಪೂರ್ವ ವಸ್ತುಗಳೆಲ್ಲ ಒಮಾನಿನಲ್ಲಿ ಹೇರಳವಾಗಿದೆ. ಈ ಮೂವರೂ ಒಮಾನಿನಿಂದಲೇ ಬಂದಿರಬೇಕು. ಅವುಗಳಲ್ಲಿ ಹಾಲುಮಡ್ಡಿಯೂ ಒಂದು.

ಶವಗಳನ್ನು ಕೆಡದಂತೆ ಸುಗಂಧ ದ್ರವ್ಯಗಳನ್ನು ಹಾಕಿ ಕಾದಿಡುವ ಪದ್ಧತಿ ರೂಢಿಗೆ ಬಂದಂದಿನಿಂದಲೂ ಅಂದರೆ 5000 ವರ್ಷಗಳಿಂದಲೂ ಹಾಲುಮಡ್ಡಿ ಬಳಕೆಯಲ್ಲಿದೆ.

ಆ ಮರದ ಅಂಟು ಈ ಹಾಲು ಮಡ್ಡಿ. ಸಾಂಬ್ರಾಣಿ, ಗುಗ್ಗಳ ಮುಂತಾಗಿಯೂ ಅದು ಕರೆಯಲ್ಪಡುತ್ತದೆ. ಜಾಲಿ ಅಥವಾ ಇಲಾಯ್ಚಿ ಹಣ್ಣಿನ ಮರದಂತೆ ಕಾಣುವ ಹಾಲುಮಡ್ಡಿ ಮರ ಇಪ್ಪತ್ತು ಅಡಿಗಳಷ್ಟು ಎತ್ತರಕ್ಕೆ ಇಪ್ಪತ್ತಕ್ಕೂ ಹೆಚ್ಚು ಅಡಿ ಅಗಲಕ್ಕೆ ಕೊಂಬೆಗಳನ್ನು ಚಾಚಿಕೊಂಡು ಬೆಳೆಯುತ್ತದೆ.

ಹಾಲುಮಡ್ಡಿಯ ಅಂಟನ್ನು ಕೆಂಡಕ್ಕೆ ಹಾಕಿದಾಗ ದಟ್ಟವಾದ, ಹೊಗೆಯೊಂದಿಗೆ ಸುವಾಸನೆ ವಾತಾವರಣದಲ್ಲಿ ಹರಡಿಕೊಳ್ಳುತ್ತದೆ. ಸೊಳ್ಳೆ ಮುಂತಾದ ಕ್ರಿಮಿಗಳ ನಾಶಕ ಗುಣವುಳ್ಳ ಹಾಲುಮಡ್ಡಿ ದೇವಾಲಯ, ಮಸೀದೆ, ಚರ್ಚೆಗಳಲ್ಲಿಯೂ ಬಳಸಲ್ಪಡುತ್ತದೆ. ಹೀಗಾಗಿ ಹಾಲುಮಡ್ಡಿ ಜಾತ್ಯತೀತ.

ಸಾಲಾಲಾಹ್‌ದ ಪೂರ್ವಕ್ಕೆ ಈಗ ಗತ ಇತಿಹಾಸ ಸಾರುತ್ತ ನಿಂತಿರುವ ಸಾಂಬುರಮ್ ಎಂಬ

ಅನಿಲ, ಖರ್ಜೂರ, ಸಿಮೆಂಟ್ ತಯಾರಿಕೆ ದೊಡ್ಡ ಪ್ರಮಾಣದ ಉದ್ಯಮಗಳು.

ಇಲ್ಲಿನ ಜನ ನಡೆ-ನುಡಿ-ಇರುವಿಕೆಗಳಲೆಲ್ಲ ತುಂಬ ನೈರ್ಮಲ್ಯವನ್ನು ಬಯಸುವವರು. ಪ್ರಾಮಾಣಿಕರು ಕೂಡ. ಮಾತಿನಲ್ಲಿ ಮೃದುತ್ವ-ಸ್ನೇಹ-ತುಸು ಹಾಸ್ಯ. ಬಿಳಿಯ ಬಟ್ಟೆ (ದಿಶ್‌ದಾಶಾ) ಹೆಚ್ಚು ಪ್ರಿಯ. ಸೊಂಟಕ್ಕೊಂದು ಬೆಳ್ಳಿಯ ಖಂಜರ್ (ಕಿರುಗತ್ತಿ) ಸಿಕ್ಕಿಸಿಕೊಂಡಿರುತ್ತಾರೆ. ಇಲ್ಲಿಯ ರಸ್ತೆಗಳು ನೇರ, ತುಂಬ ಅಗಲವಾದವು. ಕಟ್ಟಡಗಳೆಲ್ಲಾ ಇಸ್ಲಾಂ ವಾಸ್ತುಶಿಲ್ಪದವು. ಇತ್ತೀಚಿನ ಬಹು ಅಂತಸ್ತಿನ ಆರ್‌ಸಿಸಿ ಕಟ್ಟಡಗಳೂ ನಮಗೆ ಇಸ್ಲಾಂ ಮಾದರಿಯವೇ ಅನಿಸುತ್ತವೆ.

ಅರಬ್ ಜಗತ್ತಿನಲ್ಲೇ ಒಮಾನಿಗಳು ಅತ್ಯಂತ ಸ್ನೇಹ ಸ್ವಭಾವದವರು. ಅವರಿನ್ನೂ ನಾಗರಿಕತೆಯೆಂಬ ಸೋಂಕಿಗೆ ಪಕ್ಕಾಗಿಲ್ಲ. ವಿದೇಶೀ ಪ್ರವಾಸಿಗರಿಗೆ 1970ರವರೆಗೂ ಒಮಾನ್ ಅಷ್ಟು ಸುಲಭವಾಗಿ ಪ್ರವೇಶಾವಕಾಶವನ್ನು ಕೊಡುತ್ತಿರಲಿಲ್ಲ. ಅದಕ್ಕೆ ನೂರೆಂಟು ವಿಚಾರಣೆಗಳಿದ್ದುವು. ಆಗ ಏನಿದ್ದರೂ ಪ್ರವಾಸಕ್ಕೆ ಸ್ವತಃ ಸುಲ್ತಾನನೇ ಅನುಮತಿ ನೀಡಬೇಕಿತ್ತು. ಇಯಾನ್ ಸ್ಕೀಟ್ ಎಂಬ ಇತಿಹಾಸ ತಜ್ಞನೊಬ್ಬ ಒಮಾನಿನ ಆಗಿನ ಸ್ಥಿತಿಯನ್ನು ಹೀಗೆ ವರ್ಣಿಸುತ್ತಾನೆ: "ಸಂಶಯದ ಪ್ರವೃತ್ತಿ ಆ ಸುಲ್ತಾನನದು. ಪ್ರವಾಸಿಗರು ಬಂದರೆ ಎಲ್ಲಿ ತಮ್ಮ ಸಂಪತ್ತನ್ನು ದೋಚುವ ಮಾರ್ಗವನ್ನು ಕಂಡುಹಿಡಿಯುತ್ತಾರೋ ಎಂಬ ಗುಮಾನಿ ಆತನಿಗೆ. ಮಸ್ಕತ್ತಿನ ಬಾಬ್ ಕಬೀರ್ ಗೇಟ್ ಸೂರ್ಯಾಸ್ತದ ನಂತರದ ಮೂರು ಗಂಟೆಗಳಲ್ಲಿ ಭದ್ರವಾಗಿ ಮುಚ್ಚಲ್ಪಡುತ್ತಿತ್ತು. ಇನ್ನು ಬಾಗಿಲು ಮುಚ್ಚುತ್ತದೆಂಬುದರ ಸಂಕೇತವಾಗಿ ದ್ವಾರದ ಮೇಲಿಂದ 20 ನಿಮಿಷಗಳ ಕಾಲ ನಗಾರಿಯನ್ನು ಬಾರಿಸಲಾಗುತ್ತಿತ್ತು. ಜತೆಗೇ ಮೂರು ತೋಫುಗಳು ಹಾರಿದ ಸದ್ದು. ಆಗ ಬಾಗಿಲು ಗಡಗಡನೇ ಶಬ್ದ ಮಾಡುತ್ತಾ ಮುಚ್ಚಿಕೊಳ್ಳುತ್ತಿತ್ತು. ಆ ಕ್ಷಣದಿಂದ ಊರಲ್ಲಿ ವಾಹನಗಳು ಓಡಾಡುವಂತಿರಲಿಲ್ಲ. ಹಾಗೇನಾದರೂ ಅವಶ್ಯವಿದ್ದರೆ ಸ್ವತಃ ಸುಲ್ತಾನನಿಂದ ಅಪ್ಪಣೆ ದೊರಕಿಸಿಕೊಳ್ಳಬೇಕಿತ್ತು ವಾಹನಗಳ ಮಂದಿ. ಅಪ್ಪಣೆ ಸಿಗುವುದೇನು ಸುಲಭವೆ? ನಾಗರಿಕರು ಊರ ಗೋಡೆಗಳ ಬಳಿ ಕಂದೀಲು ಹಿಡಿದುಕೊಂಡ ವಿನಾ ಓಡಾಡುವಂತಿರಲಿಲ್ಲ.

ಯಾನೆ ಸಾಂಬ್ರಾಣಿ

ಊರು (ಸಾಂಬ್ರಾಣಿಯಂತೆಯೇ ಧ್ವನಿಸುತ್ತದಲ್ಲವೆ?) ಹಾಲುಮಡ್ಡಿಯ ಸಾಗಾಟವನ್ನು ನಿಯಂತ್ರಿಸುವುದಕ್ಕಾಗಿಯೇ ಕಟ್ಟಲ್ಪಟ್ಟಿತು. ದಕ್ಷಿಣ ತುದಿಯ ಕರಾವಳಿಯಲ್ಲಿರುವ ಈ ಊರು ಆಗಿನ ಒಮಾನಿನ ಪ್ರಮುಖ ಬಂದರು ಕಟ್ಟೆಗಳಲ್ಲೊಂದಾಗಿತ್ತು. ಸಾಂಬುರಮ್ ಕ್ರಿಸ್ತಪೂರ್ವ ಒಂದನೆಯ ಶತಮಾನದಲ್ಲಿ ದೊರೆ ಇಲಾದ್‌ನಿಂದ ಸ್ಥಾಪಿಸಲ್ಪಟ್ಟಿತೆಂದು ಆ ಊರಿನಲ್ಲಿ ಸಿಕ್ಕ ಶಿಲಾಲೇಖವೊಂದು ಹೇಳುತ್ತಿದೆ. ಇಲ್ಲಿಂದ ಹೇಸರಗತ್ತೆಗಳು, ಒಂಟೆಗಳು ಮತ್ತು ಜಲಮಾರ್ಗದ ಮೂಲಕ ಹಾಲುಮಡ್ಡಿ ಹೊರದೇಶಗಳಿಗೆ ಸಾಗಿಸಲ್ಪಡುತ್ತಿತ್ತು. ಇಸ್ಲಾಂ ಧರ್ಮ ಹುಟ್ಟುವುದಕ್ಕಿಂತ ಒಂದು ಸಾವಿರ ವರ್ಷಗಳ ಮೊದಲೇ ದಕ್ಷಿಣ ಅರೇಬಿಯದ ಭಾಗ್ಯನಿಧಿ ಎನಿಸಿತ್ತು ಈ ಹಾಲುಮಡ್ಡಿ ವ್ಯಾಪಾರ.

ಇಂದು ಹಾಲುಮಡ್ಡಿ ಒಮಾನಿನಲ್ಲಿ ತಯಾರಿಸಲ್ಪಡುವ 'ಎಮುಏಜ್' ಎಂಬ ಸುಗಂಧ ದ್ರವ್ಯಕ್ಕೆ ಬಳಸುವ ಮೂಲವಸ್ತುಗಳಲ್ಲೊಂದಾಗಿರುವುದರಿಂದ ಇದಕ್ಕೆ ಹೆಚ್ಚು ಬೇಡಿಕೆಯಿದೆ. ಎಮುಏಜ್ ಜಗತ್ತಿನ ಅತಿ ತುಟ್ಟಿಯಾದ ಸುಗಂಧ ದ್ರವ್ಯ. ತುಂಬ ವೆಚ್ಚದ ತಯಾರಿಕೆಯಾಗಿರುವ ಎಮುಏಜ್ ಸ್ವರ್ಣಲೇಪಿತ ಲೋಹದ ಬಾಟಲಿಯಲ್ಲಿ ತುಂಬಲ್ಪಟ್ಟು ಮಾರಾಟಕ್ಕೆ ಬಿಡುಗಡೆಯಾಗುವುದರಿಂದ ಇದು ತುಟ್ಟಿಯ ಸುಗಂಧ ದ್ರವ್ಯವೆನಿಸುವುದು ಸಹಜವೆ. ಬಹುಶಃ ಆ ಸ್ವರ್ಣಲೇಪಿತ ಲೋಹದ ಬಾಟಲಿಗೇ ಹೆಚ್ಚು ಹಣವೇನೋ. ಇಂಥ ಒಂದು ಬಾಟಲಿಯ ಬೆಲೆ 30 ಅಮೆರಿಕನ್ ಡಾಲರುಗಳು. ●

ಒಮಾನಿ ಖರ್ಜೂರ

'ಆತನೆತ್ತರವೋ ಖರ್ಜೂರದೆಲೆಯಷ್ಟು – ಬುದ್ಧಿ ಅದರ ಬೀಜದಷ್ಟು' ಎಂಬುದು ಒಮಾನಿನಲ್ಲಿಯ ಒಂದು ಪ್ರಚಲಿತ ಗಾದೆ. ಅಲ್ಲಿ ಖರ್ಜೂರ ಅವರ ಜೀವನದಲ್ಲಿ ಪ್ರತಿಕ್ಷಣವೂ ಪ್ರಮುಖ ಪಾತ್ರ ವಹಿಸುತ್ತದೆ. ಸಿಹಿಯಾದ ಈ ಪೌಷ್ಟಿಕ ಫಲ ತಿಂದವರಿಗೆ ಹೇಗೆ ಆರೋಗ್ಯವರ್ಧಕವೂ ಹಾಗೆಯೇ ಅದರ ಉದ್ಯಮದಲ್ಲಿ ತೊಡಗಿದವರಿಗೆ ಸಂಪದವರ್ಧಕವೂ ಹೌದು.

ಒಮಾನಿನಲ್ಲಿ ಶೇಕಡಾ 70ರಷ್ಟು ಗ್ರಾಮೀಣ ಜನ ಕೃಷಿಯಲ್ಲಿ ತೊಡಗಿದ್ದು, 1967ರವರೆಗೆ, ಅಂದರೆ ತೈಲ ಶೋಧವಾಗುವವರೆಗೆ ಖರ್ಜೂರ ಮತ್ತು ಮೀನು ಇಲ್ಲಿಂದ ಮುಖ್ಯವಾಗಿ ರಫ್ತಾಗುತ್ತಿದ್ದ ಸರಕುಗಳು.

ಪ್ರವಾದಿ ಮೊಹಮ್ಮದರು ಜೀವನದ ಬಹುಭಾಗವನ್ನು ಖರ್ಜೂರ ತಿಂದೇ ಕಳೆದ ರೆಂದು ಹೇಳಲಾಗುತ್ತದೆ. ಪವಿತ್ರ ಕುರ್-ಆನ್‌ನಲ್ಲಿ ಖರ್ಜೂರ ಗಿಡ ಮತ್ತು ಖರ್ಜೂರದ ಕುರಿತ ಇಪ್ಪತ್ತಾರು ಉಲ್ಲೇಖಗಳು ಬರುತ್ತವೆ. ಖರ್ಜೂರದ ಬಗೆಗಿನ ಅನೇಕ ಗಾದೆಗಳು ಒಮಾನಿ ಜನಸಾಮಾನ್ಯರ ಮಾತಿನಲ್ಲಿ ನಿತ್ಯ ಬಳಸಲ್ಪಡುತ್ತವೆ.

ಒಮಾನಿನಲ್ಲಿ 80 ಬಗೆಯ ಖರ್ಜೂರಗಳಿವೆ. ಪ್ರತಿಯೊಂದೂ ಪ್ರತ್ಯೇಕ ಆಕಾರ ಮತ್ತು ರುಚಿಯುಳ್ಳದ್ದು. ಮೇಯಿಂದ ನವೆಂಬರ್ ವರೆಗೆ ಒಮಾನಿನಲ್ಲಿ ಖರ್ಜೂರದ ಸುಗ್ಗಿ. ಇಷ್ಟು ದೀರ್ಘಕಾಲದ ಖರ್ಜೂರ ಸುಗ್ಗಿ ಅದನ್ನು ಬೆಳೆಯುವ ಬೇರಾವ ದೇಶದಲ್ಲಿಯೂ ಆಗುವುದಿಲ್ಲ.

ಖರ್ಜೂರ ಶೇಕಡಾ 70.6 ರಷ್ಟು ಶರ್ಕರವನ್ನು ಹೊಂದಿರುತ್ತದೆ. ಅಂದರೆ ಒಂದು ನೂರು ಗ್ರಾಂ ಖರ್ಜೂರದಲ್ಲಿ 274 ಕೆಲರಿಗಳು. ಖರ್ಜೂರ ಶಕ್ತಿದಾಯಕ ಮತ್ತು ಆರೋಗ್ಯವರ್ಧಕ. ಅದರಲ್ಲಿ ಪ್ರೋಟೀನ್, ಕೊಬ್ಬು, ನೀರು, ಖನಿಜಾಂಶ ಮತ್ತು ನಾರು ಇದೆ. ಅಲ್ಲದೆ ವಿಟಮಿನ್ ಎ, ಥೈಮೀನ್, ರಿಬೋಫ್ಲಾವಿನ್ ಮತ್ತು ನಿನಾಸಿನ್, ತಾಮ್ರ, ಗಂಧಕ, ಮ್ಯಾಗ್ನೇಷಿಯಂ, ಕಬ್ಬಿಣ, ಕ್ಯಾಲ್ಸಿಯಂ ಮತ್ತು ಪೊಟ್ಯಾಸಿಯಂಗಳು ಖರ್ಜೂರದಲ್ಲಿ ಸಮೃದ್ಧವಾಗಿ ದೊರೆಯುತ್ತವೆ.

ಒಮಾನಿನಲ್ಲಿ ಖರ್ಜೂರವನ್ನು ಬೇಯಿಸಿ ತಿನ್ನುತ್ತಾರೆ. ಅದರಿಂದ ಒಂದು ಬಗೆಯ ಸೂಪ್ ತಯಾರಿಸುತ್ತಾರೆ. ಮುಖ್ಯ ಸಿಹಿ ಭಕ್ಷ್ಯಗಳಲ್ಲಿಯೂ ಖರ್ಜೂರ ಬಳಸಲ್ಪಡುತ್ತದೆ. ಅಲ್ಲಿ ಬ್ರೆಡ್ ಮುಂತಾದವುಗಳೊಂದಿಗೆ ತಿನ್ನುವ ಸಾಸ್ ಕೂಡ ಖರ್ಜೂರದ್ದೇ. ಊಟದ ನಂತರ ಬಳಸುವ ಸಿಹಿ ಭಕ್ಷ್ಯವೂ ಖರ್ಜೂರದಿಂದಲೇ ಮಾಡಲ್ಪಟ್ಟದ್ದು. ಖರ್ಜೂರದಿಂದ ತಯಾರಿಸಿದ ಮದ್ಯದ ಅಮಲು ಅವರ್ಣನೀಯ. ಬೀಜವನ್ನು ತೆಗೆದು ಬಾದಾಮಿಯನ್ನು ತುಂಬಿ ಪ್ಯಾಕ್ ಮಾಡಿಟ್ಟ ಖರ್ಜೂರದ ರುಚಿ ಅವಿಸ್ಮರಣೀಯ.

ನಜ್ವಾದಲ್ಲಿ ಖರ್ಜೂರವನ್ನು ಸಂಸ್ಕರಿಸುವ ಒಂದು ಕಾರಖಾನೆಯಿದೆ. ಪ್ರತಿವರ್ಷ ಇಲ್ಲಿ ಸಂಸ್ಕರಿಸಲ್ಪಟ್ಟು ಪ್ಯಾಕ್ ಆಗಿ ವಿದೇಶಗಳಿಗೆ ಹೋಗುವ ಖರ್ಜೂರವೆಷ್ಟು ಗೊತ್ತೆ? 2000 ಟನ್‌ಗಳು.

ಒಮಾನಿನಲ್ಲಿ ಒಬ್ಬ ಎಷ್ಟು ಶ್ರೀಮಂತ ಎಂಬುದನ್ನು ಅಳೆಯಲು ಆತನ ಹೊಲದಲ್ಲಿ ಎಷ್ಟು ಖರ್ಜೂರದ ಗಿಡಗಳಿವೆ ಎಂದು ಲೆಕ್ಕ ಹಾಕುವುದು ಮೊದಲಿನಿಂದ ಬಂದ ರೂಢಿ. ●

ಹಾಗೇನಾದರೂ ಕಂದೀಲಿಲ್ಲದೆ ಬರುತ್ತಿರುವುದನ್ನು ಕಂಡರೆ ಕೂಡಲೇ ನಗರರಕ್ಷಕರು ಆತನಿಗೆ ತಕ್ಕ ಶಾಸ್ತಿ ಮಾಡಿಬಿಡುತ್ತಿದ್ದರು. ವಿದೇಶಗಳಿಂದ ಯಾವುದೇ ಸ್ವಯಂ ಚಾಲಿತ ವಾಹನಗಳನ್ನು ತರಿಸಿಕೊಳ್ಳುವುದಕ್ಕೆ ಸುಲ್ತಾನನನ್ನು ಖುದ್ದು ಭೇಟಿ ಮಾಡಿ ಅನುಮತಿ ಪಡೆಯಬೇಕಾಗುತ್ತಿತ್ತು. ವಿದೇಶಕ್ಕೆ ಯಾರೂ ತಮ್ಮ ಹೆಂಡತಿಯೊಂದಿಗೆ ಹೋಗಲು ಸಾಧ್ಯವಿರಲಿಲ್ಲ. ಅದಕ್ಕೂ ಸುಲ್ತಾನನೇ 'ಹೂಂ' ಅನ್ನಬೇಕಾಗುತ್ತಿತ್ತು. ಶಿಕ್ಷಣ ಮತ್ತು ವೈದ್ಯಕೀಯ ಸೌಲಭ್ಯಗಳು ಸಾಕಷ್ಟಿರಲಿಲ್ಲ. ಆಸ್ಪತ್ರೆಗಳು ಒಂದೋ ಎರಡೋ ಶಾಲೆಗಳು ಎರಡೋ ಮೂರೋ. ಹೆದ್ದಾರಿಗಳಿಲ್ಲ. ದೂರದರ್ಶನವಿರ ಲಿಲ್ಲ. ಆಕಾಶವಾಣಿಯೂ ಅಲ್ಲಿ ಗೊತ್ತಿರಲಿಲ್ಲ. ವಿಶ್ವವಿದ್ಯಾಲಯವಂತೂ ಕಲ್ಪನಾತೀತ."

ಹಾಗಿದ್ದ ಒಮಾನ್ ಈ ಹದಿನೆಂಟು ವರ್ಷಗಳಲ್ಲಿ ಕಂಡ ಬದಲಾವಣೆ ಅತ್ಯಗಾಧ. ಆದರೂ ಒಮಾನಿಗಳಿಗೆ ತಮ್ಮ ಸಂಪ್ರದಾಯಗಳು–ಪರಂಪರೆಯನ್ನು ರಕ್ಷಿಸಿಕೊಳ್ಳುವುದು ಒಂದು ಹೃದಯಸ್ಥ ಜವಾಬ್ದಾರಿ. "ನಾವು ರಕ್ಷಣೆ ಮಾಡದಿದ್ದರೆ ನಾಗರಿಕತೆ ಕ್ರಮೇಣ ಪರಂಪರೆಯನ್ನು ನಾಶಗೊಳಿಸುತ್ತದೆಂಬುದು ನಮಗೆ ಗೊತ್ತು. ಪ್ರವಾಸೋದ್ಯಮ ನಾಗರಿಕತೆಯ ಒಂದು ಅಂಗ. ನಮ್ಮ ಭವ್ಯ ಪರಂಪರೆಯನ್ನು ವಿದೇಶಿ ಗಾಳಿ ಅಲುಗಾಡಿಸದಂತೆ ಕಾಯುತ್ತೇವೆ" ಎನ್ನುತ್ತಾರವರು.

ಒಟ್ಟು ಮೂರು ಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣದ ಒಮಾನ್ ಮೂರು ಮುಖ್ಯ ಭಾಗಗಳಲ್ಲಿ ವಿಂಗಡಿಸಲ್ಪಟ್ಟಿದೆ. ಉತ್ತರ ಮತ್ತು ಪೂರ್ವಕ್ಕೆ ಹಬ್ಬಿಕೊಂಡಿರುವ ಬಾಟಿನಾಹ್ ಕರಾವಳಿ ಹಾಗೂ ಅದರ ಹಿನ್ನೆಲೆಯಲ್ಲಿಯೇ ನಿಂತಿರುವ ಹಾಜಾರ್ ಪರ್ವತಾವಳಿ ಒಂದು ಭಾಗ. ಮಸ್ಕತ್ ಈ ಭಾಗದಲ್ಲಿದೆ. ನಂತರ ಮಧ್ಯ ಹಾಗೂ ದಕ್ಷಿಣ ಒಮಾನಿನ ಬಯಲು ಪ್ರದೇಶ, ಮತ್ತು ದಕ್ಷಿಣ-ಪೂರ್ವಕ್ಕಿರುವ ಪರ್ವತಾವಳಿ ಪ್ರದೇಶ. ಇದನ್ನು ಧೋಫಾರ್ ಎಂದು ಕರೆಯಲಾಗುತ್ತದೆ. ಸಾಲಾಲಾಹ್ ಇರುವುದು ಈ ಕರಾವಳಿಯಲ್ಲೇ. ಮೂರನೆಯ ಭಾಗ ಮುಸಾಂಡಮ್.



ಸ್ವರ್ಣಲೇಪಿತ ಎಮುಪಿಜ್ ಬಾಟಲಿ

ಒಮಾನಿನಿಂದ ವಾಯುವ್ಯಕ್ಕೆ ಇರುವ ಆ ದೇಶದ ಒಂದು ಭಾಗ. ಇಲ್ಲಿ ಯುಎಇ 70 ಕಿಲೋಮೀಟರ್ ಅಗಲದ ಪ್ರದೇಶ ಹಬ್ಬಿಕೊಂಡು ಇವೆರಡನ್ನು ಬೇರೆಬೇರೆಯಾಗಿ ಮಾಡಿದೆ. ಮೂರುಕಡೆ ಸುತ್ತುವರಿದಿರುವ ಹೊರ್ಮುಜ್ ಜಲಸಂಧಿಯ ಕರಾವಳಿ ಭಾಗ ಇದು. ಕಿರಿದಾದ ಪರ್ವತಗಳಿಂದ ತುಂಬಿಕೊಂಡಿದೆ. ಮೀನುಗಾರಿಕೆ ಇಲ್ಲಿ ಪ್ರಮುಖ ವೃತ್ತಿ.

ಮಸ್ಕತ್ ಈ ದೇಶದ ರಾಜಧಾನಿ. ಕ್ರಿಸ್ತಪೂರ್ವ ಐದನೆಯ ಶತಮಾನದಿಂದಲೂ ಪ್ರಮುಖ ವ್ಯಾಪಾರಿ ಕೇಂದ್ರವಿದು. ಒಮಾನ್ ಆಖಾತದ ಪ್ರಮುಖ ಬಂದರು. ಪೆಟ್ರೋಲಿಯಮ್ಮನ್ನು ಇಲ್ಲಿಂದಲೇ ಹೊರದೇಶಗಳಿಗೆ ಕಳಿಸುವ ಒಮಾನ್ ಹೊರದೇಶಗಳಿಂದ ಆಹಾರ ವಸ್ತುಗಳನ್ನು ತರಿಸಿಕೊಳ್ಳುತ್ತದೆ. ಇಲ್ಲಿಯ ಜನಸಂಖ್ಯೆ 50 ಸಾವಿರವಾದರೂ ಈ ಪೈಕಿ ಶೇಕಡಾ 45 ರಷ್ಟು ಜನ ಅರಬರಲ್ಲದವರು. 1502 ರಿಂದ 1650 ರವರೆಗೆ ಪೋರ್ಚುಗೀಜರ ವಶದಲ್ಲಿದ್ದ ಮಸ್ಕತ್ 1741ರಲ್ಲಿ ಈಗಿನ ಸುಲ್ತಾನ್ ವಂಶ ಆಡಳಿತ ವಹಿಸಿಕೊಂಡಾಗಿನಿಂದಲೂ ಇದೇ ಒಮಾನಿನ ರಾಜಧಾನಿ.

ಲೆ.ಕ. ಜಯಕರ್ ಮತ್ತು ಒಮಾನ್

ಈ ದೇಶದ ಗಾದೆಗಳು ತುಂಬ ಅರ್ಥಗರ್ಭಿತ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತೀಯ ವೈದ್ಯ ಲೆ.ಕರ್ನಲ್ ಎ.ಎಸ್.ಜಿ. ಜಯಕರ್ ಎಂಬವರು ಈ ಗಾದೆಗಳನ್ನು ಸಂಗ್ರಹಿಸಿದರು. ಮುಂದೆ (1900ರ ಸುಮಾರಿಗೆ) ತಾವು ನಿವೃತ್ತರಾಗುವ ಮೊದಲು ಜಯಕರ್ ಅವರು ಈ ಗಾದೆಗಳ ಸಂಗ್ರಹವನ್ನು ಮುಂಬಯಿಯ ರಾಯಲ್ ಏಸಿಯಾಟಿಕ್ ಸೊಸೈಟಿಯ ಜರ್ನಲ್ಲಿಗೆ ಕಳಿಸಿದರು. ಕೆಲ ಕಾಲ ಜಯಕರ್ ಈ ಸೊಸೈಟಿಯಲ್ಲಿಯೂ ಸೇವೆ ಸಲ್ಲಿಸಿದರು. ಆಗ ಮೊದಲ ಬಾರಿಗೆ ಆ ಸೊಸೈಟಿ ಒಮಾನಿ ಗಾದೆಗಳನ್ನು ತನ್ನ ಜರ್ನಲ್ಲಿನಲ್ಲಿ ಪ್ರಕಟಿಸಿತು. ಇತ್ತೀಚೆಗೆ ಕೆಂಬ್ರಿಜ್ಜಿನ ದಿ ಒಲ್ಯಾಂಡರ್ ಪ್ರೆಸ್ ಈ ಸಂಗ್ರಹವನ್ನು ತುಂಬ ಸುಂದರವಾಗಿ ಮತ್ತೆ ಪ್ರಕಟಿಸಿದೆ. ಒಮಾನಿನ ರಾಷ್ಟ್ರೀಯ ಸಂಸ್ಕೃತಿ ಮತ್ತು ಪರಂಪರೆಗೆ ಸಂಬಂಧಿಸಿದ ಇಲಾಖೆ ಕೆಲ ದಿನಗಳ ಹಿಂದೆ ಅರಬ್ಬಿ ಭಾಷೆಯಲ್ಲಿಯೂ ಈ ಗಾದೆಗಳ ಒಂದು ಸಂಗ್ರಹವನ್ನು ಹೊರತಂದಿದೆ.

ಜಯಕರ್ ತಮ್ಮ ವೃತ್ತಿಯೊಂದಿಗೆ ಒಮಾನಿನಲ್ಲಿ ಮೂಲೆ ಮೂಲೆಯೂ ಸಂಚರಿಸಿದರು. ಪರಂಪರೆಯ ಅಭ್ಯಾಸ ಹಾಗೂ ಗಾದೆಗಳ ಸಂಗ್ರಹ ಅವರ ಪ್ರವಾಸದ ಉದ್ದೇಶವಾಗಿತ್ತು. ಮೂವತ್ತು ವರ್ಷಗಳವರೆಗೆ ಜಯಕರ್ ಒಮಾನಿನಲ್ಲೇ ಇದ್ದರು. ಅವರ 'ಒಮಾನ್ ಪ್ರೇಮ'ವನ್ನು ಗಮನಿಸಿ ಆ ದೇಶ ತನ್ನಲ್ಲಿಯ ಅಪರೂಪದ ಕಾಡು ಮೇಕೆಗೆ 'ಹರ್ಮಿಟ್ರೆಗಸ್ ಜಯಕರಿ' ಎಂದೇ ಹೆಸರಿಟ್ಟಿತು. ಈಗ ಆ ತಳಿ ಕರೆಯಲ್ಪಡುವುದು ಹೀಗೆಯೇ. ಜಯಕರ್ ಆ ಮೇಕೆಯಂತೆ ಒಮಾನಿನ ಎಂಥ ದುರ್ಗಮ ಪ್ರದೇಶದಲ್ಲೂ ಸಂಚರಿಸಲು ಹಿಂದೆ ಮುಂದೆ ನೋಡಿರಲಿಲ್ಲವೆಂಬುದು ಇಲ್ಲಿ ಗಮನಾರ್ಹ.

ನಿತ್ಯದ ಮಾತಿನಲ್ಲಿಯೂ ಸುಲಲಿತವಾಗಿ ಜಾಣ್ನುಡಿಗಳನ್ನು ಒಮಾನಿಗಳು ಬಳಸುತ್ತಾರೆ. ಕೆಲವೇ ಸರಳ ಶಬ್ದಗಳ ಆದರೆ ಅರ್ಥವತ್ತಾದ ಗಾದೆಗಳಿವು. ಅವುಗಳಲ್ಲಿ ಮಣ್ಣಿನ ವಾಸನೆಯಿರುವುದನ್ನು ನಾವು ಗಮನಿಸಬಹುದು.

"ನಾನು ಒಂಟೆಯೆಂದರೆ ನೀನು ಗುದ್ದವೆನ್ನುತ್ತಿ." (ಅಭಿಪ್ರಾಯ ಭೇದಕ್ಕೊಂದು ಉದಾಹರಣೆ).

"ಪ್ರತಿ ಮೀಸೆಗೂ ಒಂದು ಕತ್ತರಿ ಇದ್ದೇ ಇದೆ." (ಗರ್ವದಿಂದ ಬೀಗುವವನಿಗೆ ಹೇಳುವುದು)

"ಹಾವು ತುಳಿದಾತ ಹಗ್ಗ ಕಂಡರೂ ಹೆದರುತ್ತಾನೆ."

"ನಿನ್ನನ್ನು ನೋಡದ ಕಣ್ಣು ನಿನ್ನನ್ನೆಂದೂ ಬಯ್ಯದು."

"ಹೇಳುವವ ಮೂರ್ಖನಾದರೂ ಕೇಳುವವ ಜಾಣನಾಗಿರಬೇಕು."

ನಿಜ್ವಾ ಒಳನಾಡು ಪ್ರಾಂತ್ಯದ ಪ್ರಮುಖ ನಗರ. ಮಸ್ಕತ್ತಿನಿಂದ ಆಗ್ನೇಯಕ್ಕೆ 140 ಕಿಲೋಮೀಟರುಗಳ ಮೇಲಿದೆ. ಹಾಜಾರ್ ಪರ್ವತಾವಳಿ ಈ ಪ್ರಾಂತ್ಯದ ಗೋಡೆಯಿದ್ದಂತೆ. ಇದರ ಪ್ರಾಚೀನತೆ 6-7ನೆಯ ಶತಮಾನದಷ್ಟು. ಒಮಾನಿನ ಪೋಲಿಸ್ ಅಕಾಡೆಮಿ ಹಾಗೂ ಕೃಷಿ ಕಾಲೇಜು ಇಲ್ಲಿವೆ. ಅಲ್ಲದೆ ಮಸಾಲೆ ಮತ್ತು ಜಾನುವಾರುಗಳ ದೊಡ್ಡ ಪೇಟೆಯಿದು. ಇಲ್ಲಿರುವ ಹಳೆಯ ಕೋಟೆ ಎಷ್ಟೋ ಯುದ್ಧಗಳನ್ನು ತಡೆದುಕೊಂಡು ಇಂದಿಗೂ ತನ್ನ ಮೈಮೇಲಿನ ಗಾಯದ ಗುರುತುಗಳನ್ನು ತೋರಿಸುತ್ತ ಗಟ್ಟಿಯಾಗಿ ನಿಂತಿದೆ. ಈ ಊರಿನ ಕೆಲವೇ ಮೈಲಿನಂತರದಲ್ಲಿ ಜಾಬ್ರಿನ್ ಎಂಬ ಇನ್ನೊಂದು ಇತಿಹಾಸ ಪ್ರಸಿದ್ಧ ಕೋಟೆಯಿದೆ. ನಜ್ವಾದಿಂದ ಕರಾವಳಿಗೆ ಹೋಗುವ ರಸ್ತೆಯುದ್ದಕ್ಕೂ ಕೆಲವು ಕಿಲೋಮೀಟರ್ ಅಂತರಕ್ಕೊಮ್ಮೆ ಬೆಳೆಯಂತೆ ಹೊಳೆದು ಕಣ್ಣುಕುಕ್ಕಿ ಮತ್ತೆ ಭೂಮಿಯಲ್ಲಿಳಿದು ಮುಂದೆ ಮತ್ತೆ ಕಾಣಿಸಿಕೊಳ್ಳುವ ಬಹಳ ಕೊಳವೆಗಳಿವೆ. ಇವು ತೈಲಾಗಾರಗಳಿಂದ ಕರಾವಳಿಗೆ ತೈಲವನ್ನು ಸಾಗಿಸುವ ಪೈಪುಗಳು.

ನಜ್ವಾದಿಂದ ಮುಂದೆ ಪೂರ್ವ ಕರಾವಳಿಯಲ್ಲಿ ರಸ್ ಅಲ್-ಹದ್ ಇದೆ. ರಾತ್ರಿ ಸಮುದ್ರದ ದಡಕ್ಕೆ ಬೃಹದಾಕಾರದ ಆಮೆಗಳು ಈಜಿ ಬಂದು ಮರಳಿನಲ್ಲಿ ಗುಳಿ ತೋಡಿ ಮೊಟ್ಟೆ ಇರಿಸುವ ಮತ್ತು ಆ ಮೊಟ್ಟೆಗಳನ್ನು ಕದ್ದು ತಿನ್ನಲು ಓಡಾಡುವ ನರಿಗಳ ದೃಶ್ಯ ನೋಡುವಂಥದು.

ಒಮಾನ್ ರಾಣಿ ಶೇಬಾಳ ನಾಡಂತೆ. ಅಲ್ಲಿ ಅವಳ ಅರಮನೆಯಿದೆಯಂತೆ. ಪ್ರಾಚೀನ ಅರಬ್ ಕುರುಹುಗಳನ್ನು ಕಾಯ್ದುಕೊಂಡು ಬಂದಿರುವ ಈ ದೇಶ ತನ್ನ ವೈಶಿಷ್ಟ್ಯವನ್ನೂ ಕಾಪಾಡಿಕೊಂಡಿರುವುದಕ್ಕೆ ಕಾರಣ ಒಮಾನಿಗಳು ತಮ್ಮ ದೇಶವನ್ನು ಇತರರು ಮುಟ್ಟದಂತೆ ಮೆಟ್ಟದಂತೆ ಕಾದುಕೊಂಡಿರುವುದು. ●

(ವಿವಿಧ ಮೂಲಗಳಿಂದ)

ಚಟ್ನಿಪುಡಿ ಮತ್ತು ಅಮೆರಿಕ

●ಡಾ|| ಬೆಳ್ಳೆ ದಿನಕರ ರೈ●

ಮನುಕುಲದ ಆಹಾರಕ್ಕೆ ಸ್ವಾದವನ್ನು ಮತ್ತು ಪರಿಮಳವನ್ನು ಬೆರೆಸಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಭಾರತದ ನೈಸರ್ಗಿಕ ಗುಣ ವಿಶೇಷಣಗಳ ಫಲವಾಗಿ ಅಲ್ಲಿ ಅನಾದಿಕಾಲದಿಂದಲೂ ಸಮೃದ್ಧವಾಗಿ ಬೆಳೆಯಲ್ಪಡುತ್ತಿರುವ ಸಾಂಬಾರ ಪದಾರ್ಥಗಳು ಜಗತ್ತಿನಲ್ಲಿ ವಿಶಿಷ್ಟವಾದ ಸ್ಥಾನವನ್ನು ಸಂಪಾದಿಸಿಕೊಂಡಿದೆ. ಏಲಕ್ಕಿ, ಲವಂಗ, ದಾಲಚಿನ್ನಿ,ಮೆಣಸು, ಮುಂತಾದ ಸಾಂಬಾರ ಪದಾರ್ಥಗಳಿಂದ ತಯಾರಾದ ಸಾರಿನಪುಡಿ, ಚಟ್ನಿಪುಡಿಯನ್ನು ಯಾವ ಭಾರತೀಯ ತಾನೇ ಸವಿದಿಲ್ಲ.?

ಚಟ್ನಿಪುಡಿ ಸಾರಿನಪುಡಿಯನ್ನು ನೀವೆಲ್ಲ ತಿಂದಿರಬಹುದಾದರೂ ಇದರ ಬಗ್ಗೆ ಇರುವ ಮತ್ತೊಂದು ಮಹತ್ವದ ವಿಚಾರವನ್ನು ತಿಳಿದಿರಲಿಕ್ಕಿಲ್ಲ ಎಂಬುದು ನನ್ನ ಭಾವನೆ. ಆದೆಂದರೆ ಈ ಚಟ್ನಿಪುಡಿ ಊಟಕ್ಕೆ ಪೂರಕವಾದ ಪದಾರ್ಥ ಮಾತ್ರವಾಗದೆ ಇಡಿ ನಾಗರಿಕತೆಯ ಬಂಡವಾಳವೇ ಆಗಿದೆ ಎನ್ನುವುದು ನನ್ನವಾದ.

ಈ ಲೇಖನದ ತಲೆಬರಹವನ್ನೋದಿರುವ ನೀವು ಎಲಾ...ಚಟ್ನಿಪುಡಿಗೂ ಅಮೆರಿಕಕ್ಕೂ ಎಲ್ಲಿಂದೆಲ್ಲಿಯ ಸಂಬಂಧ ಎಂದು ಹುಬ್ಬೇರಿಸಿರಬಹುದು. ಆದರೆ, ಒಂದುವೇಳೆ ಚಟ್ನಿಪುಡಿ ಇಲ್ಲದಿದ್ದರೆ ಅಮೆರಿಕವೇ ಇರುತ್ತಿರಲಿಲ್ಲ ಎಂದರೆ ನೀವು ಹೌಹಾರಿ ಬೀಳಬಹುದೇನೋ!

ಚಟ್ನಿಪುಡಿಗೂ ಅಮೆರಿಕಕ್ಕೂ ಸಂಬಂಧ ಕಲ್ಪಿಸಿ ನಾನೀಗ ಹೇಳಹೊರಟಿರುವುದಕ್ಕೆ ಕಾರಣ ಇದೆ. ನಾನು ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗ. ಭಾರತಕ್ಕೆ ನಾನು ಹೋಗಬೇಕಾದರೆ ಮದುವೆಯೋ, ಮುಂಜಿಯೋ ಅಥವಾ ಮತ್ತೇನಾದರೂ ವಿಶೇಷ ಕಾರ್ಯಕ್ರಮ ಇರಬೇಕು. ಹಾಗೆ ಭಾರತಕ್ಕೆ ಹೋಗಿ ನಮ್ಮೂರಿಗೆ (ಅಮೆರಿಕಕ್ಕೆ) ಮರಳುವಾಗ ತಪ್ಪದೆ ಒಯ್ಯುವ ವಸ್ತುಗಳೆಂದರೆ ಸಾರಿನಪುಡಿ, ಮೆಣಸಿನಪುಡಿ, ಚಟ್ನಿಪುಡಿ, ಉಪ್ಪಿನ ಕಾಯಿ, ಹಪ್ಪಳ ಮತ್ತು ಸಂಡಿಗೆ.

ಹೀಗೊಮ್ಮೆ ಭಾರತದಿಂದ ಅಮೆರಿಕಕ್ಕೆ ಮರಳಿ

ಬರುವಾಗ ಅಮೆರಿಕದ ಏರ್‌ಪೋರ್ಟ್‌ನಲ್ಲಿ ನಡೆದ ಘಟನೆಯೊಂದು ಚಟ್ನಿಪುಡಿಯ ಮಹಿಮೆಯನ್ನು ಪ್ರಸ್ತಾಪಿಸುವುದಕ್ಕೆ ಕಾರಣವಾಯಿತು. ಏರ್‌ಪೋರ್ಟ್‌ನಲ್ಲಿ ಲಗೇಜ್ ಪರಿಶೀಲಿಸುವ ವಿಧಿ-ವಿಧಾನ ಇದೆಯಲ್ಲ, ಅಲ್ಲಿದ್ದ ತರುಣ ಕಸ್ಟಮ್ಸ್ ಅಧಿಕಾರಿ ನನ್ನ ಲಗೇಜನ್ನು ಬಿಡಿಸಿ ಬಿಡಿಸಿ ನೋಡಿದ. ಆಗ ಅವನ ಗಮನ ಸೆಳೆದದ್ದು ನನ್ನ ಸೂಟ್‌ಕೇಸ್‌ನ ಮೂಲೆ ಯಲ್ಲಿ ಮುದುಡಿ ಕುಳಿತಿದ್ದ ಮೂರು ಪ್ಲಾಸ್ಟಿಕ್ ಪೊಟ್ಟಣಗಳು.

ಹಳದಿ, ಕೆಂಪು, ಕೇಸರಿ ಬಣ್ಣದ ಪುಡಿಗಳನ್ನು ನೋಡಿದ ಆತನಿಗೆ ಆಶ್ಚರ್ಯವಾಯಿತು. ಭಾರತದಿಂದ ಬಂದಿರುವ ನಾನು ಬೆಲೆಬಾಳುವ ಪುರಾತನ ಕಲಾವಸ್ತುಗಳನ್ನೋ ಅಥವಾ ಒಳ್ಳೆಯವಿಸ್ಕಿ ಯನ್ನೋ ತಂದಿರಬಹುದೆಂಬ ಅವನ ಲೆಕ್ಕಾಚಾರ ತಪ್ಪಿತು. ನಾನು ಆತನನ್ನು ತಡೆಯುವಷ್ಟ ರಲ್ಲೇ ಸೋರುತ್ತಿದ್ದ ಸಾರಿನಪುಡಿಯ ಚೀಲ ವನ್ನು ಎತ್ತಿ ಹಿಡಿದೇ ಬಿಟ್ಟ!. ಸುರಿಯುತ್ತಿದ್ದ ಪುಡಿಯ ಘಮ ಘಮ ಘಾಟಿನಿಂದಾಗಿ [illegible] ಪುಂಖವಾಗಿ ಸೀನಲಾರಂಭಿಸಿದ. ಸುತ್ತಮುತ್ತಲಿದ್ದವರು ಅಲ್ಲಿನ ವಾಡಿಕೆಯಂತೆ God Biess You ಎಂದು ಸೀನಿಗೊಂದ ರಂತೆ ಹಾರೈಸಿದರು.

ಕೆಂಪು ಮೂಗಿನಲ್ಲಿ ಖಾರದಪುಡಿ ಸೇರಿ ಕೊಂಡು ಮೊದಲೇ ಕೆಂಪಗಿದ್ದ ಅವನನ್ನು ಮತ್ತಷ್ಟು ಕೆಂಪನನ್ನಾಗಿ ಮಾಡಿಬಿಟ್ಟಿತ್ತು. ಆತ ನಿಗೆ ರೇಗಿಹೋಗಿತ್ತು "ಏನ್ರಿ ಅಷ್ಟು ದೂರ ದಿಂದ ಈ ಕೆಲಸಕ್ಕೆ ಬಾರದ ಪುಡಿಗಳನ್ನು ತರ ಬೇಕಿತ್ತ?" ಎಂದ ನನ್ನತ್ತ ತಿರುಗಿ. ನಾನು ಸುಮ್ಮನಿದ್ದುದು ಅವನನ್ನು ಮತ್ತಷ್ಟು ಕೆರಳಿ ಸಿರಬೇಕು. "ಯಾವ ದೇಶ?" ಅಬ್ಬರಿಸಿದ. "ಇಂಡಿಯಾ" ಎಂದು ನಾನೆಂದೊಡನೆ ಚೇಷ್ಟೆಯ ನಗುವನ್ನು ತುಟಿಯಂಚಿನಲ್ಲಿ ತುಳು ಕಿಸುತ್ತಾ "ನಿಮ್ಮ ದೇಶ ದಲ್ಲಿ ಮಕ್ಕಳನ್ನು ಮಾತ್ರ ಮಾಡ್ತಾರೆ ಅಂತ ಕೇಳಿದ್ದೆ, ಈ ಪುಡಿ ಗಳನ್ನು ಬೇರೇ ಮಾಡ್ತಾರೋ!" ಎಂದ ಹಂಗಿಸುವ ಧ್ವನಿಯಲ್ಲಿ.

ಆತ ಕಸ್ಟಮ್ಸ್ ಅಧಿಕಾರಿ ಇರಬಹುದು. ನಮ್ಮ ದೇಶದ ಬಗ್ಗೆ ಹೀನಾಯವಾಗಿ ಮಾತಾ ಡಿದರೆ ಹ್ಯಾಗೆ ಸಹಿಸಿಕೊಂಡು ಇರೋದು? ಸರಿಯಾದ ಉತ್ತರ ನೀಡಿ ಮಣ್ಣು ಮುಕ್ಕಿಸ ಬೇಕು ಎಂದು ಮನಸ್ಸಿನಲ್ಲೇ ಅಂದುಕೊಂಡೆ.

ಗಂಭೀರವಾಗಿ ಹೇಳತೊಡಗಿದೆ: "ನೋಡ್ರಿ ನಾವು ಹೀಗೆ-ಇವತ್ತು-ಇಲ್ಲಿ ನಿಲ್ಲೋದಕ್ಕೆ ಸಾಧ್ಯ ಆದದ್ದು ಈ ಪುಡಿಯಿಂದ. ಇದರ ಹೆಸರು ಚಟ್ನಿ ಪುಡಿ. ಇದನ್ನು ತಯಾರಿಸಲು ಅವಶ್ಯವಾದ ಮಸಾಲೆ ಪದಾರ್ಥಗಳನ್ನು ಹುಡುಕಲು ಪರ ದಾಡ್ತಾ ಇರೋವಾಗಲೇ ಆಕಸ್ಮಾತ್ ನಿಮ್ಮ ದೇಶಾನ ಕಂಡು ಹಿಡಿದದ್ದು. ತಿಳ್ಕೊಳ್ಳಿ" ನನ್ನ ಈ ಅನಿರೀಕ್ಷಿತ ಉತ್ತರದಿಂದ ಈ ತರುಣ ಗಲಿ ಬಿಲಿಗೊಂಡ. ನಮ್ಮ ಸಂಭಾಷಣೆಯನ್ನು ಅಲ್ಲೇ ನಿಂತು ಕೇಳಿಸಿಕೊಳ್ಳುತ್ತಿದ್ದ ಹಿರಿಯ ಕಸ್ಟಮ್ಸ್ ಅಧಿಕಾರಿಯೊಬ್ಬರು ಬಳಿಬಂದು ನನ್ನ ಬ್ಯಾಗಿ ನಲ್ಲಿ ಇಣಿಕಿ ಪುಡಿಯ ಪಟ್ಟಣಗಳನ್ನು ನೋಡಿ ದರು.

ಚಿಗುರುಮೀಸೆಯ ತರುಣ ಅಧಿಕಾರಿಗೆ ದೂರು ನೀಡುವ ಧಾಟಿಯಲ್ಲಿ ಹೇಳತೊಡಗಿದ 'ನೋಡಿದಿರಾ ಸಾರ್, ಎಂಥಾ ದೊಡ್ಡ ದೊಡ್ಡ ಮಾತಾಡ್ತಾ ಇದಾರೆ..' ಹಿರಿಯ ಅಧಿಕಾರಿ ಮುಗುಳು ನಗೆ ಬೀರುತ್ತಾ "ಮಸಾಲೆ, ಇದು ಮಸಾಲೆ ಪುಡಿ ನಿನಗೆ ಗೊತ್ತಿಲ್ಲವಾ?" ಎಂದು ಬಿಟ್ಟರು.

'ಮಸಾಲೆ' ಎಂಬ ನಿಗೂಢ ಪದ ಕೇಳಿಯೇ ಆ ತರುಣ ಅಧಿಕಾರಿ ಮೆತ್ತಗಾಗಿಬಿಟ್ಟ. ಮೆಲ್ಲಗೆ ಅದೂ ಇದೂ ಮಾತಾಡುತ್ತಾ ಸ್ನೇಹ ಬೆಳೆಸಿ ಕೊಳ್ಳಲಾರಂಭಿಸಿದ. ಈ ಪುಡಿಯ ಮಹತ್ವ ಏನೆಂದು ತಿಳಿಯಕೊಳ್ಳಲು ಮುಂದಾದ.

ಮಸಾಲೆ ಪದಾರ್ಥಗಳಿಗೂ ನಾಗರಿಕತೆಗೂ ಇರುವ ಚಾರಿತ್ರಿಕ ನಂಟಿನ ಬಗ್ಗೆ ನನಗೆ ನಿಜಕ್ಕೂ ಅಚ್ಚರಿಯಾಗುತ್ತದೆ. ಚರಿತ್ರೆಯ ಪ್ರತಿ ಘಟನೆಯೂ ಒಂದರೊಡನೊಂದು ಸಂಕೀರ್ಣ ವಾದ ತಳುಕುಗಳನ್ನು ಹಾಕಿಕೊಂಡಿರುತ್ತದೆ. ಹಾಗೆಂದೇ ನನಗೆ ಮೊದಲಿನಿಂದಲೂ ಚರಿತ್ರೆ ಯಲ್ಲಿ ಪರಮಾಸಕ್ತಿ. ಒಂದು ಕಾಲ ಘಟ್ಟದಲ್ಲಿ ಧುತ್ತೆಂದು ಪ್ರತ್ಯಕ್ಷವಾಗುವ ಯಾವುದೋ ವಸ್ತು ವೊಂದು ಪ್ರಪಂಚ ನಿವಾಸಿಗಳ ಜೀವನವನ್ನೇ ಬದಲಾಯಿಸಿಬಿಡುತ್ತದೆ. ಸಾಮಾನ್ಯರು ಇದಾ ವುದನ್ನು ಗಮನಿಸದಿರಬಹುದು. ಬುದ್ಧಿವಂತರು ಇಂಥ ಬದಲಾವಣೆಗಳನ್ನೇ ಪ್ರಗತಿ ಎಂದು ಕರೆಯುತ್ತಾರೆ. ಅಮೆರಿಕ ಉದ

ಬಿಸಿದ್ದು, ಪೆಟ್ರೋಲ್ ಕಂಡುಹಿಡಿದದ್ದು ಇಂಥ ವಿಷಯಗಳನ್ನೆ ನೋಡಿ, ಪೆಟ್ರೋಲ್ ಇಲ್ಲದ ಬದುಕನ್ನು ಕಲ್ಪಿಸಿಕೊಳ್ಳುವುದಾದರೂ ಹೇಗೆ? ಅದು ಹಾಗಿರಲಿ.

ಅಮೆರಿಕ ಮುಂಚೂಣಿಗೆ ಬರುವ ಮೊದಲು ಬ್ರಿಟಿಷರೇ ಅತ್ಯಂತ ಮಹತ್ವಾಕಾಂಕ್ಷಿಗಳು. ಆಗಿನ ಕಾಲಕ್ಕೆ ಅಮೂಲ್ಯ ಇಂಧನ ಎನಿಸಿದ್ದ ಕಲ್ಲಿದ್ದಲಿನ ಮೇಲೆ ನಿಯಂತ್ರಣ ಇದ್ದುದಾದರೆ. ಪ್ರಪಂಚವನ್ನೇ ತಾವು ಆಳಬಹುದೆಂಬ ನಂಬಿಕೆ ಅವರದು. ಈಗ ಇಂಧನದ ಬೇರೆ ಬೇರೆ ವಸ್ತುಗಳು ಹುಟ್ಟಿಕೊಂಡು, ಕಲ್ಲಿದ್ದಲು ಹಿಂದೆ ಸರಿದಿದೆ.

ಪ್ರಾಚೀನ ಈಜಿಪ್ತ್‌ನಿಂದ ಹಿಡಿದು ಇವತ್ತಿನವರೆಗೆ ಅನೇಕ ನಾಗರಿಕತೆಗಳು, ಸಮುದ್ರದ ಅಲೆಗಳ ಹಾಗೆ ಏರಿ ಇಳಿದಿವೆ. ಯಾವುದೇ ಕಾಲದಲ್ಲೂ ಭಾರತದ ವಾಣಿಜ್ಯ ಅದರಲ್ಲೂ ನಮ್ಮ ಸಾಂಬಾರ ಪದಾರ್ಥಗಳು ಪ್ರಪಂಚದ ನಾಗರಿಕತೆಗಳಿಗೆ ಮಹತ್ತರ ಕೊಡುಗೆ ನೀಡಿವೆ.

ಈ ಸಾಂಬಾರ ಪದಾರ್ಥಗಳಿಗಾಗಿಯೇ ಜನ ಪ್ರಪಂಚದ ಮೂಲೆ ಮೂಲೆಗಳನ್ನು ಹುಡುಕಿ ತೆಗೆದರು. ಈ ಪದಾರ್ಥಗಳಿಗಾಗಿ ಮೊದಲು ಭಾರತದೊಡನೆ ನಂಟು ಬೆಳೆಸಿದವರು ಗ್ರೀಕರು. ಆಫ್ಘಾನಿಸ್ತಾನದ ಖೈಬರ್, ಬೋಲಾನ್ ಕಣಿವೆಗಳಲ್ಲಿ ಹಾಯ್ದು ಭೂಮಾರ್ಗಗಳ ಮೂಲಕ ಭಾರತದ ವ್ಯಾಪಾರಿ ವಸ್ತುಗಳು ಗ್ರೀಕ್ ದೇಶಕ್ಕೆ, ಅಲ್ಲಿಂದ ಪಶ್ಚಿಮದ ಇತರ ದೇಶಗಳಿಗೂ ಹೋಗುತ್ತಿದ್ದವು. ಇಡೀ ಜಗತ್ತಿಗೆ ಹತ್ತಿ, ಉಣ್ಣೆ, ಅರಗು, ಸೆಣಬು, ಅಕ್ಕಿ, ರೇಷ್ಮೆ ವಸ್ತ್ರಗಳನ್ನು ಭಾರತವೇ ಪೂರೈಸುತ್ತಿತ್ತು. ನಮ್ಮ ರೇಷ್ಮೆ ನಯಕ್ಕೆ ಹೆಸರಾಗಿತ್ತು. ಇದೆಲ್ಲಕ್ಕಿಂತ ಮುಖ್ಯವಾಗಿ ಭಾರತ ದೇಶ ಮೆಣಸು, ಏಲಕ್ಕಿ, ಲವಂಗ, ಜಾಯಿಕಾಯಿಗಳಂಥ ಅಮೂಲ್ಯ ಸಾಂಬಾರ ಜಿನಸುಗಳ ಭಂಡಾರವಾಗಿತ್ತು.

ಈಗಾದರೋ ಜಪಾನಿ ರೋಬೋಗಳೂ, ಪಶ್ಚಿಮದ ದೈತ್ಯ ಯಂತ್ರಗಳು ಪ್ರಪಂಚದ ನಿತ್ಯ ಅಗತ್ಯ ವಸ್ತುಗಳನ್ನು ತಯಾರಿಸಿ ಬಿಸಾಕುತ್ತವೆ. ಅವತ್ತು ನಮ್ಮ ಜನ ಹಗಲಿರುಳು ಶ್ರದ್ಧೆಯಿಂದ ದುಡಿದು ಪ್ರಪಂಚದ ಅಗತ್ಯಗಳನ್ನು ಪೂರೈಸು



"ಮಾತೆತ್ತಿದರೆ 'ನನ್ಮಗ' ಅಂತ ಜಂಬಾ ಪಡ್ತೀರಲ್ಲಾ, ಈಗ ನೋಡಿ ಗಣಿತದಲ್ಲಿ ಫೇಲ್ 'ನಿಮ್ಮಗ'ನೇ....!!"

ತ್ತಿದ್ದರು. 'ಕರ್ಮ'ದಲ್ಲಿ ಅಚಲ ನಂಬಿಕೆ ಇಟ್ಟಿದ್ದ ಜನ ಅವರು. ಅದರಿಂದಲೇ ಮುಕ್ತಿ ಎಂದು ಕೂಡ ಭಾವಿಸಿದವರು.

ಭಾರತದೊಡನೆ ಪಶ್ಚಿಮದ ಜಗತ್ತಿಗಿದ್ದ ಒಂದೇ ಸಂಪರ್ಕ ಜಲ ಮಾರ್ಗ. ಅಲೆಕ್ಸಾಂಡರ್ ಪರ್ಶಿಯಾ ದೇಶವನ್ನು ಗೆದ್ದಾಗ ಎರಡನೆಯ, ಜಲಮಾರ್ಗವೊಂದು ಅಸ್ತಿತ್ವಕ್ಕೆ ಬಂತು. ಆತನ ದಂಡನಾಯಕ ನಿಯಾರ್ಕಸ್ ದೊರೆಯ ಆಜ್ಞೆಯಂತೆ ಕೆಂಪು ಸಮುದ್ರದಲ್ಲಿ ಸಾಗಿ ಸಿಂಧೂ ಮುಖಜ ಭೂಮಿಯನ್ನು ಸೇರುವ ಇನ್ನೊಂದು ಮಾರ್ಗ ನಿರ್ಮಿಸಿದ. ಈ ಜಲಮಾರ್ಗದಿಂದಾಗಿ ಬ್ಯಾಬಿಲಾನ್, ಪರ್ಶಿಯಾ, ಗ್ರೀಕ್ ನಾಗರಿಕತೆಗಳು ಭಾರತದೊಡನೆ ನಡೆಯುವ ವಾಣಿಜ್ಯವನ್ನೇ ಆಧರಿಸಿ ಬೆಳೆದವು. ಈ ಅಂಶವನ್ನು ಪಾಶ್ಚಿಮಾತ್ಯ ಇತಿಹಾಸಕಾರರು ನಿರ್ಲಕ್ಷಿಸುತ್ತಾರೆ. ಆ ಮಾತು ಬೇರೆ ಬಿಡಿ.

ಗ್ರೀಕ್ ಮತ್ತು ರೋಮ್ ನಾಗರಿಕತೆಗಳು ಅಳಿದಾಗ ವಾಣಿಜ್ಯದ ಕೊಂಡಿಯಾದದ್ದು ಬಾಗ್ದಾದ್ ಮತ್ತು ಜಿನೇವಾ ನಗರಗಳು.

ಕ್ರಮೇಣ ತುರ್ಕರು ಪ್ರಬಲರಾದಾಗ ಜಿನೇವಾದ ವ್ಯಾಪಾರ ಮಾರ್ಗವನ್ನೇ ಮುಚ್ಚಿದರು. ಇಟಲಿಯ ಜತೆ ಸಂಪರ್ಕ, ಅದರಿಂದಾಗಿ ಪಾಶ್ಚಿಮಾತ್ಯ ದೇಶಗಳಿಗೆ ರವಾನೆ ಆಗುತ್ತಿದ್ದ ಸಾಂಬಾರ ಪದಾರ್ಥಗಳ ಸರಬರಾಜೂ ನಿಂತಿತು. ಸಾಂಬಾರದ ಮಸಾಲೆಯಿಲ್ಲದ ಪಶ್ಚಿಮ ಜಗತ್ತಿನ ತುಂಬ ಆತಂಕ ಮೂಡಿತು.

ಆಗ ಅವರಿಗಿದ್ದುದು ಒಂದೇ ದಾರಿ. ಭಾರತಕ್ಕೆ ಬೇರೆ ದಾರಿಯನ್ನು ಕಂಡು ಹಿಡಿಯುವುದು. ಈ ಸಾಹಸಕ್ಕೆ ಮೊದಲಿಟ್ಟವರು ಸ್ಪೇನ್ ದೇಶದವರು. ಭೂಮಿ ಗುಂಡಾಗಿದೆ. ಪಶ್ಚಿಮದಿಂದ ಹೊರಟು ಪ್ರಪಂಚ ಸುತ್ತಿ ಹೊರಟರೆ ಭಾರತದೇಶ ಸಿಕ್ಕೇ ಸಿಗುತ್ತದೆ ಎಂದು ಅವರ ನಂಬಿಕೆ. ಅಲ್ಲಿನ ಜನ ಸಾಹಸಿ ಯುವಕ ಕ್ರಿಸ್ಟೋಫರ್ ಕೊಲಂಬಸ್‌ನ ಅಟ್ಲಾಂಟಿಕ್ ಯಾತ್ರೆಗೆ ಧನ ಸಹಾಯ ಮಾಡಿ ಬೆನ್ನು ತಟ್ಟಿದರು. ಇಂಥ ಯಾತ್ರೆಯಿಂದಲೇ ಇವತ್ತು ಭವಿಷ್ಯತ್ತಿನ ನಾಡು ಎಂದು ಕರೆಸಿಕೊಳ್ಳುತ್ತಿರುವ ಅಮೇರಿಕ ಶೋಧವಾಯಿತು. ಕೊಲಂಬಸ್ ತನಗೆ ಎದುರಾದ ಯಾವುದೇ ನಾಡನ್ನು 'ಇಂಡಿಯಾ' ಎಂದು ಭ್ರಮಿಸಿಬಿಡುತ್ತಿದ್ದ. ಕೊನೆಗೂ ಆತ ನಿಜವಾದ ಇಂಡಿಯಾ ಮುಟ್ಟಲಿಲ್ಲ.

ತಾನೇ ಕಂಡು ಹಿಡಿದ ಹೊಸ ಭೂಭಾಗದಲ್ಲಿ ಕೊಲಂಬಸ್ ಮರಣ ಹೊಂದಿದ. ಆಗ, ಭಾರತಕ್ಕೆ ದಾರಿ ಹುಡುಕಲು ಪೋರ್ತುಗಲ್‌ನ ಜನ ಮುಂದಾದರು. ವಾಸ್ಕೋಡಗಾಮ ಆಫ್ರಿಕಾ ಖಂಡವನ್ನು ಬಳಸಿ ಭಾರತ ಮುಟ್ಟಬಹುದು ಎಂದು ತರ್ಕಿಸಿದ.

ಭಾರತ ಮುಟ್ಟುವಲ್ಲಿ ಆತ ಸಫಲನಾದದ್ದೇ ಚರಿತ್ರೆಗೆ ಹೊಸ ತಿರುವು ಬಂತು. ಇಲ್ಲಿನ ವಾಣಿಜ್ಯ ಸಂಪತ್ತಿನಿಂದ ಪೋರ್ತುಗಲ್ ಸುಖಕಂಡಿತು. ಅಲ್ಲೊಂದು ಹೊಸ ಜೀವನ ಶೈಲಿಯೇ ನಿರ್ಮಾಣವಾಯಿತು. ನಂತರ ಬಂದವರು ಫ್ರೆಂಚರು ಡಚ್ಚರು, ಕೊನೆಗೆ ಇಂಗ್ಲೀಷರು. ಇಂಗ್ಲೀಷರು ವ್ಯಾಪಾರಕ್ಕೆಂದು ಬಂದರು. ಬಂದವರು ಇಲ್ಲಿನ ವಾಣಿಜ್ಯ ವ್ಯಾಪಾರ ಮಾತ್ರವಲ್ಲ, ಇಡೀ ದೇಶವನ್ನೇ ತಮ್ಮ ಕೈವಶ ಮಾಡಿಕೊಂಡರು.

ಓ!ದೇವರೆ! ಎಂಥ ಬದಲಾವಣೆ. ಅಂಗೈ ಅಗಲದ ಭೂಮಿಯಿಂದ ಬಂದ ಬೆರಳೆಣಿಕೆಯಷ್ಟು ಜನ ರಾತ್ರಿ ಬೆಳಗಾಗುವದರೊಳಗೆ ಜಗತ್ತಿನ ಸಾರ್ವಭೌಮರೆನಿಸಿದರು. ಇಂಗ್ಲೀಷರದು 'ಸೂರ್ಯ ಮುಳುಗದ ಸಾಮ್ರಾಜ್ಯ' ಆಯಿತು. ಅವರ ಚಿಂತನೆ ಜ್ಞಾನ ಎನಿಸಿಕೊಂಡಿತು. ಅವರ ಮಾತು ಜಗತ್ತಿನ ಭಾಷೆ ಆಯಿತು.

ಇದೆಲ್ಲ ಆದದ್ದು ನಮ್ಮ ದೇಶದ ಸಾಂಬಾರ ಪದಾರ್ಥಗಳಿಗಾಗಿ. ಇಂಗ್ಲಿಷರು ಇಂದಿಗೆ ಚರಿತ್ರೆಯನ್ನು ಬೇಕಂತಲೇ ಮರೆತಿದ್ದಾರಾದರೆ ಪರವಾಗಿಲ್ಲ. ಐತಿಹಾಸಿಕ ಸತ್ಯವನ್ನೇ ಮರೆತ ನಮ್ಮ ಜನಕ್ಕೆ ಏನನ್ನಬೇಕು? ಈ ಜನ ಒಂದಿಷ್ಟು ಇತಿಹಾಸದ ಮನನ ಮಾಡಿದರೆ ತಮ್ಮ ಔನ್ನತ್ಯವನ್ನು ಮರೆತು ಪಾಶ್ಚಿಮಾತ್ಯರನ್ನು ಕುರುಡಾಗಿ ಅನುಕರಿಸುವ ಚಾಳಿ ಸ್ವಲ್ಪವಾದರೂ ಕಡಿಮೆ ಆದೀತು.

ಇಂದಿಗೆ ಇಡೀ ವರ್ಷ ಕಷ್ಟಪಟ್ಟು ಭಾರತದ ಜನ ಉತ್ಪಾದಿಸುವಷ್ಟು ಸರಕನ್ನು ಅಮೇರಿಕ ಮತ್ತು ಜಪಾನಿನ ಯಂತ್ರಗಳು ಒಂದೇ ದಿನದಲ್ಲಿ ತಯಾರಿಸಬಹುದು. ಇದೇ ಸದಾ ಉಳಿಯುವುದಿಲ್ಲ. ಇತಿಹಾಸ ಚಕ್ರ ತಿರುಗುತ್ತದೆ. ನಾಗರಿಕತೆಗಳು ಏಳುತ್ತವೆ, ಬೀಳುತ್ತವೆ. ಹಿಂದಿನ ಯಾವುದೋ ಚಿಂತನೆಗಳು ನಮಗೆ ಹೊಸ ಅರ್ಥದಲ್ಲಿ ಕಾಣಿಸುತ್ತವೆ. ಪ್ರಗತಿಗೆ ಕಾರಣವಾಗುತ್ತವೆ. ●

ಪ್ರಪಂಚದ ಇತಿಹಾಸ ಅಂದರೆ ನಿತ್ಯದ ಆಹಾರ ಹುಡುಕೋ ಮನುಷ್ಯನ ಶೋಧನೆಗಳ ದಾಖಲೆ.
ವ್ಯಾನ್ ಲೂನ್

ಕರೆನ್ಸಿ ನೋಟಿಗೆ 125 ವರ್ಷ

ನಮ್ಮ ದೇಶದಲ್ಲಿ ಕಾಗದ ನಾಣ್ಯಗಳು ಅರ್ಥಾತ್ ನೋಟುಗಳು ಚಲಾವಣೆಯಲ್ಲಿ ಬಂದು ಈ ವರ್ಷ ಒಂದೂಕಾಲು ಶತಮಾನ ಪೂರ್ಣಗೊಳ್ಳುತ್ತದೆ. 125 ವರ್ಷಗಳ ಈ ಅವಧಿಯಲ್ಲಿ ಇವುಗಳ ಪ್ರಸಾರ ಗಾತ್ರದಲ್ಲಿ ಅಗಾಧವಾಗಿ ಬೆಳೆದಿದೆ. 1940ರಲ್ಲಿ, ಅಂದಿನ ಅವಿಭಾಜಿತ ಭಾರತದಲ್ಲಿ (ಇಂದಿನ ಪಾಕಿಸ್ತಾನ, ಬಂಗ್ಲಾದೇಶಗಳೂ ಸೇರಿದಂತೆ) ಒಟ್ಟು ಚಲಾವಣೆಯಲ್ಲಿದ್ದುದು ಆರು ಕೋಟಿ ರೂಪಾಯಿಗಳ ಮೌಲ್ಯದ ನೋಟುಗಳು. ಆದರೆ ಇಂದು ಚಲಾವಣೆಯಲ್ಲಿರುವ ನೋಟುಗಳ ಮೌಲ್ಯ 28,000 ಕೋಟಿ ರೂಪಾಯಿಗಳು!

ಚಿನ್ನ, ಬೆಳ್ಳಿ, ತಾಮ್ರ ಮುಂತಾದ ಲೋಹಗಳನ್ನು ರಾಜಮುದ್ರೆಯೊಂದಿಗೆ ಎಕರಹೊಯ್ದು ನಾಣ್ಯಗಳೆಂದು ಬಳಸುವ ಪದ್ಧತಿ ಎರಡು ಸಾವಿರ ವರ್ಷಗಳಿಗಿಂತಲೂ ಹಳೆಯದು. ಆದರೆ, ನಾಣ್ಯಗಳ ಬಹುದೊಡ್ಡ ಮೊತ್ತವನ್ನು ಹೊತ್ತು ಸಾಗಿಸುವುದು ಪ್ರಯಾಸಕರವೆಂದರಿತ ದಿಲ್ಲಿಯ ಸುಲ್ತಾನ ಮಹಮದ್ ಬಿನ್ ತಘಲಕ್ ಜಗತ್ತಿನಲ್ಲೇ ಮೊದಲಬಾರಿಕೆ ಲೋಹೇತರ ವಸ್ತುವನ್ನು ಬಳಸಿ, ಚರ್ಮದ ಮೇಲೆ ರಾಜಮುದ್ರೆ ಒತ್ತಿ ಮೊದಲ ಕರೆನ್ಸಿ ನೋಟನ್ನು ಜಾರಿಗೆ ತಂದ. ಆದರೆ ಆಗ ಜಗತ್ತು ಅವನನ್ನು ಹುಚ್ಚನೆಂದು ಕರೆಯಿತು!

ನೋಟುಗಳ ಒಂದು ವೈಶಿಷ್ಟ್ಯವೆಂದರೆ ಅದರ ಮೇಲೆ ರಿಜರ್ವ್ ಬ್ಯಾಂಕಿನ ಗವರ್ನರರು ತಮ್ಮ ರುಜುವಿನೊಂದಿಗೆ ಗ್ರಾಹಕರಿಗೆ ಇಂತಿಷ್ಟು ರೂಪಾಯಿಗಳನ್ನು ಕೊಡಲು ವಚನಬದ್ಧರಾಗಿರುತ್ತಾರೆ. ಉದಾಹರಣಾರ್ಥ I promise to pay the bearer the sum of fifty rupees ಎಂದು ಬರೆದಿದ್ದರೆ ಆ ನೋಟಿಗೆ ಪ್ರತಿಯಾಗಿ 50 ರೂಪಾಯಿಗಳನ್ನು ಗ್ರಾಹಕರಿಗೆ ಕೊಡುವ ವಚನ ಅದು. ಅರ್ಥಾತ್ ಈ ನೋಟುಗಳು ನಾಣ್ಯಗಳಲ್ಲ. ಒಂದು ರೂಪಾಯಿ ನಮ್ಮ ದೇಶದ ಅಧಿಕೃತ ನಾಣ್ಯ. ಅದು ಲೋಹ ಮಿಶ್ರಣದಲ್ಲಿ ಎರಕ ಹೊಯ್ದುದ್ದೂ ಇರಬಹುದು, ಕಾಗದದಲ್ಲಿ ಮುದ್ರಿತವಾದದ್ದೂ ಇರಬಹುದು. ಆದರೆ 1917ರಲ್ಲಿ promise to pay ಇದ್ದ ಒಂದು ರೂಪಾಯಿ ನೋಟುಗಳು ಸಹ ಅಚ್ಚಾಗಿ ಅನೇಕ ವರ್ಷ ಚಲಾವಣೆಯಲ್ಲಿದ್ದವು.

ಎರಡೂವರೆ ರೂಪಾಯಿ ನೋಟುಗಳೂ ಇದ್ದವು ಎಂದರೆ ನಂಬುತ್ತೀರಾ? ಪಂಚಮ ಜಾರ್ಜ್ ಅರಸರ ಮುದ್ರೆಯನ್ನು ಹೊತ್ತ ಎರಡು ರೂಪಾಯಿ ಎಂಟಾಣೆ ಬೆಲೆಯ ನೋಟುಗಳೂ ಕೆಲ ಕಾಲ ಚಾಲ್ತಿಯಲ್ಲಿದ್ದವು.

1934ರಲ್ಲಿ ಚೆಕ್‌ಪುಸ್ತಕದ ತರಹ ಒಂದು ರೂಪಾಯಿಯ 25 ನೋಟುಗಳುಳ್ಳ ಪುಸ್ತಕಗಳನ್ನು ಬಳಕೆಗೆ ತರಲಾಗಿತ್ತು.

ಇಪ್ಪತ್ತರ ಮತ್ತು ಐವತ್ತರ ನೋಟುಗಳು ಕಳೆದ ಹತ್ತು ವರ್ಷಗಳಲ್ಲಿ ದೊರೆತ ಕೊಡುಗೆಯೆಂದು ಪ್ರಾಯಶಃ ಎಲ್ಲರೂ ನಂಬುತ್ತಾರೆ. ಆದರೆ ಇತಿಹಾಸ ಹೇಳುವುದು ಬೇರೆಯೇ ಇದೆ. ಮೊದಲ ಇಪ್ಪತ್ತು ರೂಪಾಯಿ ನೋಟು ಹೊರಬಂದದ್ದು 1902ರಲ್ಲಿ. ಐವತ್ತರ ಮೊದಲ ನೋಟು ಚಲಾವಣೆಗೆ ಬಂದದ್ದು 1913ರಲ್ಲಿ!

ಈ 125 ವರ್ಷಗಳಲ್ಲಿ ಕರೆನ್ಸಿ ನೋಟುಗಳಿಗೆ ಗಂಭೀರ ಸ್ವರೂಪದ ಆಹ್ವಾನ ಬರುತ್ತಿರುವುದು ತೀರ ಇತ್ತೀಚೆಗೆ ಮಾತ್ರ. ಬ್ಯಾಂಕುಗಳು ತಮ್ಮ ಕ್ರೆಡಿಟ್ ಕಾರ್ಡುಗಳನ್ನು, ಚೆಕ್ ಕಾರ್ಡುಗಳನ್ನು ಚಲಾವಣೆಯಲ್ಲಿ ತರಲು ಯತ್ನಿಸುತ್ತಿದ್ದು, ಈ ಯತ್ನದ ಪ್ರಭಾವ ಕರೆನ್ಸಿ ನೋಟುಗಳ ಮೇಲೆ ಎಂತಾಗುತ್ತದೆಂದು ಕಾದು ನೋಡಬೇಕಷ್ಟೆ. ಆದರೆ ಬ್ಯಾಂಕುಗಳ ವ್ಯವಹಾರ ತಟ್ಟುತ್ತಿರುವುದು ನಮ್ಮ ಅಪಾರ ಜನಸಂಖ್ಯೆಯಲ್ಲಿ ಅತ್ಯಲ್ಪ ಪ್ರಮಾಣವನ್ನು ಮಾತ್ರವೆಂಬುದನ್ನು ನೆನೆದರೆ ಆ ಕುರಿತು ಭ್ರಮೆ ಅನಗತ್ಯ ಎನಿಸುತ್ತದೆ.

● ಎಸ್.ಕೆ. ಬೋಸ್ ●

(ಕೃಪೆ: ಸ್ಟೇಟ್‌ಬ್ಯಾಂಕಿನ 'ಕಲೀಗ್' ಪತ್ರಿಕೆ)

ಪದಾರ್ಥ ಚಿಂತಾಮಣಿ

• ಪಾವೆಂ •

—: 113 :—

ಗಟ್ಟದಿಂದ ಘಾಟೀವರೆಗೆ

"ಹುಟ್ಟು ಗುಣ ಗಟ್ಟ/ಘಟ್ಟ ಹತ್ತಿದರೂ ಹೋಗ" ಎಂಬ ಗಾದೆಯಲ್ಲಿ "ಗಟ್ಟ"/"ಘಟ್ಟ" ಶಬ್ದ ಪರ್ವತಗಳ ಸಾಲು ಎಂಬರ್ಥ ಕೊಡುತ್ತದೆ. ಕನ್ನಡ ಕರಾವಳಿಯ ಜನ ಜೀವನೋಪಾಯಕ್ಕಾಗಿ (ಪಶ್ಚಿಮ) ಘಟ್ಟಗಳನ್ನು ದಾಟಿ ಹೋಗಿ ಮಲೆನಾಡಲ್ಲೋ ಬಯಲು ಸೀಮೆಯಲ್ಲೋ ದುಡಿದು ಕಾಲಕಾಲಕ್ಕೆ ಊರಿಗೆ ಬಂದು ಹೋಗುವ ಬದುಕಾಲದ ರೂಢಿಯಿಂದ ಹುಟ್ಟಿದ ಗಾದೆಯಿದು. "ಘಟ್ಟ" (ಗಟ್ಟ) ಶಬ್ದ ಈ ಅರ್ಥದಲ್ಲಿ ಇಂಗ್ಲಿಷಿಗೂ ದಾಟಿ Western Ghats ಮತ್ತು Eastern Ghats ಎಂಬ ಭೌಗೋಲಿಕ ಪದಗಳು ಹುಟ್ಟಿವೆ.

ಸಂಸ್ಕೃತದ "ಘಟ್ಟ" (ತಾಗು, ತಿಕ್ಕಾಡು) ಧಾತುವಿನಿಂದ ಈ ಶಬ್ದಕ್ಕೆ ನಿಷ್ಪತ್ತಿ ಹೇಳಿದರೂ ಅದರ ಮೂಲ ಅರ್ಥ ದಾಟುವ ಅಥವಾ ಇಳಿಯುವ ಸ್ಥಳ ಎಂದು (ಕನ್ನಡ, ತುಳು "ಕಡವು" ಕಡಪು ಶಬ್ದ ಇದೇ ಅರ್ಥದಲ್ಲಿ ಬಳಕೆಯಲ್ಲಿದೆ). ಹೆಚ್ಚಾಗಿ ನದಿಗಳನ್ನು ದಾಟುವ ಅಥವಾ ನದಿಗೆ ಇಳಿಯುವ ಸ್ಥಳಕ್ಕೆ ಸಂಸ್ಕೃತದಲ್ಲಿ ಈ ಪದ ಪ್ರಯೋಗವಾಗುತ್ತದೆ. ಹಿಂದಿ, ಬಂಗಾಲಿ, ಇತ್ಯಾದಿ ಉತ್ತರದ ಭಾಷೆಗಳಲ್ಲಿ ಇದೇ "ಘಾಟ್" ಎಂಬ ರೂಪದಲ್ಲಿ ನದಿ, ಕೆರೆ ಮೊದಲಾದವನ್ನು ದಾಟುವ ಅಥವಾ ಅಲ್ಲಿ ಇಳಿಯುವ ಸ್ಥಳ, ಸೋಪಾನ ಎಂಬರ್ಥ ಕೊಡುತ್ತದೆ. ಹೀಗೆ 'ಘಟ್ಟ'ವೆಂದರೆ ಮೂಲತಃ "ಇಳಿಯುವ ಸ್ಥಳ" ಎಂದೇ ಅರ್ಥವಿರಬೇಕು. ಪರ್ವತಾವಳಿಗಳಲ್ಲಿ ಅಲ್ಲಲ್ಲಿ ಆಚೆ ಅಥವಾ ಈಚೆಗೆ ದಾಟಿ ಹೋಗುವುದಕ್ಕೆ ಅನುಕೂಲವಾದ ಕಣಿವೆಗಳೇ ಘಟ್ಟಗಳು. ಹಿಂದಿಯಲ್ಲಿ ಅದೆ ಘಾಟ್. ನಮ್ಮ ಪಾಲಿನ ಪಶ್ಚಿಮ ಘಟ್ಟಗಳನ್ನು ದಾಟುವ ನೈಸರ್ಗಿಕ ಎಡೆಗಳಿಗೆ ಚಾರ್ಮುಡಿ ಘಾಟ್ ದೇವಿ ಮನೆ ಘಾಟ್ ಇತ್ಯಾದಿಯಾಗಿಯೇ ಹೆಸರುಗಳಲ್ಲವೆ? ಹೀಗೆ ಘಟ್ಟ ಎಂಬುದು ಮೊದಲು ದಾಟು ತಾಣವಾಗಿದ್ದು ಕನ್ನಡದಲ್ಲಿ ಘಟ್ಟಗಳ ಮೂಲಕ ದಾಟಿ ಹೋಗಲು ಸಾಧ್ಯವುಳ್ಳ ಪರ್ವತ ಶ್ರೇಣಿಯೆಂಬ ಅರ್ಥಕ್ಕೆ ವಿಸ್ತಾರಗೊಂಡ ಪದ. ಮರಾಠಿಯಲ್ಲಿ ಕೂಡ ಘಾಟ್ ಶಬ್ದ ಕನ್ನಡದಲ್ಲಿನಂತೆ ಪರ್ವತ ಶ್ರೇಣಿಯೆಬಂರ್ಥಕ್ಕೆ ವಿಸ್ತರಿಸಿದೆ. ಅದೇ ಶಬ್ದ ಮರಾಠಿಯಲ್ಲಿ ಪರ್ವತಗಳ ನಡುವಿನ ದಾಟು ತಾಣಗಳಿಗೂ ಹಾಗೆಯೇ ನದೀ ಕೆರೆಗಳಿಗಿಳಿಯಲು ನಿರ್ಮಿಸಿದ ಪಾವಟಿಕೆಗಳಿಗೂ ಅನ್ವಯಿಸುತ್ತದೆ. ಹಿಂದಿಯಲ್ಲಿ ನದಿಗಳಿಗೆ ಸ್ನಾನಾದಿಗಳಿಗಾಗಿ ಇಳಿಯುವ ಸೋಪಾನ ಅಥವಾ ಪಾವಟಿಕೆಗಳ ಶ್ರೇಣಿಗೆ ಘಾಟ್ ಪದ ಇರುವಂತೆ ತುಳುವಿನಲ್ಲಿ "ಕಟ್ಟಣ" ಎಂಬ ಪದವುಂಟು. ಇದು "ಕಟ್ಟು" ಎಂಬ ದ್ರಾವಿಡ ಧಾತುವಿನಿಂದ ಹುಟ್ಟಿದೆಯೆಂದು ಅನಿಸಿದರೂ ನಾವೀಗ ಚರ್ಚಿಸಿದ ಘಾಟ್ ಶಬ್ದದ ಬೆಳಕಿನಲ್ಲಿ ಘಟ್ಟ ಘಾಟಿ ಶಬ್ದದ್ದೇ ಒಂದು ದ್ರಾವಿಡೀಕೃತ ರೂಪವಿರಬಹುದೇ ಎಂಬ ಅನುಮಾನವೂ ಬರುತ್ತದೆ.

ಸೋಪಾನಗಳಿಗೆ ಇರುವ ಘಟ್ಟ (ಸ್ನಾನಘಟ್ಟ) ಎಂಬ ಶಬ್ದದಿಂದ ಇನ್ನೊಂದು ಅರ್ಥಕ್ಕೂ ಆಸ್ಪದವಾಗಿದೆ. "ಈ ಕೆಲಸ ಒಂದು ಘಟ್ಟಕ್ಕೆ ಬಂದು ನಿಂತಿದೆ" ಎನ್ನುವಾಗ ಸೋಪಾನದ ಶ್ರೇಣಿಯನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ. ಹೀಗೆ ಘಟ್ಟ=ಹಂತವೂ ಹೌದು.

ಘಾಟಿನ ಮಾತು ಬಂದಾಗ ಈ ಪದದ ಇನ್ನೊಂದು ಅರ್ಥ ತಲೆಗೆ ಹೊಳೆಯುತ್ತದೆ.

ಮಸಾಲೆ ಪದಾರ್ಥಗಳ ವಿಶೇಷವಾಗಿ ಮೆಣಸಿನಕಾಯಿ, ಇಂಗು, ಇತ್ಯಾದಿಗಳ ಬಲು ಕಡುವಾದ ವಾಸನೆಗೆ "ಘಾಟು" ಎನ್ನುತ್ತೇವೆ. ಇದಕ್ಕೆ ತಮಿಳು, ತೆಲುಗು, ತುಳು, ಕೊಲಾಮಿ ಭಾಷೆಗಳಲ್ಲಿ ಜ್ಞಾತಿ ಪದಗಳು ಸಿಗುತ್ತವೆ. ಇದು ದ್ರಾವಿಡ ಶಬ್ದವೇ ಎಂದು ದ್ರಾವಿಡ ತುಲನಾತ್ಮಕ ನಿಘಂಟು ಹೇಳಿದರೂ "ಕಾರ" (ಖಾರ) ಶಬ್ದದಿಂದ ಅದರ ಅರ್ಥ ಪ್ರಭಾವಿತವಾಗಿರಬಹುದೆಂದು ಒಪ್ಪುತ್ತದೆ. "ಖಾರ" ಶಬ್ದ ಸಂಸ್ಕೃತ "ಕ್ಷಾರ"ದಿಂದ ತದ್ಭವವಾದದ್ದು. ಹೀಗೆ ಒಂದು ಭಾಷೆಯ ಶಬ್ದಗಳು ಇನ್ನೊಂದು ಭಾಷೆಯ ಸಂಪರ್ಕದಿಂದ ಹೊಸ ಅರ್ಥಗಳಿಗೆ ತಿರುಗುವುದು ಅಪರೂಪವಲ್ಲ.

"ಘಾಟಿ"ಗೆ ಮೇಲಿನ ಎಲ್ಲ ಅರ್ಥಗಳಿಗಿಂತ ಭಿನ್ನವಾದ ಇನ್ನೊಂದು ಅರ್ಥವಿದೆ. ಉದಾಹರಣೆಗೆ "ಘಾಟಿ ಮುದುಕ." ಇಲ್ಲಿ ಘಾಟಿ ಶಬ್ದಕ್ಕೆ ಸಂಸ್ಕೃತದಲ್ಲಿ ಧೂರ್ತ ಎಂದು ಹೇಳುವ ಅರ್ಥವಿದೆ. ಸುಲಭವಾಗಿ ಮೋಸ ಹೋಗದ, ಇತರರನ್ನು ಮೋಸಗೊಳಿಸಬಹುದಾದ, ಚುರುಕು ಬುದ್ಧಿಯುಳ್ಳವರಿಗೆ ಘಾಟಿ ಪದ ಅನ್ವಯಿಸುತ್ತದೆ. ಇದರ ಚರಿತ್ರೆ ಹೆಚ್ಚು ಹಳೆಯದಲ್ಲ. ಲಿಖಿತ ಪ್ರಯೋಗ ಈ ಶತಮಾನದಲ್ಲೇ ಮೊದಲು ಕಾಣಿಸಿಕೊಂಡಂತೆ ಪರಿಷತ್ತಿನ ಬೃಹತ್ಕೋಶದಲ್ಲಿ ಕೊಟ್ಟ ಉದಾಹರಣೆಗಳಿಂದ ವ್ಯಕ್ತವಾಗುತ್ತದೆ. ಆದರೆ ಈ ಶಬ್ದ ಎಲ್ಲಿಂದ ಬಂತೆಂಬ ಬಗ್ಗೆ ಪರಿಷತ್ ನಿಘಂಟು ಪ್ರಶ್ನಾರ್ಥಕ ಚಿಹ್ನೆಯನ್ನು ಕೊಟ್ಟಿದೆ. ಈ ನಿಘಂಟಿನಲ್ಲಿ ಕೊಟ್ಟ ಪ್ರಯೋಗಗಳಿಂದ ಅದು ದಕ್ಷಿಣ ಕನ್ನಡದಲ್ಲಿ ಮೊದಲು ತಲೆದೋರಿದಂತೆ ಕಾಣುತ್ತದೆ. ಒಂದು ದಿಟ್ಟ ಊಹೆ ಮಾಡುವುದಾದರೆ ಅದು ಮುಂಬಯಿ ಕಡೆಯಿಂದ ನುಸುಳಿತೆಂದೂ ಅದರ ಮೂಲ ಮರಾಠಿ, ಹಿಂದಿ, ಬಂಗಾಲಿ ಮೊದಲಾದ ಔತ್ತರೇಯ ಭಾಷೆಗಳಲ್ಲಿರುವ "ಖಾಟೀ" ಶಬ್ದವೆಂದೂ ಹೇಳಬೇಕು. ಖಾಟಿ ಎಂದರೆ ತೀವ್ರವಾಗಿ ಹುಳಿ ರುಚಿಯ ಪದಾರ್ಥ. ಹುಳಿ ಬುದ್ಧಿಯ ಮನುಷ್ಯ ಖಾಟೀ. ಅದನ್ನು ತಂದವರು ದಕ್ಷಿಣ ಕನ್ನಡದಿಂದ ಮುಂಬಯಿಗೆ ಹೋದ ಅಷ್ಟು ವಿದ್ಯಾವಂತರಲ್ಲದ ಜನರಾದ್ದರಿಂದ ಖಾಟೀ ಹೋಗಿ ಘಾಟಿ ಆಗಿದ್ದರೆ ಸೋಜಿಗವಿಲ್ಲ.

★ ★ ★

"ಲಗಾಡಿ" ಮತ್ತು "ಲಬಾಡಿ" ಎಂಬ ಶಬ್ದಗಳು ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿವೆ. ಲಗಾಡಿಯೆಂದರೆ ಸತ್ಯಾನಾಶ. ಮನೆಮಾರು ಲಗಾಡಿ ತೆಗೆದ ಎನ್ನುತ್ತಾರೆ. ಇದು "ಲಿಗಾಡಿ" ಎಂಬ ರೂಪವನ್ನು ಧರಿಸುತ್ತದೆ. ಮರಾಠಿಯಲ್ಲಿ "ಲಿಗಾಡ್" ಎಂದರೆ ತಲೆಕೆಡಿಸುವ ಬಲು ತೊಡಕಾದ ತೊಂದರೆ, ಒಳಸಂಚು. "ಲಿಗಾಡಿ" ಎಂದರೆ ಇಂಥಾ ತೊಡಕುಗಳಿಂದ ಜಟಿಲವಾದ, ಭೇದೋಪಾಯಗಳಿಂದ ಯುಕ್ತವಾದ ಎಂಬರ್ಥ. ಈ ಅರ್ಥ ತುಸು ವ್ಯತ್ಯಾಸವಾಗಿ ನಾಶ ಎಂಬುದಾಗಿ ಕನ್ನಡ ತುಳುವಿನಲ್ಲಿ ಬಳಕೆಗೆ ಬಂದಿರಬೇಕು.

"ಲಬಾಡಿ" ಎಂದರೆ ಅಪಹಾರ. ಇದೂ ಮರಾಠಿಯಿಂದಲೇ ಬಂದಿರಬೇಕು. ಮರಾಠಿ, ಹಿಂದಿ ಭಾಷೆಗಳಲ್ಲಿ ಲಬಾಡ್, ಲಬಾರ್ ಎಂದರೆ ಸುಳ್ಳುಗಾರ, ಬಾಯಿಬಡಕ, ಚಾಡಿಕೋರ, ಗಳಹ ಬಡಾಯಿಖೋರ. ಬಹುಶಃ ಸಂಸ್ಕೃತದ "ಲಪ" (=ಳಗಳಹು) ಧಾತುವಿನಿಂದ ಹುಟ್ಟಿದ ಲಬಾಡ್ ಬಡಾಯಿಖೋರತನದ ಮುಂದಿನ ಹೆಜ್ಜೆಯಾದ ಮೋಸ, ಅಪಹಾರ ಎಂಬರ್ಥಕ್ಕೆ ತಿರುಗಿರಬೇಕು. ಘಟ್ಟದ ಮೇಲಿನ "ಲಪಟಾಯಿಸು" ಎಂಬ ಪದದ ಪ್ರಭಾವ ಮರಾಠಿಯಿಂದ ತೆಗೆದುಕೊಂಡ ಲಬಾಡ್ ಮೇಲೆ ಆಗಿರಬೇಕು. "ಲಪಟಾನಾ" ಎಂದರೆ ಹಿಂದಿಯಲ್ಲಿ ಮುಚ್ಚುವುದು, ಮುಸುಕು ಹಾಕುವುದು. ಕನ್ನಡಕ್ಕಾಗುವಾಗ ಮುಚ್ಚಿ ಅಪಹರಿಸುವುದು ಎಂದು ಅರ್ಥ ಕಾಲು ಚಾಚಿತು.

★ ★ ★

"ತೇಜಿ" ಎಂಬ ಶಬ್ದ ಕನ್ನಡದಲ್ಲಿ ವಚನಕಾರರಿಂದ ಹಿಡಿದು ಹರಿದಾಸರವರೆಗೆ ಎಲ್ಲರಿಂದ ಧಾರಾಳವಾಗಿ ಬಳಸಲ್ಪಟ್ಟಿದೆ. ಅರ್ಥ ಕುದುರೆಯೆಂದು "ತೇಜಿಯನೇರಿ ಬಂದ" ಎಂದು ವಾದಿರಾಜ ಸ್ವಾಮಿಗಳು ಹಾಡಿದ್ದಾರೆ. ತೋರಿಕೆಗೆ ಇದು ಸಂಸ್ಕೃತ (ತೇಜಸ್)ದಂತೆ ಕಂಡರೂ ನಿಜವಾಗಿ ಅದು ಬಂದದ್ದು ಪಾರಸಿಕ ಭಾಷೆಯಿಂದ. ಆ ಭಾಷೆಯಲ್ಲಿ "ತಾಜೀ" ಎಂದರೆ ಅರಬೀ ಕುದರೆ ಅಥವಾ ಅರಬೀನಾಯಿ. ನಿಜಕ್ಕೂ ಆ ಶಬ್ದ ಕುದುರೆಯನ್ನು ಕುರಿತದ್ದಲ್ಲ. ದೇಶವನ್ನು (ಅರಬಸ್ತಾನ) ಕುರಿತದ್ದು. ಪಾರಸಿಕ ಭಾಷೆಯಲ್ಲಿ ಅರಬ್ಬಿ ಭಾಷೆಗೂ ತಾಜಿಯೆಂಬ ಅಭಿಧಾನವಿದೆ. ತಾಜಿಯೆಂಬುದು ತುಸು ಪಲ್ಲಟ ಹೊಂದಿ ಮರಾಠಿಯಲ್ಲಿ ಮತ್ತು ಕನ್ನಡದಲ್ಲಿ ತೇಜಿ ಎಂದಾಗಿದೆ ಅಷ್ಟೆ. ಹಿಂದೀ ಬಂಗಾಲಿಗಳಲ್ಲಿ ತಾಜಿ ಎಂದೇ ಇದೆ. ಅಲ್ಲಿಲ್ಲ ಅರಬಿ ಕುದುರೆಯಷ್ಟೆ ತಾಜೀ ಪದಾಂಕಿತವಾಗಿದೆ. ಜ್ಯೋತಿಷ್ಯದಲ್ಲಿ ಆಸಕ್ತಿಯುಳ್ಳವರಿಗೆ "ತಾಜಿಕ" ಜ್ಯೋತಿಷ್ಯಶಾಸ್ತ್ರದ ಸುದ್ದಿಗೊತ್ತು. ತಾಜಿಕ ಎಂಬುದು ಸಂಸ್ಕೃತದಲ್ಲಿ ಪಾರಸಿಕ ಅಥವಾ ಅರಬರನ್ನು ನಿರ್ದೇಶಿಸುತ್ತದೆ. ಕಾಶ್ಮೀರದಿಂದ ಬರುವ ಕೇಶರಕ್ಕೆ ಕಾಶ್ಮೀರವೆಂದೇ ಸಂಸ್ಕೃತದಲ್ಲಿ ಹೆಸರಿರುವ ಹಾಗೆ. ●

ಸ್ವಧರ್ಮೇ ನಿಧನಂ ಶ್ರೇಯಃ



ಹವಾಲ್ದಾರ್ ಕ್ಲರ್ಕ್ ಕುಂಜಾಂಬು ನಾಯರ್
ನಿರೂಪಣೆ: ರೇಣುಕ

ಮರಣಾನಂತರ ಮಹಾವೀರ ಚಕ್ರ ಪಡೆದ ಲೆಫ್ಟಿನೆಂಟ್ ಕರ್ನಲ್ ಹರ್‌ಬನ್ಸ್ ಲಾಲ್ ಮೆಹತಾ ಶೌರ್ಯಕ್ಕೆ ಇನ್ನೊಂದು ಹೆಸರು. ನಾಲ್ಕನೆಯ ಮದ್ರಾಸ್ ಬಟಾಲಿಯನ್ನಿನ ಸೈನಿಕರು ಇಂದಿಗೂ ಆ ಹೆಸರು ಕೇಳಿದರೆ ರೋಮಾಂಚನಗೊಳ್ಳುತ್ತಾರೆ. 1965ರ ಭಾರತ-ಪಾಕ್ ಸಮರದಲ್ಲಿ ಹೋರಾಡಿ ಹುತಾತ್ಮರಾಗಿ ಇಪ್ಪತ್ತು-ಮೂರು ವರ್ಷಗಳಾಗುತ್ತಿದ್ದರೂ ಅವರ ನೆನಪು ಸೈನಿಕರಿಗೆ ಸ್ಫೂರ್ತಿಯ ಸೆಲೆಯಾಗಿದೆ. ಅವರ ಸ್ಮೃತಿಗಾಗಿ ಈ ಲೇಖನ.

1965ನೆಯ ಇಸವಿ ಸೆಪ್ಟೆಂಬರ್ ತಿಂಗಳ ಏಳನೆಯ ತಾರೀಖು. ಜಮ್ಮುವಿನಲ್ಲಿದ್ದ ಇಪ್ಪತ್ತಾರನೆಯ ಡಿವಿಜನ್ನಿನ ಮುಖ್ಯ ಕಚೇರಿಯ ಸಭಾ ಭವನದಲ್ಲಿ ಮೇಜರ್ ಜನರಲ್ ಈಶ್ವರ ಸಿಂಗರು ಬ್ರಿಗೇಡಿನ ಮತ್ತು ಬಟಾಲಿಯನ್ ಕಮಾಂಡುರುಗಳ ತುರ್ತು ಸಭೆಯನ್ನು ಕರೆದಿದ್ದರು. ನಾಲ್ಕನೆಯ ಮದ್ರಾಸ್ ಬಟಾಲಿಯನ್ನಿನ ಕಮಾಂಡಿಂಗ್ ಆಫೀಸರರಾಗಿದ್ದ ಲೆಫ್ಟಿನೆಂಟ್ ಕರ್ನಲ್ ಹರಬನ್ಸಲಾಲ್ ಮೆಹತಾರವರು ಸಭೆಯಲ್ಲಿ ಉಪಸ್ಥಿತರಿದ್ದರು. ಜನರಲ್ ಸಾಹೇಬರು ಇನ್ನೂ ಬಂದಿರಲಿಲ್ಲ. ದಿವಂಗತ ಬ್ರಿಗೇಡಿಯರ್ ಉಸ್ಮಾನರ (1947ರಲ್ಲಿ ಪಾಕಿಸ್ತಾನಿ ಆಕ್ರಮಣಕಾರರ ವಿರುದ್ಧ ಕಾಶ್ಮೀರದಲ್ಲಿ ನಡೆದ ಮಿಲಿಟರಿ ಕಾರ್ಯಾಚರಣೆಯಲ್ಲಿ ರಜೋರಿಯ ಬಳಿ ಹೋರಾಡಿ ಹುತಾತ್ಮರಾದರು) ಭಾವಚಿತ್ರ ಗೋಡೆಯ ಮೇಲೆ ವಿರಾಜಿಸುತ್ತಿತ್ತು. ಅದರ ಕೆಳಗೆ ದೇವನಾಗರಿ ಲಿಪಿಯಲ್ಲಿ ರಜತಾಕ್ಷರಗಳಲ್ಲಿ ಬರೆದ ಸ್ವಧರ್ಮೇ ನಿಧನಂ ಶ್ರೇಯಃ ಎಂಬ ಫಲಕ ಶೋಭಿಸುತ್ತಿತ್ತು. ಅದರ ಇಂಗ್ಲೀಷ್ ಭಾಷಾಂತರ ಹೀಗಿತ್ತು "It is glory to die doing one's duty."

ಬ್ರಿಗೇಡಿಯರ್ ಉಸ್ಮಾನರು 1947ರಲ್ಲಿ ರಜೋರಿ ವಿಭಾಗದ ಸೈನಿಕ ಕಾರ್ಯಾಚರಣೆಯನ್ನು ವಹಿಸಿಕೊಂಡಾಗ ಅವರು ಜಾತಿಯಲ್ಲಿ ಮುಸಲ್ಮಾನರಾಗಿದ್ದು ಹಲವು ಹಿಂದೂ ಅಧಿಕಾರಿಗಳು ಅವರ ನಿಷ್ಠೆಯನ್ನು ಶಂಕಿಸಿದ್ದರು. ಆದರೆ ಅವರು ಯಾರೂ ನಿರೀಕ್ಷಿಸದ ರೀತಿಯಲ್ಲಿ ಪಾಕಿಗಳೊಡನೆ ಹೋರಾಡಿ ಕಾಶ್ಮೀರದ ರಣಭೂಮಿಯಲ್ಲಿ ಪ್ರಾಣಾರ್ಪಣೆ ಮಾಡಿ ಕರ್ತವ್ಯ ನಿಷ್ಠೆಗೊಂದು ಮಾದರಿಯಾದರು.

ಮೇಜರ್ ಜನರಲ್ ಈಶ್ವರಸಿಂಗರು ಸಭಾಂಗಣಕ್ಕೆ ಬಂದಾಗ ಕಮಾಂಡರುಗಳೆಲ್ಲಾ ಎದ್ದು ನಿಂತು ಗೌರವ ಸೂಚಿಸಿದರು. ಎಲ್ಲರ ಕೈಯಲ್ಲಿಯೂ ಜಮ್ಮು ಕಾಶ್ಮೀರದ ನಕ್ಷೆಯಿತ್ತು. ಪಾಕಿಸ್ತಾನಿ ಆಕ್ರಮಣಕಾರರು ಜಮ್ಮು ಬಳಿಯ ಚಾಂಬ್ ಪ್ರದೇಶವನ್ನು ಅನಿರೀಕ್ಷಿತವಾಗಿ ಆಕ್ರಮಿಸಿಕೊಂಡಾಗ ನಮ್ಮ ಪಡೆಗಳು ಹಟಾರಿ, ಖೇಮ್‌ಕರನ ಮತ್ತು ರಾಜಾಸ್ಥಾನದ ಜಯಸಲ್ಮೀರ್ ಪ್ರದೇಶಗಳಲ್ಲಿ ಗಡಿಯನ್ನು ದಾಟಿ ಪಾಕಿಸ್ತಾನಿ ಪ್ರದೇಶದಲ್ಲಿ ಮುಂದುವರೆದಿದ್ದವು.

ಇದರಿಂದಾಗಿ ಪಾಕ್ ಆಕ್ರಮಣಕಾರರಿಗೆ ಚಾಂಬ್ ಪ್ರದೇಶದಲ್ಲಿ ಹೆಚ್ಚು ಮುಂದುವರಿಯಲು ಸಾಧ್ಯವಾಗಲಿಲ್ಲ. ಚಾಂಬ್ ಪ್ರದೇಶದಲ್ಲಿ ಕೇಂದ್ರೀಕರಿಸಿದ್ದ ತಮ್ಮ ಸೇನಾ ಬಲವನ್ನು ಭಾರತದ ಪಡೆಗಳು ಮುಂದುವರಿಯುತ್ತಿದ್ದ ಪಾಕ್ ಪ್ರದೇಶಗಳೆಡೆಗೆ ರವಾನಿಸಬೇಕಾಯಿತು.

ಮೇಜರ್ ಜನರಲ್ ಈಶ್ವರಸಿಂಗರು ಅಂದಿನ ಕಾಶ್ಮೀರದ ಗಡಿಯಲ್ಲಿನ ಪರಿಸ್ಥಿತಿಯನ್ನು ಬಟಾಲಿಯನ್ ಕಮಾಂಡರುಗಳಿಗೆ ವಿವರಿಸಿದರು. ಪಾಕಿಸ್ತಾನಿಗಳು ತಾವು ಕಳೆದುಕೊಂಡ ಪ್ರದೇಶಗಳ ವಶಪಡಿಸಿಕೊಳ್ಳಲು ಹೋರಾಟ ನಡೆಸುವುದು ಖಚಿತವೆಂದು, ಆದ್ದರಿಂದ ನಮ್ಮ ವಶದಲ್ಲಿದ್ದ ಪ್ರದೇಶಗಳ ರಕ್ಷಣಾ ವ್ಯವಸ್ಥೆಗೆ ಹೆಚ್ಚು ಗಮನ ಕೊಡಬೇಕೆಂದು ಒತ್ತಿ ಹೇಳಿದರು. ಮುಂಚೂಣಿ ಪ್ರದೇಶದಲ್ಲಿನ ಹಳ್ಳಿಗಳ ಜನರನ್ನು ಸುರಕ್ಷಿತ ಪ್ರದೇಶಕ್ಕೆ ಸಾಗಿಸುವ ಅಂಶಕ್ಕೆ ಆದ್ಯತೆ ಕೊಡಬೇಕೆಂದೂ, ಬೆಳೆದು ನಿಂತ ಬೆಳೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ನಾಶಪಡಿಸದೆ ಇರಬೇಕೆಂಬ ಸೂಚನೆಗಳನ್ನಿತ್ತರು.

ಅಷ್ಟರಲ್ಲಿ ಸಿಗ್ನಲ್ ರೆಜಿಮೆಂಟಿನಿಂದ ಪತ್ರ ವಾಹಕನೊಬ್ಬ ತ್ವರೆಯಿಂದ ವೈರಲೆಸ್ ಸಂದೇಶ ಒಂದನ್ನು ತಂದು ಜನರಲ್ ಸಾಹೇಬರ ಕೈಯಲಿಟ್ಟ. ಸಿಯಾಲ್‌ಕೋಟ್ ಪ್ರದೇಶ ದಲ್ಲಿ ಮಹಾರಾಜಕೆ ಎಂಬ ಹಳ್ಳಿಯ ಬಳಿ ಇರುವ ಕಾಡಿನಲ್ಲಿ ಪಾಕಿಸ್ತಾನಿ ಪಡೆಗಳು ಪಂಜಾಬ್ ಬಟಾಲಿಯನ್ನಿಗೆ ಸೇರಿದ್ದ ಕಂಪನಿಯೊಂದನ್ನು ತಡೆಹಿಡಿದು ಅನೇಕ ಸಾವು ನೋವುಗಳನ್ನುಂಟು ಮಾಡಿರುವುದಾಗಿಯೂ, ಕಂಪನಿ ಕಮಾಂಡರನಾದ ಮೇಜರ್ ಸಿದ್ದು ಗಾಯ ಗೊಂಡಿರುವುದಾಗಿಯೂ ಸಂದೇಶ ದಲ್ಲಿ ತಿಳಿಸಲಾಗಿತ್ತು.

ಮೇಜರ್ ಜನರಲ್ ಈಶ್ವರಸಿಂಗರು ಲೆಫ್ಟಿನೆಂಟ್ ಕರ್ನಲ್ ಹರಬನ್ಸ್‌ಲಾಲ್ ಮೆಹತಾರವರಿಗೆ ಪಂಜಾಬ್ ಬಟಾಲಯನ್ನಿನ ಕಂಪನಿಯ ನೆರವಿಗೆ ತುರ್ತಾಗಿ ಎರಡು ಕಂಪನಿಗಳನ್ನು ಕಳುಹಿಸುವಂತೆ ಸೂಚನೆ ಇತ್ತು ಕಾರ್ಯಾಚರಣೆಯ ಸಂಪೂರ್ಣ ಜವಬ್ದಾರಿಯನ್ನು ಅವರಿಗೆ ವಹಿಸಿದರು.

ಸಿಯಾಲ್‌ಕೋಟ್ ಪ್ರದೇಶದಲ್ಲಿ ಸೆಪ್ಟೆಂಬರ್ ತಿಂಗಳ ಮೊದಲ ದಿನಗಳಲ್ಲಿ ನಡೆದ ಕದನ ದಲ್ಲಿ ಪಾಕಿಗಳ ಹನ್ನೆರಡು ಪ್ಯಾಟನ್ ಟ್ಯಾಂಕ ಗಳನ್ನು ಮೆಹತಾರವರ ಮುಂದಾಳತ್ವದಲ್ಲಿ ವಶಪಡಿಸಿಕೊಂಡ ಕೀರ್ತಿ ನಾಲ್ಕನೆಯ ಮದ್ರಾಸ್ ಬಟಾಲಿಯನ್ನಿನದಾಗಿತ್ತು. ಆದ್ದರಿಂದ ಹಿಂದೆ ಮುಂದೆ ನೋಡದೆ ಜನರಲ್ ಸಾಹೇಬರು ಈ ಗುರುತರವಾದ ಹೊಣೆಯನ್ನು ಮೆಹತಾರವರಿಗೆ ವಹಿಸಿದ್ದರು.

ಸೆಪ್ಟೆಂಬರ್ ತಿಂಗಳ ಏಳನೆಯ ತಾರೀಖು ಸಂಜೆ ನಾಲ್ಕು ಗಂಟೆಗೆ ಕಂಪನಿ ಕಮಾಂಡರುಗಳ ಸಭೆಯನ್ನು ಕರೆಯಲಾಯಿತು. ಡಿವಿಜನಲ್ ಕಮಾಂಡರರ ಆದೇಶವನ್ನು ಎಲ್ಲರಿಗೂ ತಿಳಿಸಿ ಕ್ಯಾಪ್ಟನ್ ಮೋಹನ್‌ಜಂಗ್ ಠಾಕೂರ್ ಮತ್ತು ಸುಭೇದಾರ್ ಪಳನಿಯಾಂಡಿಯವರ ಕಂಪನಿಗಳು ಅರ್ಧ ಗಂಟೆಯೊಳಗಾಗಿ ಶತ್ರುಗಳ ವಿರುದ್ಧ ಕಾರ್ಯಾಚರಣೆಗೆ ಸಿದ್ಧರಾಗುವಂತೆ ಆಜ್ಞೆ ನೀಡಲಾಯಿತು.

ನಾವಿದ್ದ ಶಿಬಿರದಿಂದ ಹತ್ತಾರು ಮೈಲುಗಳ ದೂರದಲ್ಲಿನ ಮಹಾರಾಜಕೆ ಎಂಬ ಹಳ್ಳಿಯ ಸಮೀಪದ ಕಾಡಿನಲ್ಲಿ ಪಾಕಿಗಳು ಬೀಡು ಬಿಟ್ಟಿದ್ದರು. ಶತ್ರುಗಳು ತಾವು ಕಳೆದುಕೊಂಡಿದ್ದ ಪ್ರದೇಶಗಳನ್ನು ಕದನ ವಿರಾಮ ಜಾರಿಗೆ ಬರುವ ಮೊದಲು ಮರಳಿ ವಶಪಡಿಸಿಕೊಳ್ಳಲು ವಿಶ್ವಪ್ರಯತ್ನ ಮಾಡುತ್ತಿದ್ದರು. ಸಂಜೆ ಆರು ಗಂಟೆಯ ಸಮಯಕ್ಕೆ ವಜೀರವಾಲಿ ಗ್ರಾಮದ ಬಳಿ ಪಂಜಾಬ್ ಬಟಾಲಿಯನ್ನಿನ ಗಾಯ ಗೊಂಡ ಮೇಜರ್ ಸಿದ್ದು ಮತ್ತು ಇತರ ಜೂನಿಯರ್ ಕಮೀಷನ್ಡ್ ಅಧಿಕಾರಿಗಳು ನಮ್ಮನ್ನು ಎದುರುಗೊಂಡು ಶತ್ರುಗಳ ವಿದ್ಯಮಾನಗಳನ್ನು ವಿವರಿಸುತ್ತಿದ್ದಂತೆ ನಾವು ನಿಂತಿದ್ದ ಸ್ಥಳದಿಂದ ಸುಮಾರು ಮುನ್ನೂರು ಗಜ ದೂರದಲ್ಲಿ ಮಾರ್ಟರ್ ಬಾಂಬೊಂದು ಬಿದ್ದು ಸ್ಫೋಟಗೊಂಡಿತು.

ಕೂಡಲೆ ಎಲ್ಲರೂ ನೆಲದ ಮೇಲೆ ಮಲಗಿಕೊಂಡು ಗುಂಡು ಹಾರಿಸಲಾರಂಭಿಸಿದೆವು. ಅನತಿ ದೂರದ ಅಡವಿಯಿಂದ ನಮ್ಮೆಡೆಗೆ ಗುಂಡುಗಳ ಸುರಿಮಳೆಯಾಗಲಾರಂಭಿಸಿತು. ವಜೀರ್‌ವಾಲಿಯಿಂದ ಅಡವಿ ಸುಮಾರು ಎರಡು ಮೈಲುಗಳ ದೂರದಲ್ಲಿತ್ತು. ಅದು ಬಿದಿರು ಮೆಳೆಗಳಿಂದ ಎತ್ತರವಾದ ದೇವದಾರು ವೃಕ್ಷಗಳಿಂದ ದಟ್ಟವಾಗಿತ್ತು. ಶತ್ರುಗಳ ಚಿಕ್ಕ ತುಕಡಿಯೊಂದು ಅಡವಿಯಿಂದ ಹೊರಬಂದು ಗಿಡಮರಗಳ ಮರೆಯಲ್ಲಿ ಸಾಗಿಬಂದು ನಮ್ಮ ಮೇಲೆ ಆಕ್ರಮಣವೆಸಗಿತ್ತು. ಎತ್ತರವಾದ ಮರಗಳ ಮೇಲೆ ಅಡಗಿ ಕುಳಿತ ಪಾಕ್ ಈಡುಗಾರರು (SNIPER) ನಮ್ಮ ಪಡೆಗಳ ಚಲನವಲನಗಳನ್ನು ಗಮನಿಸಿ ವೈರ್‌ಲೆಸ್ ಮೂಲಕ ಪಾಕ್ ಪಡೆಗಳಿಗೆ ಸುದ್ದಿಯನ್ನು ರವಾನಿಸುತ್ತಿದ್ದರು.

ವಜೀರ್‌ವಾಲಿ ಗ್ರಾಮಕ್ಕೆ ಎಡಕ್ಕೆ ಎರಡು ಮೈಲುಗಳ ಅಂತರದಲ್ಲಿ ಕಾಲೇವಾಲಿ ಎಂಬ ಹಳ್ಳಿಯಿತ್ತು. ಆ ಸಮಯದಲ್ಲಿ ಹಳ್ಳಿಗಳೆಲ್ಲಾ ನಿರ್ಜನವಾಗಿದ್ದವು. ಕಾಲೇವಾಲಿಯ ಬಳಿ ಪಾಕಿಸ್ತಾನಿಗಳ ಒಂದು ಪ್ಲಟೂನು ಬೀಡು ಬಿಟ್ಟಿತ್ತು. ಕತ್ತಲೆಯಲ್ಲಿ ಪಾಕಿಗಳ ಗುಂಡಿಗೆ ಉತ್ತರವಾಗಿ ನಮ್ಮ ಎಂ.ಎಂ.ಜಿ. ಗನ್ನುಗಳು ಗುಂಡು ಹಾರಿಸತೊಡಗಿದಾಗ ಶತ್ರುಗಳ ಕಡೆಯಿಂದ ಬರುತ್ತಿದ್ದ ಗುಂಡಿನ ಸುರಿಮಳೆ ಸ್ತಬ್ಧವಾಯಿತು.

ಅಷ್ಟು ಅಲ್ಪ ಕಾಲದಲ್ಲಿ ಮೆಹತಾರವರು

ಚದುರಿದ್ದ ನಮ್ಮ ಪಡೆಯನ್ನು ಸಂಘಟಿಸಿ ಕ್ಯಾಪ್ಟನ್ ಮೋಹನ ಜಂಗ ಠಾಕೂರರ ಕೈ ಕೆಳಗೆ ಒಂದು ಕಂಪನಿಯನ್ನು ಅಡವಿಯತ್ತ ಕಳುಹಿಸಿದರು. ಕಾಲೇವಾಲಿಯ ಬಳಿ ಬೀಡು ಬಿಟ್ಟಿದ್ದ ಪಾಕ್ ಪ್ಲಟುನನ್ನು ಎದುರಿಸಲು ಸುಬೇದಾರ್ ಪಳನಿಯಾಂಡಿಯವರನ್ನು ಮತ್ತೊಂದು ಕಂಪನಿಯೊಂದಿಗೆ ಕಳುಹಿಸಲಾಯಿತು.

ಪಳನಿಯಾಂಡಿಯವರು ಮುನ್ನಡೆಸುವ ಕಂಪನಿಯ ಕಮಾಂಡರರು ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಸಿಗ್ನಲ್ ಪ್ಲಟೂನಿನ ಸುಭೇ ದಾರ್ ಮಾಧವನ್ ನಂಬಿಯಾರರು ಪಾಕ್ ಪಡೆಗಳೊಂದಿಗೆ ಹೋರಾಡಲು ಹೋದ ಕಂಪನಿಗಳಿಗೆ ಸಂಪರ್ಕ ವ್ಯವಸ್ಥೆಯನ್ನು ಸ್ಥಾಪಿಸಲು ಇಪ್ಪತ್ತು ಸಿಪಾಯಿಗಳೊಂದಿಗೆ ವೈರ್ ಲೆಸ್ ಸೆಟ್ ಸಾಧನಗಳನ್ನು ಹೊತ್ತು ಸಾಗಿದರು.

ಲೆಫ್ಟಿನೆಂಟ್ ಕರ್ನಲ್ ಹರ್‌ಬನ್ಸ್‌ಲಾಲ್ ಮೆಹತಾರವರು ಭೂಮಿಯ ಮಟ್ಟದಲ್ಲಿ ತೋಡಿದ್ದ ಕಮಾಂಡ ಟ್ರೆಂಚ್(ಹಳ್ಳ)ನಲ್ಲಿ ಕುಳಿತು ಸಿಯಾಲ್‌ಕೋಟ್ ಪ್ರದೇಶದ ನಕ್ಷೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದಾಗ ಅವರ ಹೆಸರಿಗೊಂದು ಟೆಲಿಗ್ರಾಮ್ ಬಂತು. ವೈರ್‌ಲೆಸ್ ಸೆಟ್ ಆಪರೇಟರ್ ನಾರಾಯಣ ಕುಟ್ಟಿ ಟೆಲಿಗ್ರಾಮ್‌ನ ಲಕೋಟೆಯನ್ನು ತಂದು ಕೊಟ್ಟು ನನ್ನ ಬಳಿ ಸಹಿ ತೆಗೆದುಕೊಂಡು ಹೋದ. ನಾನು ಲಕೋಟೆಯನ್ನು ತೆಗೆದುಕೊಂಡು ಹೋಗಿ ಅವರ ಮುಂದಿಟ್ಟೆ.

ಅವರು ನಕ್ಷೆಯನ್ನು ಪರಿಶೀಲಿಸುತ್ತಾ ತಲೆ ಎತ್ತದೆ ಲಕೋಟೆಯನ್ನು ಒಡೆದು ಓದುವಂತೆ ನನಗೆ ಹೇಳಿದರು. ಅದು ಸಿಮ್ಲಾದಿಂದ ಅವರ ಪತ್ನಿಯಿಂದ ಬಂದ ಟೆಲಿಗ್ರಾಮಾಗಿತ್ತು. ಅದರಲ್ಲಿನ ಒಕ್ಕಣೆ ಈ ರೀತಿಯಿತ್ತು. "ಮಗುವಿನ ಜ್ವರ ಅಪಾಯದ ಸ್ಥಿತಿಯನ್ನು ಮುಟ್ಟಿದೆ. ಮಗು ಸದಾ ನಿಮ್ಮನ್ನೇ ನೆನೆಯುತ್ತಿದೆ. ಬೇಗ ಹೊರಟು ಬನ್ನಿ-ಇಂದಿರಾ ಮೆಹತಾ."

ಅವರು ಟೆಲಿಗ್ರಾಮನ್ನು ಕೈಗೆತ್ತಿಕೊಂಡು ಒಂದು ಕ್ಷಣ ಓದಿಕೊಂಡರು. ಅನಂತರ ನಿರ್ವಿಕಾರಭಾವದಿಂದ ಒಂದು ಸಿಗರೇಟನ್ನು ಬಾಯಿಯಲ್ಲಿ ಕಚ್ಚಿಕೊಂಡು ಬೆಂಕಿಕಡ್ಡಿ ಕೊರೆದು ಸಿಗರೇಟಿಗೆ ಹಚ್ಚಿಕೊಂಡರು. ಅದೇ ಉರಿಯುತ್ತಿದ್ದ ಬೆಂಕಿ ಕಡ್ಡಿಯನ್ನು ಟೆಲಿಗ್ರಾಮಿಗೆ ಸೋಕಿಸಿದಾಗ ಅದು ಉರಿದು ಬೂದಿಯಾಯಿತು. ಅನಂತರ ಏನೂ ಆಗದವರಂತೆ ನಕ್ಷೆಯ ಪರಿಶೀಲನೆಯಲ್ಲಿ ತಲ್ಲೀನರಾದರು.

ಇತ್ತ ಮೋಹನ ಜಂಗ್ ಠಾಕೂರರ ಕಂಪನಿ ಅಡವಿಯನ್ನು ಸಮೀಪಿಸುತ್ತಿದ್ದಂತೆ ಪಾಕ್ ಸೈನಿಕರ ಮೆಶೀನ್ ಗನ್ನುಗಳು ಗುಂಡು ಕಾರಿ ಅವರನ್ನು ಸ್ವಾಗತಿಸಿದವು. ಆಗ ಪೂರ್ಣ ಕತ್ತಲಾಗಿತ್ತು. ಅಡವಿಯಲ್ಲಿ ಪಾಕ್ ಸೈನಿಕರು ಅಡಗಿ ಕುಳಿತಿದ್ದ ಸ್ಥಳ ನಿಖರವಾಗಿ ಕಾಣಿಸುತ್ತಿರಲಿಲ್ಲ. ಅಡವಿಯ ಭಾಗ ತಗ್ಗಿನಲ್ಲಿತ್ತು. ನಮ್ಮ ಸೈನಿಕರು ಎತ್ತರ ಪ್ರದೇಶದ ಭಾಗದಿಂದ ತಗ್ಗಿನತ್ತ ಸಾಗಬೇಕಿತ್ತು. ನಮ್ಮವರು ಒಂದೆರಡು ಮಾರ್ಟರ್ ಬಾಂಬ್‌ಗಳನ್ನು ಪಾಕಿಸ್ತಾನಿಗಳು ಅಡಗಿರಬಹುದಾದ ಸ್ಥಳದ ಮೇಲೆ ಹಾರಿಸಿದರು.

ಎತ್ತರದ ಭಾಗದಿಂದ ತಗ್ಗಿನತ್ತ ಸಾಗಬೇಕಿದ್ದುದರಿಂದ ನಮ್ಮ ಸೈನಿಕರು ಹೆಚ್ಚು ಅಪಾಯವನ್ನು ಎದುರಿಸಬೇಕಾಗಿತ್ತು. ಕೆಲವೇ ಕ್ಷಣಗಳಲ್ಲಿ ಶತ್ರುಗಳ ಗುಂಡುಗಳು ನಮ್ಮ ಹಲವಾರು ಸೈನಿಕರನ್ನು ಆಹುತಿ ತೆಗೆದುಕೊಂಡವು. ಒಂದು ಹೆಜ್ಜೆ ಮುಂದುವರಿಯುವುದು ಅಸಾಧ್ಯವಾಯಿತು. ಹತ್ತಾರು ಮಂದಿ ಸೈನಿಕರು ಗಾಯಗೊಂಡಿದ್ದರು. ಹವಲ್ದಾರ ಗೋಪಾಲ ಕೃಷ್ಣನ ತಲೆಗೆ ಗುಂಡೇಟು ಬಿದ್ದು ಸ್ಥಳದಲ್ಲಿಯೇ ಅಸು ನೀಗಿದ್ದ. ಅವನ ಶವವನ್ನು ಎಳೆದು ತರಲು ತೆವಳಿಕೊಂಡು ಮುಂದೆ ಹೋದ ನಾಯಕ್ ದೇವದಾನಂ ಸಹ ಶವವಾಗಿ ಅವನ ಮಗ್ಗುಲಲ್ಲಿ ಉರುಳಿಕೊಂಡ. ಪಾಕಿಸ್ತಾನಿ ಸ್ನೈಪರುಗಳು ಅನುಕೂಲವಾದ ಸ್ಥಳಗಳಲ್ಲಿ ಕುಳಿತು ಗುರಿ ಇಟ್ಟು ನಮ್ಮವರನ್ನು ಹೊಡೆದುರುಳಿಸುತ್ತಿದ್ದರು. ಅವರು ಅಡಗಿ ಕುಳಿತಿದ್ದ ತಗ್ಗಾದ ಸ್ಥಳ ಎತ್ತರ ಪ್ರದೇಶದಿಂದ ಬರುತ್ತಿದ್ದ ನಮ್ಮ ಪಡೆಗಳನ್ನು ತಡೆಹಿಡಿಯಲು ಅನುಕೂಲವಾಗಿತ್ತು.

ಕ್ಯಾಪ್ಟನ್ ಮೋಹನ ಜಂಗ್ ಠಾಕೂರರಿಗೆ ದಿಕ್ಕೇ ತೋಚಲಿಲ್ಲ. ತುರ್ತಾಗಿ ಪಡೆಯನ್ನು ಒಂದಕ್ಕೆ ಕರೆತಂದು ವೈರ್‌ಲೆಸ್ ಮೂಲಕ ಮೆಹತಾರವರಿಗೆ ಪರಿಸ್ಥಿತಿಯನ್ನು ವಿವರಿಸಿದರು. ಒಡನೆ ಮೆಹತಾ ಠಾಕೂರರ ನೆರವಿಗೆ

ಮೀನುಗಾರರಿಗೆ ಸಾಮೂಹಿಕ ವಿಮಾ ಯೋಜನೆಯ ಪ್ರೀಮಿಯಂ ವಿನಾಯಿತಿ:–

ಕಡಲಾಳದಿಂದ ಮತ್ಸ್ಯ ಸಂಪತ್ತನ್ನು ಆರಿಸಿ ತರುವ ಮೀನುಗಾರರಿಗೆ ಕರ್ನಾಟಕ ಸರ್ಕಾರದ ಸಹಾಯ ಹಸ್ತ.

ಕಡಲ ಮೀನುಗಾರಿಕೆಯಲ್ಲಿ ಆದರದ್ದೇ ಆದ ಸವಾಲು ಇದೆ. ಕಡಲ ಒಡಲು ವಿಪುಲ ಮೀನುಗಾರಿಕಾ ಸಂಪತ್ತಿನಿಂದ ಕೂಡಿದ್ದರೂ ಸಮುದ್ರವು ಪ್ರಕ್ಷುಬ್ಧವಾದಾಗ ದೋಣಿ, ಬಲೆ ಹಾಗು ಮೀನುಗಾರರ ಅಮೂಲ್ಯ ಜೀವವನ್ನು ಬಲಿ ತೆಗೆದುಕೊಳ್ಳು ವುದು. ರಾತ್ರಿ ಹಗಲೆನ್ನದೆ ಪ್ರಕೃತಿಯ ಶಕ್ತಿಗಳನ್ನೆದುರಿಸಿ ಸಮುದ್ರದಾಚೆಗೆ ಪಯಣಿಸಿ ಮೀನುಗಾರಿಕೆಯಲ್ಲಿ ತೊಡಗುವ ಮೀನುಗಾರರ ಬಗ್ಗೆ ಕರ್ನಾಟಕ ಸರ್ಕಾರ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆ. 1983-84ರಿಂದ ಜಾರಿಗೆ ತರ ಲಾಗಿರುವ ಒಳನಾಡು ಹಾಗೂ ಕರಾವಳಿ ಮೀನುಗಾರರ ವಿಮಾ ಯೋಜನೆಯಲ್ಲಿ ಮೀನುಗಾರರನ್ನು ಅವರ ಕಷ್ಟ ನಷ್ಟಗಳಿಂದ ಮುಕ್ತಗೊಳಿಸುತ್ತಿದೆ.

1987-88ರಲ್ಲಿ 60,000 ಮೀನುಗಾರರು ಈ ಯೋಜನೆಯ ವ್ಯಾಪ್ತಿಗೊಳ ಪಟ್ಟಿದ್ದು, ಅದಕ್ಕೆ ತುಂಬಲಾದ ಪ್ರೀಮಿಯಂ ಹಣ ರೂ. 5.40 ಲಕ್ಷ ಆಗಿರುತ್ತದೆ. ಕೇಂದ್ರ ಸರಕಾರ ಮತ್ತು ಕರ್ನಾಟಕ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ವಿಮಾ ಕಂಪನಿಗೆ ಮೀನುಗಾರರ ಪರವಾಗಿ ಪ್ರತಿ ವರ್ಷ ತಲಾ ರೂ.9 ರಂತೆ ಪ್ರೀಮಿಯಂ ಹಣ ತುಂಬಲಾಗುತ್ತಿದೆ.

ಈ ಸಾಮೂಹಿಕ ವಿಮಾ ಯೋಜನೆಯಲ್ಲಿ ಆಕಸ್ಮಿಕ ಅಪಘಾತಕ್ಕೀಡಾಗಿ ಪೂರ್ಣ ಅಂಗವಿಕಲರಾದ ಮೀನುಗಾರರಿಗೆ ಅಥವಾ ಮೃತರಾದ ಮೀನುಗಾರರ ಅವಲಂಬಿಗಳಿಗೆ ರೂ. 15,000. ವಿಮಾ ಹಣವನ್ನು ನೀಡಲಾಗುವುದು. ಅಪೂರ್ಣ ಅಂಗವಿಕಲರಾದ ಮೀನುಗಾರರಿಗೆ ರೂ. 7,500. ವಿಮಾ ಹಣ ನೀಡ ಲಾಗುವುದು.

ಇದೀಗ ಮೀನುಗಾರರು ನಿಶ್ಚಿಂತರಾಗಿ ಮೀನು ಹಿಡಿಯಲು ಹೋಗಬಹುದು. ಆಕಸ್ಮಿಕವಾಗಿ ಏನಾದರೂ ಅನಾಹುತವಾದಲ್ಲಿ ಅವರ ಕುಟುಂಬಗಳು ದಾರಿ ಪಾಲಾಗಬೇಕಾಗಿಲ್ಲ. ಮೀನುಗಾರರ ಕಷ್ಟಕಾಲದಲ್ಲಿ ಈ ವಿಮಾ ಹಣ ಅವರಿಗೆ ಸಹಾಯ ನೀಡಿ ಅವರ ಜೀವನ ಭದ್ರತೆ ಒದಗಿಸುವುದು.

ಒಳನಾಡು ಹಾಗೂ ಕರಾವಳಿ ಮೀನುಗಾರಿಕಾ ಸಹಕಾರಿ ಸಂಘಗಳ ಸದಸ್ಯ ರಾಗಿರುವ ಎಲ್ಲಾ ಮೀನುಗಾರರು ಈ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯಲು ಅರ್ಹರು. ಹೆಚ್ಚಿನ ಮಾಹಿತಿಯನ್ನು ಸಮೀಪದ ಮೀನುಗಾರಿಕಾ ಅಧಿಕಾರಗಳಿಂದ ಪಡೆಯಬಹುದು.

"ಕರ್ನಾಟಕ ವಾರ್ತೆ"

ಲೆಫ್ಟಿನೆಂಟ್ ಇಂದ್ರಪಾಲ ಸಿಂಗರನ್ನು ಮಿಾಸಲು ಕಂಪನಿಯೊಂದಿಗೆ ಕಳುಹಿಸಿ ಕೊಟ್ಟರು.

ಕಾಲೇವಾಲಿಯ ಬಳಿ ಸುಭೇದಾರ್ ಪಳನಿ ಯಾಂಡಿಯವರ ಕಂಪನಿ ಪ್ರತಿರೋಧವಿಲ್ಲದೆ ಗ್ರಾಮವನ್ನು ವಶಪಡಿಸಿಕೊಂಡಿತು. ಪಳನಿ ಯಾಂಡಿ ಒಂದು ಪ್ಲಟೂನನ್ನು ಕಾಲೇವಾಲಿಯ ರಕ್ಷಣೆಗೆ ನೇಮಿಸಿ ಉಳಿದ ಎರಡು ಪ್ಲಟೂನು ಗಳೊಂದಿಗೆ ಇಂದ್ರಪಾಲ್ ಸಿಂಗರನ್ನು ಕೂಡಿ ಕೊಂಡರು. ಕ್ಯಾಪ್ಟನ್ ಮೋಹನ್ ಜಂಗ್ ಠಾಕೂರರು ಹೆಚ್ಚುವರಿ ಬಲದೊಂದಿಗೆ ಶತ್ರು ಗಳ ಮೇಲೆ ಸಾಗಿದರು. ಪಾಕಿಸ್ತಾನಿ ಸ್ನೈಪರ್ ಹಾರಿಸಿದ ಗುಂಡೊಂದು ಲೆಫ್ಟಿ ನೆಂಟ್ ಇಂದ್ರಪಾಲ್‌ಸಿಂಗರನ್ನು ಆಹುತಿ ತೆಗೆದುಕೊಂಡಿತು. ಪಾಕಿಗಳ ಗುಂಡಿನ ಸುರಿ ಮಳೆಯನ್ನು ಎದುರಿಸಲಾರದೆ ನಮ್ಮ ಸೈನಿಕರು ಹಿಮ್ಮೆಟ್ಟಲಾರಂಭಿಸಿದರು. ನಮ್ಮವರು ಹಾರಿ ಸಿದ ಗುಂಡುಗಳು ಗುರಿ ಮುಟ್ಟುತ್ತಿರಲಿಲ್ಲ. ಪ್ರತಿಯಾಗಿ ಶತ್ರುಗಳ ಒಂದೊಂದು ಗುಂಡುಗಳೂ ನಮ್ಮ ಸೈನಿಕರನ್ನು ಗಾಸಿಗೊಳಿಸು ತ್ತಿದ್ದುವು.

ಬೆಳಗಿನ ನಾಲ್ಕು ಗಂಟೆಯಾದರೂ ನಮ್ಮ ಸೈನಿಕರಿಗೆ ಅಡವಿಯ ಅಂಚನ್ನು ಸಮಿಾಪಿಸ ಲಾಗಲಿಲ್ಲ. ಮೆಹತಾರವರು ಆರ್ಮರ್ ಟ್ಯಾಂಕುಗಳ ನೆರವನ್ನು ಕೋರಿ ಬ್ರಿಗೇಡ್ ಕಮಾಂಡರರೊಂದಿಗೆ ವೈರಲೆಸ್ ಮೂಲಕ ಮಾತನಾಡಿದರು. ಹಾದಿಯ ನಡುವೆ ಸೇತುವೆ ಯೊಂದು ಮುರಿದು ಬಿದ್ದಿದ್ದುದರಿಂದ ಟ್ಯಾಂಕು ಗಳು ಸಕಾಲಕ್ಕೆ ಆಗಮಿಸಲಿಲ್ಲ. ಬೆಳಗಾದ ಮೇಲೆ ಪಾಕ್ ತೋಪುಪಡೆ ಅಡವಿಯಲ್ಲಿ ಬೀಡು ಬಿಟ್ಟಿದ್ದ ಶತ್ರು ಬಲವನ್ನು ಕೂಡಿ ಕೊಂಡಲ್ಲಿ ನಮ್ಮ ಪಡೆಗಳು ಹಿಮ್ಮೆಟ್ಟಬೇಕಾದ ಸಾಧ್ಯತೆ ಇತ್ತು. ಅಲ್ಲದೆ ಹೆಚ್ಚುವರಿ ಬಲದಿಂದ ಸಜ್ಜಾದ ಪಾಕ್ ಪಡೆಗಳು ನಮ್ಮ ನಿಯಂತ್ರಣ ದಲ್ಲಿದ್ದ ಪ್ರದೇಶಗಳ ಮೇಲೆ ಕ್ಷಿಪ್ರ ದಾಳಿ ನಡೆ ಸುವ ಸಾಧ್ಯತೆಯನ್ನು ಅಲ್ಲಗೆಳೆಯುವಂತಿರ ಲಿಲ್ಲ.

ಲೆಫ್ಟಿನೆಂಟ್ ಕರ್ನಲ್ ಹರ್‌ಬನ್ಸ್‌ಲಾಲ್ ಮೆಹತಾ ಪಾಕಿಗಳು ಅಡಗಿದ್ದ ಅಡವಿಯ ಪ್ರದೇಶವನ್ನು ಆಕ್ರಮಿಸಿಕೊಳ್ಳುವ ನಿಟ್ಟಿನಲ್ಲಿ ಆಗುತ್ತಿರುವ ವಿಳಂಬದಲ್ಲಿನ ಅಪಾಯವನ್ನು ಗಮನಿಸಿದರು. ಸೈನಿಕರೆಲ್ಲಾ ಅನೇಕ ಸಾವು ನೋವುಗಳಿಂದ ಅನ್ನ-ಆಹಾರಗಳಿಲ್ಲದೆ ಕಂಗೆಟ್ಟಿದ್ದರು. ಕ್ಯಾಪ್ಟನ್ ಠಾಕೂರರು ಅನು ಭವಿಯಾದ ಅಧಿಕಾರಿಯಾಗಿರಲಿಲ್ಲ. ಮೇಲಾಗಿ ಕೈಕೆಳಗಿನ ಸೈನಿಕರ ಮೇಲಿನ ಅವರ ವರ್ಚಸ್ಸು ಅಷ್ಟೇನೂ ಬಲವಾಗಿರಲಿಲ್ಲ. ಆ ಸಮಯದಲ್ಲಿ ಶತ್ರುಗಳ ಭೂಮಿಯ ಮೇಲಿದ್ದ ನಮ್ಮ ಸೈನಿಕರ ಸ್ಥಿತಿ ಅನುಕೂಲಕರವಾಗಿರ ಲಿಲ್ಲ. ಆ ಪರಿಸ್ಥಿತಿಯಲ್ಲಿ ಶತ್ರುಗಳ ಮೇಲೆ ಕ್ಷಿಪ್ರ ದಾಳಿಯನ್ನಾರಂಭಿಸುವ ಅಗತ್ಯವನ್ನು ಮನ ಗಂಡು ಮೆಹತಾ ತಾವೇ ದಾಳಿಯ ನೇತೃತ್ವ ವನ್ನು ವಹಿಸಿಕೊಂಡರು.

ಸೇನೆಯನ್ನು ಸಮರಾಂಗಣದಲ್ಲಿ ಮುನ್ನಡೆಸು ವಾಗ ನೇತೃತ್ವ ವಹಿಸುವ ಅಧಿಕಾರಿ ಹೆಜ್ಜೆ ಹೆಜ್ಜೆಗೂ ಮೃತ್ಯುವಿನ ದವಡೆಯಲ್ಲಿ ಸಾಗ ಬೇಕಾಗುತ್ತದೆ. ಇದರ ಅರಿವು ಮೆಹತಾ ಅವ ರಿಗೆ ಇರದಿರಲಿಲ್ಲ. ಜ್ವರದಿಂದ ನರಳುತ್ತಿದ್ದ ಮಗುವಿನ ಮತ್ತು ಒಲವಿನ ಪತ್ನಿ ಇಂದಿರಾ ರವರ ಚಿತ್ರಗಳು ಮನಸ್ಸಿನ ಭಿತ್ತಿಯ ಮೇಲೆ ಸುಳಿಯತೊಡಗಿದವು. ಆದರೆ ಕರ್ತವ್ಯದ ಕರೆ ಎಲ್ಲಕ್ಕಿಂತ ಮಿಗಿಲಾಗಿತ್ತು.

ಕರ್ನಲ್ ಸಾಹೇಬರೇ ಖುದ್ದಾಗಿ ಕಂಪನಿ ಗಳನ್ನು ಮುನ್ನಡೆಸುತ್ತಾರೆಂಬುದನ್ನು ಕೇಳಿದಾಗ ಸೈನಿಕರ ಮೈಯಲ್ಲಿ ಮಿಂಚು ಹರಿದಂತಾ ಯಿತು. ವಾಲಾಜಾಬಾದ್ ಜಿಂದಾಬಾದ್ ಎಂದು ಅವರೆಲ್ಲಾ ಉತ್ಸಾಹದಿಂದ ಕೂಗಿದರು. ಬೆಳಗಿನ ಜಾವ ಮೆಹತಾರವರು ಕೈಯಲ್ಲಿ ಸ್ಟೆನ್ ಗನ್ ಹಿಡಿದು ಕಂಪನಿಗಳನ್ನು ಮುನ್ನಡೆಸಲಾರಂಭಿಸಿದರು. ಹತಾಶರಾಗಿದ್ದ ಸೈನಿಕರಲ್ಲಿ ಸುಪ್ತವಾಗಿದ್ದ ಉತ್ಸಾಹ ಎಲ್ಲರಿಗೂ ಮುಂದೆ ನಡೆಯುತ್ತಿದ್ದ ಲೆಫ್ಟಿನೆಂಟ್ ಕರ್ನಲ್ ಮೆಹತಾರವರನ್ನು ನೋಡಿ ಪುಟಿಯತೊಡ ಗಿತು.

ನಮ್ಮ ಸೈನಿಕರ ಬಳಿಯಿದ್ದ ಬಂದೂಕುಗಳು ಮೆಶೀನ್ ಗನ್ ಮತ್ತು ಎಂ.ಎಂ.ಜಿ. ಗನ್ನು ಗಳು ಶತ್ರು ಪಾಳೆಯದ ಮೇಲೆ ಗುಂಡಿನ ಮಳೆ ಸುರಿಸಲಾರಂಭಿಸಿದವು. ನಮ್ಮ ಮಾರ್ಟರ್ ಗಳಿಂದ ಹಾರಿದ ಬಾಂಬುಗಳು ಅಡವಿಯಲ್ಲಿನ ಪಾಕ್ ಗುಪ್ತ ನೆಲೆಗಳ ಮೇಲೆ ಬಿದ್ದು ಸ್ಫೋಟಿಸ

ತೊಡಗಿದವು. ಎಲ್ಲಾ ಕಡೆಯಿಂದ ಆಕ್ರಮಣ ಭರದಿಂದ ಸಾಗಿತು. ನಮ್ಮ ಸೈನಿಕರು ಮುಂಬರುವ ಅಪಾಯವನ್ನು ಲೆಕ್ಕಿಸದೆ ತಗ್ಗಿನಲ್ಲಿದ್ದ ಪಾಕ್ ನೆಲೆಯುತ್ತ ಧಾವಿಸತೊಡಗಿದರು. ಐವತ್ತು ವರ್ಷ ವಯಸ್ಸಿನ ಮೆಹತಾರವರ ಕೈಲಿದ್ದ ಸ್ಟೆನ್‌ಗನ್ ಎಡಬಿಡದೆ ಗುಂಡುಗಳನ್ನು ಕಾರುತ್ತಿತ್ತು. ಶತ್ರುಗಳು ನಮ್ಮ ಪಡೆಗಳ ಈ ರೀತಿಯ ಅನಿರೀಕ್ಷಿತವಾದ ಆಕ್ರಮಣವನ್ನು ನಿರೀಕ್ಷಿಸಿರಲಿಲ್ಲವೆಂದು ಕಾಣುತ್ತದೆ. ತಕ್ಷಣ ಮರಗಳ ಮೇಲಿಂದ ಮಶೀನ್ ಗನ್ನುಗಳು ಗುಂಡಿನ ಮಳೆ ಸುರಿಸತೊಡಗಿದಾಗ ನಮ್ಮ ಮುಂದಿದ್ದ ಹಲವಾರು ಮಂದಿ ಸೈನಿಕರು ಕೆಳ ಗುರುಳಿದರು.

ತಮ್ಮ ಸಂಗಾತಿಗಳ ಶವಗಳನ್ನು ಕಂಡೊಡನೆ ನಮ್ಮ ಸೈನಿಕರಲ್ಲಿ ಸುಪ್ತವಾಗಿದ್ದ ರೋಷ ಹೆಚ್ಚೆದ್ದು ಕುಣಿಯಿತು. ಮೆಹತಾರವರು ಅಸಾಲ್ಟ್ (ಆಕ್ರಮಿಸಿ) ಎಂದು ಗರ್ಜಿಸಿದರು. ಸೈನಿಕರು ತಮ್ಮ ಪ್ರಾಣಗಳನ್ನು ಲೆಕ್ಕಿಸದೆ ಓಡುತ್ತಾ ಅಡವಿಯ ಅಂಚನ್ನು ದಾಟಿ ಅಡಗಿದ್ದ ಶತ್ರುಗಳ ಮೇಲೆ ಬಿದ್ದರು. ಮೆಹತಾರವರ ಎಡದೋಳಿಗೆ ಗುಂಡು ತಾಕಿ ರಕ್ತ ಒಸರುತ್ತಿತ್ತು. ಅದರ ಪರಿವೆಯೇ ಅವರಿಗೆ ಇದ್ದಂತಿರಲಿಲ್ಲ. ಬಲಗೈಲಿ ಸ್ಟೆನ್‌ಗನ್ ಹಿಡಿದು ಸೈನಿಕರನ್ನು ಹುರಿದುಂಬಿಸುತ್ತಾ ಕಾಲಯಮನಂತೆ ಸಾಗುತ್ತಿದ್ದರು.

ಗಿಡಮರಗಳ ಮರೆಯಲ್ಲಿ ನಿರ್ಮಿಸಿದ್ದ ಕಾಂಕ್ರೀಟ್ ಪಿಲ್‌ಬಾಕ್ಸ್‌ಗಳಲ್ಲಿ ಅಡಗಿ ಕುಳಿತಿದ್ದ ಶತ್ರುಗಳನ್ನು ಎಳೆದು ನಮ್ಮ ಸೈನಿಕರು ಸನೀನಿನಿಂದ ತಿವಿದು ಕೊಲ್ಲ ತೊಡಗಿದರು. ಎತ್ತರವಾದ ಮರಗಳ ಮೇಲೆ ಕಟ್ಟಿದ್ದ ಅಟ್ಟಣೆಗಳ ಮೇಲೆ ಕುಳಿತಿದ್ದ ಪಾಕ್ ಈಡುಗಾರರಿಗೆ ನಮ್ಮವರು ಗುಂಡು ಹಾರಿಸಿ ಒಬ್ಬೊಬ್ಬರನ್ನಾಗಿ ಯಮಪುರಿಗೆ ಕಳುಹಿಸತೊಡಗಿದರು. ಮರದ ಮೇಲಿದ್ದ ಕೆಲವು ಈಡುಗಾರರು ಗಾಬರಿಯಿಂದ ಕೆಳಗೆ ಬಿದ್ದು ತಲೆಯೊಡೆದು ಸತ್ತರು.

ಏತನ್ಮಧ್ಯೆ ಎತ್ತರವಾದ ಮರದ ಮೇಲೆ ಯಾರಿಗೂ ಕಾಣದಂತೆ ಕುಳಿತಿದ್ದ ಪಾಕಿಸ್ತಾನಿ ಈಡುಗಾರನೊಬ್ಬ ಹಾರಿಸಿದ ಗುಂಡೊಂದು ಆಕಸ್ಮಿಕವಾಗಿ ಮೆಹತಾರವರಿಗೆ ತಾಗಿ ಅವರು ಕೊನೆಯುಸಿರೆಳೆದರು. ಕರ್ನಲ್ ಮೆಹತಾರವರ

ಭವ್ಯ ಶರೀರ ಕೆಳಗುರುಳಿದುದನ್ನು ಕಂಡು ಕೆರಳಿದ ಸೈನಿಕನೊಬ್ಬ ಮರದ ಮೇಲಿದ್ದ ಈಡುಗಾರನ ಮೇಲೆ ಗುಂಡು ಹಾರಿಸಿ ಸೇಡು ತೀರಿಸಿಕೊಂಡ.

ಈ ಸೈನಿಕ ಕಾರ್ಯಾಚರಣೆಯ ಅಂತ್ಯದಲ್ಲಿ ಮೂವತ್ತು ಮಂದಿ ಪಾಕ್ ಸೈನಿಕರು ಸೆರೆ ಸಿಕ್ಕರು. ಪಿಲ್‌ಬಾಕ್ಸ್‌ಗಳಲ್ಲಿ ಅಡಗಿಸಿಟ್ಟಿದ್ದ ಮದ್ದು ಗುಂಡುಗಳ ಕೋವಿಗಳ ದೊಡ್ಡ ಸಂಗ್ರಹ ನಮ್ಮ ವಶವಾದವು. ಪಾಕಿಗಳ ಪತನದ ವಾರ್ತೆಯನ್ನು ಕೊಂಡೊಯ್ಯಲು ಅವರ ಕಡೆ ಒಬ್ಬ ಸೈನಿಕನೂ ಉಳಿದಿರಲಿಲ್ಲವೆಂದು ನಮ್ಮ ಅನಿಸಿಕೆಯಾಗಿತ್ತು. ಶತ್ರುಗಳೂ ಎದುರಾಳಿಗಳೂ ಮೆಚ್ಚುವಂತೆ ಹೋರಾಡಿ ಹತರಾಗಿದ್ದರು.

ಈ ವಿಜಯವನ್ನು ಅನುಭವಿಸಲು ನಮಗೆ ಅದೃಷ್ಟವಿರಲಿಲ್ಲ. ವಿಜಯಕ್ಕೆ ಕಾರಣವಾದ ಮೆಹತಾರವರನ್ನು ವಿಧಿ ನಮ್ಮಿಂದ ಬಹುದೂರ ಕೊಂಡೊಯ್ದಿತ್ತು.

ಲೆಫ್ಟಿನೆಂಟ್ ಕರ್ನಲ್ ಹರ್‌ಬನ್ಸ್‌ಲಾಲ್ ಮೆಹತಾ ಭಾರತೀಯ ವೀರ ಸೈನಿಕ ಪರಂಪರೆಗನುಗುಣವಾಗಿ ನಗು ನಗುತ್ತಲೇ ವೀರ ಮರಣವನ್ನಪ್ಪಿದ್ದರು. ಅವರು ಸತ್ತರು. ನಿಜ. ಆದರೆ ರಣದಲ್ಲಿ ಸತ್ತು ಗೆದ್ದಿದ್ದರು.

ಭಾರತ ಸರ್ಕಾರ ಲೆಫ್ಟಿನೆಂಟ್ ಕರ್ನಲ್ ಮೆಹತಾರವರಿಗೆ ಮರಣಾನಂತರ ಮಹಾವೀರ ಚಕ್ರವನ್ನು ನೀಡಿ ಗೌರವಿಸಿತು. ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ದಿನಾಂಕ 24-11-65 ರಂದು ಶ್ರೀಮತಿ ಇಂದಿರಾ ಮೆಹತಾರವರು ರಾಷ್ಟ್ರಾಧ್ಯಕ್ಷರಿಂದ ತಮ್ಮ ಪತಿಯ ಪ್ರಶಸ್ತಿಯನ್ನು ಸ್ವೀಕರಿಸಿದರು.

*

ನಾಲ್ಕನೇ ಮದ್ರಾಸ್ (ವಾಲಾಜ) ಬಟಾಲಿಯನ್ ಸ್ವಾತಂತ್ರ್ಯ ಪೂರ್ವದಲ್ಲಿ ಇಂದಿನ ತಮಿಳುನಾಡಿನ ವಾಲಾಜ ಸಂಸ್ಥಾನದ ಕಾಲಾಳು ಪಡೆಯ ವಿಭಾಗವಾಗಿತ್ತು.

ಕನ್ನಡಿಯಲ್ಲಿ ತನ್ನನ್ನು ತಾನೇ ದಿಟ್ಟಿಸಿ ನೋಡುತ್ತಿರುವ ಅನಂತವೇ ಸೌಂದರ್ಯ.

● ಖಲೀಲ್ ಜಿಬ್ರಾನ್

ಬಡತನ ಪ್ರತಿಭೆಯ ಪೋಷಕ

'ಸ್ನಾನಕ್ಕೆ ಏನು ವ್ಯವಸ್ಥೆ ಮಾಡಿಕೊಂಡಿದ್ದೀರಿ' ಕೇಳಿದರು- ಮುತ್ತಯ್ಯ ಭಾಗವತರು

'ದೇವರು ಕೊಟ್ಟಹಾಗೆ ಹೊಳೆಯಿದೆ' ಆ ವಟು ಹೇಳಿದ.

'ಊಟ ಎಲ್ಲಿ ಮಾಡುತ್ತೀರ?'

'ನಾಲ್ಕು ಮನೆಯಲ್ಲಿ ನಾಲ್ಕು ತುತ್ತು ಅನ್ನ ಸಿಕ್ಕರೆ ಆಯಿತು. ಉಪನಯನವಾಗಿದೆ. ಭಿಕ್ಷಾನ್ನ ಎಂದು ಕೈ ನೀಡಿದರೆ ಯಾವ ಜನ್ಮದ ತಾಯಂದಿರೋ ಓಡಿ ಅನ್ನ ಕರುಣಿಸುತ್ತಾರೆ. ದಿನಕ್ಕೊಂದು ಬಗೆಯ ಊಟ. ದಿನಕ್ಕೊಂದು ಬಗೆಯ ರಸಕವಳ.' 'ಸರಿ ಹೊಳೆಯಲ್ಲಿ ಸ್ನಾನ, ಭಿಕ್ಷಾನ್ನ ಭೋಜನ ಅಂದ ಮೇಲೆ ವಾಸಕ್ಕೆ ಛತ್ರ ಎಂದು ಬೇರೆ ಹೇಳಬೇಕಿಲ್ಲವಷ್ಟೆ?' ಕೇಳಿದರು ಭಾಗವತರು. 'ನಿಮ್ಮ ಊಹೆ ಯಥಾರ್ಥದ್ದು. ನನ್ನ ಹನ್ನೆರಡನೇ ವಯಸ್ಸಿನಿಂದಲೂ ಛತ್ರವೇ ನನ್ನ ಮನೆ' ಎಂದ ಆ ವಟು.

ಆ ವಟುವೇ ಸುಪ್ರಸಿದ್ಧ ಸಂಗೀತಗಾರರೂ ವಾಗ್ಗೇಯಕಾರರೂ ಆದ ಮೈಸೂರು ವಾಸುದೇವಾಚಾರ್ಯರು. ಇದು ಅವರು ಸಂಗೀತ ಅಭ್ಯಾಸಕ್ಕಾಗಿ ತಿರುವೈಯ್ಯಾರಿನಲ್ಲಿ ಇದ್ದಾಗ ನಡೆದ ಸಂಗತಿ.

● ಕೆ. ವೆಂಕಣ್ಣಾಚಾರ್

ಇತಿಹಾಸದ ಪುಟಗಳಿಂದ

ಜಿನ್ನಾರ ಪಾರ್ಸಿ ಹೆಂಡತಿ

ಮೂಲ : ದಾದಾ ಮೆಹರ್ ಹೋಮಜಿ
ಕನ್ನಡಕ್ಕೆ: ಸಂಜೀವ ಪ್ಯಾಟಿ

ಪಾಕಿಸ್ತಾನ ಸ್ಥಾಪನೆಗೆ ಪ್ರಮುಖ ಕಾರಣ ಕರ್ತರಾದ ಜಿನ್ನಾ ಮೊದಲು ವಕೀಲಿ ವೃತ್ತಿಯಲ್ಲಿದ್ದಾಗ ಅವರಿಗೆ ಕೆಲಸದ ಹೊರೆ ಬಹಳ ಇರುತ್ತಿತ್ತು. ಇದರಿಂದ ಪಾರಾಗಲು ಎಷ್ಟೋ ಸಲ ಅವರು ತಮ್ಮ ಪಾರ್ಸಿ ಸ್ನೇಹಿತ, ಆಗರ್ಭ ಶ್ರೀಮಂತ ಸರ್ ದಿನ್‌ಶಾ ಪೆಟಿಟ್‌ರ ಮನೆಗೆ ಹೋಗಿ ಅವರೊಂದಿಗೆ ಊಟ ಮಾಡಿ ಹರಟೆ ಹೊಡೆದು ಬರುತ್ತಿದ್ದರು. ವಿಶ್ರಾಂತಿಗೆಂದು ಎಷ್ಟೋ ಸಲ ಅವರು ವಾರಾಂತ್ಯ ದಿನಗಳಂದು ಪುಣೆಯಲ್ಲಿದ್ದ ಸರ್ ಪೆಟಿಟ್‌ರ ಬಂಗಲೆಗೆ ಹೋಗಿ ಕಾಲ ಕಳೆಯುತ್ತಿದ್ದುದೂ ಉಂಟು.

ಪೆಟಿಟರಿಗೆ ರತಿ ಎಂಬ ಮಗಳು. ತನ್ನ ಸುಂದರ ಮುಖ, ಆಕರ್ಷಕ ವ್ಯಕ್ತಿತ್ವಗಳಿಂದಾಗಿ ಆಕೆ ಆ ಕಾಲಕ್ಕೆ ಮುಂಬೈ ತುಂಬ ಪ್ರಸಿದ್ಧಳು.

ಗಂಭೀರ ಸ್ವಭಾವದ, ಯಾವಾಗಲೂ ಮುಖ ಗಂಟು ಹಾಕಿಕೊಂಡಿರುತ್ತಿದ್ದ ಜಿನ್ನಾ ಈ ಹದಿನೇಳರ ಹರೆಯದ ಸುಂದರಿಯಿಂದ ಆಕರ್ಷಿತರಾಗಿದ್ದರು.

ಜಿನ್ನಾ ಮತ್ತು ಅವರಿಗಿಂತ 24 ವರ್ಷ ಚಿಕ್ಕವಳಾದ ರತಿ ಮದುವೆಯಾಗಬೇಕೆಂದು ಪರಸ್ಪರ ನಿರ್ಧರಿಸಿಕೊಂಡಿದ್ದರು. ಸರ್ ದಿನ್‌ಶಾ ಪೆಟಿಟ್‌ಗೆ ಈ ವಿಷಯ ಗೊತ್ತಾದಾಗ ಅವರಿಗೆ ಕೋಪವುಕ್ಕಿ ಬಂತು. ಜಿನ್ನಾ ತನ್ನ ಮಗಳನ್ನು ಭೇಟಿ ಆಗದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದರು. ಇದರಿಂದಾಗಿ ಅವರಿಬ್ಬರೂ ರತಿಗೆ 18 ವರ್ಷವಾಗುವವರೆಗೆ ಕಾಯಬೇಕಾಯಿತು. ನಂತರ 1918ರ ಏಪ್ರಿಲ್ 19ರಂದು "ಸರ್ ದಿನ್‌ಶಾ ಮತ್ತು ಲೇಡಿ ಪೆಟಿಟ್‌ರ ಏಕೈಕ ಪುತ್ರಿ ರತನ್‌ಬಾಯಿ ಪೆಟಿಟ್ ನಿನ್ನೆ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದರು. ಇಂದು ಅವರು ಶ್ರೀ ಎಂ.ಎ. ಜಿನ್ನಾರವರನ್ನು ಮದುವೆಯಾಗಲಿದ್ದಾರೆ" ಎಂಬ ಸುದ್ದಿ ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ ಪ್ರಕಟವಾಯಿತು.

ಇದು ಜಿನ್ನಾರ ಎರಡನೇ ಮದುವೆ ಎಂಬುದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ಸುಮಾರು ಹನ್ನೊಂದು ವರ್ಷದವರಿದ್ದಾಗಲೇ ಕಾಠಿಯಾವಾಡದ ಅಮಾಯಿ ಬಾಯಿ ಎಂಬ ಬಾಲಕಿಯೊಂದಿಗೆ ಅವರ ವಿವಾಹವಾಗಿತ್ತು. ನಂತರ 1892ರಲ್ಲಿ ಜಿನ್ನಾ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ತೆರಳಿದಾಗ ಭಾರತದಲ್ಲಿದ್ದ ಅವರ ಪತ್ನಿ ಮರಣ ಹೊಂದಿದಳು.

ಈಗ ರತಿ ತನ್ನ ಅಪಾರ ಗ್ರಂಥ ಭಂಡಾರ, ವಸ್ತ್ರ ಒಡವೆಗಳೊಂದಿಗೆ ಗೃಹಿಣಿಯಾಗಿ ಮುಂಬೈಯ ಮೌಂಟ್ ಪ್ಲೆಸಂಟ್ ರಸ್ತೆ

ಯಲ್ಲಿದ್ದ ಜಿನ್ನಾರ ಮನೆ ಬೆಳಗಿದಳು. ಸುಖ ಭೋಗಗಳ ನಡುವೆ ಬೆಳೆದ ರತಿಗೆ ಹಾಡು, ನೃತ್ಯ ಮುಂತಾದುವುಗಳಲ್ಲಿ ಅಮಿತ ಆಸಕ್ತಿ. ಆಕೆಯ ಆಕರ್ಷಕ ವ್ಯಕ್ತಿತ್ವ ಜಿನ್ನಾರನ್ನು ಆನಂದ ಸಾಗರದಲ್ಲಿ ಮುಳುಗಿಸಿತ್ತು.

ಒಂದು ದಶಕದವರೆಗೆ ಇವರಿಬ್ಬರದೂ ಅನುರೂಪ ದಾಂಪತ್ಯವಾಗಿತ್ತು. ಆದರೆ 1928ರ ಸುಮಾರಿಗೆ ಬಿರುಕುಗಳು ಕಾಣಲಾರಂಭಿಸಿದವು. ರತಿ ಗಂಡನ ಮನೆ ಬಿಟ್ಟು ತಾಜ ಮಹಲ್ ಹೋಟೆಲ್‌ನಲ್ಲಿ ವಾಸಿಸಲಾರಂಭಿಸಿದಳು.

ಅದೇ ವರ್ಷ ಜಿನ್ನಾ ಮುಂಬೈಯಿಂದ ಇಂಗ್ಲೆಂಡಿಗೆ ತೆರಳುವ ವೇಳೆಗೆ ರತಿಯ ಆರೋಗ್ಯ ಸರಿಯಾಗಿರಲಿಲ್ಲ. ಆಕೆ ತನ್ನ ತಂದೆ ತಾಯಿಗಳೊಂದಿಗೆ ಹವಾ ಬದಲಾವಣೆಗೆಂದು ಯುರೋಪಿಗೆ ಹೋಗಿದ್ದಳು.

ಕೆಲಕಾಲ ಲಂಡನ್ನಿನಲ್ಲಿದ್ದ ಜಿನ್ನಾ ನಂತರ ಐರ್ಲೆಂಡಿಗೆ ಹೋದರು. ಅದೇ ಸಮಯಕ್ಕೆ ಇತ್ತ ಪ್ಯಾರಿಸ್ಸಿನಲ್ಲಿ ರತಿಯ ಆರೋಗ್ಯ ಹದಗೆಟ್ಟು ಆಸ್ಪತ್ರೆ ಸೇರಿದಳು. ಆಗ ಪ್ಯಾರಿಸ್ಸಿನಲ್ಲೇ ಇದ್ದ ಈ ದಂಪತಿಗಳ ಗಾಢ ಸ್ನೇಹಿತ ದಿವಾನ ಚಮನಲಾಲರು ಈ ವಿಷಯದ ಬಗ್ಗೆ "ರತಿಯೆಂದರೆ ನನಗೆ ಅಚ್ಚುಮೆಚ್ಚು. ನಾನು ಸುದ್ದಿ ತಿಳಿದ ತಕ್ಷಣ ಆಸ್ಪತ್ರೆಗೆ ಧಾವಿಸಿದೆ. ಪ್ರಪಂಚದಲ್ಲಿಂದು ಆಕೆಗಿಂತ ಮಿಗಿಲಾದ ಸುಂದರಿಯಿಲ್ಲವೆಂದೇ ನನ್ನ ಭಾವನೆ" ಎಂದು ತಮ್ಮ ಪುಸ್ತಕದಲ್ಲಿ ಹೇಳಿದ್ದಾರೆ.

ಆಸ್ಪತ್ರೆಯಲ್ಲಿ ರತಿ ಕೆಲ ದಿನಗಳವರೆಗೆ ಮೂರ್ಛಾವಸ್ಥೆಯಲ್ಲಿದ್ದಳು. ಧಾವಿಸಿ ಬಂದ ಜಿನ್ನಾ ಆಕೆಯ ಹಾಸಿಗೆಯ ಪಕ್ಕದಲ್ಲೇ ಕುಳಿತು, ಶುಶ್ರೂಷೆ ಮಾಡಿದರು. ಆಕೆ ಚೇತರಿಸಿಕೊಂಡ ನಂತರ ಒಂದು ದಿನ ಇಬ್ಬರೂ ಆಸ್ಪತ್ರೆಯಲ್ಲಿ ಕುಳಿತು ಸುಮಾರು ಮೂರು ಗಂಟೆಗಳ ಕಾಲ ಮಾತನಾಡಿದರು. ಕೋಣೆಯಿಂದ ಹೊರ ಬಂದ ನಂತರ ಜಿನ್ನಾ ದಿವಾನ ಚಮನಲಾಲರಿಗೆ "ಆಕೆಯನ್ನು ನಾವು ಬದುಕಿಸಬಹುದು ಅವಳನ್ನು ಬೇರೆ ಆಸ್ಪತ್ರೆಗೆ ಸೇರಿಸೋಣ" ಎಂದು ಹೇಳಿದರು.

ಕೊನೆಗೂ ರತಿ ಸಂಪೂರ್ಣ ಚೇತರಿಸಿಕೊಂಡಳು. ನಂತರ ಜಿನ್ನಾ ಮತ್ತು ರತಿಯರ ಮಧ್ಯೆ ಪುನಃ ಹೊಂದಾಣಿಕೆಯಾಗಿದೆ ಎಂದು ಭಾವಿಸಿದ ಚಮನಲಾಲ್ ಪ್ಯಾರಿಸ್ಸಿನಿಂದ ಕೆನಾಡಕ್ಕೆ ಹೋದರು. ಆದರೆ ವಸ್ತುಸ್ಥಿತಿ ಬೇರೆಯಾಗಿತ್ತು. ಕೆಲ ದಿನಗಳ ನಂತರ ಅವರು ಪ್ಯಾರಿಸ್ಸಿಗೆ ಮರಳಿ ಬಂದು ಜಿನ್ನಾರನ್ನು ಭೇಟಿಯಾಗಿ "ರತಿ ಎಲ್ಲಿ?" ಎಂದು ಕೇಳಿದಾಗ "ನಾವಿಬ್ಬರೂ ಮತ್ತೆ ಜಗಳವಾಡಿದ್ದೇವೆ. ಆಕೆ ಮುಂಬೈಗೆ ತಿರುಗಿ ಹೋಗಿದ್ದಾಳೆ." ಎಂದು ಜಿನ್ನಾ ಉತ್ತರಿಸಿದರು.

1929ರಲ್ಲಿ ರತಿ ಮತ್ತೆ ತೀವ್ರ ಅಸ್ವಸ್ಥಳಾಗಿ ತಾಜಮಹಲ ಹೋಟೆಲಿನಲ್ಲಿ ಮಲಗಿಕೊಂಡಳು. ಎರಡು ತಿಂಗಳ ನಂತರ ಆಕೆ ಕಣ್ಮುಚ್ಚಿದಳು. ನಿಧನಳಾದಾಗ ಆಕೆಗೆ ಇನ್ನೂ 29 ವರ್ಷವೂ ತುಂಬಿರಲಿಲ್ಲ. ಆಗ ಜಿನ್ನಾ ಮುಂಬೈಯಲ್ಲಿರಲಿಲ್ಲ. ಆದರೆ ಸುದ್ದಿ ತಿಳಿದ ತಕ್ಷಣ ಧಾವಿಸಿ ಬಂದರು. ಯಾವಾಗಲೂ ತಮ್ಮ ಭಾವನೆಗಳನ್ನೆಲ್ಲಾ ಹತ್ತಿಕ್ಕಿಕೊಂಡು ನಿರ್ವಿಕಾರ ಚಿತ್ತದಿಂದಿರುತ್ತಿದ್ದ ಜಿನ್ನಾ ರತಿಯ ಶವವನ್ನು ಗೋರಿಗಿಳಿಸಿದಾಗ ದುಃಖವನ್ನು ತಡೆಯದೆ ಬಿಕ್ಕಿ ಬಿಕ್ಕಿ ಅತ್ತರು.

ರತಿಯ ನಿಧನದ ನಂತರ ಜಿನ್ನಾರ ಜೀವನದ ಗತಿಯೇ ಬದಲಾಯಿತು. ಈಗವರು ಯಾರೊಡನೆಯೂ ಹೆಚ್ಚು ಬೆರೆಯುವುದೇ ಏಕಾಕಿಯಾಗಿ ಕಾಲ ಕಳೆಯಲಾರಂಭಿಸಿದರು. ರತಿಯ ವಸ್ತ್ರ ಒಡವೆಗಳನ್ನೊಳಗೊಂಡಂತೆ ಆಕೆಯನ್ನು ನೆನಪಿಗೆ ತರುವ ಮನೆಯಲ್ಲಿನ ಪ್ರತಿಯೊಂದು ವಸ್ತುವನ್ನು ಗಂಟಿನಲ್ಲಿ ಕಟ್ಟಿಟ್ಟು ಸಾಗಿಸಲಾಯಿತು. ಆದರೂ ತಮ್ಮ ಜೀವನದುದ್ದಕ್ಕೂ ಜಿನ್ನಾರಿಗೆ ಆಕೆಯ ನೆನಪಿನಿಂದ ಪಾರಾಗುವುದು ಸಾಧ್ಯವಾಗಲೇ ಇಲ್ಲ. ●

> ಕೋಳಿ ಎಂದರೆ ಏನು ಅಂದ್ಕೊಂಡಿದೀರ. ಮೊಟ್ಟೆಯಿಂದ ಮೊಟ್ಟೆ ಮಾಡೋ ಒಂದು ಸಾಧನ ಅಷ್ಟೆ.
>
> ಸ್ಯಾಮುಯಲ್ ಬಟ್ಲರ್.

ಜೀನ್ಸ್

● ಶೇಷಗಿರಿ ಸರಾಫ ●

ಬಾನಂಚಿನಲ್ಲಿ ಸೂರ್ಯ ಕೆಂಪು ಚೆಂಡಿನಂತೆ ಹೊಳೆಯುತ್ತಿದ್ದ. ಮಂದಗಾಳಿ ಬೀಸುತ್ತಿತ್ತು. ಈಜುಗೊಳದ ಸ್ವಚ್ಛ ನೀರು ಸ್ಪಟಿಕದಂತೆ ಮಿಂಚುತ್ತಿತ್ತು.

ಓರ್ವ ಹುಡುಗ ಮತ್ತು ಹುಡುಗಿ ಮೈಮರೆತು ನೀರಿನಲ್ಲಿ ಜಿಗಿಯುತ್ತ, ಮುಳುಗುತ್ತ ಚೆಲ್ಲಾಟವಾಡುತ್ತಿದ್ದರು.

"ಕ್ಷಮಿಸಿ, ನಾನಿಲ್ಲಿ ಕುಳಿತುಕೊಳ್ಳಬಹುದೆ?"

ಚಕ್ಕನೆ ತಿರುಗಿ ನೋಡಿದೆ. ಪಕ್ಕದಲ್ಲಿ ಮುದುಕ ನೊಬ್ಬ ನಿಂತಿದ್ದ. ಅವನ ಕೆಂಬಣ್ಣದ ಮುಖದಲ್ಲಿ ನಗೆ ತುಂಬಿತ್ತು.

"ಖಂಡಿತ ಕುಳಿತುಕೊಳ್ಳಿ" ನಾನು ಹುಬ್ಬು ಹಾರಿಸಿ ನಾಟಕೀಯವಾಗಿ ನುಡಿದ.

"ಥ್ಯಾಂಕ್ಸ್" ಎನ್ನುತ್ತ ಆತ ನನ್ನ ಪಕ್ಕದಲ್ಲಿ ಕುಳಿತ. ಆ ಮುದುಕನ ಮುಖಚರ್ಯೆ, ವೇಷ ಭೂಷಣ ಆತ ಶ್ರೀಮಂತನೆಂಬುದನ್ನು ಸಾರಿ ಹೇಳುತ್ತಿದ್ದವು. ತುಂಬಿದ ಗಲ್ಲ. ಆಳಕ್ಕೆ ಇಳಿದಿದ್ದರೂ ಹುಡುಗಾಟಕ್ಕೆ ಮಿಂಚುತ್ತಿದ್ದ ಕಣ್ಣುಗಳು. ನಕ್ಕಾಗಲೆಲ್ಲ ಹಣೆಯ ಮೇಲೆ ಮೂಡುವ ಗೆರೆಗಳು...ಅವನನ್ನೇ ಎರಡು ಮೂರು ಬಾರಿ ದಿಟ್ಟಿಸಿದೆ. ಆತ ಮಾತಿಗಾರಂಭಿಸಿದ, "ನನ್ನ ಹೆಸರು ಸುಂದರರಾಜ್...ಐ ಆ್ಯಮ್ ಫ್ರಾಮ್ ಡೆಲ್ಲಿ."

ನಾನೂ ನನ್ನ ಹೆಸರು ಹೇಳಿ ಕೈ ಕುಲುಕಿದೆ.

ಹುಡುಗ ಟವೆಲ್‌ನಿಂದ ಹುಡುಗಿಯ ಬೆನ್ನು ಒರೆಸುತ್ತಿದ್ದ.

ಮುದುಕ ಕೋಟಿನ ಕಿಸೆಯಿಂದ ಸಿಗರೇಟ್ ಪ್ಯಾಕ್ ತೆರೆದ. ಒಂದು ಸಿಗರೇಟು ಬಾಯಲ್ಲಿಟ್ಟು, ಪ್ಯಾಕನ್ನು ನನ್ನ ಮುಂದೊಡ್ಡಿದ. "ಸಾರಿ, ನಾನು ಸೇದೋದಿಲ್ಲ" ಎಂದೆ.

"ಆಶ್ಚರ್ಯ" ಎನ್ನುತ್ತ ನಕ್ಕು ಪ್ಯಾಕನ್ನು ಎದುರಿಗಿನ ಟೇಬಲ್ ಮೇಲಿಟ್ಟ.

ಹುಡುಗ ನಮ್ಮ ಹತ್ತಿರ ಬಂದಿದ್ದ. ಹುಡುಗಿ ಟವೆಲ್‌ನಿಂದ ಕೂದಲು ಒರೆಸಿಕೊಳ್ಳುತ್ತ ಅವನ ಹಿಂದೆ ಬರುತ್ತಿದ್ದಳು.

"ಇಲ್ಲಿ ಕುಳಿತುಕೊಳ್ಳಬಹುದೆ?" ಹುಡುಗ ವಿನಯಪೂರ್ವಕವಾಗಿ ಪ್ರಶ್ನಿಸಿದ.

"ವೈ ನಾಟ್....ಯೂ ಮಸ್ಟ್" ಮುದುಕ ಧ್ವನಿಯೇರಿಸಿ ನುಡಿದ.

ಹುಡುಗ ಕುಳಿತುಕೊಂಡ. ಹುಡುಗಿ ಅವನ ಕುರ್ಚಿಯ ಕೈಮೇಲೆ ಕುಳಿತಳು.



ಮುದುಕನ ಬಾಯಿಯಲ್ಲಿನ ಸಿಗರೇಟು ಹಾಗೆಯೇ ಇತ್ತು. ಕೋಟಿನ ಕಿಸೆಯಲ್ಲಿ ಕೈಹಾಕಿ ತಡಕಾಡುತ್ತಿದ್ದ.

"ನಿಮಗೆ ಕಡ್ಡಿಪೆಟ್ಟಿಗೆ ಬೇಕೆ?" ಎಂದು ಆ ಹುಡುಗ ಬ್ಯಾಗಿನೊಳಗಿನ ಲೈಟರ್ ತೆಗೆದುಕೊಟ್ಟ.

"ನನ್ನ ಹೆಸರು ಮುಕುಂದ ಪರಾಂಜಪೆ. ಮುಂಬೈಯಲ್ಲಿರ್ತೀನಿ. ಇವಳು ನನ್ನ ವುಡ್‌ಬಿ ರೋಜಾ" ಪರಿಚಯ ಮಾಡಿಕೊಂಡ.

ರೋಜಾ ನಕ್ಕಾಗ ಅವಳ ಗುಲಾಬಿ ಕೆನ್ನೆಯಲ್ಲಿ ಬಿದ್ದ ಗುಳಿ ಆಕರ್ಷಕವೆನಿಸಿತು.

ಮುದುಕ ಲೈಟರ್ ಹೊತ್ತಿಸುತ್ತಿದ್ದ. ಮೂರು ಸಲ ಯತ್ನಿಸಿದರೂ ಹತ್ತಲಿಲ್ಲ. ಗಾಳಿ. ಬೀಸಿ ಆರಿ ಹೋಗುತ್ತಿತ್ತು.

"ಛೇ! ಏನೂ ಉಪಯೋಗವಿಲ್ಲ" ಎನ್ನುತ್ತ ಮುದುಕ ನಿರಾಶೆಯಿಂದ ಲೈಟರ್ ತಿರುಗಿ ಕೊಟ್ಟ.

"ಆದರೆ ನನ್ನ ಲೈಟರ್ ಬಗ್ಗೆ ನನಗೆ ಬಹಳ

ವಿಶ್ವಾಸವಿದೆ." ಹುಡುಗ ಹೇಳಿದ.

"ಇಂಪಾಸಿಬಲ್, ಇಂಥ ಗಾಳಿಯಿದ್ದಾಗ ನಿಮ್ಮ ಲೈಟರ್ ಕೆಲಸ ಕೊಡಲಾರದು." ಮುದುಕ ಗೋಣು ಹಾಕಿದ.

"ಅಧೇಗೆ ಸಾಧ್ಯವಿಲ್ಲ" ಹುಡುಗ ಹಲ್ಲು ಬಿಗಿ ಹಿಡಿದು ನುಡಿದ.

"ಆಲ್‌ರೈಟ್" ಮುದುಕ ತನ್ನ ಸಿಗರೇಟನ್ನು ಮರಳಿ ಪ್ಯಾಕ್‌ನಲ್ಲಿಡುತ್ತ ಹೇಳಿದ. "ಹಾಗಾದರೆ ಒಂದು ಜಿದ್ದು ಕಟ್ಟೋಣ.."

"ಜಿದ್ದು! ಏನದು?" ಹುಡುಗ ಹುಬ್ಬೇರಿಸಿದ.

"ವೆರಿ ಸಿಂಪಲ್" ಮುದುಕ ಹೇಳಿದ. "ನನ್ನ ಹೋಟೆಲ್ ರೂಮಿಗೆ ಹೋಗೋಣ. ಅಲ್ಲಿ ಏನೂ ಗಾಳಿ ಬರುವುದಿಲ್ಲ. ಅಲ್ಲಿ ನಿಮ್ಮ ಲೈಟರ್ ಬಗ್ಗೆ ನಿಮಗೆಷ್ಟು ವಿಶ್ವಾಸವಿದೆ ಎಂಬುದನ್ನು ಪರೀಕ್ಷಿಸೋಣ.

"ಅಧೇಗೆ? ಹುಡುಗನ ಕುತೂಹಲ ಹೆಚ್ಚುತ್ತಿತ್ತು.

"ಸತತವಾಗಿ ನಿಮ್ಮ ಲೈಟರ್ ಹತ್ತು ಸಲ ಹಚ್ಚಬೇಕು!.

"ಅದೇನು ಬಹಳ ಸುಲಭ" ಹುಡುಗ ಹೇಳಿದ.

"ಇರಲಿ, ಜಿದ್ದು ಅಂದ್ರೆ ಜಿದ್ದು. ನೀವು ಗೆದ್ದರೆ ನನ್ನ ಕಾರು ನಿಮಗೆ ಕೊಡುತ್ತೇನೆ." ಮುದುಕ ಕುರ್ಚಿಯ ತುದಿಗೆ ಬಂದು ಹೇಳಿದ.

"ಕಾರು!" ಹುಡುಗಿ ಉದ್ಗಾರ ತೆರೆದಳು.

"ಹೌದು ಕಾರು" ಮುದುಕ ಗೋಣು ಹಾಕಿದ.

"ಆಕಸ್ಮಾತ್ ಅವರು ಸೋತರೆ?" ನಾನು ಮಧ್ಯ ಬಾಯಿ ಹಾಕಿದೆ.

"ಇಷ್ಟು ದೊಡ್ಡ ಜಿದ್ದು ಕಟ್ಟುವಷ್ಟು ಶ್ರೀಮಂತ ನಾನಲ್ಲ. ಹುಡುಗ ಉಸುರಿದ.

"ನನ್ನ ಜೊತೆ ಜಿದ್ದು ಕಟ್ಟಲು ಶ್ರೀಮಂತರೇ ಬೇಕಿಲ್ಲ. ಆತ್ಮವಿಶ್ವಾಸವಿದ್ದವರು ಬೇಕು. ಆಕಸ್ಮಾತ್ ನೀವು ಸೋತರೆ ನಿಮ್ಮ ಎಡಗೈ ಕಿರುಬೆರಳು ಕೊಡಬೇಕು."

"ಕಿರುಬೆರಳು?!" ಹುಡುಗಿ ಅವಾಕ್ಕಾದಳು. ಅದನ್ನು ತೆಗೆದುಕೊಂಡು ನೀವೇನು ಮಾಡ್ತೀರಿ".

"ಅದನ್ನು ತಿಳ್ಕೊಂಡು ನೀವೇನು ಮಾಡ್ತೀರಿ?" ಮುದುಕ ಮರುಸವಾಲು ಎಸೆದ.

"ಆದ್ರೆ ಕಿರುಬೆರಳು ಕೊಡೋದು ಹೇಗೆ?"

"ಸಿಂಪಲ್" ಮುದುಕ ಹೇಳಿದ. "ನನ್ನ ಬಳಿ ಒಂದು ಹರಿತವಾದ ಚೂರಿ ಇದೆ. ನಿಮ್ಮ ಬೆರಳನ್ನು ನಾನು ಕತ್ತರಿಸಿಕೊಂಡು ಬಿಡ್ತೇನೆ."

"ನಿಜವಾಗಿಯೂ" ಹುಡುಗಿ ಬೆಚ್ಚಿಬಿದ್ದು ಕೇಳಿದಳು.

"ಜಿದ್ದು ಅಂದ್ರೆ ಜಿದ್ದು" ಮುದುಕ ನುಡಿದ.

"ಛೆ! ಇದೆಂಥ ಜಿದ್ದು?" ಹುಡುಗನ ಧ್ವನಿಯಲ್ಲಿ ಅಸಮಾಧಾನದ ಎಳೆಯಿತ್ತು.

"ಅದಕ್ಕೇ ನಾನು ಹೇಳೋದು ನನ್ನ ಜೊತೆ ಜಿದ್ದು ಕಟ್ಟೋರಿಗೆ ಛಲ ಬೇಕು." ಗೆಲುವಿನ ಧ್ವನಿಯಲ್ಲಿ ನುಡಿದ ಮುದುಕ. ಸ್ವಲ್ಪ ತಡೆದು ಮತ್ತೆ ಮಾತನಾಡಿದ. "ನೀವೂ ಕೊಂಚ ವಿಚಾರ ಮಾಡಿ. ಗೆದ್ದರೆ ಒಂದು ಕಾರು ಸಿಗುತ್ತದೆ. ಸೋತರೆ ಹೋಗುವುದು ಒಂದು ಕಿರುಬೆರಳು ...ಅದೂ ಎಡಗೈ ಕಿರಬೆರಳು."

ಹುಡುಗಿಗೆ ಇದೆಲ್ಲ ವಿಚಿತ್ರವೆನಿಸಿರಬೇಕು. "ನೋ ಡಿಯರ್ ಇದೆಲ್ಲ ಭಯಂಕರವಾಗಿ ಕಾಣುತ್ತದೆ. ನಿನಗೆ ಹಿಂಸೆಯಾದರೆ ನನಗೆಷ್ಟು ನೋವಾಗುತ್ತದೆ ಗೊತ್ತೆ?" ಎಂದು ಕೆನ್ನೆಯು ಬ್ಬಿಸಿ ಹುಡುಗನ ಕೊರಳಸುತ್ತ ಕೈಹಾಕಿ ಹೇಳಿದಳು.

ಹುಡುಗ ಒಂದೆರಡು ಕ್ಷಣ ತಡೆದು ಮುದುಕನನ್ನು ಕೇಳಿದ, "ನಿಮಗೆ ಕಾರು ಹೋದರೆ ಏನೂ ಅನಿಸುವುದಿಲ್ಲವೇ.?"

"ಇಲ್ಲ, ಎಂದೆಂದೂ ಇಲ್ಲ, ಆತ್ಮವಿಶ್ವಾಸವಿರುವ ಮನುಷ್ಯ ಸೋಲು ಗೆಲುವುಗಳನ್ನು ಒಂದೇ ರೀತಿ ಸ್ವೀಕರಿಸುತ್ತಾನೆ" ಮುದುಕ ಭುಜ ಹಾರಿಸಿದ.

ತಲೆ ಕೊಡವಿದ ಹುಡುಗ "ನಿಮ್ಮ ಕರಾರಿಗೆ ನಾನು ರೆಡಿ" ಎಂದ.

"ಓಹ್! ಇದೆಂಥ ಹುಚ್ಚು ಡಿಯರ್" ಹುಡುಗಿ ಗೊಣಗಿದಳು."ಓಕೇ ದೆನ್' ಎನ್ನುತ್ತ ಮುದುಕ ಎದ್ದು ನಿಂತ. ನಂತರ ನನ್ನತ್ತ ತಿರುಗಿ, "ಮಿಸ್ಟರ್ ಈಗ ನಿಮ್ಮಿಂದ ಒಂದು ಉಪಕಾರವಾಗಬೇಕು. ನೀವು ದಯವಿಟ್ಟು ಈ ಜಿದ್ದಿನ ನಿರ್ಣಾಯಕರಾಗಬೇಕು' ಎಂದ.

ಇದೆಲ್ಲ ವಿಚಿತ್ರವೆನಿಸಿದರೂ, ನಾನು ಕುತೂ

ಹಲದಿಂದ ಒಪ್ಪಿಕೊಂಡೆ.

ಎಲ್ಲರೂ ಮುದುಕನ ಹೊಟೆಲ್ ರೂಮಿಗೆ ಹೊರಟೆವು. ಮುದುಕ ನಾಟಕೀಯ ಶೈಲಿಯಲ್ಲಿ ಸ್ವಾಗತಿಸಿದ.

ಹುಡುಗಿಯ ಕಣ್ಣಲ್ಲಿ 'ಏನಿದೆಲ್ಲ ವಿಚಿತ್ರ' ಎಂಬಂತೆ ಕುತೂಹಲದ ಛಾಯೆ ಕುಣಿಯುತ್ತಿತ್ತು.

ಮುದುಕ ಕಪಾಟಿನಿಂದ ಕೆಲ ಕಾಗದ ಪತ್ರಗಳನ್ನು ಮತ್ತು ಡ್ರಾದಲ್ಲಿದ್ದ ಕೀಲಿಕೈಯೊಂದನ್ನು ತೆಗೆದು ನನ್ನ ಮುಂದಿಟ್ಟ. "ಇವು ಕಾರಿನ ಲೈಸನ್ಸ್, ಮುಂತಾದ ಕಾಗದ ಪತ್ರಗಳು. ಇದು ಕಾರಿನ ಕೀಲಿ ಕೈ, ಒಳ್ಳೇ ಕಾರು ಎಂದು ಹೇಳಿದ.

ನಂತರ ಮುದುಕ ಹುಡುಗನ ಪಕ್ಕದಲ್ಲೇ ಕುರ್ಚಿ ಹಾಕಿಕೊಂಡು ಕುಳಿತ. ಎದುರಿಗೆ ಸೋಫಾದ ಮೇಲೆ ನಾನು ಮತ್ತು ಹುಡುಗಿ ಕುಳಿತಿದ್ದೆವು. ಮುದುಕನ ಕೈಯಲ್ಲಿ ಚೂರಿ ಹೊಳೆಯುತ್ತಿತ್ತು!

"ನೀವು ಬಲಗೈಯಿಂದ ಲೈಟರ್ ಹಚ್ಚಬೇಕು" ಎಂದು ಮುದುಕ ಹೇಳಿ ನಂತರ ನನ್ನ ಕಡೆಗೆ ತಿರುಗಿ "ಮಿಸ್ಟರ್ ನೀವು ನಂಬರ್ ಎಣಿಸಿ" ಎಂದ. "ಆಕಸ್ಮಾತ್ ಒಂದು ಸಲ ನಿಮ್ಮ ಲೈಟರ್ ಕೈ ಕೊಟ್ಟರೂ ನಿಮ್ಮ ಕಿರುಬೆರಳು ನಿಮ್ಮ ಕೈಯಿಂದ ಬೇರೆಯಾಗುತ್ತದೆ. ಸತತ ಹತ್ತು ಸಲ ಹತ್ತಿದರೆ ನೀವು ಒಂದು ಕಾರಿನ ಮಾಲಿಕರಾಗುತ್ತೀರಿ" ಹುಡುಗನಿಗೆ ಮತ್ತೆ ಹೇಳಿದ.

ಹುಡುಗಿ ಉಸಿರು ಬಿಗಿಹಿಡಿದು ನೋಡುತ್ತಿದ್ದಳು. ಹುಡುಗ, ಬಹುಶಃ ಆಕೆಗೆ ಧೈರ್ಯ ಕೊಡಲೆಂದು ಮುಗಳ್ನಗುತ್ತಿದ್ದ.

ಒಂದು ಪ್ರಶ್ನೆ ನನ್ನ ತಲೆ ಕೊರೆಯುತ್ತಿತ್ತು. ಈ ಮುದುಕನಿಗೆ ನಿಜವಾಗಿಯೂ ಹುಡುಗನ ಬೆರಳು ಕತ್ತರಿಸುವ ಯೋಚನೆಯಿದೆಯೇ?

ಹುಡುಗ ಲೈಟರ್ ಒತ್ತಿದ. ದೀಪ ಬೆಳಗಿತು. ಹುಡುಗ ನಕ್ಕ. ಆದರೆ ಹುಡುಗಿ ನಗಲಿಲ್ಲ. ಇದೇ ರೀತಿ ಇದು ಸತತವಾಗಿ ಇನ್ನೂ ಒಂಭತ್ತು ಸಲ ಹತ್ತಬೇಕಲ್ಲ!

ನಾನು 'ಒಂದು' ಎಂದೆ

ಹುಡುಗ ಲೈಟರ್ ಆರಿಸಿ ಮತ್ತೆ ಒತ್ತಿದ. ಮತ್ತೆ ಬೆಂಕಿ ಕಾಣಿಸಿತು.

ಎರಡು!

ಹೀಗೆ ಸಾಗಿತು ಮೂರು, ನಾಲ್ಕು, ಐದು, ಆರು...,ಏಳು, ಎನ್ನುವಷ್ಟರಲ್ಲಿ ನಾವಿದ್ದ ಕೋಣೆಯ ಬಾಗಿಲು ಧಡಾರನೆ ತೆರೆದುಕೊಂಡಿತು. ಧಡೂತಿ ಹೆಂಗಸೊಬ್ಬಳು ಒಳಗೆ ಬಂದು, ಎಲ್ಲವನ್ನೂ ನೋಡಿ ಒಂದು ಕ್ಷಣ ಅವಾಕ್ಕಾಗಿ ನಿಂತಳು.

ನಂತರ "ಕೊನೆಗೂ ನೀನು ನಿನ್ನ ಚಾಳಿ ಬಿಡಲಿಲ್ಲ" ಎನ್ನುತ್ತ ಧಾವಿಸಿ ಬಂದು ಮುದುಕನ ಕೈಯಲಿದ್ದ ಚೂರಿ ಕಸಿದುಕೊಂಡಳು. "ನಾನು ಸಕಾಲಕ್ಕೆ ಬರದಿದ್ದರೆ ಮತ್ತೆ ಅನಾಹುತವಾಗುತ್ತಿತ್ತು" ಎಂದು ಕೋಪದಿಂದ ಬುಸುಗುಟ್ಟಿದಳು.

ನಂತರ ನನ್ನತ್ತ ತಿರುಗಿ "ಸಾರಿ ಜಂಟಲ್ ಮನ್. ಇದುವರೆಗೆ ಆಗಿದ್ದಕ್ಕೆಲ್ಲ ಕ್ಷಮೆ

ನೆಮ್ಮದಿಯ ನೀಡುವವರು

* ರಾಮದ್ವಾನಿ



"ಅಂತೂ ನಿಮ್ಮ ಮಗಳಿಗೆ ನೆಮ್ಮದಿ ನೀಡ್ತಿದೀರಿ..."

"ಇಂತಾವ್ರೇ ನೋಡಿ ನಮಗೆ ನೆಮ್ಮದಿ ನೀಡೋರು"

"ಈ ನೆಮ್ಮದಿ ನೀ ತಗೊ. ಓಟು ನನಗೆ ಹಾಕಿ ನನ್ನ ನೆಮ್ಮದಿ ಉಳಿಸು ಬೋರಾ..."

ಕೇಳಿಕೊಳ್ಳುತ್ತೇನೆ" ಎಂದಳು.

"ಅಂಥದ್ದೇನೂ ಆಗಿಲ್ಲ" ನಾನು ಉಸುರಿದೆ ಆಕೆ ಅದನ್ನು ಕೇಳಿಯೂ ಕೇಳದವಳಂತೆ ಮುಂದುವರೆಸಿದಳು. "ಈ ಮುದುಕ ನನ್ನ ಗಂಡ. ಇವನಿಗೆ ಜಿದ್ದು ಕಟ್ಟುವ ರೋಗ ಅಂಟಿಕೊಂಡಿದೆ. ಜೂಜು ಎಂದರೆ ಜೀವ ಕೊಡಲೂ ಸಿದ್ಧ. ಆದರೆ ನನಗೆ ಇಂಥದು ಸೇರುವುದಿಲ್ಲ. ಆದ್ದರಿಂದ ನನ್ನ ಕಣ್ಣು ತಪ್ಪಿಸಿ ತನ್ನ ಚಟ ತೀರಿಸಿಕೊಳ್ಳುತ್ತಾನೆ. ನಾನು ಸ್ನಾನ ಮಾಡಿ ಬರುವಷ್ಟರಲ್ಲಿ ಇಷ್ಟು ಗದ್ದಲ..."

ಆಕೆ ಮುದುಕನ ಶರ್ಟಿನ ಕಾಲರ್ ಹಿಡಿದು ಮಂಚದತ್ತ ನೂಕಿದಳು. ಆತ ಹಣೆ ಚಚ್ಚಿಕೊಳ್ಳುತ್ತಿದ್ದ. ಆ ಹೆಂಗಸು ಹುಡುಗನ ಹತ್ತಿರ ಬಂದು ನಿಂತು ಹೇಳಿದಳು. "ಏಕವಚನದಲ್ಲಿ ಮಾತನಾಡಿಸುತ್ತಿದ್ದೇನೆಂದು ತಪ್ಪು ತಿಳಿದುಕೊಳ್ಳಬೇಡಪ್ಪ. ಆದರೆ ಈ ವಯಸ್ಸಿನಲ್ಲಿ ಇಂಥ ಚಟಕ್ಕೇಕೆ ಬೀಳುತ್ತಿ. ಇದು ಬಹಳ ಕೆಟ್ಟ ಚಟ. ಈ ಮುದುಕ ನಿನಗೆ ಹೇಳಿರಬೇಕು. ನನಗೆ ಆತ್ಮವಿಶ್ವಾಸ ಇದ್ದಂಥವರು ಬೇಕು ಅಂತ...ಆದರೆ ಅವನಿಗೆ ನಿಜವಾಗಿ ಬೇಕಾಗಿರುವವರು ತನ್ನ ಚಟ ಪೂರೈಸುವಂಥ ಮೂರ್ಖರು".

ಕುರ್ಚಿಯಲ್ಲಿ ಕುಳಿತುಕೊಂಡು ಆಕೆ ಮತ್ತೆ ಹೇಳಲಾರಂಭಿಸಿದಳು. "ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಇದುವರೆಗೆ ಇವನು ಇದೇ ರೀತಿ ಹತ್ತು ಕಾರು ಸೋತಿದ್ದಾನೆ. ಮೂವತ್ತೆರಡು ಬೆರಳು ಕತ್ತರಿಸಿದ್ದಾನೆ."

"ನಿಜವಾಗಿಯೂ?!" ಹುಡುಗಿಯ ಮುಖ ಭೀತಿಯಿಂದ ಬಿಳಿಚಿಕೊಂಡಿತ್ತು.

"ನಾನು ಸುಳ್ಳು ಹೇಳೋದಿಲ್ಲ" ಎನ್ನುತ್ತ ಆ ಹೆಂಗಸು ಹುಡುಗನತ್ತ ತಿರುಗಿ "ಈ ಹುಡುಗಿ ಯಾರು?" ಎಂದು ಕೇಳಿದಳು.

"ನಾನು ಲಗ್ನವಾಗೋ ಹುಡುಗಿ".

ಆಕೆ ಹುಡುಗಿಯನ್ನು ಕೇಳಿದಳು. "ನೀನೇಕೆ ಇದನ್ನು ತಡೆಯಲಿಲ್ಲ? ಅಡ್ಡದಾರಿ ಹಿಡಿಯುವ ಗಂಡನನ್ನು ಸರಿಯಾದ ದಾರಿಗೆ ಹಚ್ಚುವುದು ಹೆಂಗಸಿನ ಕರ್ತವ್ಯ. ಹೌದು ನಂಗೊತ್ತು.... ನಿನ್ನ ಕಣ್ಣ ಮುಂದೆ ಕಾರು ಕುಣಿಯುತ್ತಿತ್ತು."

"ಇಲ್ಲ ನನಗೆ ಅಂಥ ಆಸೆಯಿಲ್ಲ" ಹುಡುಗಿಯ ಮುಖ ಕೆಂಪೇರಿತ್ತು.

"ಇರಬಾರದು, ಆದರೆ ಇರುತ್ತದೆ" ಹೆಂಗಸು ಸಮಾಧಾನದಿಂದ ನುಡಿದಳು. "ನಾನು ಇವನನ್ನು ಮದುವೆಯಾದದ್ದು ಜಿದ್ದಿನಿಂದಲೇ. ನನ್ನಲ್ಲೂ ಛಲವಿತ್ತು. ಅವನಷ್ಟೆ ಅಲ್ಲ, ಅವನದು ಎಂಬುವನ್ನೆಲ್ಲಾ ಜಿದ್ದು ಕಟ್ಟಿ ಗೆದ್ದುಬಿಟ್ಟೆ. ಇದರಲ್ಲಿ ನನ್ನ ಸ್ವಾರ್ಥವಿರಲಿಲ್ಲ. ಇದು ನನ್ನ ಕರ್ತವ್ಯವಾಗಿತ್ತು. ಅವನು ಈ ರೋಗದಿಂದ ಗುಣವಾಗಬೇಕೆಂದರೆ ಅವನಲ್ಲಿ ಏನೂ ಉಳಿದಿರಬಾರದು. ಆದರೂ ನನ್ನ ಪ್ರಯತ್ನ ಪೂರ್ಣವಾಗಿ ಯಶಸ್ವಿಯಾಗಿಲ್ಲ".

"ಅಂದ ಹಾಗೆ ಅವರು ತಮ್ಮ ಕಾರಿನ ಚಾವಿ ಕೊಟ್ಟಿದ್ದರು." ಎಂದು ನಾನು ಕಿಸೆಯಲ್ಲಿದ್ದ ಚಾವಿಯನ್ನು ತೆಗೆದು ಮೇಜಿನ ಮೇಲೆ ಇಟ್ಟೆ.

"ತನ್ನದೆಂದು ಆತ ಹೇಳಿರಬೇಕು. ಆದರೆ ಆ ಕಾರು ನನ್ನದು. ನೀವು ಲೈಸನ್ಸ್ ಕಾರ್ಡನ್ನು ಸರಿಯಾಗಿ ನೋಡಿರಲಿಕ್ಕಿಲ್ಲ" ಆಕೆ ಹೇಳಿದಳು.

ನಾನು ಸ್ಥಂಭೀಭೂತನಾಗಿ ಕಾಗದಪತ್ರಗಳನ್ನೂ ಆಕೆಯ ಎದುರಿಗೆ ತೆಗೆದಿಟ್ಟೆ.

ಅವಳು ಕಾಗದ ಪತ್ರ ತೆಗೆದುಕೊಳ್ಳಲು ಎದ್ದು ಬಂದು "ಈಗ ನಡೆದ ಘಟನೆಯನ್ನು ನೀವ್ಯಾರೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನನ್ನ ಗಂಡನ ಪರವಾಗಿ ನಾನು ಕ್ಷಮೆ ಬೇಡುತ್ತೇನೆ" ಎಂದಳು.

ಅಷ್ಟರಲ್ಲಿ ಅವಳು ಕಾಗದ ಪತ್ರ, ಚಾವಿ ತೆಗೆದುಕೊಳ್ಳಲು ಬಲಗೈ ಚಾಚಿದಾಗ ನಾವೆಲ್ಲರೂ ಅವಾಕ್ಕಾದೆವು. ಇಲ್ಲಿಯವರೆಗೆ ಅವಳ ಕೈ ಸೆರಗಿನ ಮರೆಯಲ್ಲಿ ಇತ್ತು. ಹೊರತೆಗೆದಾಗ ನಮಗೆ ಕಂಡದ್ದು ಒಂದೇ ಬೆರಳು-ಹೆಬ್ಬೆಟ್ಟು!

ಅವಳ ಎಡಗೈಗೆ ಎಷ್ಟು ಬೆರಳುಗಳಿರಬಹುದೆಂದು ವಿಚಾರ ಮಾಡುವ ಅಗತ್ಯವಿರಲಿಲ್ಲ. ಆ ಮುದುಕ ತನ್ನ ಜಿದ್ದು ಆರಂಭಿಸುವುದು ಎಡಗೈ ಕಿರುಬೆರಳಿನಿಂದಲೇ ಎಂಬುದು ನಮಗೆ ಗೊತ್ತಾಗಿ ಹೋಗಿತ್ತು!●

'ಅಮೇರಿಕನ್ ಕತೆಗಾರ ರೋಲ್ಡ್ ಡಾಲ್ ಅವರ ದ ಬೆಟ್. ಕತೆಯನ್ನಾಧರಿಸಿ'

ಒಂದು ನೈಜ ಘಟನೆ

ಕಿತ್ತಳೆ ಮನುಷ್ಯ

●ಮುನಿಯಾಲ್ ಗಣೇಶ್ ಶೆಣೈ

ಡಾ॥ ರಿಚರ್ಡ್ ವುಟನ್‌ನಿಗೆ ಆಸ್ಪತ್ರೆಯ ಸೇವಕಿ ತಂದಿತ್ತ 'ಎಲ್ಮೋ ಟರ್ನ್‌ರ್' ಎಂದು ಮುಂದಿನ ರೋಗಿಯ ಹೆಸರನ್ನು ಬರೆಯಲಾಗಿತ್ತು. ಆ ರೋಗಿಯ ಬಗ್ಗೆ ಹೆಚ್ಚು ಅರಿತುಕೊಳ್ಳಲು ಅವನ ಫೈಲನ್ನು ತರುವಂತೆ ಸೇವಕಿಗೆ ಹೇಳಿದ. ಸೇವಕಿ ತಂದಿತ್ತ ಫೈಲಿನಲ್ಲಿ ರೋಗಿ 53 ವರ್ಷ ವಯಸ್ಸಿನವನಾಗಿದ್ದು, ವಿವಾಹಿತನಾಗಿದ್ದಾನೆ ಎಂಬುದು ತಿಳಿಯಿತು. ಈ ಹಿಂದೆ ಟರ್ನರ್ ನ್ಯುಮೋನಿಯಾ ಮೂಳೆ ಮುರಿತ ಮೊದಲಾದ ಅನೇಕ ತೊಂದರೆಗಳಿಗೆ ಚಿಕಿತ್ಸೆ ಪಡೆದಿದ್ದ. ರಿಚರ್ಡ್ ರೋಗಿಯನ್ನು ಒಳಕಳು ಹಿಸುವಂತೆ ಹೇಳಿದ.

ಪರದೆ ಸರಿಸಿ ಎಲ್ಮೋ ಟರ್ನರ್ ಒಳಬಂದ ರಿಚರ್ಡ್ ಮಾಮೂಲಿನಂತೆ ಮುಗುಳ್ನಗೆಯ ಸ್ವಾಗತದೊಡನೆ ಎದ್ದು ನಿಂತ. ಆದರೆ ಟರ್ನರ್‌ನ ಮುಖ ನೋಡುತ್ತಿದ್ದಂತೆ ಮುಗುಳುನಗೆ ಮಾಯವಾಯಿತು. ಕಾರಣ ಟರ್ನರ್ ಮುಖ ಸಂಪೂರ್ಣ ಕಿತ್ತಳೆ ಬಣ್ಣ ತಾಳಿತ್ತು! ಸಾವರಿಸಿಕೊಂಡ ರಿಚರ್ಡ್ ಕೂತುಕೊಳ್ಳುವಂತೆ ಟರ್ನರ್‌ಗೆ ಹೇಳಿದ. ಟರ್ನರ್ ಕುಳಿತುಕೊಂಡು ತನ್ನ ಹೊಟ್ಟೆ ನೋವಿನ ಬಗ್ಗೆ ಹೇಳಲು ಶುರುಮಾಡಿದ. ಆದರೆ ರಿಚರ್ಡ್‌ಗೆ ತನ್ನೆದುರು ಕೂತಿದ್ದ ರೋಗಿಯ ಮೈಬಣ್ಣದ ಬಗೆಗೇ ಯೋಚನೆ. ಚರ್ಮ ಇಷ್ಟೊಂದು ಕಿತ್ತಳೆ ಬಣ್ಣ ತಳೆಯಲು ಕಾರಣವೇನು? ಪಿಟ್ಯುಟರಿ ಗ್ರಂಥಿಯ ತೊಂದರೆಯಿಂದ ಅಥವಾ ಒಂದು ಬಗೆಯ ಹೃದ್ರೋಗದಿಂದ ಇಲ್ಲವೆ ಥೈರಾಯ್ಡ್ ಗ್ರಂಥಿಯ ಅಸಮರ್ಪಕ ಕಾರ್ಯದಿಂದ ದೇಹದ ಬಣ್ಣ ಬದಲಾಗುವುದು ಸಹಜ. ಕಾಮಾಲೆ ರೋಗದಿಂದ ಬರುವ ಹಳದಿ ಬಣ್ಣದ ಬಗ್ಗೆ ಎಲ್ಲರಿಗೂ ಗೊತ್ತು. ಹಿಮೋಕ್ರೊಮಟೋಸಿಸ್ ಎನ್ನುವ ವಿಚಿತ್ರ ಕಾಯಿಲೆ ಬಂದಾಗ ಚರ್ಮದ ಬಣ್ಣ ತಾಮ್ರ

ವೈದ್ಯಕೀಯ ಪತ್ತೇದಾರ

ಪ್ರಸ್ತುತ ಬರಹಕ್ಕೆ ಆಧಾರ-ಬರ್ಟನ್ ರೋಶ್‌ರ ಒಂದು ಲೇಖನ. ವೈದ್ಯಕೀಯ ಪತ್ತೆದಾರರೆಂದು ಪ್ರಸಿದ್ಧರಾದ ರೋಶ್ ಬರೆದ ಲೇಖನಗಳು ರೋಚಕವಾಗಿರುತ್ತವೆ. ಅವರು ಬರೆದ 'ಹನ್ನೊಂದು ಜನ ನೀಲಿ ವ್ಯಕ್ತಿಗಳ ಕತೆ' ಒಂದು ಪತ್ತೆದಾರಿ ಕತೆಯಂತಿದೆ. ನ್ಯೂಯಾರ್ಕಿನ ಹೋಟೆಲ್‌ವೊಂದರಲ್ಲಿ ಆಹಾರ ಸೇವಿಸಿದ ಹನ್ನೊಂದು ಜನರ ಮೈ ಬಣ್ಣ ನೀಲಿಯಾಯಿತು. ವೈದ್ಯಾಧಿಕಾರಿಗಳ ಸತತ ಪತ್ತೇದಾರಿಕೆಯಿಂದ ಸತ್ಯಾಂಶ ತಿಳಿಯಿತು. ಆ ಹೋಟೆಲಿನ ಬಾಣಸಿಗ ಸೋಡಿಯಂ ಕ್ಲೋರೈಡ್‌ಗೆ (ಅಡಿಗೆ ಉಪ್ಪು) ಬದಲು ಸೋಡಿಯಂ ನೈಟ್ರೈಟ್ (ಉಪ್ಪಿನ ರುಚಿಯಿರುವ ವಸ್ತು) ಬಳಸಿದ್ದ. ಪತ್ತೇದಾರಿ ಸಾಹಿತ್ಯದಲ್ಲಿ ಚಿರಸ್ಥಾನ ಪಡೆದಿರುವ ಸರ್ ಆರ್ಥರ್ ಕಾನನ್‌ಡಾಯ್ಲ್ ಸಾಹಿತಿಯಾಗಲು ಕಾರಣವೆಂದರೆ ಆತನ ಗುರುವಾದ ಡಾಕ್ಟರ್ ಜೋಸೆಫ್ ಬೆಲ್‌ನ ರೋಗ ಪರೀಕ್ಷಾ ವಿಧಾನಗಳು.

ವರ್ಣ ತಾಳುವುದುಂಟು. ಆದರೆ ಕಿತ್ತಳೆ ಬಣ್ಣ ತರುವಂತಹ ಕಾಯಿಲೆ ಯಾವುದೂ ಇಲ್ಲ!

ಟರ್ನರ್ ತನ್ನ ದೇಹದ ವಿಚಿತ್ರ ಬಣ್ಣದ ಬಗ್ಗೆ ಹೇಳುತ್ತಾನೆಂದು ರಿಚರ್ಡ್ ನಿರೀಕ್ಷಿಸಿದ್ದ. ಆದರೆ ಟರ್ನರ್ ತನ್ನ ಹೊಟ್ಟೆ ನೋವಿನ ಬಗ್ಗೆಯೇ ಹೇಳುತ್ತ ಹೋದ. ರಿಚರ್ಡ್ ರೋಗಿಯನ್ನು ಮಲಗಿಸಿ ಪರೀಕ್ಷಿಸಿದ. ರೋಗಿಯ ದೇಹ ಪೂರ್ತಿ ಕಿತ್ತಳೆ ಬಣ್ಣ ತಾಳಿರುವುದನ್ನು ರಿಚರ್ಡ್ ಗಮನಿಸಿದ. ಹೊಟ್ಟೆ ನೋವಿಗೂ ಈ ವಿಚಿತ್ರ ಕಿತ್ತಳೆ ಬಣ್ಣಕ್ಕೂ ಸಂಬಂಧವಿರಬಹುದೆಂದು ಅವನು ಶಂಕಿಸಿದ. ರೋಗಿಯ ಉದರ ಭಾಗವನ್ನು ಕೈಯಿಂದ ಒತ್ತಿ ಪರೀಕ್ಷಿಸುತ್ತಿರುವಾಗ ಒಳಗೆ ಸೇಬಿನ ಗಾತ್ರದ ಗಂಟೊಂದು ಇರುವುದು ಗೊತ್ತಾಯಿತು.

ಹೆಚ್ಚಿನ ಪರೀಕ್ಷೆಗಾಗಿ ಮರುದಿನ ಬರುವಂತೆ ರಿಚರ್ಡ್ ಸೂಚಿಸಿದಾಗ ಟರ್ನರ್ ಒಪ್ಪಿ ಎದ್ದು ಹೊರಡಲನುವಾದ. ರಿಚರ್ಡ್ "ಅಂದ ಹಾಗೆ, ಎಂದಿನಿಂದ ನಿಮ್ಮ ಮೈ ಬಣ್ಣ ಈ ರೀತಿಯಾಗಿದೆ" ಎಂದು ಕೇಳಿದಾಗ ಟರ್ನರ್ ಆಶ್ಚರ್ಯದಿಂದ "ಯಾವ ಬಣ್ಣ?" ಎಂದ. ರಿಚರ್ಡ್ ಟರ್ನರ್‌ನ ಮೈ ಬಣ್ಣ ಕಿತ್ತಳೆಯಾಗಿರುವುದನ್ನು ಸೂಚಿಸಿದಾಗ ಆತನಿಗೆ ಅರ್ಥವಾಗಲಿಲ್ಲ. ತನ್ನ ಬಣ್ಣ ಮೊದಲಿನಿಂದಲೂ ಹೀಗೆಯೇ ಇದೆ ಎಂದಾತ ವಾದಿಸಿದ.

ಮರುದಿನ ರಿಚರ್ಡ್ ಟರ್ನರ್‌ನ ವೈದ್ಯಕೀಯ ತಪಾಸಣೆಯ ವರದಿ, ಎಕ್ಸ್‌ರೇ ಚಿತ್ರ ಗಮನಿಸಿದ. ರೋಗಿಯ ದೇಹದ ಉಷ್ಣತೆ, ನಾಡಿಬಡಿತ, ರಕ್ತದ ಒತ್ತಡ, ಮೂತ್ರ ವಿಶ್ಲೇಷಣೆ, ಎಲ್ಲವೂ ಆತ ಆರೋಗ್ಯವಂತನೆಂದು ಸೂಚಿಸುತ್ತಿದ್ದವು. ಎಕ್ಸ್‌ರೇ ವರದಿಯ ಪ್ರಕಾರ ಶ್ವಾಸಕೋಶ, ಹೃದಯ ಸರಿಯಾಗಿದ್ದು ಉದರದಲ್ಲಿ ಮಿಥ್ಯ ಊತವಿರುವುದು ಪತ್ತೆಯಾಗಿತ್ತು. ಮಿಥ್ಯ ಊತ (Pseudo Cyst) ಅಂಥ ಅಪಾಯಕಾರಿಯೇನೂ ಅಲ್ಲ. ಸಾಮಾನ್ಯ ಊತವೆಂದರೆ ದೇಹದಲ್ಲಿ ಉಂಟಾಗುವ ದ್ರವ ಭರಿತ ಚೀಲ. ಆದರೆ ಮಿಥ್ಯ ಊತವೆಂದರೆ ಗಾಳಿ ತುಂಬಿರುವ ಚೀಲ. ಮಿಥ್ಯ ಊತದ ಒಂದು ಒಳ್ಳೆಯ ಗುಣವೆಂದರೆ ಅದಕ್ಕೆ ಯಾವುದೇ ಚಿಕಿತ್ಸೆಯ ಅಗತ್ಯವಿಲ್ಲ. ತಂತಾನೇ ಮಾಯುವ ಗುಣ ಅದಕ್ಕಿದೆ. ರಿಚರ್ಡ್ ಈ ಸಂಗತಿಗಳನ್ನು ಟರ್ನರ್‌ಗೆ ವಿವರಿಸಿ, "ಈಗ ಯಾವುದೇ ಚಿಕಿತ್ಸೆ ಬೇಡ. ಸ್ವಲ್ಪ ದಿನ ಕಾದು ನೋಡೋಣ. ಹೊಟ್ಟೆಗೆ ಗಾಯವಾಗುವಂಥ ಯಾವ ಕೆಲಸಗಳನ್ನೂ ಮಾಡಬೇಡಿ. ಮತ್ತೆ ಕೆಲವು ಪರೀಕ್ಷೆಗಳನ್ನು ಮಾಡುವ ಅಗತ್ಯವಿದೆ" ಎಂದು ಹೇಳಿದ.

ಆದರೆ ಟರ್ನರ್‌ನ ಉದರದಲ್ಲಿದ್ದ ಊತ ತನ್ನ ಒತ್ತಡದಿಂದಾಗಿ ಇನ್ಸುಲಿನ್ ಉತ್ಪಾದನೆ ಕುಂಠಿತವಾಗುವಂತೆ ಮಾಡಿ ಮಧುಮೇಹಕ್ಕೆ ಕಾರಣವಾಗುವ ಭೀತಿಯಿತ್ತು. ಇದನ್ನು ಪರೀಕ್ಷಿಸುವ ಸಮಯದಲ್ಲೇ ಟರ್ನರ್‌ನ ಕಿತ್ತಳೆ ಮೈ ಬಣ್ಣಕ್ಕೆ ಕಾರಣವನ್ನು ಹುಡುಕಬೇಕಿತ್ತು. ಟರ್ನರ್‌ನ ದೇಹದ ಚರ್ಮದಲ್ಲಿ ಕಬ್ಬಿಣಾಂಶ ಸಂಚಯಗೊಂಡು ಒಮೋಕ್ರೊಮಟೋಸಿಸ್ ಎನ್ನುವ ಕಾಯಿಲೆ ಬಂದಿರಬಹುದೇ ಎನ್ನುವ ಸಂಶಯ ರಿಚರ್ಡ್‌ಗೆ ಬಂತು. ಇದಕ್ಕಾಗಿ ಟರ್ನರ್‌ನ ರಕ್ತ ಪರೀಕ್ಷೆ ಮಾಡಲು ನಿರ್ಧರಿಸಿದ.

ಮರುದಿನ ರಿಚರ್ಡ್ ಆಸ್ಪತ್ರೆಯ ವಾರ್ಡಿನಲ್ಲಿ ರೋಗಿಗಳನ್ನು ನೋಡುತ್ತ ಬಂದ. ಟರ್ನರ್‌ನ ಮಂಚದ ಹತ್ತಿರ ಬಂದಾಗ ಅಲ್ಲಿ ವೈದ್ಯಕೀಯ ವಿಶ್ಲೇಷಣೆಯ ವರದಿಗಳು ಇದ್ದವು. ರಿಚರ್ಡ್ ಭಾವಿಸಿದಂತೆ ಚರ್ಮದಲ್ಲಿ ಕಬ್ಬಿಣಾಂಶದ ಸಂಚಯವಿರಲಿಲ್ಲ. ಮಧುಮೇಹವೂ ಇರಲಿಲ್ಲ. ಕಾಮಾಲೆ ರೋಗವಿರಬಹುದೆಂದು ಟರ್ನರ್‌ನ ಕಣ್ಣುಗಳನ್ನೂ ಪರೀಕ್ಷಿಸಲಾಯಿತು. ಆದರೆ ಕಣ್ಣುಗಳಲ್ಲಿ ಹಳದಿ ಛಾಯೆ ಇರಲಿಲ್ಲ.

ಮೈಬಣ್ಣದ ಸಮಸ್ಯೆಯಲ್ಲೇ ಮುಳುಗಿದ್ದ ರಿಚರ್ಡ್ ಟರ್ನರ್‌ನನ್ನು ಪ್ರಶ್ನಿಸಿದ, "ಇತ್ತೀಚೆಗೆ ಯಾವುದಾದರೂ ಔಷಧಿಗಳನ್ನು ತೆಗೆದುಕೊಳ್ಳುತ್ತಿದ್ದೀರಾ?"

"ಇಲ್ಲ".

"ನಿಮ್ಮ ಪ್ರತಿದಿನದ ಆಹಾರ ಸೇವನೆ ಬಗ್ಗೆ ಸ್ವಲ್ಪ ಹೇಳಿ".

ಈ ಪ್ರಶ್ನೆಗೆ ಅಲ್ಲಿಯೇ ಇದ್ದ ಟರ್ನರ್‌ನ ಹೆಂಡತಿ ಉತ್ತರಿಸಿದಳು. "ಪ್ರತಿದಿನವೂ ಮುಂಜಾನೆ ಉಪಾಹಾರಕ್ಕೆ ಬ್ರೆಡ್, ಬೇಯಿಸಿದ ಮೊಟ್ಟೆ, ಕಿತ್ತಳೆ ರಸ ತೆಗೆದುಕೊಳ್ಳುತ್ತಾರೆ. ಅಂದಹಾಗೆ, ಇವರಿಗೆ ಕ್ಯಾರಟ್ (ಗಜ್ಜರಿ)

‘ಎ’ ಜೀವಸತ್ವ

- ದೇಹದ ರಾಸಾಯನಿಕ ಪ್ರಕ್ರಿಯೆಗಳಿಗೆ ಜೀವಸತ್ವಗಳ ಅಗತ್ಯವಿದೆ.
- ದೇಹದ ಕೆಲ ಭಾಗಗಳಲ್ಲಿ, ಅಲ್ಲಿನ ಅಂಗಾಂಗಳ ಕೆಲಸವನ್ನು ಅನುಸರಿಸಿ ಯಾವುದಾದರೂ ಜೀವಸತ್ವ ಹೆಚ್ಚಾಗಿರಬಹುದು. ಉದಾಹರಣೆಗೆ ಕಣ್ಣಿನಲ್ಲಿ ಮತ್ತು ಯಕೃತ್ತಿನಲ್ಲಿರುವ ‘ಎ’ ಜೀವಸತ್ವ
- ಜೀವಸತ್ವಗಳನ್ನು ಎರಡು ಗುಂಪಾಗಿ ಮಾಡಬಹುದು: ನೀರಿನಲ್ಲಿ ಕರಗುವ ಜೀವಸತ್ವಗಳು (‘ಬಿ’ ಗುಂಪಿನ ಮತ್ತು ‘ಸಿ’ ಜೀವಸತ್ವಗಳು) ಮತ್ತು ಕೊಬ್ಬಿನಲ್ಲಿ ಕರಗುವ ಜೀವಸತ್ವಗಳು (ಎ, ಡಿ, ಇ, ಮತ್ತು ‘ಕೆ’ ಜೀವಸತ್ವಗಳು)
- ಪ್ರಸ್ತುತ ಲೇಖನದಲ್ಲಿ ಬರುವ ಕೆರೊಟಿನ್ ಎನ್ನುವುದು ಅನೇಕ ತರಕಾರಿಗಳಲ್ಲಿರುತ್ತದೆ. ನಮ್ಮ ದೇಹದಲ್ಲಿ ಕೆರೊಟಿನ್ ‘ಎ’ ಜೀವಸತ್ವವಾಗಿ ಪರಿವರ್ತಿತವಾಗಿ ಶೇಖರವಾಗುತ್ತದೆ. ಹೀಗೆ ಶೇಖರಗೊಳ್ಳುವ ಕಾರಣದಿಂದ ಹೆಚ್ಚಾಗಿ ‘ಎ’ ಜೀವಸತ್ವ ಸೇವಿಸುವುದು ಅಪಾಯಕರ. ‘ಎ’ ಜೀವಸತ್ವದ ಹೆಚ್ಚಿನ ಸಂಗ್ರಹದಿಂದ ಹೊಟ್ಟೆ, ಊತ ಹೊಟ್ಟೆ ನೋವು ಬರಬಹುದು.
- ಭಾರತದಲ್ಲಿ ‘ಎ’ ಜೀವಸತ್ವದ ಕೊರತೆಯಿಂದ ಪ್ರತಿವರ್ಷ ಸಾವಿರಾರು ಮಕ್ಕಳು ಅಂಧರಾಗಿ ಹುಟ್ಟುತ್ತಿದ್ದಾರೆ. ದೃಷ್ಟಿಶಕ್ತಿ, ದೇಹದ ಬೆಳವಣಿಗೆ ಮತ್ತು ಚರ್ಮದ ಆರೋಗ್ಯಕ್ಕಾಗಿ ‘ಎ’ ಜೀವಸತ್ವ ಅತ್ಯಗತ್ಯ.

ಎಂದರೆ ಬಹಳ ಇಷ್ಟ. ಯಾವಾಗ ನೋಡಿದರೂ ಕ್ಯಾರಟ್ ತಿನ್ನುತ್ತಿರುತ್ತಾರೆ. ಜೊತೆಗೆ ಟೊಮೆಟೊ ರಸವನ್ನು ಹೆಚ್ಚಾಗಿ ಕುಡಿಯುತ್ತಾರೆ".

ರಿಚರ್ಡ್‌ನಿಗೆ ಆಶ್ಚರ್ಯವಾಯಿತು. "ಹೆಚ್ಚಾಗಿ ಕ್ಯಾರಟ್ ತಿನ್ನಲು ಟೊಮೆಟೋ ರಸ ಕುಡಿಯಲು ಕಾರಣವೇನಾದರೂ ಇದೆಯೆ?" ಎಂದು ಕೇಳಿದ. ಈ ಪ್ರಶ್ನೆಗೆ ಟರ್ನರ್ ಉತ್ತರಿಸಿದ. "ಹೌದು, ನಾನು ಎಲ್ಲೊ ಓದಿದ್ದೆ. ನಮ್ಮ ದೇಹಕ್ಕೆ ಜೀವ ಸತ್ವಗಳ ಅಗತ್ಯವಿದೆಯೆಂದು. ಕ್ಯಾರಟ್ ಮತ್ತು ಟೊಮೆಟೊ ರಸದಲ್ಲಿ ಜೀವ ಸತ್ವಗಳು ಹೆಚ್ಚಾಗಿದೆಯಂತಲ್ಲ?"

ರಿಚರ್ಡ್‌ನಿಗೆ ಈಗ ಟರ್ನರ್‌ನ ಕಿತ್ತಳೆ ಮೈ ಬಣ್ಣದ ಕಾರಣ ತಿಳಿಯಿತು. ಕ್ಯಾರಟ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೆರೊಟಿನ್ (‘ಎ’ ಜೀವ ಸತ್ವ) ಇರುತ್ತದೆ. ಕೆರೊಟಿನ್ ಒಂದು ಹಳದಿ ವರ್ಣಕಾರಕ (ಪಿಗ್ಮೆಂಟ್). ಟರ್ನರ್‌ನ ರಕ್ತದಲ್ಲಿ ಕೆರೊಟಿನ್ ಪ್ರಮಾಣ ಎಷ್ಟಿದೆಯೆಂದು ಪರೀಕ್ಷಿಸುವಂತೆ ರಿಚರ್ಡ್ ಆಸ್ಪತ್ರೆಯ ತಜ್ಞರಿಗೆ ಹೇಳಿದ. ಕ್ಯಾರಟ್‌ನಲ್ಲಿರುವ ಹಳದಿ ವರ್ಣಕಾರಕ ಮತ್ತು ಟೊಮೆಟೊನಲ್ಲಿರುವ ಕೆಂಪು ವರ್ಣಕಾರಕ ಲೈಕೋಪೀನ್ ಮಿಶ್ರವಾಗಿ ಕಿತ್ತಳೆ ಬಣ್ಣ ಮೂಡಿರಬಹುದೆಂದು ಅವನಿಗನ್ನಿಸಿತು.

ಮರುದಿನ ಟರ್ನರ್‌ನ ರಕ್ತಪರೀಕ್ಷೆಯ ವರದಿ ಬಂದಾಗ ರಿಚರ್ಡ್‌ನ ಊಹೆ ನಿಜವಾಗಿತ್ತು. ಟರ್ನರ್‌ನ ದೇಹದಲ್ಲಿ ಕೆರೊಟಿನ್ ಪ್ರಮಾಣ ಬಹಳ ಹೆಚ್ಚಾಗಿತ್ತು. ರಿಚರ್ಡ್‌ಗೆ ಟರ್ನರ್‌ನ ಕಾಯಿಲೆ ಕೆರೋಟಿನೀಮಿಯ ಲೈಕೋಪಿನೀಮಿಯದ ಸ್ಪಷ್ಟ ಚಿತ್ರ ಸಿಕ್ಕಿತು. ಆದರೆ ಈ ಕಾಯಿಲೆ ತೀರಾ ಅಪರೂಪ. ಇಡೀ ಪ್ರಪಂಚದಲ್ಲಿ ಇಂಥ ರೋಗಿಗಳ ಸಂಖ್ಯೆ ಕೈಬೆರಳೆಣಿಕೆಯಷ್ಟು ಮಾತ್ರ. ಮುಂದೆ ಕ್ಯಾರಟ್ ಟೊಮೆಟೋ ಮತ್ತು ಹಳದಿ ಬಣ್ಣದ ತರಕಾರಿಗಳನ್ನು ಸೇವಿಸದಿರಲು ರಿಚರ್ಡ್ ಟರ್ನರ್‌ನಿಗೆ ಸೂಚಿಸಿದ. ಯಾವ ಔಷಧಿಯೂ ಇಲ್ಲದೆ ಕೆಲ ತಿಂಗಳಲ್ಲೇ ಟರ್ನರ್‌ನ ಮೈ ಬಣ್ಣ ಸಾಮಾನ್ಯ ಸ್ಥಿತಿಗೆ ಮರಳಿತು. ಜೊತೆಗೆ ಹೊಟ್ಟೆ ನೋವು ಸಹ ಗುಣವಾಯಿತು. ನಂತರ ರಿಚರ್ಡ್ ಪರೀಕ್ಷಿಸಿದಾಗ ಟರ್ನರ್‌ನ ಉದರದಲ್ಲಿದ್ದ ಮಿಥ್ಯ ಊತವೂ ಮಾಯವಾಗಿತ್ತು.

(ಆಧಾರಿತ)

ಮನುಕುಲಕ್ಕೊಂದು ಆಶಾಕಿರಣ

ಜೀವ ತಂತ್ರಜ್ಞಾನ

● ಜಿ. ಕೃಷ್ಣ ಪ್ರಸಾದ್ ●

ಈಚಿನ ದಶಕಗಳಲ್ಲಿ ಜೀವವಿಜ್ಞಾನ ಬೆಳೆದು. ಅನೇಕ ಅತ್ಯಮೂಲ್ಯ ಸಂಶೋಧನೆಗಳು ಬೆಳಕು ಕಾಣುವಂತಾಗಿದೆ. ಇಂದು ಜೀವವಿಜ್ಞಾನ ಉಳಿದ ಕ್ಷೇತ್ರಗಳಿಗಿಂತ ಹೆಚ್ಚು ಪ್ರಾಮುಖ್ಯ ವನ್ನು ಪಡೆಯುವುದರ ಜೊತೆಗೆ, ಮಾನವನ ಬದುಕನ್ನು ಸುಂದರಗೊಳಿಸುವ ಭರವಸೆ ನೀಡು ತ್ತಿದೆ. ಜಗತ್ತಿನಾದ್ಯಂತ ಜನ ಜೀವವಿಜ್ಞಾನ ದಲ್ಲಿಯ ಸಂಶೋಧನೆಗಳನ್ನು ಅಚ್ಚರಿಯಿಂದ ಎದುರು ನೋಡುವಂತಾಗಿದೆ. ಈ ದಿಸೆಯಲ್ಲಿ ಜೀವ ತಂತ್ರಜ್ಞಾನ (Biotechnology) ಜೀವ ವಿಜ್ಞಾನ ಕ್ಷೇತ್ರದಲ್ಲೇ ಹೊಸ ಕ್ರಾಂತಿಯನ್ನು ಉಂಟು ಮಾಡಿರುವುದಲ್ಲದೆ, ಮನುಕುಲದ ಪಾಲಿಗೆ ಆಶಾಕಿರಣವಾಗಿ ಮೂಡಿಬರುವ ಸಾಧ್ಯತೆಗಳನ್ನು ತೋರುತ್ತಿದೆ.

ಜೀವ ತಂತ್ರಜ್ಞಾನ, ಏಕೆ? ಹೇಗೆ

ಸಸ್ಯಗಳ ಮತ್ತು ಪ್ರಾಣಿಗಳ ಜೀವಕೋಶ ಗಳನ್ನು ಅಥವಾ ಅವುಗಳ ಭಾಗಗಳನ್ನು ಉಪ ಯೋಗಿಸಿ, ಅವುಗಳಿಂದ ಸುಧಾರಿತವಾದ ಹೆಚ್ಚು ಉಪಯುಕ್ತವಾದ ಜೀವಕೋಶಗಳನ್ನು ಪಡೆಯುವ ವಿಧಾನವೇ 'ಜೀವ ತಂತ್ರಜ್ಞಾನ' ಇದರಿಂದ ಕೈಗಾರಿಕೆ ಕೃಷಿ ಆರೋಗ್ಯ ಮೊದ ಲಾದ ಕ್ಷೇತ್ರಗಳಲ್ಲಿ ಜೀವ ತಂತ್ರಜ್ಞಾನ ಇಂದು ನಮ್ಮ ನೆರವಿಗೆ ಬರುತ್ತಿದೆ. ಇದು ಹೇಗೆಂಬು ದನ್ನು ಅರಿಯುವ ಮೊದಲು ಜೀವ ತಂತ್ರ ಜ್ಞಾನದಡಿಯಲ್ಲಿ ಬಳಸಲಾಗುವ ತಳಿ ತಂತ್ರ ಜ್ಞಾನ ಮತ್ತು ಪುನರ್ ಸಂಯೋಜಿತ ಡಿಎನ್‌ಎ ಬಗ್ಗೆ ಪರಿಚಯ ಅವಶ್ಯ.

ತಳಿ ತಂತ್ರಜ್ಞಾನ


ಜೀವಕೋಶವನ್ನು ಸಣ್ಣ ರಾಸಾಯನಿಕ ಕಾರ ಖಾನೆಗೆ ಹೋಲಿಸಬಹುದು. ಜೀವಕೋಶದ ಬೀಜದಲ್ಲಿ (Nucleous) ವರ್ಣತಂತು (Chromosomes)ಗಳಿರುತ್ತವೆ. ಈ ವರ್ಣ ತಂತುಗಳಲ್ಲಿ ಜೀನ್‌ಗಳೆಂಬ ವಂಶವಾಹಿ ಗಳಿರುತ್ತವೆ. ಇವು ಜೀವಿಗಳ ಪ್ರಮುಖ ಲಕ್ಷಣ ಗಳನ್ನು ಸಂತತಿಯಿಂದ ಸಂತತಿಗೆ ಸಾಗಿಸುತ್ತವೆ. ಈ ವಂಶವಾಹಿಗಳು ಜೀವಕೋಶ ಹಾಗೂ ದೈಹಿಕ ಬೆಳವಣಿಗೆಗೆ ಸಂಬಂಧಪಟ್ಟ ಎಲ್ಲ ಕ್ರಿಯೆಗಳನ್ನು ನಿಯಂತ್ರಿಸುತ್ತವೆ. ಇವುಗಳ ರಚನೆಯಲ್ಲಿ ಮತ್ತು ಕಾರ್ಯಾಚರಣೆಯಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಾದರೂ ಜೀವಿಗಳಲ್ಲಿ ಬಹಳ ದೊಡ್ಡ ಬದಲಾವಣೆಯೇ ಉಂಟಾಗು ತ್ತದೆ. ಈ ವಂಶವಾಹಿಗಳಲ್ಲಿ ಡಿಎನ್‌ಎ (Deoxiribose nuclic Acid) ಮತ್ತು ಆರ್‌ಎನ್‌ಎ (Ribose Nuclic Acid) ಎಂಬ ಬಗೆಯ ನ್ಯೂಕ್ಲಿಯಿಕ್ ಆಮ್ಲಗಳಿರುತ್ತವೆ. ಡಿಎನ್‌ಎ ಎಂಬುದು ಎಲ್ಲ ಜೀವಿಗಳಲ್ಲೂ ಇರುವ ಅನುವಂಶಿಕ ವಸ್ತು. ಡಿಎನ್‌ಎ ಅಣು ವಿನ ರಚನೆ ನೋಡಲು ಉದ್ದನೆಯ ಹಗ್ಗದ ಏಣಿಯನ್ನು ಹೋಲುತ್ತದೆ (ಚಿತ್ರ ನೋಡಿ) ಡಿಎನ್‌ಎ ತುಂಬ ಉದ್ದವೂ, ಬಹು ತೆಳುವೂ ಆದ, ಆದರೆ ಬಿಗಿಯಾದ ಅಣು. ಪ್ರತಿ ಡಿಎನ್‌ಎ ದ್ವಿಸುರುಳಿ (Double Aelsx)ಯು ಎರಡು ನ್ಯೂಕ್ಲಿಯೋಟೈಡ್ ತಂತುಗಳಿಂದ ಕೂಡಿರುತ್ತದೆ. ಪ್ರತಿ ನ್ಯೂಕ್ಲಿಯೋಟೈಡ್ ಘಟಕ

ಸಾರಜನಕ ಸಂಯುಕ್ತ ಫಾಸ್ಫೇಟ್ ಮತ್ತು ಶರ್ಕರಗಳ ಕೂಡುವಿಕೆಯಿಂದ ಉಂಟಾಗಿರುತ್ತದೆ. ಸಾರಜನಕ ಸಂಯುಕ್ತಗಳೆಂದರೆ ಅಡಿನೀನ್(ಎ) ಗ್ಯಾನೀನ್(ಜ) ಸೈಟೋಸೀನ್(ಸಿ) ಮತ್ತು ಥೈಮೀನ್(ಟಿ). ಈ ನ್ಯೂಕ್ಲಿಯೋಟೈಡ್ ತಂತುಗಳು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿರ್ದಿಷ್ಟ ಸ್ಥಳಗಳಲ್ಲಿ ಜಲಜನಕ ಬಂಧ (Hydrogen Bond)ಗಳಿಂದ ಕೂಡಿಸಲ್ಪಟ್ಟಿರುತ್ತವೆ. ಜಲಜನಕ ಬಂಧವು ಒಂದು ಎಳೆಯಲ್ಲಿರುವ ಅಡಿನೀನ್‌ಗೂ, ವಿರುದ್ಧ ಎಳೆಯಲ್ಲಿರುವ ಥೈಮೀನ್‌ಗೂ ಮತ್ತು ಒಂದು ಎಳೆಯಲ್ಲಿರುವ ಗ್ಯಾನೀನ್‌ಗೂ, ವಿರುದ್ಧ ಎಳೆಯಲ್ಲಿರುವ ಸೈಟೋಸೀನ್‌ಗೂ ಸಂಬಂಧ ಕಲ್ಪಿಸಿರುತ್ತದೆ. ಅರ್ಥಾತ್ 'ಎ'ಗೆ 'ಟಿ' ಸಮ 'ಜ'ಗೆ 'ಸಿ' ಸಮನಾಗಿರುತ್ತದೆ.

ಸಾರಜನಕ ಸಂಯುಕ್ತಗಳ ಜೋಡಣೆಯ ರೀತಿಯನ್ನು 'ಜೆನೆಟಿಕ್ ಕೋಡ್' ಎಂದು ಕರೆಯಲಾಗುತ್ತದೆ. ಪ್ರತಿಯೊಂದು ಜೀವಿಗೂ ಪ್ರತ್ಯೇಕವಾದ ಜೆನೆಟಿಕ್ ಕೋಡ್ ಇವೆ. ಜೀವಿಗಳ ಗುಣ ವ್ಯತ್ಯಾಸಕ್ಕೆ ಇದೇ ಕಾರಣ. ಜೆನೆಟಿಕ್ ಕೋಡ್‌ನ ರಹಸ್ಯ ಈಗ ವಿಜ್ಞಾನಿಗಳಿಗೆ ತಿಳಿದು ಬಂದಿರುವುದರಿಂದ ಕೃತಕ ವಂಶವಾಹಿಗಳ ತಯಾರಿಕೆ, ಒಂದು ಜೀವಿಯಿಂದ ಮತ್ತೊಂದು ಜೀವಿಗೆ ವಂಶವಾಹಿಗಳ ವರ್ಗಾವಣೆ ಮತ್ತು ಹೊಸ ವಂಶವಾಹಿಯ ಉತ್ಪಾದನೆ ಸಾಧ್ಯವಾಗಿದೆ. ಹೀಗೆ ವಂಶವಾಹಿಗಳೊಂದಿಗೆ ಪ್ರಯೋಗಗಳನ್ನು ನಡೆಸುವ ತಂತ್ರಜ್ಞಾನವೇ 'ಜೆನೆಟಿಕ್ ಎಂಜಿನಿಯರಿಂಗ್' ಅಥವಾ 'ತಳಿ ತಂತ್ರಜ್ಞಾನ.' ಇದರ ಇತ್ತೀಚಿನ ಮಹತ್ವದ ಸಂಶೋಧನೆಯೆಂದರೆ 'ಪುನರ್ ಸಂಯೋಜಿತ ಡಿಎನ್ಎ (Recombinat D.N.A.)

ಪುನರ್ ಸಂಯೋಜಿತ ಡಿ.ಎನ್.ಎ:

1960ರಲ್ಲಿ ನಿರ್ಬಂಧಿತ ಕಿಣ್ವಗಳ ಆವಿಷ್ಕಾರವಾದ ಮೇಲೆ ಪುನರ್ ಸಂಯೋಜಿತ ಡಿಎನ್ಎ ತಂತ್ರಜ್ಞಾನವು ಬೆಳಕಿಗೆ ಬರಲು ಸಾಧ್ಯವಾಯಿತು. ವಿಜ್ಞಾನಿಗಳು ನಿರ್ಬಂಧಿತ ಕಿಣ್ವಗಳ ನೆರವಿನಿಂದ ಡಿಎನ್ಎಯನ್ನು ನಿರ್ದಿಷ್ಟ ಸ್ಥಳಗಳಲ್ಲಿ ಕತ್ತರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪುನರ್ ಸಂಯೋಜಿತ ಡಿಎನ್ಎ ತಂತ್ರಜ್ಞಾನವೇ ಇಂದು ಜೀವ



ಡಿ.ಎನ್.ಎ. ದ್ವಿಸುರುಳಿ

S — ಶರ್ಕರ P — ಫಾಸ್ಫೇಟ್

A — ಅಡಿನೀನ್, G — ಗ್ಯಾನೀನ್,

T — ಥೈಮೀನ್, C — ಸೈಟೋಸೀನ್

ತಂತ್ರಜ್ಞಾನ ಪ್ರಗತಿಯಾಗಲು ಕಾರಣವಾಗಿದೆ.

ಈ ವಿಧಾನದಲ್ಲಿ ಅನುವಂಶಿಕತೆಗೆ ಕಾರಣವಾದ ಡಿ.ಎನ್.ಎ.ಯನ್ನು ನಿರ್ಬಂಧಿತ ಕಿಣ್ವಗಳಿಂದ ನಿರ್ದಿಷ್ಟ ಸ್ಥಳಗಳಲ್ಲಿ ಕತ್ತರಿಸಲಾಗುತ್ತದೆ. ಇದೇ ರೀತಿ ಇನ್ನೊಂದು ಜೀವಿಯಿಂದ ಪಡೆಯಲಾದ ಡಿ.ಎನ್.ಎ.ಯನ್ನು ಸಹ ಕತ್ತ

ರಿಸಲಾಗುತ್ತದೆ. ಎರಡನೆಯ ಜೀವಿಯ ಡಿ.ಎನ್.ಎ. ಸುರುಳಿಯನ್ನು ಬೇಕೆನಿಸಿದ ರೀತಿಯಲ್ಲಿ ಮೊದಲನೆಯ ಜೀವಿಯ ಡಿ.ಎನ್.ಎ. ಸುರುಳಿಯೊಂದಿಗೆ ಮಿಶ್ರಿಸಲಾಗುತ್ತದೆ. ಈ ಮಿಶ್ರಣಕ್ಕೆ 'ಲೈಗೇಜ್' ಎಂಬ ಕಿಣ್ವವನ್ನು ಕೂಡಿಸಿದಾಗ ಎರಡು ಬೇರೆ ಬೇರೆ ಜೀವಿಗಳ ಡಿ.ಎನ್.ಎ. ಸುರುಳಿಗಳು ಸಂಯೋಜನೆ ಹೊಂದಿ ಮಿಶ್ರತಳಿ ಡಿ.ಎನ್.ಎ. ಉಂಟಾಗುತ್ತದೆ. ಈ ಯಶಸ್ವಿ ಪ್ರಯೋಗವನ್ನು ಮೊಟ್ಟ ಮೊದಲ ಬಾರಿಗೆ 1972ರಲ್ಲಿ ಅಮೆರಿಕದ ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿ ಪಾಲ್ ಬರ್ಗ್ ಎಂಬುವರು ನಡೆಸಿದರು. ಭಾರತ ಸಂಜಾತ ಹರಗೋವಿಂದ ಖುರಾನಾರವರೂ ಈ ಕ್ಷೇತ್ರದಲ್ಲಿ ಅನ್ಯಾದೃಶ ಪ್ರಗತಿ ಸಾಧಿಸಿದರು. ಅವರಿಬ್ಬರ ಈ ಮಹತ್ವದ ಸಂಶೋಧನೆಗೆ 1980ರ ನೋಬೆಲ್ ಪ್ರಶಸ್ತಿಯನ್ನು ನೀಡಲಾಯಿತು. ಈ ಸಂಶೋಧನೆ ಜೀವ ತಂತ್ರಜ್ಞಾನದ ಪ್ರಗತಿಯ ಮೈಲಿಗಲ್ಲೆಂದು ತಿಳಿಯಲಾಗಿದೆ.

ಪುನರ್ ಸಂಯೋಜಿತ ಡಿ.ಎನ್.ಎ. ತಂತ್ರಜ್ಞಾನದ ಬಗ್ಗೆ ಸಂಶೋಧನೆಗಳು ತೀವ್ರಗತಿಯಲ್ಲಿ ನಡೆಯುತ್ತಿವೆ. ಎರಡು ಡಿ.ಎನ್.ಎ. ಸುರುಳಿಗಳನ್ನು ತೀವ್ರಗತಿಯಲ್ಲಿ ಸೇರಿಸುವ ಸ್ವಯಂಚಾಲಿತ ಉಪಕರಣಗಳು ಈಗ ಅಮೆರಿಕದಲ್ಲಿ ಲಭ್ಯವಿವೆ. ಅಮೆರಿಕವೊಂದರಲ್ಲೇ ಸುಮಾರು ಹತ್ತು ಖಾಸಗೀ ಕಂಪನಿಗಳು ಹಾಗೂ ನೂರಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಈ ತಂತ್ರಜ್ಞಾನದ ಬಗ್ಗೆ ಸಂಶೋಧನೆ ನಡೆಸುತ್ತಿದ್ದು, ಕೋಟಿಗಟ್ಟಲೆ ಡಾಲರ್ ಹಣವನ್ನು ಈ ಕಾರ್ಯಕ್ಕಾಗಿ ವಿನಿಯೋಗಿಸಲಾಗುತ್ತಿದೆ. ಇಂದು ಪುನರ್ ಸಂಯೋಜಿತ ಡಿ.ಎನ್.ಎ. ತಂತ್ರಜ್ಞಾನದಿಂದಾಗಿ ಜಗತ್ತು ಮತ್ತೊಂದು ಔದ್ಯೋಗಿಕ ಕ್ರಾಂತಿಯನ್ನು ಕಾಣುವಂತಾಗಿದೆ.

ಮನುಕುಲದ ಸೇವೆಯಲ್ಲಿ:

ಇಂದು 'ಜೆನೆಟಿಕ್ ಎಂಜಿನಿಯರಿಂಗ್' ಮತ್ತು ಪುನರ್ ಸಂಯೋಜಿತ ಡಿ.ಎನ್.ಎ. ತಂತ್ರಜ್ಞಾನವನ್ನು ಕೃಷಿ, ಕೈಗಾರಿಕೆ, ವೈದ್ಯಕೀಯ ಮೊದಲಾದ ಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. ವೈದ್ಯಕೀಯ ಗುಣಗಳಿಂದ ಬಹಳ ಪ್ರಮುಖವಾಗಿರುವ ಇಂಟರ್ ಫೆರಾನ್, ಪ್ರತಿ ವಿಷ ಜನಕ, ಇನ್ಸುಲಿನ್, ಕಿಣ್ವಗಳು, ಹಾರ್ಮೋನ್ ಮೊದಲಾದ ವೈದ್ಯಕೀಯ ವಸ್ತುಗಳ ತಯಾರಿಕೆಯಲ್ಲಿ ಜೀವ ತಂತ್ರಜ್ಞಾನ ನೆರವಿಗೆ ಬರುತ್ತಿದೆ. ರಶಿಯದ ವಿಜ್ಞಾನಿಗಳು 'ಜೆನೆಟಿಕ್ ಎಂಜಿನಿಯರಿಂಗ್' ತಂತ್ರಜ್ಞಾನ ನೆರವಿನಿಂದ 50ಕ್ಕೂ ಹೆಚ್ಚು ಔಷಧ ವಸ್ತುಗಳನ್ನು ತಯಾರಿಸಿದ್ದಾರೆ. ವೈರಸ್‌ಗಳನ್ನು ನಾಶಪಡಿಸುವ ಇಂಟರ್ ಫೆರಾನ್ ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ವಸ್ತು. ನಮ್ಮ ರಕ್ತಕೋಶಗಳಿಂದ ಇಂಟರ್ ಫೆರಾನನ್ನು ಸಂಶ್ಲೇಷಿಸಬಹುದು. ಇದಕ್ಕೆ ತಗಲುವ ವೆಚ್ಚ ದುಬಾರಿಯಲ್ಲದೆ, ದೊರಕುವ ಸಂಭವ ಕೂಡ ಕಡಿಮೆ. ಈಗ ವಿಜ್ಞಾನಿಗಳು ಜೀವ ತಂತ್ರಜ್ಞಾನದ ನೆರವಿನಿಂದ 'ಮಾನವ ಇಂಟರ್ ಫೆರಾನ್' ಉತ್ಪಾದಿಸುವ ಅಣುಜೀವಿಗಳನ್ನು ನಿರ್ಮಿಸಿದ್ದಾರೆ. ಇದರಿಂದಾಗಿ ಸೂಕ್ಷ್ಮ ಜೀವಿಗಳಿಂದ ಬರುವ ಅನೇಕ ರೋಗಗಳನ್ನು ನಿಯಂತ್ರಿಸಬಹುದಾಗಿದೆ.

ಜೀವ ತಂತ್ರಜ್ಞಾನದ ನೆರವಿನಿಂದ ಇನ್ಸುಲಿನ್ ಅನ್ನು ಕೃತಕವಾಗಿ ಪಡೆಯಲು ಸಾಧ್ಯವಾಗಿದೆ. ಇದು ಸಿಹಿ ಮೂತ್ರ ರೋಗವನ್ನು ನಿಯಂತ್ರಿಸುತ್ತದೆ. ಮಾನವನ ಬೆಳವಣಿಗೆಯನ್ನು ನಿರ್ದೇಶಿಸುವ ಹಾರ್ಮೋನನ್ನು ರಶಿಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಇದನ್ನು ಸುಟ್ಟ ಗಾಯಗಳನ್ನು ವಾಸಿ ಮಾಡಲು, ಮೂಳೆ ಜೋಡಿಸಲು ಮತ್ತು ಕುಬ್ಜರ ದೋಷ ನಿವಾರಣೆಗೆ ಬಳಸಲಾಗುತ್ತಿದೆ. ಕೃಶರಾಗುವ ಮಕ್ಕಳನ್ನು ವಾಸಿ ಮಾಡಲೂ ಇದು ಉಪಯುಕ್ತ. ಅಮೆರಿಕದಲ್ಲಿ ಜೀವ ತಂತ್ರಜ್ಞಾನದಿಂದ ಅನೇಕ ಮಹತ್ವದ ಪದಾರ್ಥಗಳನ್ನು ಖಾಸಗಿ ಸಂಸ್ಥೆಗಳು ಉತ್ಪಾದಿಸುತ್ತಿವೆ. 'ಸೊಮೆಟೋ ಸ್ಟ್ಯಾಟಿನ್' ಎಂಬ ಮೆದುಳಿನ ಹಾರ್ಮೋನ್ ಮತ್ತು 'ಥೈನೋಸಿಸ್ ಆಲ್ಫಾ' ಎಂಬ ಕ್ಯಾನ್ಸರ್ ನಿರೋಧಕ ಔಷಧಿ ಅವುಗಳಲ್ಲಿ ಪ್ರಮುಖವಾದವು.

ಕೈಗಾರಿಕಾ ರಂಗದಲ್ಲಿ


ಜೀವ-ತಂತ್ರಜ್ಞಾನ ಕೈಗಾರಿಕಾ ಕ್ಷೇತ್ರದಲ್ಲೂ ಪ್ರಯೋಜನಕ್ಕೆ ಬರುತ್ತದೆ. ವ್ಯರ್ಥ ವಸ್ತುಗಳನ್ನು ಬಳಸಿ ಸಿದ್ಧ ವಸ್ತುಗಳನ್ನು ಪಡೆಯು

ವಲ್ಲಿ ಈ ತಂತ್ರಜ್ಞಾನ ನೆರವಿಗೆ ಬರುತ್ತಿವೆ. 'ಹುದುಗುವಿಕೆ' ತಂತ್ರದಲ್ಲಿ ಸುಧಾರಿತ ಅಣು ಜೀವಿಗಳ ನೆರವಿನಿಂದ ಜೈವಿಕ ರಾಶಿಯನ್ನು ಆಲ್ಕೋಹಾಲ್ ಆಗಿ ಪರಿವರ್ತಿಸಲಾಗುತ್ತಿದೆ. ಮಿಥೇನ್ ಉತ್ಪಾದಿಸುವ ಅಣು ಜೀವಿಗಳನ್ನು ಎಣ್ಣೆ ಸಂಸ್ಕರಣೆಯಲ್ಲಿ ಬಳಸಲಾಗುತ್ತಿದೆ. 'ಬ್ಯಾಕ್ಟೀರಿಯಾ ಜೀವ ತಂತ್ರಜ್ಞಾನ'ದನ್ವಯ ತಾಮ್ರದ ಅದಿರಿನ ಚೂರುಗಳು ಮತ್ತು ಸಮುದ್ರದ ನೀರನ್ನು ಬಳಸಿ ಬೆಲೆ ಬಾಳುವ ಲೋಹಗಳನ್ನು ಸಂಸ್ಕರಿಸಲಾಗುತ್ತಿದೆ.

'ಜೀವ ತಂತ್ರಜ್ಞಾನ' ಆಹಾರದ ಸಮಸ್ಯೆಯನ್ನು ನಿವಾರಿಸುವಲ್ಲೂ ಮಹತ್ವದ ಪಾತ್ರ ವಹಿಸಿದೆ. ಸೂಕ್ಷ್ಮ ಜೀವಿಗಳ ಸಂಶ್ಲೇಷಣೆಯಿಂದ ' ಪ್ರೋಟೀನ್, ವಿಟಮಿನ್‌ಗಳನ್ನು ತಯಾರಿಸಲಾಗುತ್ತಿದೆ. ಪೆಟ್ರೋಲಿಯಂ ಸಂಯುಕ್ತವಾದ ಹೈಡ್ರೋ ಕಾರ್ಬನ್, ನೈಸರ್ಗಿಕ ಮಿಥೇನ್ ಅನಿಲ, ಆಹಾರ ಕೈಗಾರಿಕಾ ವ್ಯರ್ಥ ವಸ್ತುಗಳನ್ನು ಬಳಸಿ ಆಹಾರ ಪ್ರೋಟೀನ್ ಅನ್ನು ಪಡೆಯಲಾಗುತ್ತಿದೆ. ಈ ವಿಧಾನದಿಂದ ರಶಿಯದಲ್ಲಿ ವರ್ಷಕ್ಕೆ ಹದಿನೈದು ಲಕ್ಷ ಟನ್ನುಗಳಷ್ಟು ಆಹಾರ ಪ್ರೋಟೀನನ್ನು ಉತ್ಪಾದಿಸಲಾಗುತ್ತಿದೆ.

ಕೃಷಿಕನಿಗೆ ವರದಾನ:

ಜೀವ ತಂತ್ರಜ್ಞಾನ ಕೃಷಿ ಕ್ಷೇತ್ರಕ್ಕೆ ಬಹು ದೊಡ್ಡ ಕೊಡುಗೆಗಳನ್ನಿತ್ತಿದೆ. ಸಾರಜನಕ ಸ್ಥಿರೀಕರಣ, ರೋಗ ನಿರೋಧಕ ಮತ್ತು ಹೆಚ್ಚು ಫಲ ಕೊಡುವ ಮಿಶ್ರ ತಳಿ ಸಸ್ಯಗಳ ಉತ್ಪಾದನೆ, ಜೌಗು ಪ್ರದೇಶದಲ್ಲಿ ಬೆಳೆಯುವ ತಳಿಗಳ ಅಭಿವೃದ್ಧಿ, ಮೊದಲಾದ ಕಾರ್ಯಗಳು ಜೀವ ತಂತ್ರಜ್ಞಾನದಿಂದ ಸಾಧ್ಯವಾಗಲಿವೆ. ಜಪಾನಿನ ವಿಜ್ಞಾನಿಗಳು ಹೆಚ್ಚು ಫಲ ಕೊಡುವ ರೋಗಗಳನ್ನೂ, ಕೀಟಗಳನ್ನೂ ಪ್ರತಿರೋಧಿಸಬಲ್ಲ ಬೀಜಗಳನ್ನು ವಂಶವಾಹಿ ಬದಲಾವಣೆ ಮೂಲಕ ಪಡೆದಿದ್ದಾರೆ. ಸಾಮಾನ್ಯ ಭತ್ತಕ್ಕಿಂತ ಶೇಕಡಾ 13ರಷ್ಟು ಹೆಚ್ಚು ಉತ್ಪಾದಿಸಬಲ್ಲ ಮಿಶ್ರತಳಿಯೊಂದನ್ನು ಜಪಾನ್ ಸರಕಾರದ ಕೃಷಿ ಇಲಾಖೆ ನೊಂದಾಯಿಸಿಕೊಂಡಿದೆ. ರಶಿಯದ ವಿಜ್ಞಾನಿಗಳು ಹೆಚ್ಚು ಇಳುವರಿ ಕೊಡುವ, ರೋಗ ನಿರೋಧಕವಾದ ಟೊಮ್ಯಾಟೊ, ಆಲೂಗಡ್ಡೆ, ಗೋಧಿ ಮುಂತಾದ 70ಕ್ಕೂ ಹೆಚ್ಚು ಹೈಬ್ರಿಡ್ ತಳಿಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಇಲ್ಲಿಯ ವೆವಿಲಾ ಮತ್ತು ಲುಕಿಯನಿಕೋ ಎಂಬ ವಿಜ್ಞಾನಿಗಳು ಅಭಿವೃದ್ಧಿಪಡಿಸಿರುವ 'Mironovskaya-808' ಮತ್ತು 'Bezostaya-1' ಎಂಬ ತಳಿಗಳು ಶೇಕಡಾ 20 ರಷ್ಟು ಹೆಚ್ಚು ಇಳುವರಿ ನೀಡಬಲ್ಲವಾಗಿವೆ. ಜೀವಕೋಶಗಳ ಹಾಗೂ ಅಂಗಾಂಶಗಳ ಕಸಿ ತಂತ್ರದಿಂದ ಸಸ್ಯಗಳನ್ನು ವೈರಸ್ಸುಗಳ ಕಾಟದಿಂದ ತಪ್ಪಿಸಲಾಗಿದೆ.



ಕೆಲವು ಬಗೆಯ ಅಣು ಜೀವಿಗಳು ಕೀಟಗಳಿಗೆ ಮಾರಕವಾದ ರಾಸಾಯನಿಕವನ್ನು ಉತ್ಪತ್ತಿ ಮಾಡಬಲ್ಲವು. ಅವುಗಳ ಈ ಸಾಮರ್ಥ್ಯಕ್ಕೆ ಕಾರಣವಾದ ವಂಶವಾಹಿಯನ್ನು ಗುರುತಿಸಿ ಅದನ್ನು ಅಣು ಜೀವಿಗಳಿಂದ ತೆಗೆದು ತಂಬಾಕು ಗಿಡದ ಡಿ.ಎನ್.ಎ.ಗೆ ವರ್ಗಾಯಿಸುವಲ್ಲಿ ಬೆಲ್ಜಿಯಮ್ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಈ ರೀತಿ ಸಂಸ್ಕರಿಸಿದ ತಂಬಾಕು ಗಿಡಕ್ಕೆ ಲಾರ್ವಾಗಳನ್ನು ಬಿಟ್ಟಾಗ ಕೆಲವೇ ಗಂಟೆಗಳಲ್ಲಿ ಅವು ನಿಶ್ಚೇತನಗೊಂಡು ಎರಡು-ಮೂರು ದಿನಗಳಲ್ಲಿ ಸತ್ತು ಹೋದವು. ಈ ಫಲಿತಾಂಶದ ಮುಖ್ಯ ಅಂಶವೆಂದರೆ ತಂಬಾಕು ಗಿಡ ಗಳಿಸಿಕೊಂಡ ಈ ಸಾಮರ್ಥ್ಯ ಮುಂದಿನ ಸಂತತಿಗೂ ವರ್ಗಾಯಿಸಲ್ಪಡುತ್ತದೆ. ಈ ತಂತ್ರವನ್ನು ವ್ಯವಸಾಯದ ಇತರ ಪೈರುಗಳಿಗೂ ಅನ್ವಯಿಸುವುದು ಸಾಧ್ಯವಾದರೆ ಕೀಟನಾಶಕಗಳ ಅಗತ್ಯವಿಲ್ಲದಂತಾಗುತ್ತದೆ. ಇದರಿಂದ ಕೀಟನಾಶಕಗಳಿಂದಾಗುತ್ತಿರುವ ದುಷ್ಪರಿಣಾಮಗಳನ್ನು ಬಹಳ ಮಟ್ಟಿಗೆ ಕಡಿಮೆ ಮಾಡಬಹುದು.

ಪರಿಸರ ಮಾಲಿನ್ಯಕ್ಕೆ ಮದ್ದು:

ಜೀವ, ತಂತ್ರಜ್ಞಾನ ಪರಿಸರ ಮಾಲಿನ್ಯದ ಸಮಸ್ಯೆಯನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ರಶಿಯದ ವಿಜ್ಞಾನಿಗಳು ಉತ್ಪಾದಿಸಿರುವ ಸೂಕ್ಷ್ಮ ಜೀವಿಗಳು ಕೈಗಾರಿಕಾ ಹೊಲಸು, ವಿಷಯುಕ್ತ ರಾಸಾಯನಿಕಗಳಾದ ಫಿನಾಲ್, ಕಳೆ ನಾಶಕ, ಕೀಟ ನಾಶಕ ಮೊದಲಾದವುಗಳನ್ನು ವಿಭಜಿಸಿ ಪರಿಸರವನ್ನು ನಿರ್ಮಲಗೊಳಿಸುತ್ತವೆ. ಜೀವ ತಂತ್ರಜ್ಞಾನದ ನೆರವಿನಿಂದ ವ್ಯರ್ಥ ವಸ್ತುಗಳನ್ನು ಉಪಯುಕ್ತ ಗೊಬ್ಬರವಾಗಿ ಪರಿವರ್ತಿಸಬಹುದಾಗಿದೆ.


ಇಸ್ರೇಲಿನ ಜೀವ ವಿಜ್ಞಾನಿ ಪ್ರೊ॥ ರೊಸ್‌ನ್ ಬರ್ಗರವರು ಒಂದು ವಿಶೇಷ ತೈಲ ಭಕ್ಷಕ ಬ್ಯಾಕ್ಟೀರಿಯವನ್ನು ಶೋಧಿಸಿದ್ದಾರೆ. ಇದು ನೀರಿನಲ್ಲಿ ಉಳಿದು ಹೋದ ತೈಲವನ್ನು ಭೇದಿಸಿ, ಅದನ್ನು ಸ್ವಚ್ಛವಾಗಿ ಗುಡಿಸಿ ಹಾಕುವ ಅಪೂರ್ವ ನೈಸರ್ಗಿಕ ಶಕ್ತಿಯನ್ನು ಹೊಂದಿದೆ. ಇದನ್ನು ಬಳಸಿ ತೈಲದಿಂದ ಉಂಟಾಗುವ ಸಾಗರ ಮಾಲಿನ್ಯವನ್ನು ಹೋಗಲಾಡಿಸಬಹುದಾಗಿದೆ.

ಭಾರತದಲ್ಲೆಷ್ಟು ಪ್ರಗತಿ?

ಅಮೆರಿಕದಂತಹ ಪ್ರಗತಿಶೀಲ ರಾಷ್ಟ್ರಗಳಿಗೆ ಹೋಲಿಸಿದರೆ, ಭಾರತದಲ್ಲಿ ಜೀವ ತಂತ್ರಜ್ಞಾನದ ಪ್ರಗತಿ ತೀರಾ ನಿಧಾನ. ಭಾರತ ಸರಕಾರ ಜೀವ ತಂತ್ರಜ್ಞಾನದ ಸಂಶೋಧನೆಗೆಂದು 1982ರಲ್ಲಿ ರಾಷ್ಟ್ರೀಯ ಜೀವ ತಂತ್ರಜ್ಞಾನ ಸಮಿತಿಯನ್ನು ಸ್ಥಾಪಿಸಿದೆ. ಕೃಷಿ, ಕೈಗಾರಿಕೆ, ವೈದ್ಯಕೀಯ, ಶಕ್ತಿ ಮೊದಲಾದ ಕ್ಷೇತ್ರಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಲು ಯೋಜನೆ ಹಾಕಿಕೊಳ್ಳಲಾಗಿದೆ. ರಶಿಯವು ಜೀವ ತಂತ್ರಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಭಾರತಕ್ಕೆ ಒದಗಿಸಲು ಮುಂದೆ ಬಂದಿದೆ. ಜೀವ ತಂತ್ರಜ್ಞಾನದ ನೆರವಿನಿಂದ ಲಸಿಕೆ ತಯಾರಿಸುವ ಒಪ್ಪಂದಕ್ಕೆ ಭಾರತ ಮತ್ತು ಅಮೆರಿಕಗಳು ಸಹಿ ಹಾಕಿವೆ. ಭಾರತದ ಖಾಸಗೀ ಕಂಪನಿಗಳು ಈ ತಂತ್ರಜ್ಞಾನದಲ್ಲಿ ಹಣ ತೊಡಗಿಸಲು ಮುಂದೆ ಬಂದಿವೆ. ಸ್ಪಿಕ್ ಕಂಪನಿಯು 'ಸ್ಪಿಕ್ ಸೈಟೋಜೈಮ್' ಎಂಬ ಪೈರು ಬೆಳವಣಿಗೆಯ ಟಾನಿಕ್‌ನ್ನು ಉತ್ಪಾದಿಸಿದೆ. ಬರುವ ದಿನಗಳಲ್ಲಿ ಜೀವ-ತಂತ್ರಜ್ಞಾನ ಭಾರತದಂತ ತೃತೀಯ ಜಗತ್ತಿನ ರಾಷ್ಟ್ರಗಳ ಪಾಲಿಗೆ ವರವಾಗುವುದರಲ್ಲಿ ಸಂಶಯವಿಲ್ಲ.

ಇಂದು ಜಗತ್ತಿನಾದ್ಯಂತ ಜೀವ ತಂತ್ರಜ್ಞಾನದ ಬಗೆಗಿನ ಸಂಶೋಧನೆಗಳು ತ್ವರಿತ ಗತಿಯಲ್ಲಿ ಮುಂದುವರಿಯುತ್ತಿವೆ. ಕ್ರಿ.ಶ.2000ದ ವೇಳೆಗೆ ಅನೇಕ ರಾಸಾಯನಿಕ ಉದ್ದಿಮೆಗಳು ಮುಚ್ಚಿಕೊಂಡು, ಅವುಗಳ ಬದಲಾಗಿ ಜೀವ ತಂತ್ರಜ್ಞಾನದ ಉದ್ದಿಮೆಗಳ ಸ್ಥಾಪನೆಯಾಗಬಹುದು. ಮುಂದುವರಿದ ರಾಷ್ಟ್ರಗಳಲ್ಲಿ ಜೀವ ತಂತ್ರಜ್ಞಾನ ಎಷ್ಟು ಸಾಮಾನ್ಯವಾಗುತ್ತಿದೆ ಎಂಬ ಮಟ್ಟಿಗೆ ಅಪರಿಮಿತ ಶಕ್ತಿಯನ್ನು ತನ್ನ ಮುಷ್ಟಿಯಲ್ಲಿ ಅಡಗಿಸಿಕೊಂಡಿರುವ ಮಾನವ ಅದನ್ನು ಜನರ ಒಳತಿಗಾಗಿ ಬಳಸುವುದಾದರೆ, ಮುಂಬರುವ ದಶಕಗಳಲ್ಲಿ ಈ ತಂತ್ರಜ್ಞಾನ ಬೆಳೆದು ಮಾನವನ ಪಾಲಿನ ಸಂಜೀವಿನಿಯೆನಿಸಿದರೆ ಅಚ್ಚರಿಯೇನಿಲ್ಲ. ●

(ವಿವಿಧ ಮೂಲಗಳಿಂದ)



ವಿಜ್ಞಾನಿಯ ವಿಕಟಸೃಷ್ಟಿ



ಮೂಲ: **ಮೇರಿ ಶೆಲ್ಲಿ** ಸಂಗ್ರಹಾನುವಾದ: ಗೀತಾ ಮುರಳಿ

ವಿಜ್ಞಾನಿಯ ವಿಕಟಸೃಷ್ಟಿ

ಮಿತಿಮೀರಿದ ಮಹತ್ವಾಕಾಂಕ್ಷೆಯಿಂದ ವಿಜ್ಞಾನಿಯೊಬ್ಬ ಮಾನವ ಪ್ರಾಣಿಯೊಂದನ್ನು ನಿರ್ಮಿಸುತ್ತಾನೆ. ಈ ವಿಚಿತ್ರ ಸೃಷ್ಟಿ ಸಮಾಜದಿಂದ ತಿರಸ್ಕೃತನಾಗಿ, ಏಕಾಂತತೆಯಿಂದ ವಿಪರೀತ ಮನೋವೇದನೆಪಡುತ್ತ, ಸಮಾಜದ ಮೇಲೆಯೇ ತಿರುಗಿಬಿದ್ದು ತನ್ನ ಸೃಷ್ಟಿಕರ್ತನ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ. ಇದು ಮೇರಿ ಶೆಲ್ಲಿ ಬರೆದ Frankenstein ಎಂಬ ಕುತೂಹಲಕಾರಿ ಕಾದಂಬರಿಯ ಸಾರಾಂಶ.

ರೊಬರ್ಟ್ ವೊಲ್ಟನ್ ಉತ್ತರಧ್ರುವಕ್ಕೆ ಸಾಹಸ ಪ್ರಯಾಣ ಕೈಗೊಂಡ. ಚಿಕ್ಕಂದಿನಿಂದಲೆ ಇದು ಆತನ ಆದರ್ಶ ಸ್ವಪ್ನವಾಗಿತ್ತು. ಹದಿನಾಲ್ಕು ವರ್ಷದ ಬಾಲಕನಿರುವಾಗ ಅವನು ಈ ಬಗ್ಗೆ ಅನೇಕ ಪ್ರವಾಸ ವೃತ್ತಾಂತಗಳನ್ನು ಓದಿದ್ದ. ಸದ್ಯ ಅವನಿಗೆ ಇಪ್ಪತ್ತೆಂಟರ ಪ್ರಾಯ. ಆರು ವರ್ಷಗಳ ಹಿಂದೆ ಸಮುದ್ರ ಸಂಚಾರದ ಸಾಹಸಿ ಜೀವನ ಆರಂಭಿಸಿದ್ದ. ಚಳಿ, ಗಾಳಿ, ಉಪವಾಸ, ಬಾಯಾರಿಕೆ, ನಿದ್ರಾರಹಿತ ರಾತ್ರಿಗಳು ಎಲ್ಲವನ್ನೂ ಸಂತೋಷದಿಂದ ಸಹಿಸುತ್ತ, ಉತ್ತರ ಸಮುದ್ರಗಳಲ್ಲಿ ಪರ್ಯಟನ ನಡೆಸಿದ್ದ. ಈಗ ಆತ ಇಂಗ್ಲೆಂಡಿನಿಂದ ಬಹುದೂರ, ರಶಿಯದ ಉತ್ತರ ಗಡಿ ತಲುಪಿದ್ದ. ಅಲ್ಲಿ ಸಣ್ಣದೊಂದು ನಾವೆಯನ್ನು ಬಾಡಿಗೆಗೆ ತೆಗೆದುಕೊಂಡು, ಕೆಲವು ಧೈರ್ಯಶಾಲಿ ನಾವಿಕರನ್ನು ಹುರಿದುಂಬಿಸಿದ. ಇನ್ನು ಮುಂದಿನ ಪ್ರಯಾಣ ಸುದೀರ್ಘ ಹಾಗೂ ಕಷ್ಟಕರವಾಗಿತ್ತು. ಆದರೂ ತನ್ನ ಪ್ರಯತ್ನ ಸಫಲವಾಗುವುದು ಖಚಿತ ಎಂಬುದು ಆತನ ದೃಢನಂಬಿಕೆಯಾಗಿತ್ತು.

ಚಳಿಗಾಲ ಮುಗಿದ ಕೂಡಲೆ, ರಶಿಯದ ದಡ ಬಿಟ್ಟು ಹೊರಟು ಸತತವಾಗಿ ಹರಿಯುವ ಬರ್ಫಿನ ಹೊಳೆಗಳು, ರಭಸದಿಂದ ಬೀಸುವ ಚಳಿಗಾಳಿ ಅವರ ಉತ್ಸಾಹ ಕುಂದಿಸಲಿಲ್ಲ. ಈಗ ಅವರು ಹಿಮವದ್ವೃತ್ತದಿಂದ ಅತ್ಯುನ್ನತ ಸ್ಥಳದಲ್ಲಿದ್ದರು. ಒಂದು ದಿನ ಹಿಮದಲ್ಲಿ ಸಿಕ್ಕುಬಿದ್ದಾಗ ಮುಂದೆ ಸಾಗುವುದು ಅಪಾಯಕರ ಎಂದು ಅಲ್ಲಿಯೇ ನಿಂತರು.

ಮಧ್ಯಾಹ್ನ ಎರಡು ಗಂಟೆಯ ವೇಳೆಗೆ ಮಂಜು ಕರಗಿತು. ಸುತ್ತುಮುತ್ತಲೂ ಬರೀ ಹಿಮದ ಏರು ದಿನ್ನೆಗಳುಳ್ಳ ಅನಂತ ವಿಸ್ತಾರ. ನಾವಿಕರು ಎದೆಗುಂದಿದ್ದರು. ಒಮ್ಮೆಲೇ ವಿಚಿತ್ರ ದೃಶ್ಯವೊಂದು ಅವರ ಗಮನ ಸೆಳೆಯಿತು. ಅರ್ಧ ಮೈಲಿಯಷ್ಟು ದೂರ, ನಾಯಿಗಳು ಎಳೆಯುತ್ತಿರುವ ಜಾರು ಬಂಡಿಯೊಂದು ಉತ್ತರದಿಶೆಯತ್ತ ವೇಗದಿಂದ ಸಾಗಿತ್ತು. ಅದರಲ್ಲಿ ಬೃಹದಾಕಾರದ ಮನುಷ್ಯಾಕೃತಿಯೊಂದು ಕುಳಿತು ನಾಯಿಗಳಿಗೆ ಮಾರ್ಗದರ್ಶನ ನೀಡುತ್ತಿತ್ತು. ತಮ್ಮ ಬೈನಾಕುಲರ್ ಮೂಲಕ ಆ ಪ್ರಯಾಣಿಕನ ತ್ವರಿತ ಮುನ್ನಡೆಯನ್ನು ವೀಕ್ಷಿಸಿದರು. ಕ್ರಮೇಣ ಆತ ದೂರದ ಹಿಮದ ವಿಸ್ತಾರದಲ್ಲಿ ಕಣ್ಮರೆಯಾದ.

ಈ ಘಟನೆಯಾದ ಎರಡು ಗಂಟೆಗಳ ನಂತರ ನೀರ್ಗಲ್ಲು ಒಡೆಯಲಾರಂಭಿಸಿತು. ನಾವೆ ಮುಂದೆ ಚಲಿಸಬಹುದಿತ್ತು. ಆದರೂ ಕತ್ತಲಲ್ಲಿ ಮುಂದೆ ಸಾಗುವುದು ಅಪಾಯಕರವೆಂದು ಮುಂಜಾನೆಯವರೆಗೆ ಅಲ್ಲಿಯೇ ಉಳಿದರು. ಬೆಳಗಾದೊಡನೆ ವೊಲ್ಟನ್ ಡೆಕ್ ಮೇಲೆ ಹೋದಾಗ ನಾವಿಕರೆಲ್ಲ ಒಂದು ಪಕ್ಕಕ್ಕೆ ಸೇರಿ ನೀರಿನಲ್ಲಿ ಜಾರುಬಂಡಿಯಲ್ಲಿದ್ದ ಮನುಷ್ಯನೊಬ್ಬನ ಜೊತೆ ಮಾತನಾಡು

ತ್ತಿಪ್ಪರು. ಒಂದಿನ ದಿನ ನೋಡಿದಂತಹದೇ ಜಾರುಬಂಡಿ. ಅದಕ್ಕೆ ಒಂದೇ ನಾಯಿ ಊಳಿದಿತ್ತು. ಆದರೆ ಈ ಮನುಷ್ಯ ಒಂದಿನ ದಿನ ನೋಡಿದ ಬರ್ಬರನಂತೆ ಕಾಣಿಸಲಿಲ್ಲ. ಯುರೋಪಿನ ನಾಗರಿಕನಂತಿದ್ದ. ವೊಲ್ಟನ್ ಕಂಡೊಡನೆ, ನಾವಿಕರು ಆ ವ್ಯಕ್ತಿಗೆ ಹೇಳಿದರು. 'ನಮ್ಮ ಕಪ್ತಾನ್ ಬಂದ ನೋಡಪ್ಪ. ಆತ ನಿನ್ನನ್ನು ಈ ಸಮುದ್ರದಲ್ಲಿ ಸಾಯಲು ಬಿಡುವುದಿಲ್ಲ.'

ಅಪರಿಚಿತ ಕೇಳಿದ. 'ನಾನು ನಿಮ್ಮ ನಾವೆಯಲ್ಲಿ ಹತ್ತಿ ಬರುವ ಮುಂಚೆ, ದಯವಿಟ್ಟು ನೀವು ಎಲ್ಲಿಗೆ ಹೊರಟಿರುವಿರೆಂದು ಹೇಳುವಿರಾ?'

ಸಾವಿನ ಅಂಚಿನಲ್ಲಿರುವ ಮನುಷ್ಯನಿಂದ ಇಂಥ ಪ್ರಶ್ನೆ ಕೇಳಿ ವೊಲ್ಟನ್‌ಗೆ ಅತ್ಯಾಶ್ಚರ್ಯವಾದರೂ ತಾವು ಉತ್ತರಧ್ರುವಕ್ಕೆ ಪರಿಶೋಧ ಪ್ರಯಾಣ ನಡೆಸಿರುವುದಾಗಿ ಆತನಿಗೆ ತಿಳಿಸಿದ.

ಅದನ್ನು ಕೇಳಿ ಆತ ಸಮಾಧಾನಪಟ್ಟು, ನಾವೆಯಲ್ಲಿ ಬರಲೊಪ್ಪಿದ. ಆತನ ಅವಸ್ಥೆ ಅತಿ ದೀನ ವಾಗಿತ್ತು. ಅಂಗಾಂಗಗಳು ಮರಗಟ್ಟಿಬಿಟ್ಟಿದ್ದವು. ಆಯಾಸ, ತಾಪತ್ರಯಗಳಿಂದ ಅವನ ದೇಹ ಅತೀವ ಕೃಶವಾಗಿತ್ತು. ಕ್ಯಾಬಿನ್ನಿನೊಳಗೆ ಕರೆದೊಯ್ದೊಡನೆ ಮೂರ್ಛೆ ಹೋದ. ಬ್ರಾಂಡಿ ಕುಡಿಸಿದ ಮೇಲೆ ತುಸು ಚೇತರಿಸಿಕೊಂಡ. ನಿಧಾನವಾಗಿ ಸುಧಾರಿಸಿ ಸ್ವಲ್ಪ ಗಂಜಿ ತಿನ್ನಹತ್ತಿದ. ಎರಡು ದಿನಗಳ ನಂತರ ಅವನಿಗೆ ಮಾತಾಡುವುದು ಸಾಧ್ಯವಾಯಿತು. ತುಂಬ ಕಷ್ಟಕ್ಲೇಶಗಳ ನಿಮಿತ್ತ ಅವನಿಗೆ ಮತಿಭ್ರಮೆಯೂ ಆದಂತಿತ್ತು. ಕಣ್ಣುಗಳಲ್ಲಿ ಗಾಬರಿಗೆಟ್ಟ ಕಳೆಯಿತ್ತು. ಸಂಪೂರ್ಣ ಹತಾಶನಾದಂತಿದ್ದ. ಹಿಮದ ಮೇಲೆ, ಇಷ್ಟು ದೂರ, ಇಂಥ ವಿಚಿತ್ರ ವಾಹನದಲ್ಲಿ ಬಂದಿದ್ದೇಕೆಂದು ವೊಲ್ಟನ್ ವಿಚಾರಿಸಿದ. ಒಮ್ಮೆಲೆ ಆತ ಉದಾಸೀನನಾದ. 'ನನ್ನಿಂದ ತಪ್ಪಿಸಿಕೊಂಡ ವನ ಅನ್ವೇಷಣೆಗೋಸ್ಕರ' ಎಂದು ಉತ್ತರಿಸಿದ.

'ನೀನು ಹುಡುಕುತ್ತಿರುವ ಮನುಷ್ಯ ಇದೇ ರೀತಿ ಪ್ರಯಾಣಿಸುತ್ತಿದ್ದನೆ?'

'ಹೌದು'.

'ಹಾಗಾದರೆ ನಾವು ಆತನನ್ನು ಕಂಡಿದ್ದೇವೆ. ನೀನು ಸಿಕ್ಕ ಹಿಂದಿನ ದಿನವೇ, ಬರ್ಫಿನ ಮೇಲೆ, ನಾಯಿಗಳಿಂದ ಎಳೆದುಕೊಂಡು ಹೋಗುವ ಜಾರುಬಂಡಿಯಲ್ಲಿ ಒಬ್ಬ ಮನುಷ್ಯನನ್ನು ನೋಡಿದೆವು.

ಈ ಸಮಾಚಾರ ಕೇಳಿದೊಡನೆ ಆತ ಕೆರಳಿದ. 'ಆ ದೈತ್ಯ ಯಾವ ಮಾರ್ಗ ಹಿಡಿದು ಹೋದ? ಹಿಮ ಬಂಡೆ ಒಡೆದಾಗ ಆ ಜಾರುಬಂಡಿ ಹಾಳಾಗಿರಬಹುದೇ?' ಎಂದೆಲ್ಲಾ ಅನೇಕ ಪ್ರಶ್ನೆ ಕೇಳಿದ.

ತದನಂತರ ಆತ ಪುನರುಜ್ಜೀವಗೊಂಡಂತಾದ. ಡೆಕ್ ಮೇಲೆ ನಿಂತುಕೊಂಡು ಸದಾ ಆ ಜಾರು ಬಂಡಿಯನ್ನು ಕಾಣುವ ನಿರೀಕ್ಷೆಯಲ್ಲಿರುತ್ತಿದ್ದ. ಮುಖದಲ್ಲಿ ದುಃಖದ ಛಾಯೆ ಹರಡಿರುತ್ತಿತ್ತು. ಆದರೆ ಅವನ ಆರೋಗ್ಯ ದಿನಗಳೆದಂತೆ ಸುಧಾರಿಸುತ್ತಿತ್ತು. ವೊಲ್ಟನ್‌ನೊಂದಿಗೆ ಬಲು ಆತ್ಮೀಯತೆ ಬೆಳೆದಿತ್ತು. ಅವನ ಸಂಗಡ ವೊಲ್ಟನ್ ತನ್ನ ಸಾಹಸ ಪ್ರಯಾಣದ ಬಗ್ಗೆ ಚರ್ಚಿಸುತ್ತಿದ್ದ. ಅದ ಕ್ಕೋಸ್ಕರ ತನ್ನ ಸಕಲ ಸಂಪತ್ತು, ಆಶಾಕಾಂಕ್ಷೆಗಳು, ತನ್ನ ಜೀವನವನ್ನೇ ತ್ಯಜಿಸಲು ಸಿದ್ಧನಿರುವೆ ನೆಂದು ಒಂದು ದಿನ ಅವನಿಗೆ ಹೇಳಿದ. ಅದನ್ನು ಕೇಳಿದ ಅಪರಿಚಿತ ಭಾವನಾಪರವಶನಾಗಿ ಕಣ್ಣೀರು ಸುರಿಸುತ್ತ, 'ನಿನಗೂ ನನ್ನಂತೆಯೇ ಹುಚ್ಚು ಹಿಡಿದಿದೆಯೆ? ಹಿಂದೊಮ್ಮೆ ನನಗಿದ್ದಂತೆ, ನಿನಗೂ ಮಿತಿ ಮೀರಿದ ಜ್ಞಾನದಾಹ ಇದೆ. ಆದರೆ ನಿನಗೆ ಅದರ ಅಪಾಯಗಳ ಅರಿವಿದ್ದಂತಿಲ್ಲ. ನಿನ್ನ ಮಹದಾಸೆ ಈಡೇರಿ ಕಚ್ಚುವ ವಿಷ ಸರ್ಪವಾದೀತು. ಅದಕ್ಕೆ ನನ್ನ ಕಥೆ ಹೇಳುತ್ತೇನೆ. ಕೇಳು. ನಿನಗದು ಯೋಗ್ಯ ನಿದರ್ಶನವಾಗಬಹುದು' ಎಂದು ತನ್ನ ವಿಲಕ್ಷಣ, ನಂಬಲಸಾಧ್ಯವಾದ ವೃತ್ತಾಂತವನ್ನು ವಿವರಿಸತೊಡಗಿದ.

★

ನನ್ನ ಹೆಸರು ವಿಕ್ಟರ್ ಫ್ರಾಂಕೆನ್‌ಸ್ಟೀನ್. ನನ್ನ ತಾಯ್ನಾಡು ಜಿನೀವಾ. ಆ ಊರಿನಲ್ಲಿ ನಮ್ಮದು ಸುಪ್ರಸಿದ್ಧ ಮನೆತನ. ನನ್ನ ತಂದೆ ಸದ್ಗೃಹಸ್ಥ. ದೇಶಭಕ್ತ. ಪ್ರಾಮಾಣಿಕ ರಾಜಕಾರಣಿಯೆಂದು ಖ್ಯಾತಿ ಪಡೆದಿದ್ದ. ನನ್ನ ತಾಯಿ ತುಂಬಾ ವಾತ್ಸಲ್ಯಪೂರ್ಣ, ಸೌಜನ್ಯದ ಸ್ವಭಾವದವಳು. ನಾನು ಐದು ವರ್ಷದವನಿದ್ದಾಗ ನನ್ನ ತಂದೆ-ತಾಯಿಗಳು ಇಟಲಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಒಬ್ಬ

ಬಡ ಒಕ್ಕಲಿಗನ ಮನೆಯಲ್ಲಿದ್ದ ಐದು ಮಕ್ಕಳಲ್ಲಿ ಒಂದು ಹುಡುಗಿ ನನ್ನ ತಾಯಿಯ ಗಮನ ಸೆಳೆದಳು. ಉಳಿದ ನಾಲ್ಕು ಮಕ್ಕಳಂತೆ ಕಪ್ಪು, ಗಟ್ಟಿಮುಟ್ಟಾಗಿರದೆ ಈ ಹುಡುಗಿ, ತೆಳ್ಳಗೆ, ಬೆಳ್ಳಗಿದ್ದಳು. ಬಲು ಸುಂದರ, ನಾಜೂಕಾದ ಈ ಬಾಲಕಿ ಮಿಲಾನದ ಓರ್ವ ಶ್ರೀಮಂತ ಸಭ್ಯ ಗೃಹಸ್ಥನ ಮಗಳು; ಅನಾಥಳಾಗಿದ್ದರಿಂದ ತಮ್ಮ ಬಡ ಕುಟುಂಬದಲ್ಲಿ ಬೆಳೆಯುತ್ತಿದ್ದಾಳೆಂದು ರೈತನ ಹೆಂಡತಿ ಹೇಳಿದಳು. ನನ್ನ ತಾಯಿ ಅವಳ ರೂಪ, ಲಕ್ಷಣದಿಂದ ಆಕರ್ಷಿತಳಾಗಿ ಆಕೆಯನ್ನು ನಮ್ಮ ಜೊತೆ ಕರೆದುಕೊಂಡು ಬಂದಳು.

ಹೀಗೆ ಎಲಿಜಬೆತ್ ಲಾವೆಂಜಾ ಎಂಬ ಈ ಹುಡುಗಿ ನಮ್ಮ ಕುಟುಂಬ ಸೇರಿದಳು. ತನ್ನ ಒಳ್ಳೆಯ ಗುಣಗಳಿಂದ ನಮ್ಮೆಲ್ಲರ ಪ್ರೀತಿಪಾತ್ರಳಾದಳು. ನನಗಂತೂ ಆಕೆ ಅತಿ ನೆಚ್ಚಿನ, ಅನ್ಯೋನ್ಯ ಸಂಗಾತಿ. ನಮ್ಮಿಬ್ಬರ ವಯಸ್ಸಿನಲ್ಲಿ ಒಂದು ವರ್ಷದ ಅಂತರ ಸಹ ಇರಲಿಲ್ಲ. ಮುಂದೆ ಅವಳೇ ನನ್ನ ಬಾಳ ಸಂಗಾತಿಯೂ ಆಗುವಳೆಂದು ತಾಯಿ ತಂದೆ ನಿರ್ಧರಿಸಿದ್ದರು.

ಏಳು ವರ್ಷಗಳ ನಂತರ ನನ್ನ ತಂದೆ-ತಾಯಿಗಳಿಗೆ ಮತ್ತೊಬ್ಬ ಪುತ್ರ ಜನಿಸಿದ. ಆತನ ಹೆಸರು ಅರ್ನೆಸ್ಟ್. ಆ ಬಳಿಕ ಇನ್ನೊಂದು ಮಗು, ವಿಲಿಯಮ್. ನನ್ನ ಬಾಲ್ಯ ಅತ್ಯಂತ ಸಂತೋಷದಿಂದ ಕಳೆಯಿತೆಂದು ಹೇಳಬಲ್ಲೆ. ನನ್ನದು ಸ್ವಲ್ಪ ಆತುರದ ಸ್ವಭಾವ. ಆವೇಶಪೂರ್ಣ ಪ್ರವೃತ್ತಿಯುವನು. ನನಗೆ ಬಾಲಿಶ ಹವ್ಯಾಸಗಳಿರದೆ, ಜ್ಞಾನದಾಸೆ ತೀವ್ರವಾಗಿತ್ತು. ವಿವಿಧ ಭಾಷೆ, ಶಾಸ್ತ್ರಗಳು, ರಾಜಕೀಯ ನೀತಿ ನಿಯಮಗಳು, ಆಡಳಿತ ಕ್ರಮಗಳಲ್ಲಿ ನನಗೆ ಆಸ್ಥೆ ಇರಲಿಲ್ಲ. ಭೂಮಿ-ಆಕಾಶದ ರಹಸ್ಯಗಳು, ನಿಸರ್ಗದ ಅಗಾಧ ಸತ್ವಗಳು, ಮಾನವನ ನಿಗೂಢ ಅಂತರಾತ್ಮ, ಜಗತ್ತಿನ ಲೌಕಿಕ ಗುಟ್ಟುಗಳು ಇವುಗಳ ಅಭ್ಯಾಸ ನನ್ನ ಹವ್ಯಾಸವಾಗಿತ್ತು.

ನನಗೆ ಗದ್ದಲ, ಗಲಾಟೆ, ಸೇರುತ್ತಿರಲಿಲ್ಲ. ಮಿತ್ರರು ವಿರಳ. ಹೆನ್ರಿ ಕ್ಲರ್ವಲ್ ನನ್ನ ಏಕೈಕ ಆಪ್ತ ಸ್ನೇಹಿತನಾಗಿದ್ದ. ಆತ ಒಬ್ಬ ವ್ಯಾಪಾರಸ್ಥನ ಮಗ. ಒಳ್ಳೆ ಗುಣವಂತ, ಬುದ್ಧಿವಂತ ಹಾಗೂ ವಿನಯ ಶೀಲ ವ್ಯಕ್ತಿಯಾಗಿದ್ದ. ಅವನೂ ಸಾಹಸಪ್ರಿಯ; ಆದರೆ ಸಾಹಿತ್ಯದೆಡೆಗೆ ಹೆಚ್ಚಿನ ಒಲವಿದ್ದಿತು.

ವಿಜ್ಞಾನದಲ್ಲಿ ನನಗೆ ವಿಶೇಷ ಆಸ್ಥೆಯಿತ್ತು. ಹದಿಮೂರು ವರ್ಷದವನಿರುವಾಗಲೇ ನಾನು ಪ್ರಾಚೀನ ರಸಾಯನ ಶಾಸ್ತ್ರಜ್ಞರ ಕೃತಿಗಳನ್ನು ಓದಿದ್ದೆ. ಅನಂತರ ಗಣಿತದ ಅಭ್ಯಾಸದಲ್ಲಿ ನಿರತನಾದೆ. ನನಗೆ ಹದಿನೇಳು ತುಂಬಿದಾಗ, ಜರ್ಮನಿಯ ವಿಶ್ವವಿದ್ಯಾನಿಲಯವೊಂದರಲ್ಲಿ ಅಧ್ಯಯನ ಮುಂದುವರೆಸಬೇಕೆಂದು ತಾಯಿ-ತಂದೆಗಳು ತೀರ್ಮಾನಿಸಿದರು. ಅದೇ ವೇಳೆ ನನ್ನ ತಾಯಿ ವಿಷಮ ಜ್ವರದಿಂದ ತೀರಿಕೊಂಡಾಗ ಎಲ್ಲರೂ ದುಃಖಸಾಗರದಲ್ಲಿ ಮುಳುಗಿಬಿಟ್ಟೆವು. ಮನೆಯಲ್ಲಿ ಅವಳ ಸ್ಥಾನವನ್ನು ಎಲಿಜಾಬೆತ್ ತುಂಬಿ ನನ್ನ ಚಿಕ್ಕ ಸೋದರರಿಗೆ ಸಮಾಧಾನ ನೀಡಿ, ಧೈರ್ಯದಿಂದ ಮನೆಯನ್ನು ಸಾಗಿಸಿಕೊಂಡಿದ್ದಳು.

ಕೆಲ ದಿನಗಳ ನಂತರ ನಾನು ಜರ್ಮನಿಗೆ ತೆರಳಿದೆ. ವಿಶ್ವವಿದ್ಯಾನಿಲಯದಲ್ಲಿ ರಸಾಯನ ಶಾಸ್ತ್ರದ ಅಭ್ಯಾಸವನ್ನು ಆಯ್ದುಕೊಂಡೆ. ಈ ವಿಷಯದ ಪ್ರಾಧ್ಯಾಪಕ ತನ್ನ ಪ್ರಥಮ ಉಪನ್ಯಾಸದಲ್ಲಿ ರಸಾಯನ ಶಾಸ್ತ್ರದ ಇತಿಹಾಸ ಸಂಕ್ಷೇಪ ಮಾಡುತ್ತಾ, ಆಧುನಿಕ ವಿಜ್ಞಾನ ನೂತನ ಹಾಗೂ ಅಪರಿಮಿತ ಶಕ್ತಿ ಪಡೆದಿರುವುದನ್ನು ವಿವರಿಸಿದ. ಈ ಶಾಸ್ತ್ರಜ್ಞರು ನಿಸರ್ಗದ ರಹಸ್ಯಗಳನ್ನು ಭೇದಿಸಿ, ಸೃಷ್ಟಿ ನಿಯಮಗಳನ್ನು ಬಹಿರಂಗಪಡಿಸಿರುವವರು; ನಾವು ಉಸಿರಾಡುವ ಹವೆಯ ಗುಣ, ನಮ್ಮ ದೇಹಗಳಲ್ಲಿ ಹರಿದಾಡುವ ರಕ್ತದ ಚಲನವಲನಗಳನ್ನು ಸಂಶೋಧಿಸಿರುವವರು; ಇವರು ಮಹಾಜ್ಞಾನಿಗಳು, ಪವಾಡ ಪುರುಷರು ಎಂದೆಲ್ಲಾ ಗುಣಗಾನ ಮಾಡಿದ.

ಆ ಮಾತು ನನ್ನ ಮನಸ್ಸಿನ ಮೇಲೆ ಅಗಾಧ ಪ್ರಭಾವ ಬೀರಿತು. ಇದುವರೆಗೆ ಈ ಶಾಸ್ತ್ರ ಸಾಧಿಸಿದ್ದಕ್ಕಿಂತ ಹೆಚ್ಚು ನಾನು ಸಾಧಿಸಬೇಕೆಂಬ ಒಂದೇ ವಿಚಾರ, ಒಂದೇ ಕಲ್ಪನೆ, ಒಂದೇ ಉದ್ದೇಶ ನನ್ನಲ್ಲಿ ವ್ಯಾಪಿಸಿತು. ಹಳೆಯ ಮಾರ್ಗದಲ್ಲಿ ಹೆಜ್ಜೆಯಿಡುತ್ತಾ, ನಾನು ನೂತನ ಪಥಗಳು, ನೂತನ ಶಕ್ತಿಗಳನ್ನು ಪರಿಶೋಧಿಸಿ, ಜಗತ್ತಿಗೆ ಸೃಷ್ಟಿಯ ನಿಗೂಢ ರಹಸ್ಯಗಳನ್ನು ಬಯಲಿಗೆಳೆಯುವೆನೆಂದು ದೃಢ ಸಂಕಲ್ಪ ಮಾಡಿದೆ.

ಅಂದಿನಿಂದ ನಾನು ಪದಾರ್ಥ ವಿಜ್ಞಾನ, ರಸಾಯನ ಶಾಸ್ತ್ರಗಳಲ್ಲಿ ಸಂಪೂರ್ಣ ತಲ್ಲೀನನಾದೆ.

ಈ ವಿಷಯ ಕುರಿತು ಬರೆದ ಗ್ರಂಥಗಳನ್ನು ಎಡೆಬಿಡದೆ ಅಧ್ಯಯನ ಮಾಡಿದೆ. ರಾತ್ರಿಯೆಲ್ಲಾ ನನ್ನ ಪ್ರಯೋಗಶಾಲೆಯಲ್ಲಿ ಕಳೆಯುತ್ತಿದ್ದೆ. ತ್ವರಿತ ಗತಿಯಲ್ಲಿ ಪ್ರಗತಿ ಹೊಂದುತ್ತಾ ನಾನು ಕೆಲವು ಅಸಾಧಾರಣ ಪರಿಶೋಧಗಳಲ್ಲಿ ತೊಡಗಿದೆ. ಹೀಗೆ ಎರಡು ವರ್ಷ ಕಳೆದವು. ಅಷ್ಟರಲ್ಲಿ ಕೆಲವು ರಾಸಾಯನಿಕ ಸಾಧನಗಳ ಸುಧಾರಣೆಯಲ್ಲಿ ಯಶಸ್ವಿ ಪರಿಶೋಧಕೋಸ್ಕರ ನಾನು ವಿಶ್ವವಿದ್ಯಾಲಯದಲ್ಲಿ ಪ್ರಶಸ್ತಿ, ಮಾನಮರ್ಯಾದೆ ಗಳಿಸಿದ್ದೆ.

ನನ್ನ ವಿಶೇಷ ಗಮನ ಸೆಳೆದ ವಿಷಯವೆಂದರೆ, ಮಾನವ ದೇಹರಚನೆ, ಯಾವ ಜೀವಂತ ಪ್ರಾಣಿ ದೇಹವಾದರೂ ಸರಿಯೇ. ಜೀವಸತ್ವದ ಮೂಲ ಎಲ್ಲಿ? ಏನು? ಎಂಬ ಪ್ರಶ್ನೆ ಸದಾ ನನ್ನ ಮನ ಕೊರೆಯುತ್ತಿತ್ತು. ಹೀಗೆ ನನಗೆ ಶರೀರ ವಿಜ್ಞಾನದಲ್ಲಿ ಆಸಕ್ತಿ ಹುಟ್ಟಿತು. ಜೀವನದ ಮೂಲಗಳನ್ನು ಶೋಧಿಸಬೇಕಾದರೆ ಮರಣದ ಕಾರಣಗಳನ್ನೂ ಹುಡುಕಬೇಕಾಗುವುದು. ನಾನು ಅಂಗ ವಿಚ್ಛೇದನ ವಿದ್ಯೆಯನ್ನು ಕಲಿತುಕೊಂಡೆ. ಅಲ್ಲದೆ, ಮಾನವ ದೇಹ ಕ್ರಮೇಣ ಹೇಗೆ ಕ್ಷಯಿಸುವದೆಂದು ಪರೀಕ್ಷಿಸಲು ಸಮಾಧಿಗಳಲ್ಲಿ, ಎಲುಬುಗಳನ್ನು ತೆಗೆದಿಟ್ಟ ನೆಲ ಮಾಳಿಗೆಗಳಲ್ಲಿ ಹಗಲಿರುಳೂ ಕಳೆಯುತ್ತಿದ್ದೆ. ಜೀವನದಿಂದ ಮರಣಕ್ಕೆ, ಮರಣದಿಂದ ಜೀವನಕ್ಕೆ, ಮಾನವ ದೇಹದ ರೂಪಾಂತರದ ಸೂಕ್ಷ್ಮ ಕಾರಣಗಳೆಲ್ಲವನ್ನೂ ಪರಿಶೀಲಿಸುತ್ತಾ, ಪೃಥಕ್ಕರಣ ಮಾಡಿದಂತೆ, ಒಮ್ಮೆಲೆ ನನಗೆ ಜ್ಞಾನೋದಯವಾಯಿತು. ಜೀವೋತ್ಪತ್ತಿಯ ಕಾರಣಗಳ ಪರಿಶೋಧದಲ್ಲಿ ಯಶಸ್ವಿಯಾಗಿದ್ದೆ! ಅಷ್ಟೇ ಅಲ್ಲದೆ, ನಿರ್ಜೀವ ವಸ್ತುವನ್ನು ಸಜೀವವನ್ನಾಗಿಸುವ ಅದ್ಭುತ ಶಕ್ತಿ ಪಡೆದುಕೊಂಡಿದ್ದೆ! ನನ್ನದು ಅಭೂತಪೂರ್ವವಾದ ಸಂಶೋಧನೆಯಾಗಿತ್ತು. ಅನಾದಿಕಾಲದಿಂದ ಮಾನವನನ್ನು ಕಾಡುತ್ತಿದ್ದ ಸಂಗತಿ ಈಗ ನನ್ನ ಕೈವಶವಾಗಿತ್ತು! ನಾನು ಸೃಷ್ಟಿಯ ರಹಸ್ಯವನ್ನು ಭೇದಿಸಿದ್ದೆ!

ಇಂಥ ಅದ್ಭುತ ಶಕ್ತಿಯನ್ನು ಪಡೆದುಕೊಂಡ ನಂತರ ನಾನದನ್ನು ಕಾರ್ಯರೂಪಕ್ಕೆ ಹೇಗೆ ಇಳಿಸಬೇಕೆಂಬ ವಿಚಾರಕ್ಕಿಟ್ಟುಕೊಂಡೆ. ಜೀವದಾನ ಮಾಡಬಲ್ಲನೇನೋ ಸರಿ. ಆದರೆ ಜೀವ ತುಂಬಿಸಲು ಮೈಕಟ್ಟು ತಯಾರಿಸಬೇಕು. ಜಟಿಲವಾದ ನರನಾಡಿಗಳು, ಮಾಂಸಖಂಡಗಳ ಜೋಡಣೆ ಕಷ್ಟದ ಕೆಲಸವಾಗಿತ್ತು. ನನ್ನಂಥ ಮಾನವ ವ್ಯಕ್ತಿಯನ್ನೇ ನಿರ್ಮಿಸಬೇಕೋ ಅಥವಾ ಇನ್ನೂ ಸರಳ ಪ್ರಾಣಿಯ ಸೃಷ್ಟಿಗೆ ಕೈ ಹಾಕಬೇಕೋ ಎಂದು ಯೋಚಿಸುತ್ತಿದ್ದೆ. ಸದ್ಯ ನನ್ನ ಹತ್ತಿರ ಅದಕ್ಕೆ ತಕ್ಕ ಸಾಮಗ್ರಿಗಳು ಇರದಿದ್ದರೂ, ಯಶಸ್ವಿಯಾಗುವೆನೆಂಬ ಧೈರ್ಯದಿಂದ ಮಾನವ ಸೃಷ್ಟಿಯನ್ನೇ ಆರಂಭಿಸಿದೆ. ಮನುಷ್ಯದೇಹದ ಅಂಗಾಂಗಗಳು ಬಲು ಸೂಕ್ಷ್ಮ. ಆದರಿಂದ ನನ್ನ ಕಾರ್ಯ ವೇಗಕ್ಕೆ ಆತಂಕವಾಗಬಾರದೆಂದು ನಾನು ಒಂದು ಬೃಹದಾಕಾರದ ಮಾನವ ಅಂದರೆ ಸುಮಾರು ಎಂಟಡಿ ಎತ್ತರ, ಅದಕ್ಕೆ ತಕ್ಕಂತೆ ಅಜ್ಞಾತತೆಯುಳ್ಳ ಮೈಕಟ್ಟಿನ ಮನುಷ್ಯನನ್ನು ರಚಿಸಬೇಕೆಂದುಕೊಂಡೆ.

ಹೀಗೆ ಸಂಕಲ್ಪ ಮಾಡಿದೊಡನೆ, ಈ ಪ್ರಕಾರ ನನಗೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹಿಸ ಹತ್ತಿದೆ. ಕೆಲ ತಿಂಗಳಲ್ಲಿ ನನ್ನ ಕಾರ್ಯ ಆರಂಭಿಸಿ, ಅದರಲ್ಲೇ ತಲ್ಲೀನನಾದೆ. ನನ್ನ ಪ್ರಯೋಗ ಯಶಸ್ವಿಯಾಗುತ್ತಿದ್ದಂತೆ, ನನ್ನ ಅಂತರಂಗದಲ್ಲಿ ಸುಮ್ಮಿಶ್ರಭಾವನೆಗಳು ಮಿಡಿಯುತ್ತಿದ್ದವು. ಜೀವನ್ಮರಣಗಳ ಬಂಧಗಳನ್ನು ಭೇದಿಸಿ ಕತ್ತಲುಕವಿದ ಲೋಕವನ್ನು ನಾನು ಪ್ರಕಾಶಮಾನವನ್ನಾಗಿ ಮಾಡುವೆನೆಂದು ಉತ್ಕಂಠೆಯಲ್ಲಿದ್ದೆ. ಹೊಸದೊಂದು ಮಾನವ ಜಾತಿಯು ಉತ್ಪನ್ನವಾಗಿ, ಮಾನವರ ಸೃಷ್ಟಿಕರ್ತನೆಂದು ನನ್ನನ್ನು ಆದರಿಸುವರು. ನಾನು ಅನೇಕ ಉತ್ಕೃಷ್ಟ ವ್ಯಕ್ತಿಗಳ ಜೀವದಾತನೆಂದು ಗೌರವಿಸಲ್ಪಡುತ್ತೇನೆ. ನಿರ್ಜೀವ ವಸ್ತುವನ್ನು ಸಜೀವಗೊಳಿಸಬಲ್ಲವನಾದರೆ, ಕಾಲಕ್ರಮೇಣ ಮೃತ ದೇಹವನ್ನೂ ಪುನರುಜ್ಜೀವಗೊಳಿಸುವ ಶಕ್ತಿ ನನ್ನದಾಗಬಹುದೆ ಎಂದೆಲ್ಲಾ ಯೋಚಿಸಿ ಖುಷಿಪಡುತ್ತಿದ್ದೆ.

ಅಪರಿಮಿತ ಆವೇಶದಿಂದ ನನ್ನ ಕಾರ್ಯ ಪಥದಲ್ಲಿ ಮುಂದುವರೆದೆ. ಸತತ ಅಭ್ಯಾಸದಿಂದ ನನ್ನ ಮುಖ ವಿವರ್ಣವಾಗಿತ್ತು. ಆಯಾಸದಿಂದ ದೇಹ ಬಳಲಿತ್ತು. ಅಪರಾತ್ರಿಯ ವೇಳೆಗಳಲ್ಲಿ ನನ್ನ ಗುಪ್ತ ಪರಿಶ್ರಮ ಎಷ್ಟು ಭೀಷಣವಾಗಿತ್ತೆಂಬುದು ಯಾರಿಗೆ ಗೊತ್ತು? ಮಸಣದ ಮಣ್ಣಿನಲ್ಲಿ ಕೆದರುತ್ತಿದ್ದೆ. ಜೀವಂತ ಪ್ರಾಣಿಗಳನ್ನು ಚಿತ್ರಹಿಂಸೆಗೀಡುಮಾಡುತ್ತಿದ್ದೆ; ನೆಲಮಾಳಿಗೆಗಳಿಂದ ಎಲುಬು

ಗಳನ್ನು ಕಲೆಹಾಕಿದೆ; ಗೋರಿಗಳಲ್ಲಿಯ ಅಸ್ಥಿಪಂಜರಗಳನ್ನು ಹುಡುಕಿ ತರುತ್ತಿದ್ದೆ. ನನ್ನ ಕೊಠಡಿಯ ಮೇಲುಗಡೆಯಿದ್ದ ಒಂದು ಗೂಡಿನಲ್ಲಿ ನನ್ನ ವಿಚಿತ್ರ ಸೃಷ್ಟಿಯ ಪ್ರಯೋಗಶಾಲೆಯಿತ್ತು. ನನ್ನ ಕಾರ್ಯದ ಸೂಕ್ಷ್ಮ ವಿವರಗಳನ್ನು ಒಂದೇ ಸಮನೆ ಪರಿಶೀಲಿಸಿ ಕಣ್ಣುಗಳು ಕಿತ್ತಿಬಂದಂತೆನಿಸುತ್ತಿತ್ತು. ತಲೆ ಸುತ್ತುತ್ತಿತ್ತು. ಎಷ್ಟೋ ಬಾರಿ ನನಗೆ ಈ ಉದ್ಯೋಗ ಅಸಹನೀಯವೂ ಅನಿಸಿದ್ದುಂಟು. ಏನಾದರೂ ನಾನು ಮುಂದುವರೆಯುತ್ತ ಮುಕ್ತಾಯದ ಹಂತವನ್ನು ಸಮೀಪಿಸಿದ್ದೆ.

ತಿಂಗಳುಗಳು ಉರುಳಿದವು. ಚಳಿಗಾಲ, ಸರಿಯಿತು. ವಸಂತದ ವೈಭವ, ಗ್ರೀಷ್ಮದ ರಮಣೀಯತೆ ನನಗೆ ಅರಿವಾಗದಂತೆ ಗತಿಸಿದವು. ದೂರವಿದ್ದ ತಂದೆ, ಬಂಧು-ಬಳಗ, ಆಪ್ತಮಿತ್ರರನ್ನು ಮರೆತು ಬಿಟ್ಟಿದ್ದೆ. ಒಮ್ಮೆ ಸಹ ಊರಿಗೆ ಹೋಗಿ ಬಂದಿರಲಿಲ್ಲ. ಆ ವರ್ಷ ಕೊನೆಗಾಣುತ್ತಿದ್ದಂತೆ ನನ್ನ ಕಾರ್ಯವೂ ಯಶಸ್ವಿಯಾಗಿ ಕೊನೆಗೊಳ್ಳುತ್ತಿತ್ತು. ಆದರೆ ನನ್ನ ಉತ್ಸಾಹದಲ್ಲಿ ಚಿಂತೆಯೂ ಕೂಡಿತ್ತು. ನಿತ್ಯ ರಾತ್ರಿ ನನಗೆ ಜ್ವರ ಬರುತ್ತಿತ್ತು. ನನ್ನ ಆರೋಗ್ಯ ಸಂಪೂರ್ಣ ಹಾಳಾಗಿತ್ತು. ನನ್ನ ದೃಢ ಸಂಕಲ್ಪದ ಶಕ್ತಿಯಿಂದಲೇ ನಾನು ಬದುಕಿದ್ದೆ. ಇನ್ನು ಬೇಗನೆ ನನ್ನ ಕೆಲಸ ಮುಗಿದೊಡನೆ ಒಳ್ಳೆ ವ್ಯಾಯಾಮ, ಮನರಂಜನೆಯಿಂದ ಮತ್ತೆ ಆರೋಗ್ಯ ತಿರುಗಿ ಪಡೆದುಕೊಳ್ಳುವುದೆಂದು ನಿರ್ಧರಿಸಿದ್ದೆ.

2

ನವೆಂಬರ್ ತಿಂಗಳಿನ ಒಂದು ಮಂಕುಕವಿದ ರಾತ್ರಿ. ತೀವ್ರ ವ್ಯಾಕುಲತೆ, ಮನೋವೇದನೆಯಿಂದ ನನ್ನ ಸುತ್ತಲೂ ಸೃಷ್ಟಿಯ ಸಾಧನಗಳನ್ನು ಕೂಡಿಸಿಟ್ಟುಕೊಂಡು, ಪಾದದಡಿಯಲ್ಲಿ ಬಿದ್ದಿರುವ ನಿರ್ಜೀವ ವಸ್ತುವಿನಲ್ಲಿ ಚೈತನ್ಯ ತುಂಬಲು ಸಿದ್ಧನಾದೆ. ಮಧ್ಯರಾತ್ರಿಯಾಗಿತ್ತು. ಕಿಟಕಿಯ ಗಾಜುಗಳ ಮೇಲೆ ಮಳೆಹನಿಗಳು ಪಟ ಪಟ ಬೀಳುತ್ತಿದ್ದವು. ಮೊಂಬತ್ತಿ ಆರಿ ಹೋಗುವುದರಲ್ಲಿತ್ತು. ಆಗ ಮಂದ ಬೆಳಕಿನಲ್ಲಿ, ಆ ಪ್ರಾಣಿಯು ಮಬ್ಬು ಹಳದಿ ಕಣ್ಣು ತೆರೆದದ್ದು ನೋಡಿದೆ. ಜೋರಾಗಿ ಉಸಿರಾಡಿತು. ಅದರ ಅಂಗಾಂಗಗಳೆಲ್ಲಾ ಅಲುಗಾಡಿದವು. ಕೈಕಾಲುಗಳು ಚಡಪಡಿಸಿ ಒದ್ದಾಡಿದವು.

ಆಗ ನನ್ನಲ್ಲುಂಟಾದ ಭಾವನೆಗಳನ್ನು ಏನೆಂದು ವಿವರಿಸಲಿ? ಅಷ್ಟು ಕಷ್ಟಪಟ್ಟು, ಎಚ್ಚರಿಕೆ ವಹಿಸಿ, ಮನೋತಾಪ ಸಹಿಸಿ, ನಾನು ನಿರ್ಮಿಸಿದ ಆ ಪ್ರಾಣಿಯನ್ನು ಹೇಗೆ ಚಿತ್ರಿಸಲಿ? ಆತನ ಅಂಗಾಂಗಗಳು ಸಮಕಟ್ಟಾಗಿದ್ದವು. ಆತನಿಗೆ ಸುಲಕ್ಷಣವಾದ ಮುಖಚರ್ಯೆಯನ್ನೇ ಆಯ್ಕೆ ಮಾಡಿದ್ದೆ. ಆದರೆ ದೇವರೆ! ಆತನ ಪೇಲವ ಚರ್ಮ ತೆಳ್ಳಗಾಗಿ, ಅದರ ಕೆಳಗಿನ ಮಾಂಸಖಂಡ, ನರನಾಡಿಗಳ ಜಾಲಬಂಧ ಸ್ಪಷ್ಟವಾಗಿ ಕಾಣುತ್ತಿತ್ತು. ಆತನ ಕಪ್ಪು ಕೂದಲು ಉದ್ದವಾಗಿತ್ತು. ಬಿಳಿಯ ಹಲ್ಲುಗಳು ಮುತ್ತಿನಂತೆ ಹೊಳೆಯುತ್ತಿದ್ದವು. ಆದರೆ, ಮಾಸಲು ಬಣ್ಣದ ಗುಳಿಗಳಲ್ಲಿ ಕೂಡಿಸಿದ ಆ ನೀರಸ ಕಣ್ಣುಗಳು, ಆ ಒಣಗಿದ ಮೈಬಣ್ಣ, ಆ ನೆಟ್ಟಗಿನ ಕಪ್ಪು ತುಟಿಗಳು ಬಹಳ ಅಸಹ್ಯವಾಗಿದ್ದವು.

ಮನುಷ್ಯನ ಭಾವನೆಗಳು ಬದಲಾಗುವುದು ಸಹಜ. ನಿರ್ಜೀವ ದೇಹದಲ್ಲಿ ಚೈತನ್ಯ ತುಂಬುವ ಏಕಮೇವ ಉದ್ದೇಶದಿಂದ ನಾನು ಎರಡು ವರ್ಷ ಬಹು ಪ್ರಯಾಸ ಪಟ್ಟಿದ್ದೆ. ನನ್ನ ಆರೋಗ್ಯ, ಮನಃಶಾಂತಿಯನ್ನು ಕಳೆದುಕೊಂಡಿದ್ದೆ. ಮಿತಿಮೀರಿದ ಉತ್ಸಾಹದಿಂದ ಈ ಕಾರ್ಯಸಾಧನೆ ಅಪೇಕ್ಷಿಸಿದ್ದೆ. ಆದರೀಗ, ಎಲ್ಲ ಮುಗಿದಾಗ, ಆ ಸುಂದರಸ್ವಪ್ನ ಮಾಯವಾಯಿತು. ನನ್ನ ಹೃದಯದಲ್ಲಿ ಭಾರಿ ಭೀತಿ ಹಾಗೂ ಹೇಳಲಾರದ ಹೇಸಿಗೆ ಆವರಿಸಿದವು. ನಾನು ನಿರ್ಮಿಸಿದ ಪ್ರಾಣಿಯನ್ನು ನೋಡಲಾಗದೆ ಆ ಕೋಣೆಯಿಂದ ಓಡಿಹೋದೆ. ನನ್ನ ಮಲಗುವ ಕೋಣೆ ಸೇರಿಕೊಂಡು ಅಲ್ಲಿ ಶತಪಥ ಹಾಕಿದೆ. ನಿದ್ರಿಸುವುದು ಅಸಾಧ್ಯವಾಗಿತ್ತು. ಕೊನೆಗೊಮ್ಮೆ ಅತೀವ ಆಯಾಸದಿಂದ ನನ್ನ ಮನಸ್ಸಿನ ಗಲಿಬಿಲಿ ಮರೆಯಾಗಿ, ಹಾಸಿಗೆಯ ಮೇಲೆ ಬಿದ್ದುಕೊಂಡು, ಕೆಲ ನಿಮಿಷ ವಿಸ್ಮೃತಿಯಲ್ಲಿ ಮೈಮರೆಯಲು ಪ್ರಯತ್ನಿಸಿದೆ. ಆದರೆ ನಿದ್ರೆಯಲ್ಲೂ ಭಯಂಕರ ದುಃಸ್ವಪ್ನಗಳು ಬಾಧಿಸಿದವು.

ಥರಥರ ನಡುಗುತ್ತಾ ಎಚ್ಚೆತ್ತೆ. ಹಣೆಯ ಮೇಲೆ ಬೆವರು ಹರಿಯುತ್ತಿತ್ತು. ಹಲ್ಲು ಕಟಗುಟ್ಟುತ್ತಿದ್ದವು. ಮೈಯೆಲ್ಲ ಮರಗಟ್ಟಿದಂತಿತ್ತು. ಕಿಟಕಿಯಿಂದ ತೂರಿಬಂದ ಮಂದ ಬೆಳದಿಂಗಳ ಛಾಯೆಯಲ್ಲಿ ನನ್ನ ಹತ್ತಿರವೇ ಆ ಪ್ರಾಣಿಯನ್ನು ಕಂಡೆ- ನಾನು ನಿರ್ಮಿಸಿದ ಆ ಭಯಂಕರ ಭೂತ!

ನನ್ನ ಮಂಚದ ಸೊಳ್ಳೆ ಪರದೆ ಎತ್ತಿಹಿಡಿದು, ತನ್ನ ಭೀಕರ ಕಣ್ಣುಗಳಿಂದ ನನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿತ್ತು. ಬಾಯಿ ತೆರೆದು ಏನೋ ಅಸ್ಪಷ್ಟ ಶಬ್ದ ಮಾಡಿ ಒಟಗುಟ್ಟಿತು. ಹಲ್ಲು ಕಿರಿದು. ಮಾತನಾಡಲು ಪ್ರಯತ್ನಿಸಿತು. ಆದರೆ ನಾನದನ್ನು ಕೇಳಲಿಲ್ಲ. ತನ್ನದೊಂದು ಕೈಚಾಚಿ, ನನ್ನನ್ನು ತಡೆಯಬೇಕೆಂದಿತ್ತು. ಆದರೆ ನಾನು ತಪ್ಪಿಸಿಕೊಂಡು ಮೆಟ್ಟಿಲಿಳಿದು ಓಡಿಹೋದೆ. ಕೆಳಗಡೆ ಒಳಾಂಗಣದಲ್ಲಿ ಅಡಗಿಕೊಂಡು ರಾತ್ರಿಯಿಡೀ ಅಲ್ಲೇ ಕಳೆದೆ. ಅತ್ಯಂತ ಉದ್ವಿಗ್ನಗೊಂಡು ಶತಪಥ ಹಾಕಿದೆ. ಬಲು ಜಾಗರೂಕತೆಯಿಂದ ಆಲಿಸುತ್ತಾ ಕುಳಿತೆ. ಸ್ವಲ್ಪ ಸಪ್ಪಳವಾದರೂ ಆ ರಾಕ್ಷಸನೇ ಬಂದನೇನೋ ಎಂಬ ಭೀತಿ.

ಆ ಮುಖದಲ್ಲಿ ಎಂಥ ಅಮಾನುಷ ಕಳೆ! ನಾನದನ್ನು ತಯಾರಿಸುವಾಗ ನೋಡಿದ್ದೆ. ಅಪೂರ್ಣ ವಾಗಿದ್ದಾಗ ಕುರೂಪಿಯೇನೋ ಆಗಿತ್ತು ನಿಜ; ಆದರೆ ಇಷ್ಟು ಭೀಕರವೆನಿಸಿರಲಿಲ್ಲ. ಈಗ ಅದು ಸೈತಾನನ ಸ್ವರೂಪವೇ ಆಗಿತ್ತು.!

ರಾತ್ರಿಯೆಲ್ಲಾ ಸಂಕಟಪಟ್ಟೆ. ನನ್ನ ಎದೆ ವೇಗದಿಂದ ಬಡಿದುಕೊಳ್ಳುತ್ತಿತ್ತು. ಅತೀವ ಆಯಾಸ ದಿಂದ ನೆಲಕ್ಕೆ ಕುಸಿದುಬಿದ್ದೆ. ಮೇಲಾಗಿ ನಿರಾಶೆಯ ಕಹಿಯಿಂದ ಎದೆಗುಂದಿದ್ದೆ. ಇಷ್ಟು ದಿನ ನನಗೆ ಸುಖಾನಂದ ನೀಡಿದ ಸುಂದರಸ್ವಪ್ನ ಈಗ ನನ್ನನ್ನು ನರಕಯಾತನೆಯಲ್ಲಿ ತಳ್ಳಿಬಿಟ್ಟಿತ್ತು.

ಅಂತೂ ಮಸುಕಾಗಿ ಬೆಳಕು ಹರಿಯಿತು. ಅಂಗಳದ ಬಾಗಿಲು ತೆರೆದು ಹೊರಬಿದ್ದೆ. ಬೀದಿಯಲ್ಲಿ ವೇಗವಾಗಿ ಹೆಜ್ಜೆ ಹಾಕಿದೆ. ಪ್ರತಿಯೊಂದು ತಿರುವಿನಲ್ಲಿಯೂ ಆ ಪಿಶಾಚಿ ನನಗೆ ಎದುರಾಗುವು ದೇನೋ ಎಂಬ ಹೆದರಿಕೆ. ಮಳೆ ಸುರಿಯುತ್ತಿದ್ದರೂ ಹಾಗೇ ಮುಂದೆ ಸಾಗಿದೆ.

ಎಷ್ಟೋ ಹೊತ್ತು ಹೀಗೆ ನಡೆದುಕೊಂಡು ಹೋದೆ. ಆದರೆ ತಲೆಭಾರ ಇಳಿಯಲಿಲ್ಲ. ಅನೇಕ ಬೀದಿಗಳನ್ನು ದಾಟಿದೆ. ನಾನೆಲ್ಲಿರುವೆ, ಏನು ಮಾಡುತ್ತಿರುವೆ, ಎಂಬುದರ ಕಲ್ಪನೆಯೇ ಇರಲಿಲ್ಲ. ಓಂದೆ ಮುಂದೆ, ಸುತ್ತಮುತ್ತ ನೋಡದೆಯೇ ಧೃತಿಗೆಟ್ಟು ಧಾವಿಸುತ್ತಿದ್ದೆ.

ಕೊನೆಗೊಂದು ಪ್ರವಾಸಿಗೃಹ ತಲುಪಿದೆ. ಅಲ್ಲಿ ಪರ ಊರುಗಳಿಂದ ಬಂದ ಗಾಡಿಗಳು ನಿಲ್ಲುತ್ತಿದ್ದವು. ಅದರ ಮುಂದೆ ಏಕೋ ಏನೋ ತಡೆದು ನಿಂತೆ. ಅಚೆ ಬದಿಯಿಂದ ಬರುತ್ತಿರುವ ಗಾಡಿಯೊಂದನ್ನು ನೋಡುತ್ತಲಿದ್ದೆ. ಅದು ನಿಂತೊಡನೆ, ಅದರಿಂದ ಮೊದಲಿಗೆ ಇಳಿದಾತ ನನ್ನ ಆಪ್ತಮಿತ್ರ ಹೆನ್ರಿ ಕ್ಲರ್ವಲ್! ನನ್ನನ್ನು ನೋಡಿ ಆತ ಹಾರಿ ಬಂದು ನನ್ನ ಕೈ ಗಟ್ಟಿಯಾಗಿ ಹಿಡಿದು 'ಫ್ರಾಂಕೀನ್‌ಸ್ಟೀನ್! ಬಂದ ತಕ್ಷಣ ನಿನ್ನ ಭೇಟಿಯಾಗಿರುವುದು ನನ್ನ ಅದೃಷ್ಟವೇ ಸರಿ' ಎಂದೆಲ್ಲಾ ಮಾತನಾಡಿದ.

ಆತನನ್ನು ಕಂಡು ನನ್ನ ಹರ್ಷ ಉಕ್ಕೇರಿತು. ನನ್ನ ತಂದೆ, ಎಲಿಜಾಬೆತ್ ಹಾಗೂ ನನ್ನ ಮನೆಯ ಪ್ರಿಯ ಸ್ಮರಣೆಗಳೆಲ್ಲ ಮರುಕಳಿಸಿದವು. ಆತನ ಹಸ್ತವನ್ನು ಗಟ್ಟಿಯಾಗಿ ಹಿಡಿದು ಕ್ಷಣ ಮಾತ್ರ ನನ್ನ ಭೀತಿ ದುಗುಡವನ್ನೆಲ್ಲಾ ಮರೆತುಬಿಟ್ಟೆ. ಎಷ್ಟೋ ತಿಂಗಳ ನಂತರ ನಾನು ಒಮ್ಮೆಲೆ ಪ್ರಶಾಂತ ಆನಂದವನ್ನು ಅನುಭವಿಸಿದಂತಾಯಿತು.

ನನ್ನ ಸ್ನೇಹಿತನನ್ನು ಕರೆದುಕೊಂಡು ಕಾಲೇಜಿನತ್ತ ನಡೆದೆ. ಆತನೂ ಇದೇ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಕ್ಕೆಂದು ಬಂದಿದ್ದನಂತೆ. ದಾರಿಯಲ್ಲಿ ಆತ ನನ್ನ ತಂದೆ, ತಮ್ಮಂದಿರು, ಎಲಿಜಾಬೆತ್‌ರ ಸಮಾಚಾರವನ್ನೆಲ್ಲಾ ತಿಳಿಸಿದ. ನಾನು ಅವರಿಗೆ ಪತ್ರ ಬರೆಯುವುದೇ ಇಲ್ಲವೆಂದು ಅವರು ಅಸಮಾಧಾನಪಡುತ್ತಿದ್ದರೆಂದೂ ಹೇಳಿದ. ನಂತರ ಒಮ್ಮೆಲೆ ನನ್ನ ಮುಖ ನೋಡುತ್ತಾ, 'ಇದೇನು, ಫ್ರಾಂಕೀನ್‌ಸ್ಟೀನ್, ಇಷ್ಟೇಕೆ ರೋಗಗ್ರಸ್ತನಾದವನಂತೆ ಕಾಣಿಸುತ್ತೀ? ಬಹಳೇ ಸೊರಗಿ, ಸಣ್ಣ ಗಾಗಿದ್ದಿ. ನಿದ್ದೆಗೆಟ್ಟವನಂತೆ ಕಾಣಿಸುತ್ತಿಯಲ್ಲ' ಎಂದ.

'ಹೌದಯ್ಯ, ಇಷ್ಟು ದಿನ ನಾನು ಒಂದು ಕೆಲಸದಲ್ಲಿ ತೊಡಗಿದ್ದೆ. ಅದು ಈಗ ಪೂರ್ಣಗೊಂಡಿದೆ. ನಾನಿನ್ನು ಹಾಯಾಗಿರಬಹುದು' ಎನ್ನುವಾಗ ಮೈ ಥರಥರ ನಡುಗುತ್ತಿತ್ತು. ಹಿಂದಿನ ರಾತ್ರಿಯ ಘಟನೆಗಳ ಬಗ್ಗೆ ವಿಚಾರ ಮಾಡುವದಾಗಲಿ ಹೇಳುವದಾಗಲಿ ಅಸಹನೀಯವಾಗಿತ್ತು.

ವೇಗವಾಗಿ ನಡೆದು ಬಂದು ಕಾಲೇಜು ಮುಟ್ಟಿದೆವು. ಅಲ್ಲಿ ನಿಂತು, ಯೋಚಿಸಿದೆ. ನನ್ನ ಕೋಣೆಯಲ್ಲಿ ಆ ಪ್ರಾಣಿ ಜೀವಂತವಾಗಿ ಅಡ್ಡಾಡುತ್ತಿರುವ ಕಲ್ಪನೆಯಿಂದ ನಡುಗಿದೆ. ಆ ರಾಕ್ಷಸನನ್ನು ನೋಡಲು ಹೆದರಿದೆ. ಅಲ್ಲದೆ, ಹೆನ್ರಿ ಅದನ್ನು ನೋಡಿದರೆ ಹೇಗೆ? ಎಂದು ಇನ್ನೂ ಆತಂಕಿತನಾದೆ. ಆದ್ದರಿಂದ ಆತನಿಗೆ ನಿಲ್ಲಲು ಹೇಳಿ ನಾನು ಸರಸರ ಮೆಟ್ಟಿಲು ಏರಿ ಹೋದೆ. ಬಾಗಿಲ ಬೀಗದ ಮೇಲೆ ಕೈಯಿಟ್ಟು, ಕ್ಷಣ ಮಾತ್ರ ತಡೆದೆ. ಮೈ ಜುಮ್ಮೆಂದಿತು. ಬಳಿಕ ಜೋರಾಗಿ ಬಾಗಿಲ ತೆರೆದು ಒಳಗೆ ನಿಂತಿರುವ ಭೂತವನ್ನು ನಿರೀಕ್ಷಿಸುತ್ತಾ ಕಣ್ಣು ಬಿಟ್ಟು ನೋಡಿದೆ, ಆದರೆ ಏನೂ ಕಾಣಲಿಲ್ಲ. ಹೆದರುತ್ತಲೆ ಒಳಗೆ ಕಾಲಿಟ್ಟೆ. ಕೋಣೆ ತೆರವಾಗಿತ್ತು. ಮಲಗುವ ಕೋಣೆಯಲ್ಲೂ ನನ್ನ ಭೀಕರ ಅತಿಥಿ ಇರಲಿಲ್ಲ. ನನ್ನ ವೈರಿ ಪಾರಾಗಿ ಹೋಗಿದ್ದ. ನನ್ನ ಅದೃಷ್ಟ ನಂಬಲಿಕ್ಕಾಗಲಿಲ್ಲ! ಹರ್ಷದಿಂದ ಕೈ ತಟ್ಟುತ್ತ ನನ್ನ ಮಿತ್ರನೆಡೆಗೆ ಓಡಿದೆ.

ಕೋಣೆಗೆ ತಿರುಗಿ ಬಂದು ಇಬ್ಬರೂ ಉಪಾಹಾರ ಮಾಡಿದೆವು. ನನಗೆ ಹಿಡಿಸಲಾರದಷ್ಟು ಆನಂದ. ಚಪ್ಪಾಳೆ ತಟ್ಟುತ್ತ, ಕುರ್ಚಿಗಳ ಮೇಲೆಲ್ಲಾ ಹಾರಾಡಿದೆ. ಜೋರಾಗಿ ನಕ್ಕೆ. ತನ್ನ ಆಗಮನದ ಸಂಭ್ರಮದಿಂದ ನಾನು ಹೀಗೆ ವರ್ತಿಸುತ್ತಿರುವೆನೆಂದು ಹೆನ್ರಿ ಮೊದಲಿಗೆ ಭಾವಿಸಿದ. ಅನಂತರ ನನ್ನ ಕೆರಳಿದ ಕಣ್ಣುಗಳು, ಹುಚ್ಚುನಗೆ ಆತನಿಗೆ ಏನೋ ಶಂಕೆ ಬರುವಂತೆ ಮಾಡಿದವು. 'ಯಾಕೆ ವಿಕ್ಟರ್? ನಿನಗೇನಾಗಿದೆ? ಹೀಗೆ ನಗಬೇಡಯ್ಯ. ನಿನಗೆ ಹುಷಾರಿಲ್ಲ. ಇದರ ಕಾರಣ ಏನು?' ಎಂದು ಕೇಳಿದ. ಆ ಭಯಾನಕ ಭೂತ ಕೋಣೆಯೊಳಗೆ ಬಂದಂತೆ ಭಾಸವಾಗಿದ್ದರಿಂದ ನನ್ನನ್ನು ಕೇಳಬೇಡ ಎನ್ನುತ್ತ ಕೈಗಳಿಂದ ಕಣ್ಣು ಮುಚ್ಚಿಕೊಂಡೆ. ಭೂತ ನನ್ನ ಹಿಡಿದುಕೊಂಡಂತೆನಿಸಿ, ಏಲಿವಿಲಿ ಒದ್ದಾಡುತ್ತ ಸ್ಮೃತಿತಪ್ಪಿ ಕುಸಿದುಬಿದ್ದೆ.

ನಾನು ಜ್ವರದಿಂದಾಗಿ ಅನೇಕ ತಿಂಗಳವರೆಗೆ ಹಾಸಿಗೆಯಲ್ಲಿಯೇ ಬಿದ್ದುಕೊಂಡಿದ್ದೆ. ಆಗ ಹೆನ್ರಿ ಕ್ಲರ್ವಲ್‌ನೇ ತನ್ನ ಅಭ್ಯಾಸವನ್ನೆಲ್ಲ ಬದಿಗಿರಿಸಿ, ಸತತವಾಗಿ ನನ್ನ ಶುಶ್ರೂಷೆ ಮಾಡಿದ. ನನ್ನ ಕಣ್ಣುಮುಂದೆ ಸದಾ ಆ ರಾಕ್ಷಸೀರೂಪ ಕಟ್ಟಿದಂತಿದ್ದು, ಅದೇ ವಿಷಯ ಬಡಬಡಿಸುತ್ತಿದ್ದೆ. ಪಾಪ, ಹೆನ್ರಿಗೆ ಏನೂ ಅರ್ಥವಾಗದೆ, ನನ್ನ ಅವಸ್ಥೆಯ ಬಗ್ಗೆ ಚಡಪಡಿಸುತ್ತಿದ್ದ.

ಕ್ರಮೇಣ ಬಹಳ ನಿಧಾನವಾಗಿ, ನಾನು ಸುಧಾರಿಸಹತ್ತಿದೆ. ನನಗೆ ಸಂಪೂರ್ಣ ಎಚ್ಚರ ಮೂಡಿದಾಗ ವಸಂತಮಾಸ ಆರಂಭವಾಗಿತ್ತು. ನನ್ನ ಮನದಲ್ಲಿನ ಉದಾಸೀನತೆ ಮಾಯವಾಗಿ ಆನಂದೋಲ್ಲಾಸ ಆವರಿಸಿತ್ತು. ಎಲಿಜಾಬೆತ್‌ಳಿಂದ ನನಗೊಂದು ಪತ್ರವೂ ಕಾದಿತ್ತು. ಅದರಲ್ಲಿ ನನ್ನ ತಂದೆಯ ಯೋಗಕ್ಷೇಮ, ಬಂಧುಬಳಗದ ಕುಶಲ ಸಮಾಚಾರವೆಲ್ಲ ತಿಳಿಸಿದ್ದಳು. ನನಗೆ ಸಂಪೂರ್ಣ ಗುಣವಾಗಿ, ನಾನೊಂದು ಉತ್ತರ ಬರೆಯಬೇಕೆಂದು ಕೋರಿದ್ದಳು. ಕೂಡಲೆ ಅವಳಿಗೊಂದು ಪತ್ರ ಬರೆದು ನನ್ನ ಕ್ಷೇಮಸಮಾಚಾರ ತಿಳಿಸಿದೆ.

ಮುಂದೆರಡು ವಾರಗಳಲ್ಲಿ ನನ್ನ ಕೋಣೆ ಬಿಟ್ಟು ಹೊರಬೀಳುವಷ್ಟು ಆರೋಗ್ಯ ಸುಧಾರಿಸಿತ್ತು. ಈಗ ನಾನು ರಸಾಯನ ಶಾಸ್ತ್ರ ಮತ್ತು ಅದರ ಸಾಧನೆಗಳನ್ನು ಕಂಡರೇ ಅಸಹ್ಯಪಡುತ್ತಿದ್ದೆ. ಹೆನ್ರಿ ಕ್ಲರ್ವಲ್‌ನೊಂದಿಗೆ ನಾನೂ ಪೌರಸ್ತ್ಯ ಕಾವ್ಯ, ಸಾಹಿತ್ಯಗಳನ್ನು ಅಭ್ಯಸಿಸುವುದರಲ್ಲಿ ನಿರತನಾದೆ. ಅರಬ್ಬಿ, ಸಂಸ್ಕೃತ, ಪಾರಸಿ ಭಾಷೆಗಳಲ್ಲಿಯ ಪ್ರಾಚೀನ ಕೃತಿಗಳು ನನ್ನ ಉದ್ವಿಗ್ನ ಮನಸ್ಸಿಗೆ ನೆಮ್ಮದಿ ನೀಡಿದವು. ಅನಂತರ ಹೆನ್ರಿಯೊಂದಿಗೆ ಹತ್ತಿರದ ಹಳ್ಳಿಗಾಡಿನಲ್ಲಿ ಪಾದಯಾತ್ರೆ ಕೈಗೊಂಡು ನಿಸರ್ಗದ ಆಹ್ಲಾದಕರ ವಾತಾವರಣದಲ್ಲಿ ಸಂತಸಪಟ್ಟೆ. ಬಹುಬೇಗನೆ ನಾನು ಮೊದಲಿನ ಉಲ್ಲಾಸಭರಿತ, ನಿಶ್ಚಿಂತಪುರುಷನಾಗಿ, ಗೆಲುವಿನಿಂದಿದ್ದೆ, ಇನ್ನು ಕೆಲವು ದಿನಗಳಲ್ಲಿ ಜಿನೀವಾಕ್ಕೆ ಮರಳಿ ಹೋಗಬೇಕೆಂದು ನಿರ್ಧರಿಸಿದೆ.

ಅಷ್ಟರಲ್ಲಿ ನನ್ನ ತಂದೆಯಿಂದ ನನ್ನ ಸಣ್ಣ ಸೋದರ ವಿಲಿಯಮ್‌ನ ಮರಣವಾರ್ತೆ ತಿಳಿಸುವ ವಿಷಾದಮಯ ಪತ್ರ ಬಂತು. ಆತನ ಕೊಲೆಯಾಗಿತ್ತೆಂದು ಕೇಳಿ ನಾನು ದಿಙ್ಮೂಢನಾದೆ. ಹಿಂದಿನ ಗುರುವಾರ ಸಂಜೆ ಅವರೆಲ್ಲರೂ ಹತ್ತಿರದ ವನಕ್ಕೆ ವಾಯುವಿಹಾರಕ್ಕೆ ಹೋಗಿದ್ದರಂತೆ. ನನ್ನ ತಮ್ಮಂದಿರಿಬ್ಬರೂ ಕಣ್ಣುಮುಚ್ಚಾಲೆ ಆಟವಾಡುತ್ತಾ ತುಸು ದೂರ ಹೋಗಿದ್ದರು. ಕೆಲಹೊತ್ತಾದ ಮೇಲೆ ಅರ್ನೆಸ್ಟ್ ಒಬ್ಬನೆ ತಿರುಗಿಬಂದ. ಎಷ್ಟು ಹೊತ್ತಾದರೂ ವಿಲಿಯಮ್ ಮರಳಿ ಬರಲಿಲ್ಲ.

ರಾತ್ರಿಯೆಲ್ಲ ದೀವಟಿಗೆ ಹಿಡಿದು ಹುಡುಕಾಡಿದರು. ಬೆಳಗಿನ ಐದು ಗಂಟೆಗೆ, ಹುಲ್ಲಿನ ಮೇಲೆ ಆತನ ಮೃತದೇಹ ಸಿಕ್ಕಿತು. ಕೊರಳ ಮೇಲೆ ಕುತ್ತಿಗೆ ಹಿಸುಕಿದ ಕೊಲೆಗಡುಕನ ಬೆರಳಿನ ಗುರುತಿತ್ತು. ಆದರೆ ಅಪರಾಧಿ ಯಾರೆಂಬುದು ಮಾತ್ರ ನಿಗೂಢವಾಗಿಯೇ ಉಳಿಯಿತು.

ಇದನ್ನೆಲ್ಲ ತಿಳಿದು ನಾನು ಶೋಕಸಂತಪ್ತನಾದೆ. ಕೂಡಲೆ ಜಿನೀವಾಕ್ಕೆ ಹೊರಟೆ. ಎರಡು ದಿನದ ಪ್ರಯಾಣದ ನಂತರ ಊರು ಸಮೀಪಿಸಿದಂತೆ. ನನ್ನಲ್ಲಿ ದುಃಖ ಭೀತಿ ಆವರಿಸಿತ್ತು. ಆರು ವರ್ಷಗಳ ನಂತರ ನನ್ನ ಊರಿಗೆ ಹಿಂತಿರುಗುತ್ತಿದ್ದೆ. ಅಲ್ಲಿ ಏನೆಲ್ಲಾ ಬದಲಾವಣೆಗಳಾಗಿದ್ದವು! ಊರಿನ ಹೊರ ವಲಯಕ್ಕೆ ಬಂದಾಗ ಕತ್ತಲಾಗಿತ್ತು. ಊರಿನ ಬಾಗಿಲನ್ನು ಮುಚ್ಚಿಬಿಟ್ಟಿದ್ದರು. ಆದ್ದರಿಂದ ನನ್ನ ಸೋದರನ ಕೊಲೆಯಾದ ಸ್ಥಳ ನೋಡಲೆಂದು ಆ ವನಕ್ಕೆ ಹೋದೆ. ಗುಡುಗು, ಮಿಂಚಿನ ಮಳೆ ಆರಂಭವಾಯಿತು. ಕತ್ತಲಲ್ಲಿ ಹಾಗೆ ಮುಂದೆ ನಡೆದೆ. ಒಮ್ಮೆಲೆ ಸಮೀಪದ ಮರಗಳ ಗುಂಪಿನ ಹಿಂದಿನಿಂದ ಒಂದು ಆಕೃತಿ ಗೋಚರಿಸಿತು. ತಡೆದು ನಿಂತು, ಅದನ್ನೇ ದಿಟ್ಟಿಸಿ ನೋಡಿದೆ. ಮಿಂಚಿನ ಪ್ರಕಾಶ ಅದನ್ನು ಬೆಳಗಿತು. ಹೌದು, ನಿಃಸಂದೇಹವಾಗಿ ಅದೇ ಆಜಾನುಬಾಹು ಆಕಾರ. ಅಸಹನೀಯ ಚಹರೆಯ ವಿಕೃತ ರಾಕ್ಷಸ. ನಾನು ನಿರ್ಮಿಸಿದ ಭೀಕರ ಸೈತಾನ. ಈತ ಇಲ್ಲಿ ಹೇಗೆ ಬಂದ? ನನ್ನ ಸೋದರರರನ್ನು ಕೊಂದವನು ಇವನೇ ಇರಬಹುದೆ? ಈ ವಿಚಾರ ಹೊಳೆದೊಡನೆಯೇ ನನ್ನ ಜಂಘಾಬಲವೇ ಉಡುಗಿದಂತಾಗಿ, ಆಸರೆಗಾಗಿ ಹತ್ತಿರದ ಮರಕ್ಕೆ ಆತುನಿಂತೆ. ದೈತ್ಯಾಕೃತಿ ವೇಗದಿಂದ ನನ್ನ ಮುಂದೆ ಹಾಯ್ದು ಹೋಗಿ ಕತ್ತಲಲ್ಲಿ ಕಣ್ಮರೆಯಾಯಿತು. ನಿಜ ಈತನೆ ವಿಲಿಯಮ್‌ನನ್ನು ಕೊಂದದ್ದು ಎಂದು ನನಗೆ ಖಚಿತವೆನಿಸಿತು. ಆತನನ್ನು ಬೆನ್ನಟ್ಟಬೇಕೆಂದೆ. ಆದರೆ ಮಿಂಚಿನ ಬೆಳಕಿನಲ್ಲಿ ಆತ ಎದುರುಗಡೆಯ ಬಂಡೆಗಲ್ಲುಗಳನ್ನು ಏರುತ್ತ ಬೇಗನೆ ಶಿಖರ ಸೇರಿ ಅದೃಶ್ಯನಾದ.

ನಾನು ಸ್ತಂಭೀಭೂತನಾದೆ. ಆತನನ್ನು ಸೃಷ್ಟಿಸಿದ್ದನ್ನು ಮನಸ್ಸಿನಲ್ಲೆ ಮೆಲುಕುಹಾಕಿದೆ. ಆತ ಜೀವ ಪಡೆದು ಸುಮಾರು ಎರಡು ವರ್ಷಗಳಾಗಿತ್ತು. ಇದು ಆತನ ಪ್ರಥಮ ಅಪರಾಧವೆ? ಹಾಗಾದರೆ ನಾನು ಲೋಕದಲ್ಲಿ ವಿಧ್ವಂಸಕ ಕೃತ್ಯಗಳನ್ನು ಮಾಡಲು ಒಬ್ಬ ಭಯಂಕರ ಅಪರಾಧಿಯನ್ನು ಸೃಷ್ಟಿಸಿದ್ದೇನೆಯೇ?

ರಾತ್ರಿಯಿಡೀ ನನ್ನ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ನಾನು ಸೃಷ್ಟಿಸಿದ ಜೀವ ದುಷ್ಕೃತ್ಯಗಳನ್ನು ಮಾಡುವ ಶಕ್ತಿ ಪಡೆದು ನನಗೆ ಪ್ರಿಯವಾದವರ ವಿನಾಶಕ್ಕೆ ಕಾರಣವಾಯಿತಲ್ಲ ಎಂದು ಮರುಗಿದೆ.

ಬೆಳಕು ಹರಿದೊಡನೆ ಮನೆಯತ್ತ ಸಾಗಿದೆ. ನನ್ನ ಮೊದಲನೆಯ ಕೆಲಸ ಆ ಕೊಲೆಪಾತಕಿಯನ್ನು ಶೋಧಿಸುವುದು ಎಂದು ಯೋಚಿಸಿದೆ. ಆದರೆ ನಾನು ಇದೆಲ್ಲವನ್ನು ಹೇಳಿದರೆ ಯಾರಾದರೂ ನಂಬುವರೇ? ಏನೋ ಹುಚ್ಚ ಬಡಬಡಿಸುತ್ತಿದ್ದಾನೆ ಎನ್ನುತ್ತಾರೆ. ಮೇಲಾಗಿ ಹೇಗಾದರೂ ಮಾಡಿ ನನ್ನ ಬಂಧುವರ್ಗವನ್ನು ಪುಸಲಾಯಿಸಿದರೂ ಆ ವಿಚಿತ್ರ ಪ್ರಾಣಿಯನ್ನು ಹಿಡಿಯುವುದು ಅವರಿಗೆ ಸಾಧ್ಯವಾದೀತೆ ಎಂದೆಲ್ಲ ವಿಚಾರ ಮಾಡಿ ಕೊನೆಗೆ ಸುಮ್ಮನಿರುವುದೇ ಒಳ್ಳೆಯದೆಂದು ತೀರ್ಮಾನಿಸಿದೆ.

ಮನೆಯಲ್ಲಿ ಎಲ್ಲರೂ ದುಃಖದಲ್ಲಿ ಮುಳುಗಿದ್ದರು. ಕೊಲೆಯಾದ ದಿನ ವಿಲಿಯಮ್‌ನ ಒತ್ತಾಯಕ್ಕೋಸ್ಕರ ಎಲಿಜಾಬೆತ್ ಅವನ ಕೊರಳಲ್ಲಿ ನನ್ನ ತಾಯಿಯ ಭಾವಚಿತ್ರದ ಪದಕವಿರುವ ಚಿನ್ನದ ಹಾರ ಹಾಕಿದ್ದಳು. ಅದರ ಆಸೆಗೆ ಆತನ ಕೊಲೆಯಾಗಿತ್ತೆಂದು ಅವಳ ನಂಬಿಕೆ ಹೀಗಾಗಿ ವಿಲಿಯಮ್‌ನ ಮರಣಕ್ಕೆ ತಾನೇ ಕಾರಣವೆಂದು ಎಲಿಜಾಬೆತ್ ಪರಿತಪಿಸುತ್ತಿದ್ದಳು. ಅಷ್ಟರಲ್ಲಿ ಮನೆಗೆ ಬಂದ ಅರ್ನೆಸ್ಟ್ 'ಅಪರಾಧಿಯ ಪತ್ತೆಯಾಗಿದೆ' ಎಂದು ಹೇಳಿದ.

'ಅಪರಾಧಿ ಸಿಕ್ಕನೆ? ಹೇಗೆ?' ನಾನು ಕೇಳಿದೆ. ಆತನನ್ನು ಬೆನ್ನಟ್ಟಬಲ್ಲವರು ಯಾರು? ಗಾಳಿಯನ್ನು ಹಿಡಿಯಬಹುದೇ? ನದಿ ನೀರನ್ನು ಹುಲ್ಲು ಕಡ್ಡಿಯಿಂದ ನಿಲ್ಲಿಸಬಹುದೇ? ಅವನನ್ನು ಬಂಧಿಸುವುದು ಅಸಾಧ್ಯ. ನಿನ್ನೆ ರಾತ್ರಿ ನಾನು ಅವನನ್ನು ನೋಡಿದೆ. ಅಲ್ಲಿಯೇ ತಿರುಗಾಡುತ್ತಿದ್ದ ಎಂದೆಲ್ಲ ಬಡಬಡಿಸಿದೆ.

'ನಿನ್ನ ಮಾತಿನ ಅರ್ಥವೇನೊ ನನಗೆ ತಿಳಿಯದು' ಅರ್ನೆಸ್ಟ್ ದಿಗಿಲುಗೊಂಡು ಹೇಳಿದ. 'ಆದರೆ

ಈ ಕೊಲೆ ಮಾಡಿದವಳು ನಮ್ಮ ಮನೆಯಲ್ಲಿಯೇ ಇದ್ದ ಹುಡುಗಿ–ಜಸ್ಟೀನ್ ಮೊರಿಟ್ ಎಂಥ ಸೌಮ್ಯ ಹುಡುಗಿ. ಇಂಥ ಭೀಕರ ಅಪರಾಧವನ್ನು ಅದು ಹೇಗೆ ಮಾಡಿದಳೋ ಯಾರಿಗೂ ತಿಳಿಯದು.'

'ಸಾಧ್ಯವೇ ಇಲ್ಲ' ನಾನೆಂದೆ.

'ಇಲ್ಲ, ಅದಕ್ಕೆ ಸಾಕಷ್ಟು ಸಾಕ್ಷ್ಯ ಸಿಕ್ಕಿವೆ. ಕೊಲೆಯಾದ ಮರುದಿನ ಮುಂಜಾನೆ ಜಸ್ಟೀನ್ ಕಾಯಿಲೆ ಬಿದ್ದಳು. ಆಗ ಅವಳು ತೊಟ್ಟ ಅಂಗಿಯ ಜೇಬಿನಲ್ಲಿ ವಿಲಿಯಮ್‌ನ ಹಾರ ಸಿಕ್ಕಿತು. ಅವಳನ್ನು ಪ್ರಶ್ನಿಸಿದಾಗ ಆಕೆ ಗೊಂದಲಕ್ಕೀಡಾದಳು. ಇಂದು ಅವಳ ನ್ಯಾಯ ವಿಚಾರಣೆ ನಡೆಯಲಿದೆ. ಅರ್ನೆಸ್ಟ್ ಹೇಳಿದ.

ಜಸ್ಟೀನ್ ನಿರಪರಾಧಿಯೆಂಬುದು ಎಲಿಜಾಬೆತ್‌ಳಿಗೂ ಖಚಿತವಾದಂತಿತ್ತು. ಆದ್ದರಿಂದ ಅವಳು ಶಿಕ್ಷೆಗೆ ಗುರಿಯಾಗುತ್ತಾಳೆಂಬುದು ಇವಳಿಗೆ ದುಸ್ಸಹವಾಗಿತ್ತು. 'ಚಿಂತಿಸಬೇಡ, ಎಲಿಜಾ ಬೆತ್, ಜಸ್ಟೀನ್ ನಿಜಕ್ಕೂ ನಿರಪರಾಧಿ. ಅವಳ ಬಿಡುಗಡೆಯಾಗುವದು ಖಂಡಿತ' ಎಂದು ನಾನವಳಿಗೆ ಸಮಾಧಾನ ಹೇಳಿದೆ.

ಆದರೆ ತೀರ್ಪು ತದ್ವಿರುದ್ಧವಾಯಿತು. ಜಸ್ಟೀನ್‌ಳನ್ನು ಅಪರಾಧಿಯೆಂದು ನಿರ್ಣಯಿಸಿ ಅವಳಿಗೆ ಮರಣದಂಡನೆ ವಿಧಿಸಲಾಯಿತು. ಅವಳ ಜೇಬಿನಲ್ಲಿ ಸಿಕ್ಕ ಮೃತ ಬಾಲಕನ ಕೊರಳಲ್ಲಿಯ ಹಾರ ಒಂದು ಮಹತ್ವದ ಪುರಾವೆ ಆಗಿತ್ತು. ಅದರ ವಿಷಯದಲ್ಲಿ ಜಸ್ಟೀನ್‌ಳಿಗೆ ಏನೂ ಸ್ಪಷ್ಟೀಕರಣ ನೀಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಅವಳು ಕೊಲೆಪಾತಕಿ ಎಂದು ಗಲ್ಲು ಶಿಕ್ಷೆಗೆ ಗುರಿಯಾದಳು.

ನಾನು ಬಹಳ ವ್ಯಸನಪಟ್ಟೆ. ಇದೆಲ್ಲವೂ ನನ್ನಿಂದಾಗಿಯೆ ಆದದ್ದು. ಈ ಎಲ್ಲ ದುಃಖತಾಪಕ್ಕೆ ನಾನೇ ಮೂಲ ಕಾರಣ. ನನ್ನ ಪ್ರಿಯ ಬಂಧುಗಳನ್ನು ಬಲಿ ತೆಗೆದುಕೊಂಡ ನನ್ನ ವಿದ್ಯೆಗೋಸ್ಕರ ತೀವ್ರ ಪಶ್ಚಾತ್ತಾಪಪಟ್ಟೆ.

3

ಮಿತಿಮೀರಿದ ಔದಾಸೀನ್ಯ ಹಾಗೂ ಅಪರಾಧ ಭಾವನೆಯಿಂದ ತಳಮಳಿಸಿದೆ. ನಿದ್ದೆಗೆಟ್ಟು ಪ್ರೇತ ದಂತೆ ಅಲೆದಾಡಿದೆ. ನಾನು ಮಾಡಿದ ಕೆಲಸಕ್ಕಾಗಿ ನರಕಯಾತನೆ ಅನುಭವಿಸಿದೆ. ಸದುದ್ದೇಶ ದಿಂದಲೆ ನನ್ನ ಕಾರ್ಯ ಆರಂಭಿಸಿದ್ದೆ. ಲೋಕಕ್ಕೆ ಉಪಯುಕ್ತವಾಗಬೇಕೆಂದಿದ್ದೆ. ಆದರೆ ಅದೆಲ್ಲ ಬುಡಮೇಲಾಗಿತ್ತು. ನನ್ನ ಆರೋಗ್ಯ ಸಂಪೂರ್ಣ ಹಾಳಾಯಿತು. ನಾನು ಮನುಷ್ಯ ಸಂಪರ್ಕವನ್ನೇ ತಪ್ಪಿಸಿಕೊಂಡಿದ್ದೆ. ಏಕಾಂತತೆಯಲ್ಲಿಯೇ ಸಮಾಧಾನಪಟ್ಟುಕೊಂಡಿದ್ದೆ. ಎಷ್ಟೋ ಸಲ ನಾನು ಆತ್ಮ ಹತ್ಯೆ ಮಾಡಿಕೊಂಡು ಈ ಮನೋವೇದನೆಯಿಂದ ಮುಕ್ತನಾಗಿಬಿಡಬೇಕೆಂದೂ ಯೋಚಿಸಿದ್ದುಂಟು.

ದಿನನಿತ್ಯ ಆ ರಾಕ್ಷಸ ಮತ್ತೆಲ್ಲಿ ಹೊಸ ಉಪಟಳ ನಡೆಸುವನೋ ಎಂಬ ಕೊರಗು ನನಗೆ. ಆತನನ್ನು ಅತೀವ ದ್ವೇಷಿಸುತ್ತಿದ್ದೆ. ಅವಿವೇಕತನದಿಂದ ಸೃಜಿಸಿದ ಆ ಜೀವವನ್ನು ನಾಶ ಮಾಡಬೇಕೆಂದು ಹಾತೊರೆಯುತ್ತಿದ್ದೆ.

ನನ್ನ ಅಂತರಂಗದ ತುಮುಲದಿಂದ ಪಾರಾಗಲು ನಾನು ಮನೆಬಿಟ್ಟು ಹತ್ತಿರದ ಆಲ್ಪ್ಸ್ ಬೆಟ್ಟಗಳ ಕಣಿವೆಯಲ್ಲಿ ಕೆಲ ದಿನ ಹೋಗಿದ್ದೆ. ಆ ಪರ್ವತಗಳ ಪ್ರಶಾಂತ ಪರಿಸರದಲ್ಲಿನ ಸೃಷ್ಟಿ ಸೌಂದರ್ಯ ಸ್ವಲ್ಪ ಮನಃಶಾಂತಿ ನೀಡಿತು.

ಒಂದು ದಿನ ನಾನೊಂದು ಬೆಟ್ಟವನ್ನು ಏರಿ ಅದರ ಹಿಮಾಚ್ಛಾದಿತ ನೆತ್ತಿಯ ಮೇಲೆ ಕುಳಿತು ಕೊಂಡು ಸುತ್ತಮುತ್ತಲಿನ ಅದ್ಭುತ ನಿಸರ್ಗ ಸೌಂದರ್ಯವನ್ನು ಅವಲೋಕಿಸುತ್ತಿದ್ದೆ. ಒಮ್ಮೆಲೆ, ತುಸು ದೂರದಲ್ಲಿ, ಹಿಮದ ಮೇಲೆ, ಅಮಾನುಷ ವೇಗದಿಂದ ನನ್ನತ್ತ ಧಾವಿಸುತ್ತಿದ್ದ ಒಂದು ಮಾನವಾಕೃತಿಯನ್ನು ಕಂಡೆ. ಆತನ ಅಸಾಧಾರಣ ನಿಲುವನ್ನು ನೋಡಿ ನನ್ನ ಕಣ್ಣು ಕತ್ತಲುಗೂಡಿ, ತಲೆ ತಿರುಗಿತು. ಆತ ಸಮೀಪಿಸಿದಂತೆ, ನಾನು ರಚಿಸಿದ ರಾಕ್ಷಸನನ್ನು ಗುರುತಿಸಿದೆ. ಕೋಪ ಭಯ ಗಳಿಂದ ಕಂಪಿಸುತ್ತ ಆತ ಹತ್ತಿರ ಬರುವ ದಾರಿ ನೋಡಿದೆ. ಆತನೊಂದಿಗೆ ಹೋರಾಡಬೇಕೆಂದೆ.


ಅವನ ಮುಖಚರ್ಯೆಯಲ್ಲಿ ತೀವ್ರ ಮನೋವೇದನೆ ವ್ಯಕ್ತವಾಗಿತ್ತು. ಅಲ್ಲದೆ, ತಿರಸ್ಕಾರ, ದ್ವೇಷ ಭಾವನೆಯೂ ಸ್ಪಷ್ಟವಾಗಿತ್ತು. ನಾನು ರೋಷ ದ್ವೇಷಗಳಿಂದ ಮೂಕನಾಗಿದ್ದೆನಾದರೂ, ಸುಧಾರಿಸಿಕೊಂಡು, ತಾತ್ಸಾರ, ಹೇಸಿಕೆಯಿಂದ, 'ಸೈತಾನ್! ನನ್ನೆಡೆಗೆ ಬರುವಷ್ಟು ನಿನಗೆ ಧೈರ್ಯವೆ? ಪ್ರತೀಕಾರದ ಭಯವಿಲ್ಲವೆ ನಿನಗೆ? ತೊಲಗು ನೀಚ ಹುಳವೆ. ಬೇಡ ತಡೆ; ನಿನ್ನನ್ನು ತುಳಿದು ಬಿಡುವೆ' ಎಂದು ರೋಷದಿಂದ ಕೂಗಾಡಿದೆ.

'ನಿನ್ನಿಂದ ಇಂಥದೇ ಸ್ವಾಗತವನ್ನು ನಾನು ನಿರೀಕ್ಷಿಸಿದ್ದೆ. ಅಧಮರನ್ನು ಎಲ್ಲ ಮನುಷ್ಯರೂ ದ್ವೇಷಿಸುವರು. ನಾನಂತೂ ಎಲ್ಲರಿಗಿಂತ ಅಧಮ. ನನ್ನನ್ನೆಷ್ಟು ದ್ವೇಷಿಸಲಾರರು! ನನಗೆ ಜೀವ ತುಂಬಿದ ನೀನು ಸಹ ನನ್ನನ್ನು ತಿರಸ್ಕರಿಸುವಿ. ನನ್ನನ್ನು ಕೊಲ್ಲಬೇಕೆನ್ನುವಿ. ಹೀಗೆ ಪ್ರಾಣದೊಡನೆ ಚೆಲ್ಲಾಟವಾಡುವಿಯಾ? ನೀನು ನಿನ್ನ ಕರ್ತವ್ಯ ಪೂರೈಸಿದರೆ, ನಾನೂ ನನ್ನ ಕರ್ತವ್ಯ ಮಾಡುವೆ. ನೀನು ನನ್ನ ಕರಾರುಗಳಿಗೆ ಒಪ್ಪಿದರೆ, ನಾನು ನಿನ್ನನ್ನು ಶಾಂತಿಯಿಂದಿರಲು ಬಿಡುತ್ತೇನೆ. ಇಲ್ಲವಾದರೆ ನಿನ್ನ ಉಳಿದ ಬಂಧುಬಳಗವನ್ನೂ ಮುಗಿಸಿಬಿಡುತ್ತೇನೆ' ಎಂದ ಆ ರಾಕ್ಷಸ.

'ಪಾಪಿ. ನಿನ್ನ ಕೃತ್ಯಕ್ಕೆ ನಿನಗೆ ನರಕದ ಚಿತ್ರಹಿಂಸೆ ಸಹ ಕಡಿಮೆಯೇ. ನಿನ್ನನ್ನು ನಿರ್ಮಿಸಿದ್ದಕ್ಕೆ ನನ್ನನ್ನು ದೂಷಿಸುವಿಯಾ? ಅಷ್ಟು ಅಜಾಗರೂಕತೆಯಿಂದ ನಾನು ಹೊತ್ತಿಸಿದ ಜೀವದ ಕಿಡಿಯನ್ನು ನಂದಿಸಿ ಬಿಡುತ್ತೇನೆ' ಎಂದು ಮಿತಿಮೀರಿದ ರೊಚ್ಚಿನಿಂದ ಆತನ ಮೇಲೆ ಏರಿ ಹೋದೆ.

ಆತ ನನ್ನಿಂದ ತಪ್ಪಿಸಿಕೊಂಡು, 'ಶಾಂತವಾಗಿರು! ನಿನ್ನ ಸೇಡು ತೀರಿಸಿಕೊಳ್ಳುವುದಕ್ಕೆ ಮುಂಚೆ ನನ್ನ ಮಾತು ಕೇಳು. ನನ್ನ ಜೀವನ ದುಃಖಮಯವಾಗಿದ್ದರೂ ನನಗೆ ಪ್ರಿಯವಾಗಿದೆ. ಅದಕ್ಕೇ ಅದನ್ನು ರಕ್ಷಿಸಿಕೊಳ್ಳುವೆ. ನಿನಗಿಂತ ನನ್ನನ್ನು ಶಕ್ತಿಶಾಲಿಯಾಗಿ ಮಾಡಿರುವಿ. ಆದರೂ ನಾನು ನಿನ್ನನ್ನು ವಿರೋಧಿಸುವುದಿಲ್ಲ. ನೀನು ನನ್ನ ಪ್ರಾಣದಾತ. ನೀನು ನನಗೆ ನ್ಯಾಯ ನೀಡಬೇಕು. ಕೃಪೆಯನ್ನು, ವಾತ್ಸಲ್ಯವನ್ನು ತೋರಬೇಕು. ನನ್ನನ್ನು ಸುಖಿಯಾಗಿ ಮಾಡು, ನಾನು ಪುನಃ ಸದ್ಗುಣಿಯಾಗುವೆ' ಎಂದ ಆ ರಾಕ್ಷಸ.

'ಹೋಗು! ನಿನ್ನ ಮಾತು ನಾನು ಕೇಳುವುದಿಲ್ಲ. ನಮ್ಮಿಬ್ಬರಲ್ಲಿ ಯಾವ ಸಂಬಂಧವೂ ಉಳಿದಿಲ್ಲ.



“ಯಾಕೋ ಪ್ರವಚನಕ್ಕೆ ಯಾರೂ ಬರ್ತಾನೇ ಇಲ್ವಲ್ಲಾ... ... !”

ಹೋಗು. ಇಲ್ಲವಾದರೆ ಜಗಳವಾಗಿ ನಮ್ಮಿಬ್ಬರಲ್ಲಿ ಒಬ್ಬರು ಸಾಯುವುದು ಖಂಡಿತ.'

'ನಿನಗೆ ಹೇಗೆ ತಿಳಿ ಹೇಳಲಿ? ಕೇಳು, ಫ್ರಾಂಕೀನ್‌ಸ್ಟೀನ್, ನಾನೂ ಗುಣವಂತನಾಗಿದ್ದೆ, ಪ್ರೇಮ ವಾತ್ಸಲ್ಯದಿಂದ ನನ್ನ ಹೃದಯ ತುಂಬಿತ್ತು. ಆದರೆ ನಾನೆಷ್ಟು ಏಕಾಕಿ! ನನ್ನ ಸೃಷ್ಟಿಕರ್ತನಾದ ನೀನೇ ನನ್ನನ್ನು ಇಷ್ಟು ತುಚ್ಛೀಕರಿಸುವಾಗ, ಉಳಿದರೆಷ್ಟು ತಿರಸ್ಕರಿಸಲಾರರು! ಆದ್ದರಿಂದ ಮನುಷ್ಯರಿಂದ ದೂರವಾಗಿ ಈ ಹಾಳು ಪರ್ವತಗಳಲ್ಲಿ, ಹಿಮದ ಗವಿಗಳಲ್ಲಿರಬೇಕಾಗಿದೆ. ನಾನು ಕೊಲೆಗಡುಕ ನೆಂದು ನನ್ನನ್ನು ಅಪಾದಿಸುವಿ. ಆದರೆ, ಮೊದಲು ನನ್ನ ಕಥೆ ಕೇಳು. ಅನಂತರ ನನ್ನ ಅಪರಾಧದ ಬಗ್ಗೆ ತೀರ್ಮಾನಿಸು. ಬೇಕಾದರೆ ನಿನ್ನ ಸೃಷ್ಟಿಯನ್ನು ನಾಶಮಾಡಿಬಿಡು.'

'ಓಹ್, ಆ ಹಾಳು ಸಂಗತಿಯನ್ನು ಈಗೇಕೆ ನೆನಪಿಗೆ ತರುತ್ತಿ? ನಿನ್ನನ್ನು ನಿರ್ಮಿಸಿದ ಕೈಗಳು ಹಾಳಾಗಿ ಹೋಗಲಿ! ನನ್ನನ್ನೂ ನೀನು ದುಃಖಕ್ಕೀಡು ಮಾಡಿರುವಿ. ತೊಲಗು! ನಿನ್ನ ಹೇಯ ರೂಪ ದಿಂದ ನನ್ನನ್ನು ಪೀಡಿಸಬೇಡ!'

'ಆದರೂ ನನ್ನ ಕಥೆ ಕೇಳಿ ನಿನಗೆ ಕರುಣೆ ಬರಬಹುದು. ನನ್ನ ಕಥೆ ಸುದೀರ್ಘ ಹಾಗೂ ಸೋಜಿಗ ವಾಗಿದೆ. ಇಲ್ಲಿ ಹೇಳುವುದು ಸರಿಯಲ್ಲ. ಅದಕ್ಕೇ ಬೆಟ್ಟದ ಮೇಲಿರುವ ನನ್ನ ಜೋಪಡಿಗೆ ಬಾ. ಸೂರ್ಯಾಸ್ತವಾಗುವವರೊಳಗೆ ಎಲ್ಲವನ್ನೂ ಹೇಳುವೆ. ಅನಂತರ ನಿನ್ನ ತೀರ್ಪು ಕೊಡುವಿಯಂತೆ' ಎಂದು ಹಿಮದ ಮೇಲೆ ಮುಂದೆ ಸಾಗಿದ.

ನಾನು ಸುಮ್ಮನೆ ಆತನನ್ನು ಹಿಂಬಾಲಿಸಿದೆ. ಆತನ ಕಥೆಯಾದರೂ ಕೇಳೋಣವೆಂದು ನನ್ನ ಕುತೂಹಲ ಕೆರಳಿತ್ತು. ಈತ ನನ್ನ ಸೋದರನನ್ನು ಕೊಲೆ ಮಾಡಿದವನೋ, ಅಲ್ಲವೋ ಎಂಬುದನ್ನು ನನಗೆ ತಿಳಿಯಬೇಕಿತ್ತು. ಅಲ್ಲದೆ, ಆತನ ದುಷ್ಟತನದ ಬಗ್ಗೆ ದೂರುವ ಮೊದಲು ಆತನ ಸುಖ-ದುಃಖ ವಿಚಾರಿಸಬೇಕು ಎಂದು ಯೋಚಿಸಿ, ಆತನ ಗುಡಿಸಲಿಗೆ ಹೋದೆ. ಅಲ್ಲಿ ಆತ ತನ್ನ ಕಥೆ ಆರಂಭಿಸಿದ. ಅದನ್ನು ಅವನ ಮಾತಿನಲ್ಲೇ ಕೇಳೋಣ.

★

ನನ್ನ ಆಯುಷ್ಯದ ಪ್ರಥಮ ಕ್ಷಣಗಳನ್ನು ನೆನಪಿಡುವುದು ಕಠಿಣ. ಆ ಸಮಯದ ಘಟನೆಗಳು ಅಸ್ಪಷ್ಟ, ಗೊಂದಲಮಯವಾಗಿವೆ. ಒಮ್ಮೆಲೆ, ಅನೇಕ ಸಂವೇದನೆಗಳು ನನ್ನನ್ನು ಮುತ್ತಿದವು. ನಾನು ಏಕಕಾಲಕ್ಕೆ ಕಂಡೆ, ಕೇಳಿದೆ, ಮೂಸಿದೆ, ಸ್ಪರ್ಶಿಸಿದೆ. ನನ್ನ ವಿವಿಧ ಇಂದ್ರಿಯಗಳ ಅನುಭವ ಗಳಲ್ಲಿಯ ಭೇದ ಭಾವಗಳನ್ನು ಅರಿಯಲು ಎಷ್ಟೋ ವೇಳೆ ಹಿಡಿಯಿತು. ಕ್ರಮೇಣ ನನಗೆ ಬೆಳಕು ಕಾಣಿಸಿತು. ಕಣ್ಣುಮುಚ್ಚಿದಾಗ ಕತ್ತಲು ಕವಿಯಿತು. ಎದ್ದು ನಿಂತು ನಡೆದಾಡಿದೆ. ಕೆಳಗಿಳಿದು ಹೋದೆ. ಮುಂದೆ ನಡೆದೆ. ಬಿಸಿಲಿನ ಬೇಗೆಯಿಂದ ದಣಿದು, ಮರಗಳ ನೆರಳು ಹುಡುಕಿದೆ. ಹತ್ತಿರದ ಅಡವಿಯಲ್ಲಿ, ಒಂದು ಹೊಳೆಯ ಹತ್ತಿರ ಕುಳಿತೆ. ಹಸಿವು ಬಾಯಾರಿಕೆಯಿಂದ ಬಳಲಿದ್ದೆ. ಗಿಡ ಗಳಲ್ಲಿದ್ದ ಹಣ್ಣುಗಳನ್ನು ಹರಿದು ತಿಂದೆ. ಹೊಳೆಯ ನೀರು ಕುಡಿದೆ. ಬಳಿಕ ನೆಲದ ಮೇಲೆ ಮಲಗಿ ನಿದ್ರೆ ಹೋದೆ.

ಎಚ್ಚರಾದಾಗ, ಕತ್ತಲಾಗಿತ್ತು. ಚಳಿಯಾಗುತ್ತಿತ್ತು. ನನ್ನ ಕೋಣೆಯಿಂದ ಹೊರಬರುವಾಗ ಮೈ ಮೇಲೆ ಕೆಲ ಬಟ್ಟೆಗಳನ್ನು ಹಾಕಿಕೊಂಡಿದ್ದೆ. ಆದರೆ ರಾತ್ರಿಯಲ್ಲಿ ಅದು ಸಾಕಾಗಲಿಲ್ಲ. ನಡುಗುತ್ತ, ಗಾಬರಿಪಟ್ಟು, ಅಸಹಾಯನಾಗಿ, ಸುಮ್ಮನೆ ಕುಳಿತು ಕಣ್ಣೀರು ಸುರಿಸಿದೆ.

ಅನಂತರ ಆಕಾಶದಲ್ಲಿ ಮಂದ ಬೆಳಕು ಮೂಡಿ ನನ್ನಲ್ಲಿ ಆನಂದ ಉಕ್ಕಿತು. ಮರಗಳ ಹಿಂದಿನಿಂದ ಸುಂದರ ಬಿಂಬವೊಂದು ಕಾಣಿಸಿತು. ಅದು ಮೇಲೇರಿದಂತೆ ಬೆರಗಾಗಿ ನೋಡಿದೆ. ದಾರಿಯ ಮೇಲೆ ಬೆಳಕಾಗಿ, ನಾನು ಮತ್ತೆ ಹಣ್ಣು ಹುಡುಕಾಡಲು ಹೋದೆ. ಮರಗಳ ಹಿಂದೆ ಒಂದು ನಿಲುವಂಗಿ ಬಿದ್ದಿತ್ತು. ಅದನ್ನು ಹೊದ್ದುಕೊಂಡು ಕುಳಿತೆ. ನನ್ನ ತಲೆಯಲ್ಲಿ ಯಾವ ನಿಶ್ಚಿತ ವಿಚಾರ ಗಳಿರಲಿಲ್ಲ. ಕಿವಿಯಲ್ಲಿ ಅನೇಕ ನಾದಗಳು ತುಂಬಿದ್ದವು.

ಎಷ್ಟೋ ಹಗಲಿರುಳುಗಳು ಬದಲಾಗುತ್ತ ಕಳೆದವು. ಚಂದ್ರಬಿಂಬ ಕ್ಷೀಣಿಸಿತ್ತು. ನನ್ನ ಬೇರೆ ಬೇರೆ ಅನುಭವಗಳನ್ನು ಅರ್ಥಮಾಡಿಕೊಳ್ಳುತ್ತಿದ್ದೆ. ಪಕ್ಷಿಗಳ ಮಧುರ ನಾದಗಳನ್ನು ಅನುಕರಿಸಲೆತ್ನಿಸಿದೆ.

ಆದರೆ ನನ್ನ ಗಂಟಲಿನಿಂದ ಹೊರಬಿದ್ದ ಒರಟುಸ್ವರಗಳು ನನ್ನನ್ನೇ ಗಾಬರಿಪಡಿಸಿ, ಸುಮ್ಮನಾಗುತ್ತಿದ್ದೆ. ಪ್ರತಿದಿನ ನನ್ನ ಮನಸ್ಸಿನಲ್ಲಿ ಹೊಸ ವಿಚಾರಗಳು ಬರುತ್ತ, ವಿವಿಧ ಪದಾರ್ಥಗಳ ಭೇದಭಾವವನ್ನು ಅರಿಯತೊಡಗಿದೆ.

ಒಂದು ದಿನ ಚಳಿಯ ಬಾಧೆಯಿಂದ ಒದ್ದಾಡುತ್ತಿದ್ದಾಗ, ಅಲೆದಾಡುವ ಭಿಕ್ಷುಕರು ಹೊತ್ತಿಸಿ ಹೋದ ಬೆಂಕಿಯನ್ನು ಕಂಡೆ. ಹತ್ತಿರ ಹೋದಾಗ ಹಿತವೆನಿಸಿತು. ಅದರಲ್ಲಿಯೇ ಕೈಸೇರಿಸಿದೆ. ಕೂಡಲೆ ನೋವಿನಿಂದ ಕಿರುಚಿ ಕೈ ಹಿಂತೆಗೆದುಕೊಂಡೆ. ಹೀಗಾಗುವುದು ವಿಚಿತ್ರವೆನಿಸಿತು. ನಂತರ ಆ ಬೆಂಕಿಯನ್ನು ಪರೀಕ್ಷಿಸಿ ಕಟ್ಟಿಗೆಗಳಿಂದ ಉತ್ಪನ್ನವಾಗಿತ್ತೆಂದು ಅರಿತೆ. ಅದಕ್ಕೆ ಹೆಚ್ಚು ಕಟ್ಟಿಗೆ ಹಾಕಿ, ರಾತ್ರಿಯಲ್ಲಿ ಕಾಯಿಸಿಕೊಳ್ಳುತ್ತ ಹಾಯಾಗಿದ್ದೆ.

ಬರಬರುತ್ತ ಆಹಾರದ ಕೊರತೆಯಾಗಹತ್ತಿತು. ನಾನಲ್ಲಿಂದ ಜಾಗಬಿಟ್ಟು ಸುಲಭವಾಗಿ ಹೆಚ್ಚಿಗೆ ಆಹಾರ ಸಿಗುವಲ್ಲಿಗೆ ಹೋಗಬೇಕೆಂದೆ. ಆದರೆ ದಿಕ್ಕುದೆಶೆ ಗೊತ್ತಿರಲಿಲ್ಲ. ಸೂರ್ಯಾಸ್ತವಾಗುವ ದಿಕ್ಕಿನತ್ತ ನಡೆದೆ. ಮೂರು ದಿನ ಕಾಡಿನಲ್ಲಿ ತಿರುಗಾಡಿದ ಬಳಿಕ ಬಯಲುಭೂಮಿಯನ್ನು ಕಂಡೆ. ಹಿಮವಿಸ್ತಾರದಲ್ಲಿ ಅಲೆದು ಸಂಪೂರ್ಣ ಸೋತುಹೋಗಿದ್ದೆ. ಕೊನೆಗೊಂದು ದಿಬ್ಬದ ಮೇಲೆ ಸಣ್ಣ ಗುಡಿಸಲು ಕಂಡಿತು. ಬಾಗಿಲು ತೆರೆದಿತ್ತು. ಬೆಳಗಿನ ಚಳಿಯಿಂದ ಆಶ್ರಯಕ್ಕಾಗಿ ನಾನು ಒಳ ಹೊಕ್ಕೆ. ಮುದುಕನೊಬ್ಬ ಉರಿಯ ಮುಂದೆ ಕುಳಿತು ತಿಂಡಿಯನ್ನು ತಯಾರಿಸುತ್ತಿದ್ದ. ಸಪ್ಪಳ ಕೇಳಿ ತಿರುಗಿ ನೋಡಿದ. ನನ್ನನ್ನು ಕಂಡು, ಜೋರಾಗಿ ಕಿರುಚಿ, ಜೋಪಡಿಯಿಂದ ಹೊರಗೆ ಓಡಿ ಬಯಲು ದಾಟಿ ಪಾರಾದ. ನಾನು ಅಲ್ಲಿಯೇ ಕುಳಿತು ಉಳಿದಿದ್ದ ಉಪಾಹಾರವನ್ನು ಕಬಳಿಸಿ ದಣಿವಿನಿಂದ ಮಲಗಿಬಿಟ್ಟೆ.

ಎಚ್ಚೆತ್ತಾಗ ಮಧ್ಯಾಹ್ನವಾಗಿತ್ತು. ಎದ್ದು ಅಲ್ಲಿಂದ ಹೊರಟೆ. ಸಾಯಂಕಾಲ ಒಂದು ಗ್ರಾಮವನ್ನು ತಲುಪಿದೆ. ಅಲ್ಲಿಯ ಅಚ್ಚುಕಟ್ಟಾದ ಮನೆಗಳು ನನ್ನ ಮನಸೆಳೆದವು. ಕಿಟಕಿಗಳಲ್ಲಿ ಹಣ್ಣು ಹಂಪಲು ನೋಡಿ ಒಂದರಲ್ಲಿ ಒಳಹೊಕ್ಕೆ. ಬಾಗಿಲೊಳಗೆ ಕಾಲಿಟ್ಟೊಡನೆ ಮಕ್ಕಳು ಚೀರಿದವು. ಒಬ್ಬ ಮಹಿಳೆ ಮೂರ್ಛೆ ಹೋದಳು. ಇಡೀ ಗ್ರಾಮದಲ್ಲಿ ಹಾಹಾಕಾರ, ಕೆಲವರು ಹೆದರಿ ಪರಾರಿಯಾದರು. ಕೆಲವರು ನನ್ನ ಮೇಲೆ ಏರಿಬಂದು ಕಲ್ಲು ತೂರಿದರು. ನಾನು ಗಾಯಗೊಂಡು ಊರುಬಿಟ್ಟು ಓಡಿದೆ. ನೆಲದ ಮೇಲೆ ಹರಡಿಕೊಂಡ ಹಿಮದಿಂದಾಗಿ ನನ್ನ ಕಾಲುಗಳು ಮರಗಟ್ಟಿದ್ದವು. ಕೊನೆಗೆ ಬಯಲಿನಲ್ಲಿ ಒಂದು ಚಿಕ್ಕ ಕುಟೀರವನ್ನು ಕಂಡು, ಭೀತಿಯಿಂದ ಅದರೊಳಗೆ ಸೇರಿಕೊಂಡೆ. ಅದರ ಪಕ್ಕದಲ್ಲಿ ಒಂದು ಸಣ್ಣಮನೆ ಇತ್ತು. ಆದರೆ ಒಳಗೆ ಪ್ರವೇಶಿಸಲು ಧೈರ್ಯವಾಗಲಿಲ್ಲ. ನನ್ನ ಚಿಕ್ಕ ಗೂಡಿನಲ್ಲಿ ನನಗೆ ನೆಟ್ಟಗೆ ಕೂಡಲು ಸಹ ಬರುತ್ತಿರಲಿಲ್ಲ. ಆದರೂ ಹಿಮ ಮಳೆಯಿಂದ ಒಳ್ಳೆ ಆಶ್ರಯವಾಗಿತ್ತೆಂದು ಖುಶಿಯಿಂದ ಅದರೊಳಗೆ ವಿಶ್ರಮಿಸಿದೆ. ಮುಂದೇನೆಂದು ನಿರ್ಧಾರ ಮಾಡುವವರೆಗೂ ಅಲ್ಲಿಯೇ ಉಳಿಯಲು ನಿಶ್ಚಯಿಸಿದೆ.

ಪಕ್ಕದ ಸಣ್ಣಮನೆಯಲ್ಲಿ ಮೂರು ಜನ ಇರುತ್ತಿದ್ದರು. ಒಬ್ಬ ವೃದ್ಧ ಮತ್ತು ಅವನ ಯುವಕ ಪುತ್ರ ಪುತ್ರಿಯರು. ಮುದುಕ ಕುರುಡ. ಮಕ್ಕಳು ಒಳ್ಳೆಯವರು. ಕಿಟಕಿಯ ಸಂದಿನಿಂದ ಅವರನ್ನು ನೋಡುತ್ತಿದ್ದೆ. ಅವರ ಮಾತುಗಳನ್ನು ಆಲಿಸುತ್ತಿದ್ದೆ. ಅವರು ಮಾತಾಡುವುದು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದನ್ನೆಲ್ಲಾ ಸೂಕ್ಷ್ಮವಾಗಿ ಅವಲೋಕಿಸುತ್ತ ನಾನೂ ಅದನ್ನೇ ಪ್ರಯತ್ನಿಸಿ ಶಬ್ದೋಚ್ಚಾರಣೆ ಮಾಡುವುದನ್ನು ಕಲಿತುಕೊಂಡೆ.

ಹೀಗೇ ಚಳಿಗಾಲ ಕಳೆಯಿತು. ಹವೆ ಹಿತಕರವಾಗಹತ್ತಿತು. ನನ್ನ ವಿಚಾರಗಳೂ ಚುರುಕಾಗುತ್ತ ಶಾಂತಮನಸ್ಸಿನಿಂದ ಭವಿಷ್ಯದಲ್ಲಿ ಸುಖಾನಂದದ ನಿರೀಕ್ಷೆಯಲ್ಲಿದ್ದೆ. ಆದರೂ ನಾನು ಏಕಾಕಿಯಾಗಿದ್ದೆ. ನನಗೆ ತಂದೆತಾಯಿಗಳಿಲ್ಲ, ಬಂಧುಬಳಗವಿಲ್ಲ, ಹಣವಿಲ್ಲ, ಆಸ್ತಿಯಿಲ್ಲ, ಮೇಲಾಗಿ ನನ್ನದು ಅಮಾನುಷ ಸ್ವರೂಪ. ನನ್ನನ್ನು ನೋಡಿದವರೆಲ್ಲ ಅಸಹ್ಯಪಡುತ್ತಿದ್ದರು. ನಾನು ಯಾರು? ಭೂಮಿಗೆ ಭಾರವಾದ ಭೂತವೆ? ನಾನು ನಿರಂತರವಾಗಿ ಹೇಯಪ್ರಾಣಿಯಾಗಿರಬೇಕೇ? ಎಂದು ಪರಿತಪಿಸುತ್ತಿದ್ದೆ.

ಅಪರಲ್ಲಿ ನಾನು ಸ್ವಲ್ಪ ಅಕ್ಷರಜ್ಞಾನವನ್ನೂ ಪಡೆದಿದ್ದೆ. ಯುವಕ ತನ್ನ ತಂದೆಗೆ ಪುಸ್ತಕದಿಂದ ಓದಿ ಹೇಳುತ್ತಿದ್ದ. ಅದನ್ನು ಲಕ್ಷ್ಯಗೊಟ್ಟು ಕೇಳುತ್ತಿದ್ದೆ. ಜೊತೆಗೆ ಒಂದು ದಿನ ಅಡವಿಯಲ್ಲಿ ಅಡ್ಡಾಡುವಾಗ ಒಂದು ಚರ್ಮದ ಚೀಲ ಸಿಕ್ಕಿತು. ಅದರಲ್ಲಿ ಕೆಲ ಪುಸ್ತಕಗಳಿದ್ದವು. ಪ್ರಯಾಸಪಟ್ಟು ಅವುಗಳನ್ನು ಓದುವುದನ್ನು ಕಲಿತುಕೊಂಡೆ. ನಿನ್ನ ಕೋಣೆಯಿಂದ ಬರುವಾಗ ತೊಟ್ಟ ಬಟ್ಟೆಯ ಜೇಬಿನಲ್ಲಿ ಕೆಲವು ಕಾಗದಪತ್ರಗಳೂ ಸಿಕ್ಕವು. ಅವುಗಳನ್ನು ಪರಿಶೀಲಿಸಿದಾಗ, ಅದು ನನ್ನ ಸೃಷ್ಟಿಗೆ ಸಂಬಂಧಿಸಿದ ಲೇಖನವೆಂದು ತಿಳಿದುಕೊಂಡೆ. ಆಗ ನಿನ್ನ ಹೆಸರುದೆಸೆ ಅರಿತೆ. ದೇವರು ಎಂಥೆಂಥ ಸುಂದರ ಮಾನವರೂಪಗಳನ್ನು ನಿರ್ಮಿಸಿದ್ದಾನೆ. ಆದರೆ ನೀನು ನನ್ನಂಥ ಭೀಕರ ಮಾನವನನ್ನು ಸೃಜಿಸಿದಕ್ಕೆ ನಿನ್ನನ್ನು ಶಪಿಸಿದೆ. ನೀರಿನಲ್ಲಿ ನನ್ನ ಪ್ರತಿಬಿಂಬ ನೋಡಿದಾಗ, ನಾನೇ ಗಾಬರಿಯಾದೆ.

ಉಳಿದವರಂತೆ ನಾನೂ ಒಂದಿಷ್ಟು ಪ್ರೇಮ, ಸೌಹಾರ್ದ, ಸೌಜನ್ಯ, ಸಹಾನುಭೂತಿಗಳನ್ನು ಹೊಂದಿದ್ದೆ. ಪಕ್ಕದ ಕೋಣೆಯಲ್ಲಿದ್ದವರ ಸ್ನೇಹ ಬೆಳೆಸಬೇಕೆಂದೆ. ಆದರೆ ನನ್ನ ರೂಪದಿಂದಾಗಿ ಓಂಜರಿಯುತ್ತಿದ್ದೆ. ಒಂದು ದಿನ ಧೈರ್ಯ ತಂದುಕೊಂಡು ಮುದುಕ ಒಬ್ಬನೆ ಇದ್ದಾಗ ಒಳಹೋದೆ. ಕಣ್ಣು ಕಾಣದ ಮುದುಕನೊಂದಿಗೆ ಕೆಲಹೊತ್ತು ಮಾತನಾಡಿದೆ. ಇದು ಹೀಗೆ ಕೆಲ ದಿನ ನಡೆಯಿತು. ಆದರೆ ಒಂದು ದಿನ ನಾನು ಅಲ್ಲಿರುವಾಗ ಅವನ ಮಕ್ಕಳು ಸ್ನೇಹಿತೆಯೊಂದಿಗೆ ಬಂದರು. ಅವರ ಪೈಕಿ ಯುವತಿಯೊಬ್ಬಳು ಕೂಡಲೆ ಮೂರ್ಛೆಹೋದಳು. ಯುವಕ ನನ್ನನ್ನು ದರ ದರ ಎಳೆದು ನೆಲಕ್ಕೆ ಅಪ್ಪಳಿಸಿ, ಬಡಿಗೆಯಿಂದ ಹೊಡೆದ. ನಾನೂ ಆತನ ಅಂಗಾಂಗಗಳನ್ನು ಹರಿದು ಹಾಕಬಹುದಿತ್ತು. ಆದರೆ ಅಲ್ಲಿಂದ ಪಾರಾಗಿ ನನ್ನ ಗೂಡು ಸೇರಿದೆ.

ರಾತ್ರಿ ಅಲ್ಲಿಂದ ಕಾಲು ಕಿತ್ತಿದೆ. ಅಡವಿಯಲ್ಲಿ ಅಲೆದಾಡುತ್ತ ಕ್ರೋಧ ದ್ವೇಷದಿಂದ ಒದರಾಡಿದೆ. ಒಬ್ಬ ನರಪ್ರಾಣಿಯೂ ನನಗೆ ಕರುಣೆ ತೋರುವಂಥವನಿರಲಿಲ್ಲ. ಆ ಕ್ಷಣವೇ, ಮಾನವಜಾತಿಯ ಮೇಲೆ ನನ್ನ ಸೇಡು ತೀರಿಸಿಕೊಳ್ಳುವ ನಿರ್ಧಾರ ಕೈಕೊಂಡೆ. ಘೋರ ರಾತ್ರಿಯ ಕೊರೆಯುವ ಚಳಿಯಲ್ಲಿ ನಡುಗುತ್ತ, ಹಸಿದು ಕಂಗಾಲಾಗಿದ್ದೆ. ಲೋಕವೆಲ್ಲ ಸುಖನಿದ್ರೆಯಲ್ಲಿ ನಲಿಯುತ್ತಿದ್ದಾಗ ನಾನು ಮಾತ್ರ ತಳಮಳಿಸುತ್ತಿದ್ದೆ. ಇಡೀ ಮಾನವಕುಲವನ್ನೇ ನಿರ್ನಾಮಮಾಡಿ, ಮುಖ್ಯತಃ ನನ್ನ ಸೃಷ್ಟಿಕರ್ತನ ನಾಶಮಾಡಿಬಿಡುವೆನೆಂದು ಶಪಥ ಮಾಡಿದೆ.

ಅದಕ್ಕಾಗಿ ನಾನು ಜಿನೀವಾ ದಾರಿ ಹಿಡಿದೆ. ನನ್ನ ಪ್ರಯಾಣ ಬಲು ದೀರ್ಘ, ಹಾಗೂ ಕಷ್ಟಕರವಾಗಿತ್ತು. ಮಾನವಕಣ್ಣಿಗೆ ಬೀಳಬಾರದೆಂದು ನಾನು ರಾತ್ರಿಯಷ್ಟೆ ಪಯಣಿಸುತ್ತಿದ್ದೆ. ಬಿಸಿಲಿನ ಬೇಗೆ ಮಳೆ, ಹಿಮಪಾತದ ರಭಸ ಹಾಗೂ ಉಪವಾಸಗಳಿಂದ ಜರ್ಜರಿತನಾಗಿದ್ದೆ. ನಿನ್ನ ಊರು ಸಮೀಪಿಸಿದಂತೆ ನನ್ನ ಪ್ರತೀಕಾರದ ಕಿಡಿ ಮತ್ತಿಷ್ಟು ಉರಿಯಹತ್ತಿತು.

ಒಂದು ದಿನ ಮುಂಜಾನೆ ಅರಣ್ಯದಲ್ಲಿ ನಡೆಯುತ್ತ ಹೊರಟಿದ್ದೆ. ನದಿದಂಡೆಯ ಹತ್ತಿರ ಬಂದಾಗ, ಒಮ್ಮೆಲೆ ಮಾನವಸ್ವರಗಳನ್ನು ಕೇಳಿ, ಮರದ ಹಿಂದೆ ಅಡಗಿಕೊಂಡೆ. ಯುವತಿಯೊಬ್ಬಳು ನಗುತ್ತ ಯಾರಿಂದಲೋ ತಪ್ಪಿಸಿಕೊಳ್ಳಲು ಓಡಾಗುತ್ತಿದ್ದಳು. ಒಮ್ಮೆಲೆ ಕಾಲು ಜಾರಿ ನದಿಯಲ್ಲಿ ಬಿದ್ದಳು. ಕೂಡಲೆ ನಾನು ಮರೆಯಿಂದ ಹೊರಬಿದ್ದು ಹೋಗಿ ಪ್ರಯಾಸಪಟ್ಟು ಅವಳನ್ನು ದಂಡೆಗೆ ಎಳೆತಂದೆ. ನಿಶ್ಚೇಷ್ಟಿತಳಾಗಿದ್ದ ಅವಳನ್ನು ಎಚ್ಚರಗೊಳಿಸುವ ಪ್ರಯತ್ನದಲ್ಲಿದ್ದೆ. ಆಗ ಯುವಕನೊಬ್ಬ ಬಂದು, ನನ್ನನ್ನು ನೋಡಿ, ಹುಡುಗಿಯನ್ನು ದೂರ ಎಳೆದುಕೊಂಡು ಬಂದೂಕಿನಿಂದ ಗುಂಡು ಹಾರಿಸಿದ. ನಾನು ಕುಸಿದು ಬಿದ್ದಾಗ ಆತ ಪರಾರಿಯಾದ.

ನನ್ನ ಪರೋಪಕಾರಕ್ಕಾಗಿ ಇದೇ ನನಗೆ ಪ್ರತಿಫಲ! ಒಬ್ಬ ಮಾನವ ಜೀವಿಯನ್ನು ಸಾವಿನಿಂದ ರಕ್ಷಿಸಲೆತ್ನಿಸಿದಾಗ ನಾನು ಗುಂಡಿನೇಟಿನ ತೀವ್ರವೇದನೆಯಿಂದ ಒದ್ದಾಡಬೇಕು! ಆ ಕ್ಷಣವೇ ನನ್ನಲ್ಲಿನ ದಯಾದಾಕ್ಷಿಣ್ಯದ ಭಾವನೆಗಳು ಸಂಪೂರ್ಣ ಮಾಯವಾಗಿ ಮನುಷ್ಯ ಜಾತಿಯ ಮೇಲೆ ಕ್ರೋಧ ಉಕ್ಕೇರಿ, ಪ್ರತೀಕಾರದ ನಿರ್ಧಾರ ಬಲವಾಯಿತು.

ಎಷ್ಟೋ ವಾರಗಳವರೆಗೆ ನನ್ನ ಭುಜದ ಗಾಯವನ್ನು ವಾಸಿಮಾಡಲು ಯತ್ನಿಸುತ್ತ ಕಾಡಿನಲ್ಲಿಯೇ ಬವಣೆಪಡುತ್ತಲಿದ್ದೆ. ಅನಂತರ ಮತ್ತೆ ಹೊರಟೆ. ಎರಡು ತಿಂಗಳ ಬಳಿಕ ನಾನು ಜಿನೀವಾದ ಹೊರ ವಲಯಕ್ಕೆ ಬಂದೆ. ಅಸುಪಾಸಿದ್ದ ಹೊಲಗಳಿಗೆ ಬಂದಾಗ ಸಾಯಂಕಾಲ

ವಾಗಿತ್ತು. ಮರಗಳ ಹಿಂದೆ ಅವಿತುಕೊಂಡು ಹಸಿವು ಆಯಾಸಗಳಿಂದ ನಿರ್ವಿಣ್ಣನಾಗಿ ಸ್ವಲ್ಪ ಹೊತ್ತು ಮಲಗಿದೆ.

ಕಣ್ಣು ತೆರೆದಾಗ ಓರ್ವ ಸುಂದರ ಬಾಲಕ ನನ್ನ ಹತ್ತಿರ ಓಡಿಬಂದದ್ದನ್ನು ನೋಡಿದೆ. ನನ್ನ ತಲೆಯಲ್ಲಿಯೊಂದು ವಿಚಾರ ಸುಳಿಯಿತು. ಈತನಿಗೆ ಕುರೂಪಿತನದ ಭಯ ಇರಲಿಕ್ಕಿಲ್ಲ. ಈತನನ್ನು ಹಿಡಿದುಕೊಂಡು, ನನ್ನ ಸಂಗಾತಿಯಾಗಲು ತರಬೇತು ಕೊಟ್ಟರೆ ನನ್ನ ಏಕಾಕಿತನ ಹಿಂಗುವದಲ್ಲವೆ? ಎಂಬ ವಿಚಾರದಿಂದ ಪ್ರೇರಿತನಾಗಿ, ಆ ಹುಡುಗನನ್ನು ಹಿಡಿದು ನನ್ನ ಹತ್ತಿರ ಎಳೆದುಕೊಂಡೆ.

ನನ್ನ ರೂಪವನ್ನು ಕಂಡೊಡನೆ ಆತ ಕೈಗಳಿಂದ ಕಣ್ಣು ಮುಚ್ಚಿಕೊಂಡು ಕಿರುಚಲಾರಂಭಿಸಿದ. ನಾನು ಆತನ ಕೈಗಳನ್ನು ಸರಿಸಿ, 'ಇದೇನು ಮಗು? ನಾನು ನಿನಗೆ ಅಪಾಯ ಮಾಡುವುದಿಲ್ಲ. ನನ್ನ ಮಾತು ಕೇಳು' ಎಂದೆ.

ಆತ ಜೋರಾಗಿ ಒದ್ದಾಡುತ್ತ, 'ನನ್ನನ್ನು ಬಿಟ್ಟುಬಿಡು. ದುಷ್ಟರಾಕ್ಷಸ, ನೀನು ನನ್ನನ್ನು ಹರಿದು ತಿನ್ನಬೇಕೆನ್ನುವಿ. ನೀನು ನರಭಕ್ಷಕ ದೈತ್ಯ ಬಿಟ್ಟುಬಿಡು, ಇಲ್ಲವಾದರೆ ನನ್ನ ತಂದೆಗೆ ಹೇಳುತ್ತೇನೆ.'

'ಮಗು, ನೀನು ನಿನ್ನ ತಂದೆಯನ್ನು ಇನ್ನೆಂದೂ ನೋಡುವುದಿಲ್ಲ. ನೀನು ನನ್ನೊಡನೆ ಬರುವಿ.'

'ವಿಕೃತ ರಾಕ್ಷಸ! ನನ್ನ ಬಿಟ್ಟುಬಿಡು. ನನ್ನ ತಂದೆ ಫ್ರಾಂಕೀನ್‌ಸ್ಟೀನ್ ಸಿನೇಟಿನ ಸಭಾಸದ. ನೀನು ನನ್ನನ್ನು ಹಿಡಿದಿಟ್ಟುಕೊಂಡರೆ ಅವನು ಸುಮ್ಮನೆ ಬಿಡುವುದಿಲ್ಲ' ಎಂದ ಆ ಬಾಲಕ. ಫ್ರಾಂಕೀನ್‌ಸ್ಟೀನ್! ಹಾಗಾದರೆ ನೀನು ನನ್ನ ವೈರಿವರ್ಗದವನು. ನನ್ನ ಪ್ರಥಮ ಬಲಿಪಶುವಾಗುವೆ' ಎಂದು ಆವೇಶದಿಂದ ಆತನ ಕತ್ತು ಹಿಸುಕಿದೆ. ನನ್ನ ಕಾಲಡಿಯಲ್ಲಿ ಆತ ಸತ್ತುಬಿದ್ದಾಗ ನನ್ನ ಹೃದಯ ಹರ್ಷದಿಂದ ಹಿಗ್ಗಿತು. ಮಗುವನ್ನು ದಿಟ್ಟಿಸಿದಂತೆ, ಅದರ ಕೊರಳಲ್ಲಿ ಏನೋ ಹೊಳೆಯುವುದನ್ನು ಕಂಡೆ. ಆ ಹಾರದಲ್ಲಿ ಒಂದು ಅತಿಸುಂದರ ಸ್ತ್ರೀಯ ಭಾವಚಿತ್ರ ಕೂಡಿಸಲಾಗಿತ್ತು. ಅದನ್ನು ನೋಡಿ ಮತ್ತೆ ರೊಚ್ಚಿಗೆದ್ದೆ. ಇಂಥ ರೂಪವತಿಯರ ಸಾನ್ನಿಧ್ಯಸುಖ ನನಗೆ ಎಂದೆಂದಿಗೂ ಸಿಗುವುದಿಲ್ಲವಲ್ಲ ಎಂದು ಮರುಗುತ್ತ ಆ ಹಾರವನ್ನು ಕಿತ್ತುಕೊಂಡೆ.

ಅಲ್ಲಿಂದ ಹೋಗಿ ಒಂದು ಕಣಜದಲ್ಲಿ ಹೊಕ್ಕೆ. ಹುಲ್ಲಿನ ಮೇಲೆ ಒಬ್ಬ ಸುಂದರ ಯುವತಿ ಮಲಗಿದ್ದಳು. ಅವಳು ಎದ್ದು ನನ್ನನ್ನು ನೋಡಿದರೆ, ಹೇಸಿಕೆಯಿಂದ ಹಿಂದೆ ಸರಿಯುವಳಲ್ಲವೇ? ಸರಿ, ನಾನು ಮಾಡಿದ ಅಪರಾಧಕ್ಕಾಗಿ ಇವಳು ಶಿಕ್ಷೆಗೀಡಾಗಲಿ, ಎಂದು ಅವಳ ವಸ್ತ್ರಗಳ ನೆರಿಗೆಗಳಲ್ಲಿ ಆ ಹಾರವನ್ನು ಇಟ್ಟು ಅಲ್ಲಿಂದ ಹೊರಟು ಹೋದೆ.

ಆಮೇಲೆ ನಾನು ಅಲ್ಲಲ್ಲಿ ಅಲೆದಾಡಿ, ಇಲ್ಲಿಗೆ ಬಂದೆ. ಈಗ ನೀನು ಸಿಕ್ಕಿರುವಿ. ನೀನು ನನ್ನದೊಂದು ಅವಶ್ಯಕತೆಯನ್ನು ಪೂರೈಸುವವರೆಗೆ ನಿನ್ನನ್ನು ಬಿಡಲಾರೆ. ಅದೇನೆಂದರೆ ನಾನು ಏಕಾಕಿಯಾಗಿ, ಅತಿ ದುಃಖಿಯಾಗಿದ್ದೇನೆ. ನನ್ನೊಡನೆ ಯಾರೂ ಬೆರೆಯುವುದಿಲ್ಲ. ಆದರೆ ನನ್ನಷ್ಟೇ ಭೀಷಣ ಮತ್ತು ಕುರೂಪಿಯಾದವಳು ನನ್ನ ಸಹವಾಸವನ್ನು ನಿರಾಕರಿಸುವುದಿಲ್ಲ. ನನ್ನ ಸಂಗಾತಿ ನನ್ನದೇ ಜಾತಿಯವಳಿದ್ದು ಅವಳಲ್ಲಿ ನನ್ನಂಥವೇ ಕುಂದುಕೊರತೆಗಳಿರಬೇಕು. ಇಂಥ ಪ್ರಾಣಿಯನ್ನು ನೀನು ನನಗೋಸ್ಕರ ನಿರ್ಮಿಸಬೇಕು.'

ಮಾತು ಮುಗಿಸಿ, ಆತ ನನ್ನ ಉತ್ತರದ ನಿರೀಕ್ಷೆಯಲ್ಲಿ ನನ್ನನ್ನೇ ದಿಟ್ಟಿಸಿ ನೋಡಿದ. ನಾನು ದಿಗ್ಭ್ರಾಂತನಾಗಿದ್ದೆ. ಆತನ ಮಾತನ್ನು ಪೂರ್ಣ ಅರಗಿಸಿಕೊಳ್ಳುವಷ್ಟರಲ್ಲೇ ಆತ ಮುಂದುವರೆಸಿದ. 'ನೀನು ನನಗೊಂದು ಹೆಣ್ಣು ನಿರ್ಮಿಸಬೇಕು. ಅಂದರೆ ಅವಳ ಸಂಪರ್ಕದಲ್ಲಿ ಸ್ನೇಹ ಸಹಾನುಭೂತಿಗಳನ್ನು ನಾನು ಪಡೆಯುವೆ. ಈ ಕಾರ್ಯ ನೀನೊಬ್ಬನೆ ಮಾಡಬಲ್ಲೆ; ಇದು ನಿನ್ನ ಆದ್ಯ ಕರ್ತವ್ಯ.'

ಮೊದಲಿಗೆ ನನಗೆ ಅವನ ಬಗ್ಗೆ ಕನಿಕರವೆನಿಸಿತಾದರೂ, ಅವನ ಕಥೆಯ ಕೊನೆಯ ಭಾಗವನ್ನು ಕೇಳಿ ಕೋಪಾವಿಷ್ಟನಾಗಿದ್ದೆ. 'ಸಾಧ್ಯವಿಲ್ಲ ನಿನ್ನಂಥ ಇನ್ನೊಂದು ಪ್ರಾಣಿಯನ್ನು ನಿರ್ಮಿಸಲೆ? ನೀವಿಬ್ಬರೂ ಕೂಡಿ ಜಗತ್ತನ್ನೇ ಬುಡಮೇಲು ಮಾಡುವಿರಿ. ಇಲ್ಲ; ನೀನು ನನ್ನನ್ನು ಎಂಥ ಘೋರ ಚಿತ್ರಹಿಂಸೆ ಗೀಡುಮಾಡಿದರೂ ನಾನಿದಕ್ಕೆ ಒಪ್ಪಲಾರೆ' ಎಂದೆ.

‘ನೀನು ತಪ್ಪು ತಿಳಿದಿರುವಿ ನಾನು ಅತೀವ ದುಃಖಿಯಾಗಿರುವುದರಿಂದ ದುಷ್ಕೃತ್ಯಕ್ಕಿಳಿದಿದ್ದೇನೆ. ನನಗೆ ಬೇಕಾದುದು ಕೇವಲ ಒಂದು ಹೆಣ್ಣು, ಅದೂ ಕುರೂಪಿ. ನಾವಿಬ್ಬರೂ ವಿಕೃತಮಾನವರಾಗಿ ಲೋಕದಿಂದ ಬೇರ್ಪಟ್ಟಿರುವೆವು ನಿಜ. ಆದರೆ ಪರಸ್ಪರ ಪ್ರೇಮದಿಂದಿರುತ್ತೇವೆ. ಮಾನವ ಸಂಪರ್ಕ ದಿಂದ ಕಾಡಿನಲ್ಲಿ ಹೋಗಿ ಜೀವಿಸುತ್ತೇವೆ. ಅಲ್ಲಿ ಈಗಿನ ದುಃಖ ತಾಪಗಳಿರುವುದಿಲ್ಲ. ಅದಕ್ಕಾಗಿ, ನನಗೆ ಈ ಸುಖ ಕರುಣಿಸು, ನಿನಗೆ ನಾನು ಎಂದೆಂದಿಗೂ ಕೃತಜ್ಞನಾಗಿರುತ್ತೇನೆ’ ಎಂದ ಆ ದೈತ್ಯ.

ನನ್ನ ಮನಸ್ಸು ಕರಗಿತು. ಅವನ ವಾದ ನ್ಯಾಯಯುತವಾಗಿದೆ, ಎನಿಸಿತು. ಆತನ ಸೃಷ್ಟಿಕರ್ತನಾದ ನಾನು, ಅವನಿಗೆ ಸಲ್ಲತಕ್ಕ ಸುಖಶಾಂತಿ ನೀಡುವುದು ನನ್ನ ಧರ್ಮ ಎಂದುಕೊಂಡೆ. ಆದರೂ ನನ್ನ ಒಪ್ಪಿಗೆಯಿಂದಾಗಬಹುದಾದ ಪರಿಣಾಮಗಳನ್ನು ನೆನೆದು ನಡುಗಿದೆ. ‘ನೀನು ಕಾಡಿಗೆ ಹೋಗುವಿ ಎಂದು ಹೇಳುವಿ. ಆದರೆ ನಿನ್ನದೇನು ಭರವಸೆ? ನೀನು ತಿರುಗಿ ಬಂದು ಮತ್ತೆ ಅತ್ಯಾಚಾರ ನಡೆಸ ಬಹುದು. ಮೇಲಾಗಿ ಆಗ ನಿನ್ನ ವಿಧ್ವಂಸಕ ಕೃತ್ಯಗಳಲ್ಲಿ ನೆರವಾಗಲು ಸಂಗಾತಿ ಯೊಬ್ಬಳಿರುತ್ತಾಳೆ. ನಿನ್ನ ಸೇಡು ತೀರಿಸಿಕೊಳ್ಳಲು ನಾನೇ ಹೆಚ್ಚಿನ ಅವಕಾಶ ಮಾಡಿಕೊಟ್ಟಂತಾಗು ವುದು’ ಎಂದೆ.

‘ನನ್ನಲ್ಲಿ ವಿಶ್ವಾಸವಿಡು. ನನಗೆ ಪ್ರೇಮಿಸಲು ಇನ್ನೊಂದು ಪ್ರಾಣಿ ಸಿಕ್ಕುಬಿಟ್ಟರೆ ಸಾಕು. ನನ್ನ ದ್ವೇಷವೆಲ್ಲ ಮಾಯವಾಗುವುದು. ನನ್ನ ಅಸ್ತಿತ್ವ ಸಹ ಯಾರಿಗೂ ಗೊತ್ತಾಗುವುದಿಲ್ಲ’ ಆತ ಉತ್ತರಿಸಿದ.

ಆಳವಾಗಿ ಯೋಚಿಸಿದ ನಂತರ ‘ಸರಿ, ನಾನು ನಿನ್ನ ಬೇಡಿಕೆ ಒಪ್ಪುವೆ. ಆದರೆ ಒಂದು ಕರಾರು, ನೀನು ಯುರೋಪ ಖಂಡವನ್ನೇ ಬಿಟ್ಟು ಹೋಗಬೇಕು. ಹಾಗೆಂದು ಶಪಥ ಮಾಡು.’

‘ಹಾಗೆಯೇ ಆಗಲಿ ನನಗೆ ಅನುರೂಪಳಾದ ಹೆಣ್ಣನ್ನು ಸೃಷ್ಟಿಸಿಕೊಟ್ಟರೆ ಇನ್ನೆಂದಿಗೂ ನೀನು ನನ್ನನ್ನು ಕಾಣಲಾರೆ. ಈಗ ಹೋಗು, ನಿನ್ನ ಕಾರ್ಯವನ್ನು ಆರಂಭಿಸು. ನಾನು ಅದರ ಪ್ರಗತಿಯನ್ನು ನೋಡುತ್ತಲಿರುತ್ತೇನೆ. ನಿನ್ನ ಕಾರ್ಯ ಪೂರ್ತಿಯಾದಾಗ ನಾನು ಹಾಜರಾಗುವೆ’ ಎಂದು ಹೇಳಿ ಹಠಾತ್ತನೆ ಹೊರನಡೆದು ಹಿಮದಲ್ಲಿ ಅದೃಶ್ಯನಾದ.

ಒಂದರ ಮೇಲೊಂದು ದಿನ, ಒಂದರ ಮೇಲೊಂದು ವಾರಗಳು ಕಳೆದವು. ಕಾರ್ಯವನ್ನು ಪುನರಾರಂಭಿಸಲು ಧೈರ್ಯವೇ ಆಗಲಿಲ್ಲ. ದೈತ್ಯನ ಪ್ರತೀಕಾರದ ಭಯವಿದ್ದರೂ, ನನಗೆ ಒಪ್ಪಿಸಿದ ಕೆಲಸದ ಹೇವರಿಕೆ ಸಹಿಸಲಸಾಧ್ಯವೆನಿಸಿತು. ಅಲ್ಲದೆ ಅನೇಕ ತಿಂಗಳ ಕಾಲ ಆಳವಾದ ಅಭ್ಯಾಸ ಹಾಗೂ ಪರಿಶ್ರಮದ ಸಂಶೋಧನೆಯಲ್ಲಿ ತೊಡಗುವ ವಿನಾ ನನಗೆ ಹೆಣ್ಣೊಂದನ್ನು ರಚಿಸುವುದು ಸಾಧ್ಯವಿರಲಿಲ್ಲ. ಇಂಗ್ಲೆಂಡಿನಲ್ಲಿ ಒಬ್ಬ ವಿಜ್ಞಾನಿ ಈ ವಿಷಯದಲ್ಲಿ ಮುಂದುವರೆದದನ್ನು ತಿಳಿದು ಅಲ್ಲಿಗೆ ಹೊರಟೆ. ಅಲ್ಲಿಂದ ತಿರುಗಿ ಬಂದ ಬಳಿಕ ಎಲಿಜಾಬೆತ್‌ಳನ್ನು ಮದುವೆಯಾಗುವೆನೆಂದು ತಂದೆಗೆ ಮಾತು ಕೊಟ್ಟೆ.

ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ನಾನು ಇಂಗ್ಲೆಂಡಿಗೆ ತೆರಳಿದೆ. ಜೊತೆಗೆ ನನ್ನ ಆಪ್ತ ಸ್ನೇಹಿತ ಹೆನ್ರಿ ಕ್ಲರ್ವಲ್ ಸಹ ಹೊರಟ. ಲಂಡನ್ನಿನಲ್ಲಿ ಕೆಲ ತಿಂಗಳು ಕಳೆದು ವಿಜ್ಞಾನಿಗಳಿಂದ ನನಗೆ ಬೇಕಾದ ಮಾಹಿತಿ ಪಡೆದೆ. ಹೊಸಸೃಷ್ಟಿಗೋಸ್ಕರ ಅವಶ್ಯವಿದ್ದ ಸಾಮುಗ್ರಿಗಳನ್ನು ಸಂಗ್ರಹಿಸಿದೆ. ಅಲ್ಲಿಂದ ನಾವಿಬ್ಬರೂ ಸ್ಕಾಟ್‌ಲಂಡ್‌ಗೆ ಹೋದೆವು. ಪರ್ಥನಲ್ಲಿ ಕ್ಲರ್ವಲ್‌ನನ್ನು ಬೀಳ್ಕೊಡುವಾಗ ಒಂದೆರಡು ತಿಂಗಳ ನಂತರ ತಿರುಗಿ ಅವನನ್ನು ಕೂಡಿಕೊಳ್ಳುವುದಾಗಿ ಹೇಳಿ ನಾನೊಬ್ಬನೆ ಮುಂದೆ ಸಾಗಿದೆ. ಅಜ್ಞಾತ ಸ್ಥಳವೊಂದರಲ್ಲಿ ಏಕಾಂತನಾಗಿ ನನ್ನ ಕಾರ್ಯವನ್ನು ಮುಗಿಸಬೇಕೆಂದು ನಿರ್ಧರಿಸಿದೆ.

ಉತ್ತರಕ್ಕೆ ಸಾಗಿ ದೂರದೊಂದು ದ್ವೀಪದಲ್ಲಿ ಚಿಕ್ಕ ಗುಡಿಸಲನ್ನು ಬಾಡಿಗೆ ಹಿಡಿದು ನನ್ನ ಕಾರ್ಯ ದಲ್ಲಿ ತೊಡಗಿದೆ. ಹಗಲಿರುಳೂ ದುಡಿದು ಮನಸ್ಸು ಪ್ರಕ್ಷುಬ್ಧಗೊಂಡು ಎದೆಗುಂದಿದ್ದೆ. ಪ್ರತಿಕ್ಷಣ ನನ್ನ ಶತ್ರುವನ್ನು ಕಾಣುವ ಭಯ ಬೇರೆ. ಕಣ್ಣೆತ್ತಿ ನೋಡಿದರೆ ಎಲ್ಲಿ ಆ ದೈತ್ಯ ಎದುರು ನಿಂತಿರು ವನೋ? ಎಂದು ಎಷ್ಟೋ ಬಾರಿ ಅವನತ್ತಮುಖವಾಗಿ ನೆಲವನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಿದೆ.

ಹೀಗೆಯೇ ನನ್ನ ಕಾರ್ಯ ಮುಂದುವರೆದಿತ್ತು. ಅದರ ಮುಕ್ತಾಯವನ್ನು ಉತ್ಸುಕತೆಯಿಂದ ಎದುರುನೋಡುತ್ತಿದ್ದೆ. ಒಂದು ಸಂಜೆ ನನ್ನ ಪ್ರಯೋಗಶಾಲೆಯಲ್ಲಿ ಕುಳಿತಿದ್ದೆ. ಸೂರ್ಯಾಸ್ತವಾಗಿ ಸಮುದ್ರದಂಚಿನಿಂದ ಚಂದ್ರ ಉದಯಿಸುತ್ತಿದ್ದ. ನನ್ನ ಕಾರ್ಯದ ಬಗ್ಗೆ ಆಲೋಚನಾಮಗ್ನನಾಗಿದ್ದೆ. ಮೂರು ವರ್ಷಗಳ ಹಿಂದೆ, ನಾನು ಇಂಥದೇ ಪ್ರಯೋಗದಲ್ಲಿ ತೊಡಗಿ ಒಬ್ಬ ದುಷ್ಟರಾಕ್ಷಸನನ್ನು ನಿರ್ಮಿಸಿದ್ದೆ. ಈಗ ಇನ್ನೊಂದು ಪ್ರಾಣಿಯನ್ನು ಸೃಜಿಸಲಿದ್ದೆ. ಅವಳ ಮನೋಭಾವ ಹೇಗಿರುವುದೋ? ತನ್ನ ಸಂಗಾತಿಗಿಂತ ನೀಚಳಾಗಿ, ಅಪರಾಧಗಳನ್ನು ಎಸಗುವುದರಲ್ಲಿ ಆನಂದ ಪಡುವವಳಾಗುವಳೋ? ಅವರು ಪರಸ್ಪರ ದ್ವೇಷಿಗಳೂ ಆಗಬಹುದು. ಆಗ ಆತ ಪುನಃ ಮತ್ತಷ್ಟು ನೀಚನಾದರೆ? ಆತ ದೂರ ಹೊರಟುಹೋಗುವನೆಂದು ಶಪಥಮಾಡಿದ್ದ ನಿಜ. ಆದರೆ ಅವಳು ಅದಕ್ಕೆ ಸಮ್ಮತಿಸದಿದ್ದರೆ? ಅವರು ಯುರೋಪ್ ಬಿಟ್ಟು ಹೋದರೂ ಅವರಿಗೆ ಹುಟ್ಟಿದ ಮಕ್ಕಳು ಸಹ ದೈತ್ಯರಾಗಿ ಮಾನವಕುಲಕ್ಕೆ ಒದಗಹುದಲ್ಲವೆ? ಜನ್ಮ ಜನ್ಮಾಂತರಗಳಿಗೂ ಜಗತ್ತಿಗೆ ನಾನು ಇಂಥ ಶಾಪ ವಿಧಿಸುವುದು ಸರಿಯೆ? ಆತನ ಬೆದರಿಕೆಯಿಂದಾಗಿ ಅವಿವೇಕತನ ಮಾಡಿದ್ದೆ. ಈಗ ಮೊದಲ ಬಾರಿ ನಾನು ಕೊಟ್ಟ ವಚನದ ಮೂರ್ಖತನದ ಮನವರಿಕೆಯಾಯಿತು. ಮುಂದಿನ ತಲೆಮಾರಿನವರು ನನ್ನ ಉಪದ್ರವಕ್ಕಾಗಿ ನನ್ನನ್ನು ಶಪಿಸಲಿಕ್ಕಿಲ್ಲವೇ?

ನಾನು ಥರಥರ ನಡುಗಿದೆ. ಮನಸ್ಸು ಧೃತಿಗೆಟ್ಟಿತ್ತು. ತಲೆಯೆತ್ತಿ ನೋಡಿದಾಗ, ಬೆಳದಿಂಗಳ ಛಾಯೆಯಲ್ಲಿ ಬಾಗಿಲಲ್ಲಿ ನಿಂತ ದೈತ್ಯ ಕಾಣಿಸಿದ. ಹೌದು. ಆತ ನನ್ನನ್ನು ಹಿಂಬಾಲಿಸಿದ್ದ!

ಆವನ ಮುಖಚರ್ಯೆಯಲ್ಲಿ ಮಿತಿಮೀರಿದ ದ್ವೇಷ ದ್ರೋಹದ ಕಳೆ ಸ್ಪಷ್ಟವಾಗಿತ್ತು. ಮುಖದ ಮೇಲೆ ಭೀಷಣ ನಗೆ ಮೂಡಿತ್ತು ಅವನಂಥ ಇನ್ನೊಂದು ಪ್ರಾಣಿಯನ್ನು ನಿರ್ಮಿಸುವುದು ನನ್ನದೆಂಥ ಮೂರ್ಖತನ! ಭಾವಪರವಶನಾಗಿ, ಕಂಪಿಸುವ ಕೈಗಳಿಂದ ನಾನು ರಚಿಸಿದ ವ್ಯಕ್ತಿಯನ್ನು ಮುರಿದು ಮೂರಾಬಟ್ಟೆ ಮಾಡಿದೆ. ನಾನದನ್ನು ನಾಶಮಾಡಿದ್ದನ್ನು ನೋಡಿ ಆತ ದಿಗ್ಭ್ರಾಂತನಾಗಿ ಹೇಳಿದ.

'ಇದೇನು ಮಾಡಿದೆ? ನಾನು ನಿನ್ನನ್ನು ಬೆನ್ನಟ್ಟಿ, ಬಂದು ಉಪವಾಸ ವನವಾಸ ಸಹಿಸಿಕೊಂಡಿದ್ದೇನೆ. ನಾನು ಕಟ್ಟಿಕೊಂಡ ಗಾಳಿಗೋಪುರ ಕುಸಿದು ಬೀಳುವಂತೆ ಮಾಡಿದೆಯಾ?'

'ತೊಲಗಾಚೆ! ನಿನ್ನಂಥ ದುಷ್ಟ ವಿಕೃತರೂಪದ ವ್ಯಕ್ತಿಯನ್ನು ಇನ್ನೆಂದಿಗೂ ನಿರ್ಮಿಸಲಾರೆ.'

ಆತ ರೋಷದಿಂದ ಹಲ್ಲು ಕಡಿದ. 'ಪ್ರತಿಯೊಂದು ಪ್ರಾಣಿಗೂ ಒಂದು ಸಂಗಾತಿ ಉಂಟು. ಪ್ರತಿಯೊಬ್ಬ ಗಂಡಿಗೆ ತನ್ನದಾದ ಒಂದು ಹೆಣ್ಣು ಉಂಟು. ನಾನೊಬ್ಬನೆ ಏಕಾಕಿಯಾಗಿರಬೇಕೆ? ನಾನು ದುಃಖಿತಪ್ತನಾಗಿರುವಾಗ, ನೀನು ಸುಖಶಾಂತಿಯಿಂದಿರುವುದೇ? ಇಲ್ಲ. ಸಾಧ್ಯವಿಲ್ಲ. ನಾನು ಸೇಡು ತೀರಿಸಿಕೊಳ್ಳುವೆ. ನೀನು ಪಶ್ಚಾತ್ತಾಪ ಪಡುವಿ. ಜೋಕೆ!.'

'ಸುಮ್ಮನಾಗು, ಹಾಳು ಪಿಶಾಚಿ! ನಿನ್ನ ಮಾತಿಗೆ ಹೆದರುವ ಹೇಡಿ ನಾನಲ್ಲ. ಹೋಗು. ನಾನು ಕ್ರೂರನಾಗುವೆ, ನಿರ್ದಯಿಯಾಗುವೆ.'

'ಸರಿ ನಾನು ಹೋಗುವೆ. ಆದರೆ ನಿನ್ನ ವಿವಾಹ ರಾತ್ರಿ ನಾನು ಪ್ರತ್ಯಕ್ಷನಾಗುವೆ. ನೆನಪಿಡು' ಎಂದು ಹೇಳಿ ಹೊರಟು ಹೋದ. ಕೆಲ ನಿಮಿಷಗಳಲ್ಲಿ ಆತ ದೋಣಿಯಲ್ಲಿ ಕುಳಿತು ಸಮುದ್ರದಲೆ ಗಳಲ್ಲಿ ಕಣ್ಮರೆಯಾದ.

ಎರಡು ದಿನಗಳಾದ ಮೇಲೆ ನಾನು ಆ ದ್ವೀಪ ಬಿಟ್ಟು ಹೋಗಿ ನನ್ನ ಮಿತ್ರ ಕ್ಲರ್ವಲ್‌ನನ್ನು ಕೂಡಿಕೊಳ್ಳಬೇಕೆಂದೆ. ನನ್ನ ಸಾಮಗ್ರಿಗಳನ್ನೆಲ್ಲ ಕಟ್ಟಿಟ್ಟೆ. ನಾನು ಅರ್ಧ ರಚಿಸಿದ ಪ್ರಾಣಿಯ ಅವಶೇಷಗಳನ್ನು ಒಂದು ಬುಟ್ಟಿಯಲ್ಲಿಟ್ಟುಕೊಂಡು ನಾವೆಯೊಂದರಲ್ಲಿ ಸಮುದ್ರ ದಂಡೆಯಿಂದ ಸುಮಾರು ನಾಲ್ಕು ಮೈಲು ದೂರ ಹೋದೆ. ಕಗ್ಗತ್ತಲೆಯಲ್ಲಿ ಬುಟ್ಟಿಯನ್ನು ಸಮುದ್ರದಲ್ಲಿ ಮುಳುಗಿಸಿ ತಿರುಗಿ ಬಂದೆ. ಹಿತಕರವಾದ ಗಾಳಿ ಬೀಸುತ್ತಿತ್ತು. ಹಾಯೆನಿಸಿ, ದೋಣಿಯಲ್ಲಿ ಗಡದ್ದಾಗಿ ಮಲಗಿದೆ.

ಎಚ್ಚರವಾದಾಗ ಸೂರ್ಯ ಮೇಲೇರಿದ್ದ: ಗಾಳಿ ಜೋರಾಗಿ ಬೀಸುತ್ತಿತ್ತು. ನಾನು ದೋಣಿ ಹತ್ತಿದ ಸ್ಥಳದಿಂದ ಬಹುದೂರ ಬಂದುಬಿಟ್ಟಿದ್ದರ ಅರಿವಾಯಿತು. ತಿರುಗಿ ಹೋಗಲು ಪ್ರಯತ್ನಿಸಿದಾಗ ದೋಣಿಯಲ್ಲಿ ನೀರು ತುಂಬಹತ್ತಿತ್ತು. ಆದ್ದರಿಂದ ಗಾಳಿಯೊಂದಿಗೇ ಸಾಗಬೇಕಾಯಿತು.

ಓಗೆಯೇ ಹೋಗುತ್ತ ಎಲ್ಲಿಗೆ ಮುಟ್ಟುವೆನೋ ಅಥವಾ ದಡ ಸೇರದೆ ಸಮುದ್ರದಲ್ಲಿಯೇ ಮುಳುಗುವೇನೊ ಎಂದು ಭಯಾಕ್ರಾಂತನಾದೆ.

ಎಷ್ಟೋ ಗಂಟೆಗಳು ಕಳೆದವು. ಕಟ್ಟಕಡೆಗೆ ದಕ್ಷಿಣ ದಿಕ್ಕಿನಲ್ಲಿ ತೀರವೊಂದು ಗೋಚರಿಸಿತು. ಉತ್ಸಾಹದಿಂದ ಅದರತ್ತ ದೋಣಿಯನ್ನು ದೂಡಿದೆ. ಹತ್ತಿರ ಹೋದಂತೆ ಅದೊಂದು ಸಣ್ಣ ಶಹರ ವೆಂದು ಗೊತ್ತಾಯಿತು. ಬಂದರು ಕಟ್ಟೆಯಲ್ಲಿ ಇಳಿದು ನನ್ನ ದೋಣಿ ಸರಿಪಡಿಸಿಕೊಳ್ಳುತ್ತಿದ್ದಾಗ, ಅಲ್ಲಿ ಜನರ ಗುಂಪು ನೆರೆದಿತ್ತು. ನನಗೆ ಸಹಾಯ ಮಾಡುವುದರ ಬದಲಾಗಿ ಅವರು ಕೈ ಸನ್ನೆ ಮಾಡುತ್ತ ಗುಜುಗುಜು ಮಾತನಾಡುತ್ತಿದ್ದರು. 'ಇದಾವ ಊರು, ನಾನೆಲ್ಲಿರುವೆ?' ಎಂದು ಕೇಳಿದೆ. ಅವರಲ್ಲಿ ಒಬ್ಬ ಸಿಡುಕು ಮೋರೆಯವನು ಮುಂದೆ ಬಂದು 'ಬಾರಯ್ಯ ಬಾ, ನ್ಯಾಯಾಧೀಶನ ಮುಂದೆ ನಿನ್ನ ವಿಷಯವನ್ನೆಲ್ಲ ಹೇಳುವೆಯಂತೆ ನಡೆ, ನನ್ನೊಡನೆ' ಎಂದ.

'ಯಾಕೆ? ನಾನೇಕೆ ನ್ಯಾಯಾಧೀಶನೆಡೆಗೆ ಬರಬೇಕು?' ಆಶ್ಚರ್ಯದಿಂದ ಕೇಳಿದೆ.

'ನಿನ್ನೆ ರಾತ್ರಿ ಇಲ್ಲಿ ಕೊಲೆಯಾದ ಓರ್ವವ್ಯಕ್ತಿಯ ಮೃತದೇಹ ಸಿಕ್ಕಿದೆ. ಅದರ ವಿವರಗಳನ್ನು ನೀನು ಹೇಳಬೇಕಾಗುವುದು, ನಡೆ.'

ನನಗೆ ಆಘಾತವಾಯಿತು. ದಿಗ್ಭ್ರಾಂತನಾದೆ. ಆಯಾಸ, ಹಸಿವಿನಿಂದ ನಿರ್ವಿಣ್ಣನಾಗಿದ್ದೆ. ಆದರೂ ಸುಧಾರಿಸಿಕೊಂಡು, ಮೌನವಾಗಿ ಆತನನ್ನು ಹಿಂಬಾಲಿಸಿದೆ. ಆತ ನನ್ನನ್ನು ನ್ಯಾಯಾಧೀಶನ ಎದುರು ತಂದು ನಿಲ್ಲಿಸಿದ. ಒಬ್ಬ ಸಾಕ್ಷಿದಾರ ಮುಂದೆ ಬಂದು ಹೇಳಿದ.

ಹಿಂದಿನ ರಾತ್ರಿ ಆತ ತನ್ನ ಭಾವ ಮತ್ತು ಮಗನೊಂದಿಗೆ ಮೀನು ಹಿಡಿಯಲು ಹೋಗಿದ್ದನಂತೆ. ದಂಡೆಯ ಮೇಲೆ ನಡೆದುಕೊಂಡಿದ್ದಾಗ, ಒಮ್ಮೆಲೆ ಕಾಲಿಗೇನೋ ತಾಗಿ, ಬಿದ್ದುಬಿಟ್ಟನಂತೆ. ಆತನ ಸಂಗಾತಿಗಳು ಬಂದು ಎಬ್ಬಿಸಿದಾಗ ಆತ ಒಂದು ಮೃತದೇಹದ ಮೇಲೆ ಬಿದ್ದಿದ್ದು ಗೊತ್ತಾಯಿತಂತೆ.

ಸತ್ತವನು ಸುಮಾರು ಇಪ್ಪತ್ತೈದು ವರ್ಷದ ರೂಪವಂತ ಯುವಕ. ಅವನ ಕೊರಳ ಮೇಲೆ ಕುತ್ತಿಗೆ ಹಿಸುಕಿದ ಬೆರಳುಗಳ ಗುರುತಿತ್ತು. ಅನಂತರ, ದಂಡೆಯಿಂದ ತುಸು ದೂರ, ಒಬ್ಬನೇ ಮನುಷ್ಯನಿದ್ದ ಒಂದು ದೋಣಿ ಕಂಡಿತು. ನಾನೀಗ ಬಂದದ್ದು ಅದೇ ದೋಣಿ, ಎಂದು ತಂದೆ ಮಗ ಇಬ್ಬರೂ ಪ್ರಮಾಣ ಮಾಡಿದರು. ಮತ್ತೆ ಕೆಲವರು ಅವರ ಹೇಳಿಕೆಯನ್ನು ಸಮರ್ಥಿಸಿದರು.

ಆಮೇಲೆ ಮೃತದೇಹವನ್ನು ನೋಡಲು ನನ್ನನ್ನು ಕರೆದೊಯ್ದರು. ಅದನ್ನು ಕಂಡೊಡನೆ ನನಗೆ ಗರಬಡಿದಂತಾಯಿತು. ನನ್ನೆದುರಿಗೆ ಬಿದ್ದದ್ದು ಹೆನ್ರಿ ಕ್ಲರ್ವಲನ ನಿರ್ಜೀವದೇಹ! ಉಸಿರುಕಟ್ಟಿ ಥರಥರ ನಡುಗುತ್ತ ಶವದ ಮೇಲೆ ಬಿದ್ದು ಗೋಳಾಡಿದೆ. 'ಓಹ್ ಗೆಳೆಯಾ, ಕ್ರೂರ ಹತ್ಯೆಗೆ ನೀನೂ ಬಲಿಯಾದೆಯಾ! ಎಂದು ದುಃಖಿಸುತ್ತ ಮೂರ್ಛೆಹೋದೆ.

ತದನಂತರ ಜ್ವರಬಾಧೆಯಿಂದ ಕಾಯಿಲೆಬಿದ್ದೆ. ಎರಡು ತಿಂಗಳವರೆಗೆ ಸಾವಿನ ಅಂಚಿನಲ್ಲಿ ಹೊರಳಾಡಿದೆ. ಆದರೂ ನನ್ನ ಇಚ್ಛೆಗೆ ವಿರುದ್ಧವಾಗಿ ಬದುಕುಳಿದೆ. ಸ್ಮೃತಿ ಮರಳಿದಾಗ ನಾನೊಂದು ಸೆರೆಮನೆಯಲ್ಲಿದ್ದ ಅರಿವಾಯಿತು. ಆ ಕೊಳಕು ಕೋಣೆ, ಸಲಾಕೆಗಳ ಕಿಟಕಿಗಳು, ಕಾವಲುಗಾರರು, ದರಿದ್ರ ಹಾಸಿಗೆ ಎಲ್ಲವನ್ನೂ ನೋಡಿ ಮತ್ತೆ ಆ ಕಹಿನೆನಪುಗಳು ಮರುಕಳಿಸಿ, ತೀವ್ರವಾಗಿ ನರಳಿದೆ.

ಕ್ರಮೇಣ ನನ್ನ ಆರೋಗ್ಯ ಸುಧಾರಿಸಿತು. ಮೂರು ತಿಂಗಳುಗಳನ್ನು ಬಂಧನದಲ್ಲಿ ಕಳೆದ ಬಳಿಕ ನನ್ನ ನ್ಯಾಯ ವಿಚಾರಣೆ ನಡೆದು ನಾನು ನಿರ್ದೋಷಿಯೆಂದು ಬಿಡುಗಡೆಯಾದೆ. ಸ್ವದೇಶಕ್ಕೆ ಮರಳಲು ನನಗೆ ಅನುಮತಿ ಸಿಕ್ಕಿತು. ಆದರೂ ನನ್ನಲ್ಲಿ ಗೆಲುವಿರಲಿಲ್ಲ. ಹೃದಯ ಭಾರವಾಗಿತ್ತು. ಸುತ್ತಲೂ ಭಯಂಕರ ಕತ್ತಲು ಕವಿದು, ಅದರಲ್ಲಿ ಎರಡು ಕಣ್ಣುಗಳು ಸದಾ ನನ್ನ ಮೇಲೆ ಉಗ್ರದೃಷ್ಟಿ ಬೀರುತ್ತಿರುವಂತೆನಿಸುತ್ತಿತ್ತು. ಎಷ್ಟೋ ಸಲ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಬಯಸಿದ್ದುಂಟು. ಆದರೆ ಆ ದೈತ್ಯನಿಂದ ನನ್ನ ಬಂಧುಗಳನ್ನು ರಕ್ಷಿಸುವುದು ನನ್ನ ಕರ್ತವ್ಯವಾಗಿತ್ತು. ಅದಕ್ಕೆ ವಿಳಂಬ ಮಾಡದೆ ಜಿನೀವಾಕ್ಕೆ ವಾಪಸಾದೆ.

ಕೆಲವೇ ದಿನಗಳಲ್ಲಿ ನಾನು ಎಲಿಜಾಬೆತ್‌ಳೊಂದಿಗೆ ವಿವಾಹವಾಗಬೇಕೆಂದು ನನ್ನ ತಂದೆ ಪ್ರಸ್ತಾಪಿಸಿದ. ನಮ್ಮ ಮದುವೆಯ ದಿನ ಸಮೀಪಿಸಿದಂತೆ, ರಾಕ್ಷಸನ ಬೆದರಿಕೆ ನೆನಪಾಗಿ, ನಾನು ಬಹಳ ಎದೆಗುಂದಿದೆ. ನಮ್ಮ ವಿವಾಹರಾತ್ರಿ ಬರುವೆನೆಂದು ಶಪಥ ಮಾಡಿದ್ದ. ಅವನು ಅಂದು ಖಂಡಿತ ಬಂದು ನನ್ನನ್ನು ಬಲಿತೆಗೆದುಕೊಳ್ಳುವನೆಂದು ನನಗೆ ಖಚಿತವಾಗಿತ್ತು. ಆದರೂ ತೋರಿಕೆಯ. ಗೆಲುವಿನಿಂದ ನನ್ನ ಭಾವನೆಗಳನ್ನು ಮರೆಮಾಡುತ್ತಲಿದ್ದೆ. ನನ್ನ ರಕ್ಷಣೆಗಾಗಿ ಮುಂಜಾಗ್ರತೆ ವಹಿಸಿದ್ದೆ. ಸದಾ ಪಿಸ್ತೂಲು ಕತ್ತಿಗಳನ್ನು ಇಟ್ಟುಕೊಂಡು ಜಾಗರೂಕತೆಯಿಂದಿದ್ದೆ.

ವಿವಾಹ ಸಮಾರಂಭ ಯಾವುದೇ ಅಡೆತಡೆಗಳಿಲ್ಲದೆ ನೆರವೇರಿತು. ಅಂದೇ ಮಧುಚಂದ್ರಕ್ಕಾಗಿ ಆಸ್ಟ್ರಿಯಾಕ್ಕೆ ತೆರಳಿದೆವು. ಅಂದು ರಾತ್ರಿ ಎವಿಯನ್ ಎಂಬ ಊರಲ್ಲಿ ವಸತಿ ಮಾಡಿ, ಮರುದಿನ ಪ್ರಯಾಣ ಮುಂದುವರಿಸುವುದಿತ್ತು.

ರಾತ್ರಿ ಎಂಟು ಗಂಟೆಗೆ ಪ್ರವಾಸಿ ಗೃಹ ಸೇರಿದೆವು. ದಿನವೆಲ್ಲಾ ನಾನು ಶಾಂತವಾಗಿದ್ದರೂ, ರಾತ್ರಿಯ ಕರಿನೆರಳುಗಳು ಆವರಿಸಿದೊಡನೆ ಸಾವಿರ ಸಂದೇಹಗಳು ಮನವನ್ನು ಆಕ್ರಮಿಸಿದವು. ಉದ್ವಿಗ್ನಗೊಂಡು, ಸದಾ ಪಿಸ್ತೂಲಿನ ಮೇಲೆ ಕೈಯಿಟ್ಟುಕೊಂಡಿದ್ದೆ. ಸ್ವಲ್ಪ ಶಬ್ದವಾದರೂ ಬೆದರುತ್ತಿದ್ದೆ. ನನ್ನ ಮನೋದ್ವೇಗವನ್ನು ಕಂಡು ಎಲಿಜಾಬೆತ್ ಕೇಳಿದಳು. 'ಯಾಕೆ, ವಿಕ್ಟರ್? ಯಾಕೆ ಭಯ ಪಡುತ್ತಿರುವೆ?'

'ಇಲ್ಲವಲ್ಲ ಏನೂ ಇಲ್ಲ' ಎಂದುತ್ತರಿಸಿದೆ.

ನಮ್ಮ ಭಯಾನಕ ಸಂಘರ್ಷವನ್ನು ನನ್ನ ಪತ್ನಿ ನೋಡದಿರುವುದು ಒಳಿತೆಂದು ಅವಳಿಗೆ ವಿಶ್ರಮಿಸಲು ಹೇಳಿದೆ. ನಾನು ಬೇಗನೆ ಬಂದು ಅವಳನ್ನು ಕೂಡಿಕೊಳ್ಳುವೆನೆಂದು ಕೋಣೆಗೆ ಕಳಿಸಿದೆ. ಆಕೆ ಹೋದ ನಂತರ ನಾನು ಹಜಾರದಲ್ಲಿ ಶತಪಥ ಹಾಕುತ್ತಲಿದ್ದೆ. ನನ್ನ ಎದುರಾಳಿ ಅಡಗಿಕೊಂಡಿರಬಹುದಾದ ಪ್ರತಿಯೊಂದು ಸಂದಿಗೊಂದಿಯನ್ನು ಪರೀಕ್ಷಿಸಿ ನೋಡಿದೆ. ಆದರೆ ಆತ ಎಲ್ಲಿಯೂ ಕಾಣಿಸಿಗಲಿಲ್ಲ. ಬಹುಶಃ ಆತ ನನ್ನ ಕೊಲೆಯ ವಿಚಾರವನ್ನು ಬಿಟ್ಟಿರಬಹುದೋ ಎಂದುಕೊಳ್ಳುತ್ತಲಿದ್ದೆ.

ಒಮ್ಮೆಲೇ ಎಲಿಜಾಬೆತ್ ಜೋರಾಗಿ ಕಿರುಚಿದ್ದು ಕೇಳಿಸಿತು. ತಕ್ಷಣ ನನಗೆ ಪರಿಸ್ಥಿತಿಯ ಅರಿವಾಯಿತು. ನನ್ನ ನರನಾಡಿಗಳೆಲ್ಲ ಮರಗಟ್ಟಿದಂತಾದವು. ಅಷ್ಟರಲ್ಲಿ ಮತ್ತೊಮ್ಮೆ ಚೀರಿದ ಧ್ವನಿಯನ್ನು ಕೇಳಿ ಕೋಣೆಗೆ ಧಾವಿಸಿದೆ.

ಅಯ್ಯೋ ದೇವರೆ! ಅವಳ ದೇಹ ಹಾಸಿಗೆಯ ಮೇಲೆ ಬಿದ್ದಿತ್ತು. ತಲೆ ಕೆಳಗೆ ನೇತಾಡುತ್ತಿತ್ತು. ಅವಳ ಬಿಳಿಚಿದ ಮುಖ ಕೂದಲಿನಿಂದ ಅರೆಮುಚ್ಚಿತ್ತು. ಕ್ಷಣಮಾತ್ರ ಸ್ತಂಭೀಭೂತನಾದೆ. ಅನಂತರ ಓಡಿಹೋಗಿ ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡೆ. ಆದರೆ ಅದು ಮೃತದೇಹ! ಕೊರಳ ಮೇಲೆ ಕುತ್ತಿಗೆ ಹಿಸುಕಿದ ಕೊಲೆಗಡುಕನ ಕೈಗುರುತಿತ್ತು.

ಶೋಕಸಂತಪ್ತನಾಗಿ ಮೇಲೆ ನೋಡಿದೆ. ತೆರೆದ ಕಿಟಕಿಯಿಂದ ಕೋಣೆಯಲ್ಲಿ ಬೆಳದಿಂಗಳ ಮಂದ ಬೆಳಕು ಬಿದ್ದಿತ್ತು. ಅದರಲ್ಲಿ ಆ ದೈತ್ಯಾಕೃತಿ ಕಂಡು ಭಯಾಕ್ರಾಂತನಾದೆ. ಆತನ ಮುಖದ ಮೇಲೆ ಪಾಶವೀ ನಗೆ ಮೂಡಿತ್ತು. ನನ್ನ ಪತ್ನಿಯ ಶವದತ್ತ ಬೆರಳು ಮಾಡಿ ತೋರಿಸುತ್ತ ನನ್ನನ್ನು ಅಣಕಿಸುತ್ತಿದ್ದ. ನಾನು ಕಿಟಕಿಯತ್ತ ಹಾರಿ ನನ್ನ ಪಿಸ್ತೂಲು ಹೊರ ತೆಗೆದು ಗುಂಡು ಹಾರಿಸಿದೆ. ಆದರೆ ಆತ ತಪ್ಪಿಸಿಕೊಂಡು ಕೆಳಗೆ ಜಿಗಿದು, ಮಿಂಚಿನ ವೇಗದಿಂದ ಓಡುತ್ತ ಹೋಗಿ ಸರೋವರದಲ್ಲಿ ಮುಳುಗಿ ಮಾಯವಾದ.

ಈ ದುರ್ಘಟನೆಗಳಿಂದ ನಾನು ಸಂಪೂರ್ಣ ಸೋತು ಸಣ್ಣಗಾಗಿದ್ದೆ. ನನ್ನ ಸೋದರ, ನನ್ನ ಸ್ನೇಹಿತ, ನನ್ನ ಪತ್ನಿ ಎಲ್ಲರೂ ದೈತ್ಯನ ದ್ವೇಷಕ್ಕೆ ಆಹುತಿಯಾಗಿದ್ದರು. ಇನ್ನುಳಿದ ಬಂಧುಗಳಾದರೂ ಸುರಕ್ಷಿತವಾಗಿರುವರೇ? ಓಹ್! ನನ್ನ ತಂದೆ ಆತನ ಹಿಡಿತದಲ್ಲಿ ಒದ್ದಾಡುತ್ತಿರಬಹುದು. ನನ್ನ ತಮ್ಮ ಅರ್ನೆಸ್ಟ್ ಆತನ ಕಾಲಡಿಯಲ್ಲಿ ಸತ್ತು ಬಿದ್ದಿರುವನೋ? ಈ ವಿಚಾರದಿಂದ ನಾನು ಗದಗದ ನಡುಗಿದೆ. ಕೂಡಲೆ ಜಿನೀವಾಕ್ಕೆ ಮರಳಿ ಹೋಗಬೇಕೆಂದು ನಿರ್ಧರಿಸಿ ಬೇಗನೆ ಹೊರಟೆ.

ನಾನು ತಂದ ಶೋಕಸಮಾಚಾರದಿಂದ ನನ್ನ ತಂದೆ ಕುಸಿದು ಬಿದ್ದು ಮುಂದೆ ಹಾಸಿಗೆ ಹಿಡಿದ. ಕೊನೆಗೆ ಕೆಲ ಕೆಲದಿನಗಳಲ್ಲೆ ಕಣ್ಮುಚ್ಚಿದ.

ನಾನು ಭ್ರಮಿಷ್ಠನಾಗಿಬಿಟ್ಟೆ. ಎಷ್ಟೋ ತಿಂಗಳವರೆಗೆ ಹುಚ್ಚು ಹಿಡಿದಂತಾಗಿತ್ತು. ಆ ಮೇಲೆ ನಿಧಾನವಾಗಿ ಸುಧಾರಿಸಹತ್ತಿದೆ. ನನ್ನ ದುರದೃಷ್ಟಗಳ ಮೂಲಕಾರಣ ನೆನಪಾಯಿತು. ಅವನನ್ನು ನನ್ನ ವಿನಾಶಕ್ಕಾಗಿಯೇ ನಿರ್ಮಿಸಿದಂತಿತ್ತು. ಮತ್ತೆ ದ್ವೇಷ ಉಕ್ಕೇರತೊಡಗಿತು. ಆತನನ್ನು ಹೇಗಾದರೂ ಹಿಡಿದು ನನ್ನ ಸೇಡು ತೀರಿಸಿಕೊಳ್ಳಬೇಕೆಂದು ಹಾತೊರೆಯತೊಡಗಿದೆ.

ಈ ಉದ್ದೇಶದಿಂದ ನಾನೊಬ್ಬ ನ್ಯಾಯಾಧೀಶನನ್ನು ಭೇಟಿಯಾದೆ. ನನ್ನ ಕುಟುಂಬದ ಕೊಲೆಗಡುಕನನ್ನು ಬಂಧಿಸಿ ಆತನಿಗೆ ಶಿಕ್ಷೆ ವಿಧಿಸಲು ಸಹಾಯ ನೀಡಬೇಕೆಂದು ನನ್ನ ಕಥೆಯನ್ನೆಲ್ಲಾ ವಿವರವಾಗಿ ಹೇಳಿದೆ. ಆತ ಅಪನಂಬಿಕೆಯಿಂದಲೇ ನನ್ನ ವೃತ್ತಾಂತವನ್ನು ಕೇಳಿ ನಂತರ ಹೇಳಿದ. 'ನಿನ್ನ ಕಾರ್ಯದಲ್ಲಿ ನಾನು ಎಲ್ಲ ಸಹಾಯ ನೀಡುತ್ತಿದ್ದೆ. ಆದರೆ ನೀನು ಹೇಳುವ ಪ್ರಾಣಿ ಅಮಾನುಷ ಶಕ್ತಿಯುಳ್ಳದ್ದೆಂದು ತೋರುತ್ತದೆ. ಆದ್ದರಿಂದ ನನ್ನ ಪ್ರಯತ್ನಗಳೆಲ್ಲ ವಿಫಲವಾಗಬಹುದು. ಹಿಮಸಾಗರವನ್ನು ಕ್ರಮಿಸಿ, ಕಾಡುಗುಹೆಗಳಲ್ಲಿ ವಾಸಿಸುವ ಪ್ರಾಣಿಯನ್ನು ಯಾವ ಮನುಷ್ಯ ಬೆನ್ನಟ್ಟಿ ಹಿಡಿಯಬಹುದು? ಮೇಲಾಗಿ ಈಗ ಆತ ಎಲ್ಲಿರುವನೋ ಎಂಬುದನ್ನು ಯಾರು ಬಲ್ಲರು? ಸರಿ, ಈ ಕಾರ್ಯವನ್ನು ನಾನೊಬ್ಬನೇ ಮಾಡಬೇಕು ಎಂದು ನಿರ್ಧರಿಸಿಕೊಂಡೆ.

ಪ್ರಥಮತಃ ನಾನು ಜಿನೀವಾ ಬಿಟ್ಟು ಹೋಗಲಿಚ್ಛಿಸಿದೆ. ನಾನು ಸುಖಿಯಾಗಿದ್ದಾಗ ಅತಿ ಪ್ರಿಯವಾಗಿದ್ದ ದೇಶ ಕಷ್ಟಕಾಲದಲ್ಲಿ ಬಹಳ ಅಸಹನೀಯವೆನಿಸಿತು. ಸ್ವಲ್ಪ ಹಣ ಹಾಗೂ ನನ್ನ ತಾಯಿಯ ಆಭರಣಗಳನ್ನು ತೆಗೆದುಕೊಂಡು ಜಾಗಬಿಟ್ಟೆ. ಆಮೇಲೆ ನನ್ನ ಅಲೆದಾಟ ಆರಂಭವಾಯಿತು. ಮರಣದವರೆಗೂ ಅದು ಮುಗಿಯುವಂತಿಲ್ಲ. ನಾನು ಭೂಖಂಡದ ಬಹುಭಾಗವನ್ನು ಕ್ರಮಿಸಿದ್ದೇನೆ. ಮರುಭೂಮಿಗಳಲ್ಲಿ ಬರ್ಬರದೇಶಗಳಲ್ಲಿ ಪ್ರಯಾಣಿಕರಿಗೆ ಸಾಮಾನ್ಯವಾದ ಕಷ್ಟ ಕ್ಲೇಶಗಳನ್ನು ಅನುಭವಿಸಿದ್ದೇನೆ. ಎಷ್ಟೋ ಸಲ ಸೋತುಹೋಗಿ ನಾನು ಮರಣಕ್ಕಾಗಿ ಪ್ರಾರ್ಥಿಸಿದ್ದುಂಟು. ಆದರೆ ಸೇಡಿನ ಬಲ ನನ್ನನ್ನು ಜೀವಂತವಾಗಿಟ್ಟಿದೆ.

ಜಿನೀವಾ ಬಿಟ್ಟೊಡನೆ ನಾನು ಮೊದಲನೆಯದಾಗಿ ನನ್ನ ವೈರಿಯ ಸುಳಿವು ಹಿಡಿಯುವ ಪ್ರಯತ್ನ ಮಾಡಬೇಕೆಂದೆ. ಆದರೆ ನನ್ನ ಕಾರ್ಯಕ್ರಮ ಅನಿಶ್ಚಿತವಾಗಿತ್ತು. ಆದ್ದರಿಂದ ಎಷ್ಟೋ ಗಂಟೆಗಳವರೆಗೆ ಊರ ಹೊರಗಡೆಯೇ ಸುತ್ತಾಡಿದೆ. ಯಾವ ದಾರಿ ಹಿಡಿಯಬೇಕೆಂದು ಯೋಚಿಸುತ್ತಲಿದ್ದೆ. ರಾತ್ರಿಯಾಯಿತು. ಊರಿನ ಸ್ಮಶಾನದೊಳಕ್ಕೆ ಹೋದೆ. ನನ್ನ ಪ್ರಿಯಬಂಧುಗಳ ಗೋರಿಗಳ ಬಳಿ ಹೋಗಿ ನಿಂತೆ. ಎಲ್ಲವೂ ಸ್ತಬ್ಧವಾಗಿತ್ತು. ಕತ್ತಲೆಯಲ್ಲಿ ಪ್ರೇತಗಳು ಅತ್ತಿತ್ತ ಹಾರಾಡುವಂತೆನಿಸುತ್ತಿತ್ತು.

ನನಗೆ ಅಪಾರ ದುಃಖವಾಯಿತು. ಹುಲ್ಲಿನ ಮೇಲೆ ಕಾಲೂರಿ ಕುಳಿತು, ಈ ಸಂತಾಪಕ್ಕೆ ಕಾರಣನಾದ ಸೈತಾನನ್ನು ಎಲ್ಲಿದ್ದರೂ ಬೆನ್ನಟ್ಟಿ, ಆತನೊಂದಿಗೆ ಹೋರಾಡಿ ನಾಶ ಮಾಡುವೆ, ಇಲ್ಲವಾದರೆ ನಾನಾದರೂ ಪ್ರಾಣನೀಗುವೆ ಎಂದು ಗದ್ಗದಿತನಾಗಿ ಶಪಥ ಮಾಡಿದೆ.

ಒಮ್ಮೆಲೆ ಯಾರೋ ಗಹಗಹಿಸಿ ನಕ್ಕಂತಾಯಿತು. ಅದು ಘಂಟಾನಾದದಂತೆ ಬೆಟ್ಟಗಳಲ್ಲಿ ಪ್ರತಿಧ್ವನಿಸುತ್ತ, ನನ್ನನ್ನು ಅಣಕಿಸಿತು. ಬಳಿಕ ನನ್ನ ಕಿವಿಯ ಹತ್ತಿರವೇ. ನನಗೆ ಸಮಾಧಾನವಾಯಿತು. ಪಾಪಿ! ನೀನು ಬದುಕಿರಲು ನಿರ್ಧರಿಸಿ ನನ್ನನ್ನು ತೃಪ್ತಿಗೊಳಿಸಿರುವಿ, ಎಂದು ಆ ಸುಪರಿಚಿತ ಅಸಹ್ಯಸ್ವರ ನುಡಿಯಿತು.

ಆ ಧ್ವನಿ ಕೇಳಿಸಿದತ್ತ ಧಾವಿಸಿದೆ. ಆದರೆ ಆ ರಾಕ್ಷಸ ನನ್ನ ಹಿಡಿತದಿಂದ ತಪ್ಪಿಸಿಕೊಂಡು ಓಡಿದ. ಆ ಕ್ಷಣ ಉದಯಿಸಿದ ಚಂದ್ರನ ಬೆಳಕಿನ ಛಾಯೆಯಲ್ಲಿ ಆತನ ಭೀಷಣ ಆಕೃತಿ ಅಸಾಮಾನ್ಯ ವೇಗದಿಂದ ಓಡುತ್ತಿರುವುದು ಕಾಣಿಸಿತು.

ಆತನನ್ನು ಬೆನ್ನಟ್ಟಿದೆ. ಅನೇಕ ತಿಂಗಳಿನಿಂದ ಇದೇ ನನ್ನ ಉದ್ಯೋಗವಾಗಿದೆ! ಆತನ ಸುಳಿವು ಹಿಡಿದು ಫ್ರಾನ್ಸಿನಲ್ಲೆಲ್ಲ ಹುಡುಕಾಡಿದ್ದೇನೆ. ಭೂಮಧ್ಯ ಸಮುದ್ರವನ್ನೆಲ್ಲಾ ಜಾಲಾಡಿದ್ದೇನೆ. ಅಲ್ಲಿ ಒಮ್ಮೆ ಕಪ್ಪು ಸಾಗರದ ದಿಶೆಯಲ್ಲಿ ಹೊರಟಿರುವ ಹಡಗೊಂದರಲ್ಲಿ ಆತ ಹೊಕ್ಕದನ್ನು ಕಂಡು

ನಾನೂ ಅದನ್ನೇ ಹತ್ತಿದೆ. ಆದರೆ ಆತ ಹೇಗೆ ಪಾರಾದನೋ ನಾನರಿಯೆ.

ಹೀಗೆಯೇ ತುರ್ಕಸ್ತಾನ, ರಶಿಯದ ಕಾಡು ಪ್ರದೇಶಗಳಲ್ಲಿ ಆತ ನನ್ನಿಂದ ತಪ್ಪಿಸಿಕೊಳ್ಳುತ್ತಿದ್ದರೂ, ನಾನು ಆತನ ಜಾಡು ಹಿಡಿದು ಹೊರಟಿರುವೆ. ಕೆಲವೊಮ್ಮೆ ಆ ಭಯಂಕರ ಸ್ವರೂಪವನ್ನು ಕಂಡು ಬೆದರಿದ ರೈತರು ಆತ ಹೋದ ಮಾರ್ಗದ ಕುರಿತು ನನಗೆ ಮಾಹಿತಿ ಕೊಟ್ಟಿದ್ದುಂಟು. ಹಿಮ ವಿಸ್ತಾರದಲ್ಲಿ ಆತನ ಹೆಜ್ಜೆಯ ಗುರುತು ಕಂಡು, ಚಳಿ, ಬಾಯಾರಿಕೆ, ದಣಿವು, ಹಸಿವು ಯಾವುದರ ಪರಿವೆ ಇಲ್ಲದೆಯೇ ಅವನನ್ನು ಬೆನ್ನಟ್ಟಿದೆ.

ಈ ನನ್ನ ಜೀವನ ನನಗೆ ಅಸಹನೀಯವಾಗತೊಡಗಿತು. ನಿದ್ರೆಯಲ್ಲಿಯೇ ನಾನು ಸುಖ ಕಾಣುತ್ತಿದ್ದೆ. ಸ್ವಪ್ನಗಳಲ್ಲಿ ನನ್ನ ಸ್ನೇಹಿತರು, ನನ್ನ ಪತ್ನಿ, ನನ್ನ ತಂದೆ, ಹಾಗೂ ಸ್ವದೇಶಗಳನ್ನು ಕಂಡು ಸಂತಸಪಡುತ್ತಿದ್ದೆ. ಉತ್ತರದೆಡೆಗೆ ನನ್ನ ಪ್ರಯಾಣ ಬೆಳೆಸಿದಂತೆ ಹಿಮಪಾತ ಹೆಚ್ಚಾಗಿ, ಚಳಿಯು ದುಸ್ಸಹವಾಗಹತ್ತಿತು. ನದಿಗಳು ಹೆಪ್ಪುಗಟ್ಟಿದವು. ಆಹಾರದ ಅಭಾವವೂ ಉಂಟಾಯಿತು. ಒಂದು ಜಾರುಬಂಡಿ, ಹಾಗೂ ನಾಯಿಗಳನ್ನು ಪಡೆದುಕೊಂಡು, ಹಿಮ ಮೈದಾನಗಳನ್ನು ವೇಗದಿಂದ ಕ್ರಮಿಸಿದೆ. ನನ್ನ ವೈರಿಯೂ ಇದೇ ರೀತಿ ಪಯಣಿಸುತ್ತಿದ್ದನೆಂದು ನನಗೆ ಹಳ್ಳಿಗರಿಂದ ಸಮಾಚಾರ ಸಿಗುತ್ತಿತ್ತು.

ಹೀಗೆ ಎಷ್ಟು ದಿನಗಳು ಕಳೆದಿವೆಯೋ ಲೆಕ್ಕವಿಲ್ಲ. ಈ ವೇಳೆ ನಾನು ಪಟ್ಟ ಕಷ್ಟ ಹೇಳತೀರದು. ಹಿಮಾವೃತಪರ್ವತಗಳು ನನ್ನ ಮಾರ್ಗದಲ್ಲಿ ಅಡ್ಡನಿಂತಿರುತ್ತಿದ್ದವು. ಕೆಲವೊಮ್ಮೆ ಸಮುದ್ರದ ಮೇಲಿನ ಹಿಮವೊಡೆದು ಕೆಳಗಿನ ಸಾಗರಗರ್ಜನೆ ಕೇಳಿ ನನ್ನ ವಿನಾಶದ ನಿರೀಕ್ಷೆಯಲ್ಲೇ ಇರುತ್ತಿದ್ದೆ.

ಬಳಿಕ ಮತ್ತೆ ನೀರು ಗಡ್ಡೆಕಟ್ಟಿ, ಸಮುದ್ರಮಾರ್ಗ ಸುರಕ್ಷಿತವಾಗುತ್ತಿತ್ತು. ನಾಯಿಗಳು ಒಂದೊಂದಾಗಿ ಸತ್ತು ಹೋಗಹತ್ತಿದವು. ಒಮ್ಮೆ ದೂರದಲ್ಲಿ ಮತ್ತೊಂದು ಜಾರುಬಂಡಿಯಲ್ಲಿದ್ದ ಆ ದೈತ್ಯಾಕೃತಿಯನ್ನು ನೋಡಿದೆ. ಆನಂದದಿಂದ ಅದರ ಬೆನ್ನು ಹತ್ತಿದೆ. ಎರಡು ದಿನಗಳ ನಂತರ ಆತ ಕೇವಲ ಒಂದು ಮೈಲಿನಷ್ಟು ದೂರವಿದ್ದ. ಅಷ್ಟರಲ್ಲಿ ಹಿಮ ಒಡೆದು ನನ್ನ ಸುತ್ತಲೂ ನೀರು ಆವರಿಸಿತ್ತು. ನನ್ನ ವೈರಿಯಿಂದ ಬೇರ್ಪಟ್ಟೆ. ಎಷ್ಟೋ ಗಂಟೆಕಾಲ ನಾನು ಒಂದು ಹಿಮಬಂಡೆಯ ಮೇಲೆ ತೇಲಾಡುತ್ತಿದ್ದೆ. ಕಟ್ಟಕಡೆಗೆ ನಿಮ್ಮ ಹಡಗು ಕಂಡು ಅದರತ್ತ ಕಷ್ಟಪಟ್ಟು ಸಾಗಿಸಿಕೊಂಡು ಬಂದೆ. ನೀವು ನನ್ನನ್ನು ರಕ್ಷಿಸಿದಿರಿ.

ಆದರೆ ನನ್ನ ಕಾರ್ಯ ಪೂರ್ತಿಯಾಗಿಲ್ಲ. ನಾನು ಸತ್ತು ಹೋಗಿ, ಆತ ಇನ್ನೂ ಬದುಕಿರುವನೇ! ಹಾಗಾದರೆ, ವೊಲ್ಟನ್ ನನಗೆ ವಚನ ಕೊಡು, ಆತ ಪಾರಾಗಲಾರನೆಂದು ಶಪಥ ಮಾಡು. ಆತನನ್ನು ಕೊಂದು ನನ್ನ ಸೇಡು ನೀನು ತೀರಿಸಬೇಕಯ್ಯ. ನಾನು ಸತ್ತೊಡನೆ ಆತ ಖಂಡಿತ ಇಲ್ಲಿ ಬಂದೇ ಬರುತ್ತಾನೆ. ಆಗ, ಆತ ತಪ್ಪಿಸಿಕೊಳ್ಳಲಾರನೆಂದು ನನಗೆ ವಚನಕೊಡು. ಆತನ ಎದೆಯನ್ನು ಸೀಳಿಬಿಡು. ನನ್ನ ಆತ್ಮ ಅಲ್ಲಿಯೇ ಸುಳಿದಾಡುತ್ತ ಅದನ್ನು ಕಂಡು ಆನಂದಪಡುವುದು.

★ ★ ★

ಈ ವಿಚಿತ್ರ ಭಯಾನಕ ವೃತ್ತಾಂತವನ್ನು ಕೇಳಿ ವೊಲ್ಟನ್ ದಿಗ್ಭ್ರಾಂತನಾದ. ಭೀತಿಯಿಂದ ಆತನ ರಕ್ತ ಹೆಪ್ಪುಗಟ್ಟಿದಂತೆನಿಸಿತು. ಆದರೂ ತನ್ನ ಹಡಗಿನಿಂದ ಆ ಭೂತಾಕಾರವನ್ನು ಕಣ್ಣಾರೆ ಕಂಡಿದ್ದ ಅವನಿಗೆ ಈ ಕಥೆಯಲ್ಲಿ ಅಪನಂಬಿಕೆ ಉಂಟಾಗಲಿಲ್ಲ. ಆ ಪ್ರಾಣಿಯ ಕುರಿತು ಫ್ರಾಂಕೀನ್‌ಸ್ಟೀನ್ ನಿಂದ ವಿಶೇಷ ವಿವರಗಳನ್ನು ಪಡೆಯಲೆತ್ನಿಸಿದ. ಆದರೆ ಈ ರಹಸ್ಯ ಅಭೇದ್ಯವಾಗಿತ್ತು. 'ನಿನಗೆ ಹುಚ್ಚು ಹಿಡಿದಿದೆಯೇ? ನಿನ್ನ ಅವಿವೇಕದ ಕುತೂಹಲದಿಂದ ಏನು ಪ್ರಯೋಜನ? ನೀನೂ ಒಂದು ರಾಕ್ಷಸೀ ವೈರಿಯನ್ನು ಲೋಕಕ್ಕೆ ಕೊಡಮಾಡುವಿಯಾ? ಬೇಡಯ್ಯ ಬೇಡ, ನನ್ನ ತಾಪತ್ರಯ ತಿಳಿದುಕೋ. ನಿನ್ನ ಕಷ್ಟಕ್ಲೇಶಗಳನ್ನು ಹೆಚ್ಚಿಸಿಕೊಳ್ಳಬೇಡ' ಎಂದು ಫ್ರಾಂಕೀನ್‌ಸ್ಟೀನ್ ಹೇಳಿದ. ಅವನೀಗ ಸಂಪೂರ್ಣವಾಗಿ ಹತಾಶನಾಗಿ, ಜೀವಿಸುವ ಆಶೆಯನ್ನೂ ತೊರೆದಿದ್ದ. ದಿನದಿನಕ್ಕೂ ಅವನ ಆರೋಗ್ಯ ಕ್ಷೀಣಿಸಹತ್ತಿತು.

ವೊಲ್ಟನ್ನನ ಹಡಗು ಹಿಮಬಂಡೆಗಳಿಂದ ಸುತ್ತುವರೆದಿತ್ತು. ಅವುಗಳು ಒಂದಕ್ಕೊಂದು ಅಪ್ಪಳಿಸಿ ಅವರು ಜಜ್ಜಿಬಿಡುವ ಅಪಾಯಕ್ಕೀಡಾಗಿದರು. ಆ ವಿಪರೀತ ಚಳಿಪ್ರದೇಶದಲ್ಲಿ ಅವನ ತಂಡದ

ಅನೇಕ ಜನರು ಅಸುನೀಗಿದ್ದರು. ಉಳಿದವರು ಮುಂದುವರೆಯಲು ಸಿದ್ಧರಾಗಲಿಲ್ಲ. ಅವರ ಸಾಹಸ ಯಾತ್ರೆ ವಿಫಲವಾಗಿ ಇಂಗ್ಲೆಂಡಿಗೆ ಮರಳಿ ಬರುವ ಪ್ರಸಂಗ ಬಂದೊದಗಿತು. ವೊಲ್ಟನ್ನನ ಆಕಾಂಕ್ಷೆಗಳು ಕುಸಿದು, ತನ್ನ ಉದ್ದೇಶ ಪೂರ್ತಿಯಾಗದ್ದಕ್ಕೆ ಆತ ಬಹಳ ವ್ಯಸನಪಡುತ್ತಲಿದ್ದ.

ಫ್ರ್ಯಾಂಕೇನ್‌ಸ್ಟೀನ್ ಮಾತ್ರ ಅಲ್ಲಿಂದ ಹಿಂದಿರುಗಲು ಸಿದ್ಧನಿರಲಿಲ್ಲ. 'ನಾನು ವಾಪಸ್ಸಾಗುವುದಿಲ್ಲ. ನಾನೆಷ್ಟು ನಿಶ್ಶಕ್ತನಾಗಿದ್ದರೂ, ನನ್ನ ಉದ್ದೇಶವನ್ನು ಕೈಬಿಡಲಾರೆ. ನನ್ನ ಪ್ರತೀಕಾರ ಸಾಧಿಸಲು ದೇವರು ನನಗೆ ಸಾಕಷ್ಟು ಶಕ್ತಿ ಕೊಟ್ಟೇ ಕೊಡುತ್ತಾನೆ' ಎಂದು ಹಾಸಿಗೆಯಿಂದ ಜಿಗಿಯಲು ಪ್ರಯತ್ನಿಸಿದ. ಆದರೆ ಪ್ರಯಾಸದಿಂದ ತಿರುಗಿ ಬಿದ್ದು, ಮೂರ್ಛೆಹೋದ. ಎಷ್ಟೋ ಹೊತ್ತಿನ ಮೇಲೆ ಆತನಿಗೆ ಸ್ಮೃತಿ ಮರಳಿತು. ಉಸಿರಾಡಲು ಸಹ ಕಷ್ಟ ಪಡುತ್ತಿದ್ದ. ಕ್ಷೀಣ ಸ್ವರದಲ್ಲಿ ಆತ ವೊಲ್ಟನ್ನನಿಗೆ ಹೇಳಿದ: 'ನನ್ನ ಸಾವು ಸನ್ನಿಹಿತವಾಗಿದೆ. ಆದರೆ ನನ್ನ ದುಷ್ಟ ವೈರಿ ಇನ್ನೂ ಜೀವಿಸಿರುವನು. ಆತನನ್ನು ನಾಶಮಾಡುವಲ್ಲಿ ನಾನು ವಿಫಲನಾದೆ. ಕಾರಣ, ಸಾಧ್ಯವಾದಾಗ ನನ್ನ ಕಾರ್ಯ ನೀನು ಪೂರ್ತಿಗೊಳಿಸಬೇಕೆಂದು ವಿನಂತಿಸುವೆ. ವೊಲ್ಟನ್ ಗುಡ್‌ಬೈ' ಎಂದು ಹೇಳಿ ನಿರಂತರ ಕಣ್ಣು ಮುಚ್ಚಿದ.

ಮಿತ್ರನ ಮರಣದಿಂದ ವೊಲ್ಟನ್ನನಿಗೆ ಅತೀವ ದುಃಖವಾಯಿತು. ಕಣ್ಣೀರು ಸುರಿಸುತ್ತಾ ಶೂನ್ಯ ಮನಸ್ಸಿನಿಂದ ಸುಮ್ಮನೆ ಕುಳಿತುಬಿಟ್ಟ. ಮಧ್ಯ ರಾತ್ರಿಯ ವೇಳೆ ಫ್ರ್ಯಾಂಕೇನ್‌ಸ್ಟೀನ್‌ನ ದೇಹವಿದ್ದ ಕ್ಯಾಬಿನ್ನಿನಲ್ಲಿ ಏನೋ ಶಬ್ದ ಕೇಳಿದಂತಾಯಿತು. ಗಡುಸಾದ, ಮಾನವ ಧ್ವನಿ. ವೊಲ್ಟನ್ ಎದ್ದು ಹೋಗಿ ನೋಡಿದ. ಅಲ್ಲಿ ಆತ ಕಂಡ ದೃಶ್ಯದಿಂದ ತಲೆ ತಿರುಗಿದಂತಾಯಿತು. ಶವದ ಬಳಿ ಒಂದು ಅಜಾನುಬಾಹು ಕುರೂಪಿ ಆಕೃತಿ ಕುಳಿತಿತ್ತು. ಶವಪೆಟ್ಟಿಗೆಯ ಮೇಲೆ ಬಾಗಿದ್ದರಿಂದ ಅದರ ಉದ್ದ ಜಡೆಗಟ್ಟಿದ ಕೂದಲುಗಳಿಂದ ಮುಖ ಮರೆಯಾಗಿತ್ತು. ಬೃಹದಾಕಾರದ ಕೈ ಮುಂದೆ ಚಾಚಿತ್ತು. ವೊಲ್ಟನ್ ಹೋದೊಡನೆ ಅದು ಕಿಟಕಿಯತ್ತ ಹಾರಿತು. ಆಗ ಅದರ ಭೀಷಣ ಮುಖಚರ್ಯೆ ನೋಡಿ ಆತ ಕೂಡಲೇ ಕಣ್ಣು ಮುಚ್ಚಿದ. ಆದರೆ ಈ ಕೊಲೆಪಾತಕಿಯ ಕುರಿತು ತನ್ನ ಕರ್ತವ್ಯವೇನೆಂದು ಸ್ಮರಿಸಿಕೊಂಡು ಆತನಿಗೆ ನಿಲ್ಲಲು ಹೇಳಿದ.

ಆತ ನಿಂತು ವೊಲ್ಟನ್ನನತ್ತ ಆಶ್ಚರ್ಯದಿಂದ ನೋಡಿದ. ಬಳಿಕ ತನ್ನ ಸೃಷ್ಟಿಕರ್ತನ ಶವದತ್ತ ತಿರುಗಿ, ಈತನೂ ನನ್ನ ಬಲಿಪಶು! ಇವನ ಕೊಲೆಯಿಂದ ನನ್ನ ಅತ್ಯಾಚಾರಗಳ ಮುಕ್ತಾಯವಾಯಿತು. ನನ್ನ ದುರಂತ ಜೀವನದ ಅಂತಿಮ ಯಾತ್ರೆಯಾಯಿತು! ಎಂದು ಕೋಪಾವೇಶದಿಂದ ಕೂಗಿದ. ನಂತರ 'ಓ ಫ್ರ್ಯಾಂಕೇನ್‌ಸ್ಟೀನ್! ಈಗ ನಿನ್ನ ಕ್ಷಮೆ ಕೇಳುವುದರಿಂದೇನು ಪ್ರಯೋಜನ? ನಿನಗೆ ಪ್ರಿಯವಾದವರನ್ನೆಲ್ಲ ನಾಶಮಾಡಿ ನಿನ್ನನ್ನೂ ಸಂಪೂರ್ಣ ವಿನಾಶಮಾಡಿದೆ.' ಎಂದಾಗ ಗಂಟಲು ಕಟ್ಟಿದಂತೆ ತೋರಿತು.

ಆತನನ್ನು ಧ್ವಂಸ ಮಾಡಿ ತನ್ನ ಮಿತ್ರನ ಅಂತಿಮ ಅಭಿಲಾಷೆಯನ್ನು ಪೂರೈಸುವುದು ತನ್ನ ಕರ್ತವ್ಯವೆಂದು ವೊಲ್ಟನ್ ಭಾವಿಸಿದ್ದ. ಆದರೆ, ಕುತೂಹಲ ಕನಿಕರಗಳ ಸಮ್ಮಿಶ್ರಭಾವನೆಗಳಿಂದ ತಡೆದು, ಆ ಭೂತಾಕೃತಿಯ ಹತ್ತಿರ ಹೋದ. ಅದೆಷ್ಟು ಅಸಹ್ಯವಾಗಿತ್ತೆಂದರೆ ವೊಲ್ಟನ್ ಕಣ್ಣೆತ್ತಿ ಆ ಮುಖವನ್ನು ನೋಡಲಿಕ್ಕಾಗಲಿಲ್ಲ. ಆ ಪ್ರಾಣಿ ಅಸಂಬದ್ಧವಾಗಿ ಆತ್ಮನಿಂದನೆಯನ್ನು ಮಾಡಿಕೊಳ್ಳುತ್ತ ಹುಚ್ಚಾಗಿ ಬಡಬಡಿಸುತ್ತಿತ್ತು. ಕೊನೆಗೊಮ್ಮೆ ಅದರ ಭಾವಾವೇಶ ಸ್ವಲ್ಪ ಶಾಂತವಾದಾಗ ವೊಲ್ಟನ್ ಹೇಳಿದ: 'ಈಗ ಪಶ್ಚಾತಾಪ ಪಟ್ಟರೇನು ಫಲ? ಇಂಥ ದುಸ್ಥಿತಿಗೆಗೆ ಮುಟ್ಟುವುದಕ್ಕೆ ಮೊದಲೇ ನೀನು ಎಳ್ಳಷ್ಟು ಪಶ್ಚಾತಾಪ ಪಟ್ಟಿದ್ದರೆ ಫ್ರ್ಯಾಂಕೇನ್‌ಸ್ಟೀನ್ ಇನ್ನೂ ಬದುಕಿರುತ್ತಿದ್ದ.'

'ನನಗೆ ಪಶ್ಚಾತಾಪವಾಗಿಲ್ಲವೆಂದು ತಿಳಿದಿರುವೆಯಾ? ನಾನು ಫ್ರ್ಯಾಂಕೇನ್‌ಸ್ಟೀನ್‌ಗೋಸ್ಕರ ಬಹಳ ಮರುಗಿದೆ. ನನ್ನನ್ನೇ ಅಸಹ್ಯ ಪಟ್ಟುಕೊಂಡೆ. ಆದರೆ ಸ್ವಾರ್ಥ ನನ್ನ ಅತ್ಯಾಚಾರಗಳಿಗೆ ಚಿತಾವಣೆಯಾಯಿತು. ಅವನ ಮಿತ್ರ ಹೆನ್ರಿ ಕ್ಲರ್ವಲ್‌ನ ಕೊಲೆಯ ಬಳಿಕ ನಾನು ಭಗ್ನಹೃದಯಿಯಾಗಿ ಸ್ವಿಜರ್ಲಂಡಿಗೆ ಮರಳಿದೆ. ಆದರೆ ಫ್ರ್ಯಾಂಕೇನ್‌ಸ್ಟೀನ್ ವಿವಾಹವಾಗಿರುವನೆಂದು ತಿಳಿದೊಡನೆ ನನ್ನ ದ್ವೇಷ, ಮತ್ಸರಾವೇಶ ಮತ್ತೆ ಉಕ್ಕೇರಿತು. ಅವನ ಪತ್ನಿಯನ್ನು ಕೊಂದಾಗ ನಾನು ಕನಿಕರಪಡಲಿಲ್ಲ. ನಾನು ಸಂಪೂರ್ಣ ಭಾವಹೀನನಾಗಿದ್ದೆ. ದುಃಖವೇ ನನಗೆ

ಸುಖವೆನಿಸಿತು. ಪಾಪವೇ ನನಗೆ ಪುಣ್ಯವಾಯಿತು. ನನ್ನ ಅಪರಾಧಗಳ ಸರಮಾಲೆಯನ್ನು ಪೂರ್ತಿಗೊಳಿಸುವುದು ನನಗೆ ಅವಶ್ಯವೆನಿಸಿತು.

ಮೊದಲಿಗೆ ವೊಲ್ಟನ್‌ನ ಮನ ಕರಗಿತು. ಆದರೆ ಮಿತ್ರನ ಶವವನ್ನು ಕಂಡೊಡನೆ, ಪುನಃ ರೊಚ್ಚಿಗೆದ್ದು, ನುಡಿದ. 'ಪಾಪಿ! ಇಷ್ಟೆಲ್ಲಾ ಅನಾಹುತಗಳಿಗೆ ಕಾರಣವಾಗಿ, ಈಗ ಗೋಳಾಡುವಿಯಾ? ನಿನಗೆ ಕನಿಕರವಿಲ್ಲ, ನಿನ್ನ ಬಲೆಯಿಂದ ಬೇಟೆ ಪಾರಾಯಿತೆಂದು ಮರುಗುವಿ ಅಷ್ಟೆ.'

'ಇಲ್ಲ, ಇಲ್ಲ, ನಿನ್ನದು ತಪ್ಪು ಕಲ್ಪನೆ. ನನ್ನ ದುಃಖದಲ್ಲಿ ನನಗೆ ಯಾವ ಸಹಭಾಗಿ ಬೇಡ. ಯಾರ ಸಹಾನುಭೂತಿ ಬೇಡ. ಮೊದಲಿಗೆ ನನ್ನಲ್ಲಿ ಸದಾಚಾರ, ಶ್ರದ್ಧೆ, ಶಾಂತಿ, ಸೌಹಾರ್ದ, ಸಂವೇದನೆಗಳು ತುಂಬಿ ತುಳುಕುತ್ತಿದ್ದವು. ಆದರೀಗ ಪುಣ್ಯ ಕೇವಲ ಒಂದು ನೆರಳು, ಸುಖಶಾಂತಿ ಬರೀ ಕಹಿ ನಿರಾಶೆ, ನನ್ನ ದುಃಖದಲ್ಲಿ ಯಾರೂ ಪಾಲುದಾರರಾಗುವುದು ಬೇಡ. ನನ್ನ ಪಾಪಕರ್ಮ ಎಂಥ ಹೀನಪಶುವಿಗಿಂತಲೂ ನನ್ನನ್ನು ಕೀಳುಮಾಡಿದೆ. ನನ್ನ ಅಪರಾಧ, ಅತ್ಯಾಚಾರ, ದ್ವೇಷ, ದುಃಖ ಎಲ್ಲವೂ ಅಸಾಮಾನ್ಯವಾದದ್ದು. ನಿನ್ನ ಮಿತ್ರನಿಂದ ಅದರ ವಿವರವೆಲ್ಲಾ ನಿನಗೆ ತಿಳಿದಿರಬೇಕು. ಆದರೆ ನಾನು ಅನುಭವಿಸಿದ ನರಕ ಯಾತನೆಯ ಸಾರಾಂಶ ನಿನಗೆ ಗೊತ್ತಿರಲಿಕ್ಕಿಲ್ಲ. ಕೊನೆಗೂ ನನ್ನ ಅಭೀಷ್ಟ ಪೂರ್ತಿಯಾಗಲಿಲ್ಲ. ನಾನು ಸದಾ ಪ್ರೇಮ ಸೌಹಾರ್ದ ಅಪೇಕ್ಷಿಸುತ್ತಿದ್ದೆ, ಆದರೆ ಸತತ ತಿರಸ್ಕರಿಸಲ್ಪಟ್ಟೆ. ಇದರಲ್ಲಿ ಎಂಥ ನ್ಯಾಯ? ಇಡೀ ಮಾನವಕುಲವೇ ನನ್ನನ್ನೂ ನಿರಾಕರಿಸುವಾಗ, ನಾನು ಮಾತ್ರ ಅಪರಾಧಿಯೇ? ನನ್ನನ್ನು ಹೊಡೆದೋಡಿಸಿದವರೆಲ್ಲಾ ಸಜ್ಜನರು, ಪರಿತ್ಯಕ್ತನಾದ ನಾನು ಮಾತ್ರ ದುಷ್ಟ! ನಾನೊಬ್ಬ ನೀಚ, ನಿಜ; ಅಸಹಾಯಕ, ನಿರಪರಾಧಿ ಪ್ರಾಣಿಗಳ ಕೊಲೆಪಾತಕಿ; ನನ್ನ ಪ್ರಾಣದಾತನ ಜೀವನಸುಖ ಹಾಳುಮಾಡಿರುವೆ.

ಆದರೆ ನನ್ನ ಕಾರ್ಯ ಸಮಾಪ್ತಿಯಾದಂತಾಯಿತು. ಇನ್ನು ಉಳಿದದ್ದು ನನ್ನ ಮರಣವೊಂದೇ. ಅದನ್ನು ಬಹುಬೇಗ ಬರಮಾಡಿಕೊಳ್ಳುವೆ. ಭೂಖಂಡದ ಅಂಚಿಗೆ ತೆರಳಿ, ಅಲ್ಲಿ ನನ್ನ ಚಿತೆಯನ್ನು ತಯಾರಿಸಿ ಈ ಹೀನ ದೇಹವನ್ನು ಭಸ್ಮಗೂಡಿಸುವೆ. ನನ್ನ ಅವಶೇಷಗಳು ಎಳ್ಳಷ್ಟು ಉಳಿಯಲಾರವು. ಯಾವ ವಿಜ್ಞಾನಿಗೂ ನನ್ನಂಥ ಪ್ರಾಣಿಯಿದ್ದ ಸುಳಿವು ಸಿಗಲಾರದು. ನನ್ನ ಸೃಷ್ಟಿಕರ್ತ ಸತ್ತಿದ್ದಾನೆ, ನಾನೂ ಸತ್ತು ಹೋಗುವೆ. ಸಾವಿನಲ್ಲಿಯೇ ನನಗೆ ಶಾಂತಿ ಸಿಗುವುದು. ಗುಡ್-ಬೈ! ನಾನಿನ್ನು ಮಾನವ ದೃಷ್ಟಿಗೆ ಬೀಳುವುದಿಲ್ಲ' ಎನ್ನುತ್ತಾ ಕ್ಯಾಬಿನ್ನಿನ ಕಿಟಕಿಯಿಂದ ಹೊರಗೆ ಹಾರಿದ.

ವೊಲ್ಟನ್ ದಿಗ್ಭ್ರಾಂತನಾಗಿ ನೋಡುತ್ತಿದ್ದಂತೆ ಅವನ ಜಾರುಬಂಡಿ ತೆರೆಗಳ ಮೇಲೆ ತೇಲುತ್ತ ಹೋಗಿ ದೂರದಿಗಂತದಲ್ಲಿ ಕಣ್ಮರೆಯಾಯಿತು. ●

ತಾತ್ಸಾರವೇ ಪ್ರೇಮದ ದುರಂತ

● ವಿಲಿಯಂ ಸಾಮರ್ಸೆಟ್ ಮಾಂ

Printed and published by **M.H. BELGAUMKAR** on behalf of Lokashikshana Trust at "SAMYUKTA KARNATAKA PRESS", No. 2, Residency Road, Bangalore-560 025. Managing Editor **K. SHAMA RAO.** Rep: Bombay: V. Satyamurthi. Phone: 5510502, Madras, S.K. Murti Phone: 414870. New Delhi: V.K. Chopra Phone: 7114785.

Registered with the Registrar of Newspapers for India under No. 35/3957.


ಹಲ್ಲುಗಳ ಬಗ್ಗೆ ಒಂದು ಪ್ರಮಾಣಿತ ಸತ್ಯಾಂಶ
ಶ್ವಾಸದ ದುರ್ವಾಸನೆಗೆ ಹಲ್ಲುಗಳಿಗಿಂತ
ಹೆಚ್ಚು ಒಸಡುಗಳು ಕಾರಣ
ಇನ್ನೊಂದು ಪ್ರಮಾಣಿತ ಸತ್ಯಾಂಶ
ಕೇವಲ ಫೋರ್‌ಹೆನ್ಸ್‌ನ
ಅಪೂರ್ವ ಎಸ್ಟ್ರಿಂಜೆಂಟ್ ಒಸಡುಗಳನ್ನು
ಬಿಗಿ ಮಾಡಿ ಅವುಗಳನ್ನು ಆರೋಗ್ಯಪೂರ್ಣವಾಗಿಡುತ್ತದೆ.
ಶ್ವಾಸದ ದುರ್ವಾಸನೆ ಉಂಟಾಗುವುದೇ ಇಲ್ಲ.
ನೊರೆ-ನೊರೆಯ ಫೋರ್‌ಹೆನ್ಸ್
ನೀಲಿ ಬಣ್ಣದ ಪ್ಯಾಕ್‌ನಲ್ಲಿ.
FOAMING
Forhan's
TOOTHPASTE
FOR THE GUMS
The toothpaste created by a dentist
ಸೀಮಿತ ನೊರೆಯ
ಕಿತ್ತಳೆ ಬಣ್ಣದ ಪ್ಯಾಕ್‌ನಲ್ಲಿ.
ಫೋರ್‌ಹೆನ್ಸ್
ರಕ್ಷಣೆ
ಕದಲದ 32
ಓರ್ವ ದಂತವೈದ್ಯರಿಂದ ಸೃಷ್ಟಿಸಲ್ಪಟ್ಟ ಟೂಥ್‌ಪೇಸ್ಟ್.

27/88.Kn